ಹುಬ್ಬಳ್ಳಿ ಶನಿವಾರ, 30 ಮೇ 2026 ಸಂಪುಟ 16, ಸಂಚಿಕೆ 66, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413
epaper.hosadigantha.com
hosadigantha.com
₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ
ಲೋಕಹಿತಂ ಮಮ ಕರಣೀಯಂ

ಈ ಬಾರಿ ಮುಂಗಾರು ದುರ್ಬಲ: ಐಎಂಡಿ
◆ ಪುಟ ೭



ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶುಕ್ರವಾರ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿರುವ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ರವಿಶಂಕರ್ ಗುರೂಜಿ ಜತೆಯಲ್ಲಿದ್ದರು.

ಕಿರುಸುದ್ದಿ

ಭೀಮಾ ತೀರದಲ್ಲಿ 6 ಜನರ ಭೀಕರ ಹತ್ಯೆ
◆ ಪುಟ ೫

ನೀಟ್ ಪರೀಕ್ಷೆ: ಮೋದಿ ಖುದ್ದು ಮೇಲ್ವಿಚಾರಣೆ
◆ ಪುಟ ೭

ಮದುವೆಯಾಗುವುದೇಕೆ? ವಧು ಅವಮಾನಿಸುವುದೇಕೆ?
◆ ಪುಟ ೭

ಹೈಕೋರ್ಟ್‌ಗಳಲ್ಲಿ ತೀರ್ಪು ವಿಳಂಬಕ್ಕೆ ಸುಪ್ರೀಂಕೋರ್ಟ್ ಬ್ರೇಕ್
◆ ಪುಟ ೭

ಇಂದು ಸಂಜೆ 4 ಗಂಟೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪಿಸಲಿರುವ ಸಿದ್ದರಾಮಯ್ಯ

ಡಿಕೆಶಿಗೆ ಇಂದು ಪಟ್ಟ

◆ **ಬೆಂಗಳೂರು:** ರಾಜ್ಯ ರಾಜಕೀಯ ಬೆಳವಣಿಗೆ ಅಂತಿಮ ಹಂತ ತಲುಪಿದ್ದು, ಶನಿವಾರ(ಮೇ 30) ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆಗಾಗಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗುವುದು ಖಚಿತವಾಗಿದ್ದು, ಸಿದ್ದರಾಮಯ್ಯ ಅವರ ಮುಖಾಂತರವೇ ಶಿವಕುಮಾರ್ ಹೆಸರು ಪ್ರಸ್ತಾಪಿಸಿ ಅನುಮೋದನೆ ಪಡೆಯಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದೆ.

ಹೊಸದಿಲ್ಲಿಗೆ ತೆರಳಿರುವ ಸಿದ್ದರಾಮಯ್ಯ ಶುಕ್ರವಾರವೇ ಬೆಂಗಳೂರಿಗೆ ವಾಪಸ್ಸಾಗಿದ್ದು, ಡಿ.ಕೆ. ಶಿವಕುಮಾರ್ ಇಂದು (ಶನಿವಾರ) ದಿಲ್ಲಿಯಿಂದ ಮರಳಿದ ಬಳಿಕ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ನಿಗದಿಪಡಿಸಲಾಗಿದೆ. ಶನಿವಾರ ಸಂಜೆ ನಾಲ್ಕು ಗಂಟೆಗೆ ಸಭೆ ನಡೆಯಲಿದ್ದು, ಸದ್ಯ ದಿಲ್ಲಿಗೆ ಹೋಗಿರುವ ಹಾಗೂ ಮತಕ್ಷೇತ್ರದಲ್ಲಿರುವ ಶಾಸಕರಿಗೆ ಬೆಂಗಳೂರಿನಲ್ಲಿರುವಂತೆಯೇ ಸೂಚಿಸಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಅಲ್ಲಮಪ್ರಭು ಪಾಟೀಲ್ ತಿಳಿಸಿದ್ದಾರೆ.

ಸಿಎಲ್‌ಪಿ ಸಭೆಯಲ್ಲಿ ಎಐಸಿಸಿ ವೀಕ್ಷಕರಾಗಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗಿಯಾಗಲಿದ್ದಾರೆ. ಈ ಶಾಸಕಾಂಗ ಸಭೆಯಲ್ಲಿ ಧನ್ಯವಾದ ಭಾಷಣದ ಬಳಿಕ ಸಿದ್ದರಾಮಯ್ಯ ಈ ನೂತನ ನಾಯಕನ ಹೆಸರು ಸೂಚಿಸಲಿದ್ದು, ಶಾಸಕರ ಅನುಮೋದನೆ ಪಡೆದು ಶಿಷ್ಟಾಚಾರದ ಪ್ರಕಾರ ಒಗ್ಗಟ್ಟಿನಿಂದ ನೂತನ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ➡ ಪುಟ ೪



ಸೋನಿಯಾ ಗಾಂಧಿಯ ದಿಲ್ಲಿ ನಿವಾಸದಲ್ಲಿ ಶುಕ್ರವಾರ ರಾಹುಲ್‌ರನ್ನು ಭೇಟಿಯಾದ ಡಿ.ಕೆ.ಶಿವಕುಮಾರ್.

> ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ, ಪ್ರಭಾವಶಾಲಿ ಹಾಗೂ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಜನಮಾನಸದಲ್ಲಿ ನೆಲೆಸಿರುವ ಸಿದ್ದರಾಮಯ್ಯನವರು ರಾಜಕಾರಣದ ಧೀಮಂತ ನಾಯಕ.
> ■ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸಿದ್ದರಾಮಯ್ಯ - ರಾಹುಲ್ ಆಲಿಂಗನ

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಭೇಟಿಯ ವೇಳೆ ಸಿದ್ದರಾಮಯ್ಯ ಅವರು ಅತ್ಯಂತ ಭಾವನಾತ್ಮಕವಾಗಿ ಆಲಿಂಗನ ಮಾಡಿದ ಪ್ರಸಂಗವೂ ನಡೆಯಿತು. ಸೋನಿಯಾ ಅವರ ನಿವಾಸದಲ್ಲಿಯೇ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಿದ್ದರಾಮಯ್ಯ ಅವರು, ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅಲ್ಲದೇ ರಾಹುಲ್ ಗಾಂಧಿ ಕೂಡಾ ಮುಂದಿನ ದಿನಗಳಲ್ಲಿ ಪಕ್ಷ ನಿಮ್ಮನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತದೆ ಎಂಬ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ➡ ಪುಟ ೪

ಸಿದ್ದರಾಮಯ್ಯ ಜತೆ ಡಿ.ಕೆ.ಶಿವಕುಮಾರ್ ಊಟ

ದಿಲ್ಲಿ ಖಾಸಗಿ ಹೋಟೆಲ್‌ನಲ್ಲಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ ಡಿ.ಕೆ.ಶಿವಕುಮಾರ್, ಅವರೊಂದಿಗೆ ಊಟ ಸವಿದಿದ್ದಾರೆ. ಜತೆಗೆ ಯತೀಂದ್ರ, ಕೆ.ಎಚ್. ಮುನಿಯಪ್ಪ ಸಹ ಉಪಸ್ಥಿತರಿದ್ದು, ಈ ವೇಳೆ ಮಹತ್ವದ ವಿಷಯಗಳು ಚರ್ಚೆಯಾಗಿವೆ ಎನ್ನಲಾಗಿದೆ.

ಪದಗ್ರಹಣಕ್ಕೆ ಭದ್ರತೆ ಬಿಗಿ

ರಾಜ್ಯದ ನೂತನ ಸಿಎಂ ಪ್ರಮಾಣವಚನ ಸ್ವೀಕಾರ ಸಮಾರಂಭದ ಹಿನ್ನೆಲೆ ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಮಹತ್ವದ ಸಭೆ ನಡೆದಿದೆ. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಜಂಟಿ ಆಯುಕ್ತರು, ಡಿಸಿಪಿಗಳು ಭಾಗಿಯಾಗಿದ್ದು, ಸಮಾರಂಭಕ್ಕೆ ಬಿಗಿ ಭದ್ರತೆ ಒದಗಿಸಲು ಸಕಲ ಸಿದ್ಧತೆ ಕೈಗೊಂಡಿದ್ದಾರೆ.

ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ

ವೈಯಕ್ತಿಕ ಕಾರಣದಿಂದ ಮಧ್ಯಪ್ರದೇಶಕ್ಕೆ ತೆರಳಿದ್ದ ರಾಜ್ಯಪಾಲ ಗೆಹಲೋತ್ ಅವರು ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ನೀಡಿದ್ದ ರಾಜೀನಾಮೆ ಅಂಗೀಕರಿಸಿದ್ದಾರೆ. ➡ ಪುಟ ೪

ಕಿರುಸುದ್ದಿ

ಪ್ರತಿಭಾ ಪುರಸ್ಕಾರ ನಾಳೆ

ಹುಬ್ಬಳ್ಳಿ: ವೀರಶೈವ ಲಿಂಗಾಯತ ಸೇವಾ ಸಮಿತಿ ವತಿಯಿಂದ ವೀರಶೈವ ಲಿಂಗಾಯತ ಒಳ ಪಂಗಡ ಸಮಾಜದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ ಹಾಗೂ ಗೌರವ ಸನ್ಮಾನ ಸಮಾರಂಭ ಮೇ 31ರಂದು ಸಂಜೆ 5 ಗಂಟೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಮಲ್ಲಿಕಾರ್ಜುನ ಸಾಹುಕಾರ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾನಿಧ್ಯ ಮೂರುಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ, ರುದ್ರಾಕ್ಷಿ ಮಠದ ಬಸವಲಿಂಗ ಸ್ವಾಮೀಜಿ ಸಾನಿಧ್ಯ ವಹಿಸುವರು. ಸಂಸದ ಜಗದೀಶ ಶೆಟ್ಟರ, ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಮಾಜಿ ಶಾಸಕ ಮಲ್ಲಿಕಾರ್ಜುನ ಅಕ್ಕಿ, ಉದ್ಯಮಿ ವಿಜಯಕುಮಾರ ಶೆಟ್ಟರ, ಆನಂದ ಕಮತಗಿ, ಎಸ್.ಎಂ. ಶಿವಯೋಗಿಮಠ, ಮಲ್ಲಿಕಾರ್ಜುನ ರಡ್ಡೇರ, ಶಂಕರ ಕೋಳಿವಾಡ ಭಾಗವಹಿಸುವರು ಎಂದರು.

ವೀರಶೈವ ಲಿಂಗಾಯತ 84 ಒಳಪಂಗಡಗಳ ಸಮಾಜದ 95ರಷ್ಟು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುತ್ತಿದೆ. ಗೌರವ ಸನ್ಮಾನ ಉದ್ಯಮಿ ವೀರೇಶ ಹುಂಡಿ, ಗ್ರಾಮೀಣ ಇನ್ಸ್ಪೆಕ್ಟರ್ ಮುರಗೇಶ ಚನ್ನಣ್ಣವರ, ಪತ್ರಕರ್ತ ಗಿರೀಶ ಪಟ್ಟಣಶೆಟ್ಟಿ, ನಾಗರಾಜ ಗೌರಿ, ನಾಗೇಶ ಅಣ್ಣಿಗೇರಿ, ಕೆಎಲ್ಇ ನಿರ್ದೇಶಕ ಮಂಜುನಾಥ ಮುನವಳ್ಳಿ ಮಾಡಲಾಗುತ್ತಿದೆ ಎಂದರು.

ನೂರಾರು ವಿದ್ಯಾರ್ಥಿಗಳು ಅರ್ಜಿ ಬಂದಿದ್ದು, 100 ಜನರಿಗೆ ಸನ್ಮಾನ ಮಾಡಲಾಗುತ್ತಿದೆ. ಈಗಾಗಲೇ 85 ಜನರ ಆಯ್ಕೆ ಮಾಡಲಾಗಿದೆ. ಹುಬ್ಬಳ್ಳಿ ಹಾಗೂ ಹುಬ್ಬಳ್ಳಿ ತಾಲೂಕಿನ ವಿದ್ಯಾರ್ಥಿ ಗಳಿಗೆ ಮಾತ್ರ ಸನ್ಮಾನ ಮಾಡಲಾಗುತ್ತಿದೆ. ಸಿಎ ಸಮೃದ್ಧಿ ಮುಂಗರವಾಡಿ ಅವರಿಗೆ ಸನ್ಮಾನಿಸಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯದರ್ಶಿ ಪ್ರಕಾಶ ಬೆಂಡಿಗೇರಿ, ಸದಾಶಿವ ಚೌಶೆಟ್ಟಿ, ಮಾಹಾತೇಶ ಹಿರೇಮಠ, ಜಯಶ್ರೀ ಇದ್ದರು.

ಜೂ.1ಕ್ಕೆ ಕುಂದುಕೊರತೆ ಸಭೆ

ಕಲಘಟಗಿ: ತಾಲೂಕಿನ ಪ.ಜಾತಿ ಹಾಗೂ ಪ.ವರ್ಗದ 2026-27 ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಕುಂದುಕೊರತೆ ಸಭೆಯನ್ನು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಜೂ.1ರಂದು ಮಧ್ಯಾಹ್ನ 3 ಗಂಟೆಗೆ ತಾಲೂಕು ಪಂಚಾಯತ್ ಸಭಾಭವನದಲ್ಲಿ ಕರೆಯಲಾಗಿದೆ. ಈ ಸಭೆಗೆ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಯ ಮಾಹಿತಿಯೊಂದಿಗೆ ಖುದ್ದಾಗಿ ಹಾಜರಾಗಬೇಕು ಹಾಗೂ ತಾಲೂಕಿನ ಪ.ಜಾತಿ ಹಾಗೂ ಪ.ವರ್ಗಗಳ ಮುಖಂಡರು ಸಭೆಗೆ ಹಾಜರಾಗಿ ತಮ್ಮ ಅಹವಾಲುಗಳನ್ನು ಮಂಡಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉದ್ದೇಶ ಪೂರ್ವಕ ವಿಳಂಬ

ಹುಬ್ಬಳ್ಳಿ: ಕರ್ನಾಟಕ ವೃತ್ತಿಪರ ಸಿವಿಲ್ ಇಂಜಿನಿಯರ್ಸ್ ಅಧಿನಿಯಮ ಅಧಿಸೂಚನೆ ಆಗಿ ಎರಡು ವರ್ಷವಾದರೂ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ, ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ. ಕಾರಣ ಈ ವಿಷಯವನ್ನು ಗಣನೆಗೆ ತೆಗೆದುಕೊಂಡು ಬೇಗನೆ ಮಾಡಲು ಇಂಡಿಯನ್ ಕಾಂಕ್ರೀಟ್ ಇನ್ಸಿಟ್ಯೂಟ್ ಹುಬ್ಬಳ್ಳಿ ಧಾರವಾಡ ಸೆಂಟರ್‌ನ ಚೇರಮನ್ ಸುರೇಶ ಕಿರೇಸೂರ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

2024ರ ವಿಧನಸಭಾ ಅಧಿವೇಶನದಲ್ಲಿ ಕರ್ನಾಟಕ ವೃತ್ತಿಪರ ಇಂಜಿನಿಯರ್ಸ್‌ನಲ್ಲಿ ಅಧಿನಿಯಮ ಅನುಮೋದನೆ ಪಡೆದುಕೊಂಡಿತು ನಂತರ ಜೂ.10, 2024 ರಂದು ಈ ಅಧಿನಿಯಮಗಳ ಅಧಿಸೂಚನೆ ಆಗಿದೆ. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿದೆ. ಆದರೆ 2 ವರ್ಷ ಕಳೆದರೂ ಈ ನಿಯಮ ಕಾರ್ಯರೂಪಕ್ಕೆ ಬಂದಿಲ್ಲ, ಈ ನಿಯಮ ಬಂದರೆ ಕಟ್ಟಡ ನಿರ್ಮಾಣ ಹಾಗೂ ಸೇತುವೆಗಳು ರಸ್ತೆಗಳು ಮುಂತಾದ ಸಿವಿಲ್ ಇಂಜಿನಿಯರ್ ಸಂಭಂದಪಟ್ಟ ಯೋಜನೆಗಳು ಗುಣಮಟ್ಟ ಸುರಕ್ಷತೆ ನಿಖರತೆ ಒತ್ತುಕೊಡಬಹುದು. ಈಗಾಗಲೆ ಕೆಲವು ಸರ್ಕಾರಿ ಮತ್ತು ಖಾಸಗಿ ಕಾಮಗಾರಿಗಳು ಕಳಪೆ ಕಾಮಗಾರಿಗಳಿಂದ ಎಷ್ಟೋ ಅನಾಹುತಗಳಾಗಿವೆ. ಯಾವುದೇ ನಿರ್ಮಾಣ ಕಾರ್ಯದಲ್ಲಿ ಕಳಪೆ ಕಾಮಗಾರಿಗಳಿಗೆ ತಪ್ಪು ಮಾಡಿದರೆ ಅಂತಹ ಇಂಜಿನಿಯರ್‌ಗೆ ಕಾನೂನು ಶಿಸ್ತು ಕ್ರಮ ಕೈಕೊಳ್ಳಲು ಈ ಅಧಿನಿಯಮದಲ್ಲಿದೆ. ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್ ಪರಿಷತ್ತು ಸ್ಥಾಪನೆ ಆಗಿದೆ. ಪರಿಷತ್ ಸದಸ್ಯರುಗಳನ್ನು ನೇಮಕ ಆಗಿದೆ. ಆದರೆ ಇನ್ನೂ ಪರಿಷತ್ ಕಾರ್ಯರೂಪಕ್ಕೆ ಬಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿದ್ದಾರೆ.

ಶಾಂತವ್ವ ಮೇಟ್ಯಾಲ್ ನಿಧನ



ಧಾರವಾಡ: ತಾಲೂಕಿನ ಮನಸೂರು ಗಾಮದ ಶಾಂತವ್ವ ಮೇಟ್ಯಾಲ್(65) ಶುಕ್ರವಾರ ನಿಧನ ಹೊಂದಿದರು. ಮೃತರಿಗೆ ಅಪಾರ ಬಂಧ-ಬಳಗವಿದೆ.



ಅಳ್ನಾವರ: ಬೇಸಿಗೆ ರಜೆ ಮುಗಿದು ಶಾಲೆಗಳು ಪುನರಾರಂಭಗೊಂಡಿರುವ ಶುಕ್ರವಾರ ಮಕ್ಕಳು ಉತ್ಸಾಹದಿಂದ ಶಾಲೆಗಳಿಗೆ ತೆರಳುತ್ತಿರುವದು ಅಳ್ನಾವರದಲ್ಲಿ ಕಂಡು ಬಂದಿತು. ಇಲಾಖೆಯ ನಿರ್ದೇಶನದಂತೆ ಜೂನ್ ಒಂದರಂದು ಶಾಲಾ ಪ್ರಾರಂಭೋತ್ಸವವನ್ನು ವಿಜೃಂಭಣೆಯಿಂದ ನಡೆಸಲು ಪೂರ್ವ ಸಿದ್ಧತೆಯನ್ನು ಶಿಕ್ಷಕರು ಮಾಡಿಕೊಳ್ಳುತ್ತಿದ್ದು ಅಂದೇ ಪುಸ್ತಕ ವಿತರಣೆಯೂ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ಮೂಲ ಸೌಕರ್ಯ ಒದಗಿಸಲು ಮೌನ ಪ್ರತಿಭಟನೆ

ಹುಬ್ಬಳ್ಳಿ: ನಗರಕ್ಕೆ ಮೂಲ ಸೌಕರ್ಯ ಒದಗಿಸಬೇಕು ಎಂದು ಆಗ್ರಹಿಸಿ ಕನ್ನಡ ಹೋರಾಟಗಾರರ ಸಮಿತಿಯಿಂದ ಮಹಾನಗರ ಪಾಲಿಕೆ ಎದುರು ಬಾಯಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಲಾಯಿತು.

ಶುಕ್ರವಾರ ಮಹಾನಗರ ಪಾಲಿಕೆ ಎದುರು ಸೇರಿದ ವಿವಿಧ ಸಂಘಟನೆಯ ಸದಸ್ಯರು, ಬಾಯಿಗೆ ಕಪ್ಪುಪಟ್ಟಿ ಕಟ್ಟಿಕೊಂಡು, ಪಾಲಿಕೆಗೆ ಎಷ್ಟೇ ಮನವಿ ಕೊಟ್ಟರೂ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ಎಮ್ಮೆಯನ್ನು ಹಿಡಿದುಕೊಂಡು ಬಂದು, ಪಾಲಿಕೆ ಎದುರು ಮಲಗಿ ಪ್ರತಿಭಟಿಸಿದರು.

ಉತ್ತರ ಕರ್ನಾಟಕ ಆಟೋ ಮಾಲೀಕರು ಹಾಗೂ ಚಾಲಕರ ಸಂಘದ ಅಧ್ಯಕ್ಷ ಶೇಖರಯ್ಯ ಮಠಪತಿ, ಸಂಜೀವ ದುಮ್ಮಕನಾಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಸಾರ್ವಜನಿಕ ಶೌಚಾಲಯ ಕಟ್ಟಡ ಕಟ್ಟಬೇಕು. ಸಾಂಸ್ಕೃತಿಕ ಭವನ, ರಂಗಮಂದಿರಗಳನ್ನು ನವೀಕರಣ ಮಾಡಬೇಕು. ಸರ್. ಸಿದ್ದಪ್ಪ ಕಂಬಳಿ ಅವರ ಪ್ರತಿಮೆ ಸ್ಥಳಾಂತರದ ಜೊತೆಗೆ ಇನ್ನಿತರ ಸಾಧಕರನ್ನು ಪ್ರತಿಷ್ಠಾಪನೆ ಮಾಡಬೇಕು. ಪ್ರಯಾಣಕರಿಗೆ ಬಸ್ ನಿಲ್ದಾಣ ಎಲ್ಲಿವೆ? ಫ್ಲೈಓವರ್ ಕಾಮಗಾರಿ ಯಾವಾಗ? ಪಾಲಿಕೆ ಕಚೇರಿ ಆವರಣದಲ್ಲಿ ಕೂಡಲು, ಕುಡಿಯುವ ನೀರು ಎಲ್ಲಿದೆ ತೋರಿಸಿ, ಪಾದಚಾರಿ ರಸ್ತೆ ಒತ್ತುವರಿ ತೆರವು ಯಾವಾಗ ಹೇಳಿ? ಉದ್ಯಾನವನಗಳು ಸೌಂದರ್ಯೀಕರಣ ಯಾವಾಗ ಹೇಳಿ ಎನ್ನುವುದು ಸೇರಿದಂತೆ ವಿವಿಧ ಭಾವಚಿತ್ರ ಹಿಡಿದು ಮೌನ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಈರಪ್ಪ ಎಮ್ಮಿ, ರಮೇಶ ಹಳ್ಳಿಕೇರಿ, ವೀರೇಶ ಜಿಗಳೂರ, ಮೌನೇಶ ಅಂಬಿಗೇರ, ಖಾಜಾಸಾಬ ಅಸ್ಕಾಂ, ಪ್ರಕಾಶ ನಾಯ್ಕ, ಶಾಹೀದ್ ನದಾಫ, ಅಲ್ತಾಫ್ ಅಸ್ಕಾಂ, ರಿಹಾನ್ ಆಡೂರ್, ಜಾಕೀರ್ ಸೇರಿದಂತೆ ಇತರರಿದ್ದರು.



ಹುಬ್ಬಳ್ಳಿ: ನಗರಕ್ಕೆ ಮೂಲ ಸೌಕರ್ಯ ಒದಗಿಸಬೇಕು ಎಂದು ಆಗ್ರಹಿಸಿ ಕನ್ನಡ ಹೋರಾಟಗಾರರ ಸಮಿತಿಯಿಂದ ಮಹಾನಗರ ಪಾಲಿಕೆ ಎದುರು ಬಾಯಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಲಾಯಿತು.

ಬೃಹತ್ ಮಹಾನಗರ ಪಾಲಿಕೆ ನಿರ್ಣಯ ಕೈಬಿಟ್ಟ ಪಾಲಿಕೆ

ಹುಬ್ಬಳ್ಳಿ: ಹುಬ್ಬಳ್ಳಿ -ಧಾರವಾಡ ಬೃಹತ್ ಮಹಾನಗರ ಪಾಲಿಕೆ ಮಾಡಬೇಕು ಎಂಬ ನಿರ್ಣಯವನ್ನು ಹು-ಧಾ ಮಹಾನಗರ ಪಾಲಿಕೆ ಕೈಬಿಡಲಾಗಿದ್ದು, ಪ್ರತ್ಯೇಕ ಮಹಾನಗರ ಪಾಲಿಕೆ ಮಾಡಲು ಕ್ರಮ ಜರುಗಿಸಬೇಕು ಎಂದು ಶುಕ್ರವಾರ ಹು-ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಮೇಯರ್ ಜ್ಯೋತಿ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ಈಗಾಗಲೇ ರಾಜ್ಯಪಾಲರು ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಮಾಡಲು ಅಂಕಿತ ಹಾಕಿದ್ದು, ಈ ಕಡತಗಳ ಸರ್ಕಾರಕ್ಕೆ ಕಳುಹಿಸಲಾಗಿದೆ. ಬೃಹತ್ ಮಹಾನಗರ ಪಾಲಿಕೆ ನಿರ್ಣಯ ಹಿಂದೆ ಪಡೆದು ಪ್ರತ್ಯೇಕಕ್ಕೆ ಅಧಿಕಾರಿಗಳು ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಪಾಲಿಕೆ ಸರ್ವಪಕ್ಷದವರು ಪ್ರತ್ಯೇಕ ಮಹಾನಗರ ಪಾಲಿಕೆ ಮಾಡುವ ವಿಷಯ ಸರ್ವಾನುಮತದಿಂದ ಸ್ವಾಗತಿಸಿದರು. ಪಾಲಿಕೆ ಸದಸ್ಯ ತಿಪ್ಪಣ್ಣ ಮಜ್ಜಗಿ ಮಾತನಾಡಿ, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆಯನ್ನು ಸ್ವಾಗತಿಸುತ್ತೇವೆ. ಆದರೆ ಈ ಎರಡು ನಗರಗಳ ನಡುವಿದ್ದು, ಅನೇಕ ವರ್ಷದ ಸಂಬಂಧ ಹಳಸಲಿದೆ. ಪ್ರತ್ಯೇಕವಾಗುವುದು ನೋವಾಗುತ್ತದೆ ಎಂದರು. ಬೃಹತ್ ಮಹಾನಗರ ಪಾಲಿಕೆ ಉದ್ದೇಶ 16ನೇ ಹಣಕಾಸಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಸಾವಿರಾರು ಕೋಟಿ ಅನುದಾನ ಮೀಸಲಿಡಲಾಗುತ್ತಿದೆ. ಇದರಿಂದ ಹು-ಧಾ ಅವಳಿನಗರ ಸಾಕಷ್ಟು ಅಭಿವೃದ್ಧಿ ಮಾಡಬಹುದಿತ್ತು. ಈ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ಮಾಡಿದರು. ಇತ್ತ ಹು-ಧಾ ಅವಳಿನಗರ ಬೇರ್ಪಡಿಸುವ ಚಾಣಕ್ಯ ಮಾಡಿದರು ಎಂದು ಆರೋಪಿಸಿದರು. ಈ ವಿಚಾರ ಅರ್ಥ ಮಾಡಿಕೊಳ್ಳದ ಪಾಲಿಕೆ ಸದಸ್ಯರು, ನಾಗರಿಕರಲ್ಲಿ ಅರ್ಥ ಮಾಡಿಸುವಲ್ಲಿ ವಿಫಲವಾದೆವು. ಕಾಂಗ್ರೆಸ್‌ನವರ ರಾಜಕಾರಣದಿಂದ ಹೋರಾಟಗಾರರು ಇನ್ನೂ ಗೊಂದಲದಲ್ಲಿದ್ದಾರೆ. ದೊಡ್ಡ ಪ್ರಮಾಣ ಆದಾಯ, ಸೌಲಭ್ಯದಿಂದ ವಂಚಿತರಾಗುತ್ತೇವೆ. ಪಾಲಿಕೆ ಪ್ರತ್ಯೇಕವಾದ ಬಳಿಕ ಹಣಕಾಸಿನ ಸಮಸ್ಯೆ ಎದುರಾಗಲಿದೆ. ದೊಡ್ಡ ಪ್ರಮಾಣದಲ್ಲಿ ಹೋರಾಟ ನಡೆದರೂ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಮಾತನಾಡುವ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಒಂದು ಬಾರಿ ಸರ್ಕಾರದ ಗಮನ ಸೆಳೆಯಲಿಲ್ಲ, ರಾಜ್ಯಪಾಲರ ಭೇಟಿ ಮಾಡಿ ಬೇಡಿಕೆ ಸಲ್ಲಿಸಲಿಲ್ಲ, ಕಾಂಗ್ರೆಸ್‌ನವರು ಜನಸಾಮಾನ್ಯರ ಭಾವನೆ ಜೊತೆ ಆಟವಾಡಬಾರದು ಎಂದರು. ಸದಸ್ಯ ವೀರಣ್ಣ ಸವಡಿ ಮಾತನಾಡಿ, ಪ್ರತ್ಯೇಕ ಪಾಲಿಕೆ ಅನುಮೋದನೆ ನೀಡಿ ರಾಜ್ಯಪಾಲರಿಗೆ ಧನ್ಯವಾದ ತಿಳಿಸಿದರು. ಪಾಲಿಕೆ ಸರ್ಕಾರದಿಂದ ಬರಬೇಕಿದ್ದ 300 ಕೋಟಿ ತರಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ, ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡುತ್ತಿಲ್ಲ ಎಂದರು. ಸಭಾನಾಯಕ ಈರೇಶ ಅಂಚಟಗೇರಿ, ಶಿವು ಹಿರೇಮಠ, ಶಂಕರ ಶೆಳಕೆ, ರಾಜಣ್ಣ ಕೊರವಿ ಪ್ರತ್ಯೇಕ ಮಹಾನಗರ ಪಾಲಿಕೆ ನಿರ್ಧಾರ ಸ್ವಾಗತಿಸಿದರು. ಕಾಂಗ್ರೆಸ್ ಸದಸ್ಯರು ರಾಜೀನಾಮೆ ನೀಡಿದ್ದು, ಯಾವ ಹಂತದಲ್ಲಿದೆ ಅಥವಾ ಹೋರಾಟದ ನಾಟಕವಾಡಿದ್ದಾರಾ ಎಂದು ಪರಿಶೀಲಿಸಬೇಕು ಎಂದು ಆಗ್ರಹಿಸಿದರು.



ವಿರೋಧ ಪಕ್ಷದಿಂದ ವಿರೋಧ

ಇದಕ್ಕೂ ಮೊದಲು ಹಿಂದೆ ಬೃಹತ್ ಮಹಾನಗರ ಪಾಲಿಕೆ ಮಾಡಬೇಕು ಎಂಬ ಠರಾವಿನಲ್ಲಿ ವಿರೋಧ ಪಕ್ಷದವರು ವಿರೋಧ ಮಾಡಿದ್ದಾರೆ ಎಂಬ ವಿಷಯ ಕಾಣಿಸಿಲ್ಲ ಎಂದು ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು. ವಿರೋಧ ಪಕ್ಷದ ನಾಯಕ ಇಮ್ರಾನ ಯಲಿಗಾರ ಈ ವಿಷಯ ಪ್ರಸ್ತಾಪಿಸಿ ಪರಿಷತ್ ಕಾರ್ಯದರ್ಶಿ ವಿರುದ್ಧ ಕಿಡಿಕಾರಿದರು. ಇದಕ್ಕೆ ಕಾಂಗ್ರೆಸ್ ಬಹುತೇಕ ಸದಸ್ಯರು ಬೆಂಬಲ ನೀಡಿದರು. ಬಾವಿಗಿಳಿದು ಪ್ರತಿಭಟನೆಗೆ ಮುಂದಾದರು. ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ಮಧ್ಯೆ ವಾಗ್ವಾದ ನಡೆಯಿತು. ಈ ಹಿನ್ನೆಲೆ ಮೇಯರ್ ಜ್ಯೋತಿ ಪಾಟೀಲ 10 ನಿಮಿಷ ಸಭೆ ಮುಂದೂಡಿದರು.

▸ ಇಲ್ಲಿಯ ಅಮರಗೋಳದಲ್ಲಿ ಕೈಗಾರಿಕಾಭಿವೃದ್ಧಿ ಮೀಸಲಿಡಲಾಗಿದ್ದ ಆರ್ಯಭಟ್ ಐಟಿ ಪಾರ್ಕ್ ಸದ್ಯ ಸ್ಥಿತಿ, ಯಾವ ಕಂಪನಿ ಬಂದರೆ ಜನರಿಗೆ ಅನುಕೂಲ ಹಾಗೂ ಯಾವ ರೀತಿ ಜಾಗ ವಿತರಿಸಬೇಕು ಎಂಬುವುದರ ಕುರಿತು ಹೊಸ ಸದನ ಸಮೀತಿ ಮಾಡಿ ವರದಿ ನೀಡಲು ಆಯುಕ್ತ ಡಾ. ರುದ್ರೇಶ ಘಾಳಿ ಅವರಿಗೆ ಮೇಯರ್ ಜ್ಯೋತಿ ಪಾಟೀಲ ಸೂಚನೆ

ನೀರಿನ ಟ್ಯಾಂಕರ್ ಮೇಲೆ ನಿಗಾ ವಹಿಸಿ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ನೀರು ಸರಬರಾಜು ಮಾಡಲು ಸಂಗ್ರಹಿಸುವ ನೀರಿನ ಬೃಹತ್ ಟ್ಯಾಂಕರ್‌ಗಳ ಹಾಗೂ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಪಡಿಸಿ, ನಿರ್ವಹಣೆ ಮಾಡಬೇಕು ಎಂದು ಪಾಲಿಕೆ ಸದಸ್ಯರು ಆಗ್ರಹಿಸಿದರು.

ಶುಕ್ರವಾರ ಹು-ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಗಮನ ಸೆಳೆಯುವ ವಿಷಯದಲ್ಲಿ ವೀರಣ್ಣ ಸವಡಿ, ನೀರು ಸಂಗ್ರಹಿಸರುವ ಟ್ಯಾಂಕರ್‌ಗಳು ಸಂಪೂರ್ಣ ಹಾಳಾಗಿವೆ. ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಪುಂಡರು ಅಕ್ರಮ ಚಟುವಟಿಕೆ ನಡೆಸುತ್ತಿದ್ದಾರೆ. ಲಕ್ಷಾಂತರ ಜನರಿಗೆ ನೀರು ಸರಬರಾಜು ಮಾಡುವ ಟ್ಯಾಂಕರ್‌ಗಳಲ್ಲಿ ಯಾರಾದರೂ ಬಿದ್ದು, ಮೃತಪಟ್ಟರೆ ಅಥವಾ ನಶೆಯಲ್ಲಿ ಏನಾದರೂ ಬೆರೆಸಿದರೆ ಜನರಿಗೆ ತೊಂದರೆಯಾಗಲಿದೆ ಎಂದು ಎಚ್ಚರಿಕೆ ನೀಡಿದರು.

ಟ್ಯಾಂಕರ್ ಸುತ್ತಲೂ ಕಪೌಂಡ್ ನಿರ್ಮಿಸಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಪೊಲೀಸ್ ಸಿಬ್ಬಂದಿ ಭದ್ರತೆಗೆ ನಿಯೋಜಿಸಬೇಕು. ಎಲ್ ಆ್ಯಂಡ್ ಟಿ ಕಂಪನಿ ಅವರು ಏನು ಮಾಡಲು ಪಾಲಿಕೆ ಅಧಿಕಾರಿಗಳು ಗಮನ ಹರಿಸಬೇಕು ಎಂದು ಆಗ್ರಹಿಸಿದರು. ಸಭಾ ನಾಯಕ ಈರೇಶ ಅಂಚಟಗೇರಿ, ತಿಪ್ಪಣ್ಣ ಮಜ್ಜಗಿ ಸೇರಿದಂತೆ ಅನೇಕ ಸದಸ್ಯರು ಧ್ವನಿಗೂಡಿಸಿದರು. ಇದಕ್ಕೆ ಸ್ಪಂದಿಸಿದ ಮೇಯರ್ ಟ್ಯಾಂಕರ್ ನಿರ್ವಹಣೆ ಬಗ್ಗೆ ಸಂಪೂರ್ಣ ವರದಿ ಸಲ್ಲಿಸಲು ಸೂಚಿಸಿದರು. ತೋಟಗಾರಿಕೆ ಇಲಾಖೆ, ಎಲ್ ಆ್ಯಂಡ್ ಟಿ ಕಂಪನಿ ಸರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.



ಅವಧಿ ವಿಸ್ತರಣೆ

ಆಸ್ತಿ ಕರ ಸಂದಾಯ ಮಾಡಲು ಅವಧಿ ವಿಸ್ತರಿಸಬೇಕು ಎಂದು ಸಭಾ ನಾಯಕ ಈರೇಶ ಅಂಚಟಗೇರಿ ಪ್ರಸ್ತಾಪಿಸಿದರು. ಆಸ್ತಿ ತೆರಿಗೆ ಸಾರ್ವಜನಿಕರು ಸಂದಾಯ ಮಾಡುವುದು ಇನ್ನೂ ಬಾಕಿ ಇದೆ. ಈ ಅವಧಿ ಮೇ 30ಕ್ಕೆ ಮುಗಿಯಲಿದ್ದು, ಜೂನ್ 30ರ ವರೆಗೆ ವಿಸ್ತರಿಸಿದರೆ ಪಾಲಿಕೆ ಆದಾಯ ಹೆಚ್ಚಲಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಜ್ಯೋತಿ ಪಾಟೀಲ, ಆಸ್ತಿ ಕರ ಸಂದಾಯ ಮಾಡಲು ಜೂ. 30 ರ ವರೆಗೆ ವಿಸ್ತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

> ದುರ್ಗದ ಬೈಲ್, ಗೋಕುಲ ರಸ್ತೆ, ಕೊಪ್ಪಿಕರ ರಸ್ತೆ, ಕೇಶ್ವಾಪುರ, ಹಲವೆಡೆ ಪಾದಚಾರಿ ರಸ್ತೆ ಅತಿಕ್ರಮಣವಾಗಿದೆ. ಮಾರುಕಟ್ಟೆ ಪ್ರದೇಶದಲ್ಲಿ ಅಲೆದಾಡಲು ಜಾಗವಿಲ್ಲ. ಪಾಲಿಕೆ ಅಧಿಕಾರಿಗಳು 12 ವಲಯದಲ್ಲಿ ಪಾದಚಾರಿ ರಸ್ತೆ ತೆರವು ಕಾರ್ಯಚರಣೆ ಮಾಡಲಿ.
> ■ **ಶಿವು ಮೆಣಸಿನಕಾಯಿ,** ಸದಸ್ಯ

> ಪಾದಚಾರಿ ರಸ್ತೆ ತೆರವಿಗೆ ಅಧಿಕಾರಿಗಳು ಕ್ರಮವಹಿಸಿ.
> ■ **ಜ್ಯೋತಿ ಪಾಟೀಲ,** ಮೇಯರ್



ಕುಂದಗೋಳ: ಪಟ್ಟಣದ ಪ್ರತಿಷ್ಠಿತ ಹರಭಟ್ ಮಹಾವಿದ್ಯಾಲಯದ 2026ನೇ ಸಾಲಿನ ಎಸ್ಎಸ್ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಶೇ.100 ಫಲಿತಾಂಶ ಸಾಧಿಸಿ ಸಾಧನೆಗೈದ ವಿಷಯವಾರು ಶಿಕ್ಷಕ-ಶಿಕ್ಷಕಿಯರು ಹಾಗೂ ಸಿಬ್ಬಂದಿಯನ್ನು ಶಿಕ್ಷಣ ಸಮಿತಿಯಿಂದ ಶುಕ್ರವಾರ ಸನ್ಮಾನಿಸಲಾಯಿತು. ಶಿಕ್ಷಣ ಸಮಿತಿ ಕುಂದಗೋಳದ ಅಧ್ಯಕ್ಷರು, ಉಪಾಧ್ಯಕ್ಷರು, ಚೇರ್ಮನ್, ವೈಸ್ ಚೇರ್ಮನ್ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರು, ಉತ್ತಮ ಫಲಿತಾಂಶ ತಂದು ಸಂಸ್ಥೆಯ ಕೀರ್ತಿ ಹೆಚ್ಚಿಸಿದ ಶಿಕ್ಷಕ ವೃಂದವನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲೂ ಇದೇ ಸಾಧನೆ ಮುಂದುವರಿಯಲಿ ಎಂದು ಶುಭಹಾರೈಸಿದರು.

ಸಾಮಾಜಿಕ ನ್ಯಾಯದ ಹರಿಕಾರ ಸಿದ್ದರಾಮಯ್ಯ

ನವಲಗುಂದ: ಕರ್ನಾಟಕ ರಾಜ್ಯದ ದೀರ್ಘ ಕಾಲದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ಇದೀಗ ಈ ಸ್ಥಾನಕ್ಕೆ ವಿದಾಯ ಹೇಳುತ್ತಿರುವ ಸಿಎಂ ಸಿದ್ದರಾಮಯ್ಯರ ಸೇವೆ ಸ್ಮರಣೀಯವಾದುದು ಎಂದು ತಾಲೂಕಿನ ನಾಗನೂರ ಗ್ರಾಮದ ಕೃಷಿಕ ಡಾ. ಶೌಕತ್ ಅಲಿ ಲಂಬೂನವರ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡವರ ಬಗೆಗಿನ ಕಾಳಜಿ, ಹಿಂದುಳಿದ ವರ್ಗದ ಕಲ್ಯಾಣದ ಹರಿಕಾರ, ತುಳಿತಕ್ಕೊಳಾದವರ ಏಳ್ಗಿಗೆ ಶ್ರಮಿಸಿದ ನೇತಾರ ಹಾಗೂ ಗ್ಯಾರಂಟಿಗಳ ಮೂಲಕ ಈ ನಾಡಿನ ಬಡವರ ಬಂಧುವಾಗಿ ನಾಡಿನ ಜನರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದ ಧೀಮಂತ ನಾಯಕ ಸಿದ್ದರಾಮಯ್ಯನವರು. ಮಹಿಳಾ



ಸಬಲೀಕರಣಕ್ಕೆ ಗ್ಯಾರಂಟಿಗಳ ಮೂಲಕ ಸಹಾಯ ನೀಡಿದ ನವ ಕರ್ನಾಟಕ ನಿರ್ಮಾಣಕ್ಕೆ ಶ್ರಮಿಸಿದ ನಾಯಕರಿವರು.

ಇಂತಹ ನಾಯಕರಿಂದ ಶ್ರೇಷ್ಠ ಕೃಷಿಕ ಪುರಸ್ಕಾರ ಪಡೆದ ನನಗೆ ಅತ್ಯಂತ ಅಭಿಮಾನ ಹಾಗೂ ಶ್ರೇಷ್ಠ ಗೌರವ ಎಂದು ಭಾವಿಸಿರುವೆ ಎಂದಿದ್ದಾರೆ.

ಠರಾವ್ ರದ್ದು ಪಡಿಸಲು ಪ್ರತಿಭಟನೆ

ಹುಬ್ಬಳ್ಳಿ: ಬೃಹತ್ ಮಹಾನಗರ ಪಾಲಿಕೆ ಮಾಡಬೇಕು ಎಂಬ ಮಾಡಿದ ಠರಾವ್ ರದ್ದು ಪಡಿಸಬೇಕು ಎಂದು ಆಗ್ರಹಿಸಿ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ಸಮಿತಿಯ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಶುಕ್ರವಾರ ನಗರದ ಪಾಲಿಕೆ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಹಲಗೆ ಬಾರಿಸಿ, ಆಕ್ರೋಶ ವ್ಯಕ್ತಪಡಿಸಿದರು. ಹೋರಾಟಗಾರ ಬಿ.ಡಿ. ಹಿರೇಮಠ, ಮುಖಂಡ ಗುರುರಾಜ ಹುಣಸಿಮರದ ಮಾತನಾಡಿದರು. ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಸಭಾ ನಾಯಕ ಈರೇಶ ಅಂಚಟಗೇರಿ, ಶಿವು ಹಿರೇಮಠ ಅವರು, ಹೋರಾಟಗಾರರನ್ನು ಮನವೊಲಿಸಲು ನೋಡಿದರಾದರೂ, ಠರಾವ್ ರದ್ದು ಮಾಡಿ ಬಂದು ಮಾತನಾಡಿ ಎಂಬ ಹೋರಾಟಗಾರರ ಬಿಗಿಪಟ್ಟು ಹಿನ್ನೆಯಲ್ಲಿ ಸಭೆಗೆ ತೆರಳಿದರು. ಸಭೆಯಲ್ಲಿ ತೀರ್ಮಾನಕ್ಕೆ ಗೊಂಡ ಬಳಿಕ ಹೋರಾಟಗಾರರ ಬಳಿ ಬಂದ ಮೇಯರ್ ಜ್ಯೋತಿ ಪಾಟೀಲ ಅವರು ಹಿಂದಿನ ನಿರ್ಣಯ ಕೈಬಿಟ್ಟ ನಂತರ ಪ್ರತಿಭಟನೆ ಹಿಂಪಡೆದರು. ಪಾಲಿಕೆ ಕಾಂಗ್ರೆಸ್ ಸದಸ್ಯರು ಬೆಂಬಲಿಸಿದರು. ಮನೋಜ್ ಕರ್ಜಗಿ, ಬಾರ್ ಅಸೋಸಿಯೇಷನ್ ಅಧ್ಯಕ್ಷ ನೇಗಿನಹಾಳ, ಪಾಲಿಕೆ ಸದಸ್ಯೆ ಕವಿತಾ ಕಬ್ಬೇರ ನೇತೃತ್ವದಲ್ಲಿ ನಡೆಯಿತು.





ಧಾರವಾಡ: ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಅಧಿಸೂಚನೆ ಹೊರಡಿಸಲು ಆಗ್ರಹಿಸಿ ಸ್ವಾಭಿಮಾನಿ ಹೋರಾಟ ಸಮಿತಿ ನೇತೃತ್ವದಲ್ಲಿ ಬೃಹತ್ ಬೈಕ್ ರ್ಯಾಲಿ ನಡೆಯಿತು. ಗುರುರಾಜ ಹುಣಸಿಮರದ, ಆನಂದ ಯಾವಗಲ್ಲ, ಮನೋಜ ಕರ್ಜಗಿ, ಮೋಹನ ರಾಮದುರ್ಗ, ಆನಂದ ಹೂಗಾರ, ಶಿವಯೋಗಿ ಹಿರೇಮಠ ಇದ್ದರು.

ನಿಗದಿತ ಅವಧಿಯಲ್ಲಿ ನೀರು ಪೂರೈಸಿ

ಧಾರವಾಡ: ಏತ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಮತ್ತು ಕೆರೆಗಳಿಗೆ ನಿಗದಿತ ಅವಧಿಯಲ್ಲಿ ನೀರು ತುಂಬಿಸಲು ಕ್ರಮ ವಹಿಸಲು ಶಾಸಕ ಯು.ಬಿ.ಬಣಕಾರ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ವಾಲ್ಮಿ ಸಂಸ್ಥೆಯಲ್ಲಿ ನಡೆದ ಕರ್ನಾಟಕ ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಯೋಜನೆಗಳು ಹಾಗೂ ಕರೆ ತುಂಬಿಸುವ ಯೋಜನೆಗಳ ಹಾಗೂ ಸೂಕ್ಷ್ಮ ನೀರಾವರಿ ಯೋಜನೆಗಳ ಅಧ್ಯಯನ ಸಮಿತಿಯ ಸಭೆಯಲ್ಲಿ ಅವರು ಸೂಚಿಸಿದರು.

ಯೋಜನೆಗಳ ವಾರ್ಷಿಕ ವಿದ್ಯುತ್ ಶುಲ್ಕ ಮತ್ತು ನಿರ್ವಹಣೆ ವೆಚ್ಚದ ಕೊರತೆಯನ್ನು ಸರಿದೂಗಿಸಲು ಇಲಾಖೆಯಿಂದ ಕೈಗೊಳ್ಳುವ ಕ್ರಮ ಮತ್ತು ಏತ ನೀರಾವರಿ ಯೋಜನೆಗಳ ನೀರು ಬಳಕೆದಾರರ ಸಂಘಗಳ ಕರ ವಸೂಲಿ ಕುರಿತು ಸಭೆಯಲ್ಲಿ ಚರ್ಚಿಸಿದರು.

ಅಲ್ಲದೇ, ಯೋಜನೆಗಳ ನಿರಂತರ ಕಾರ್ಯಕ್ಷಮತೆ ನಿರ್ವಹಣೆಗೆ ಅನುದಾನದ ಜತೆ ವಿದ್ಯುತ್ ಶುಲ್ಕ ಪಾವತಿಗೆ ತಾತ್ಕಾಲಿಕವಾಗಿ ನಿಷ್ಕ್ರಿಯ ಯೋಜನೆಗಳಿಗೆ ಅನುದಾನ ಒದಗಿಸಲು ಅಧಿಕಾರಿಗಳ ಕೋರಿಕೆ ಮೇರೆಗೆ ಸರ್ಕಾರಕ್ಕೆ ಪ್ರಸಾವನೆ ಸಲ್ಲಿಸುವಂತೆ ಆದೇಶಿಸಿದರು.

ಇದೇ ವೇಳೆಯಲ್ಲಿ ಮಲಪ್ರಭಾ, ಘಟಪ್ರಭಾ, ವಿಜಯನಗರ ಕಾಲುವೆ, ಗೊಂದಿ ಯೋಜನೆಯ ನೀರು ಬಳಕೆದಾರರ ಸಹಕಾರಿ ಸಂಘದ ಮಹಾಮಂಡಳಗಳ ಕಾರ್ಯವೈಖರಿ ಹಾಗೂ ನಿರ್ವಹಣೆ ಕುರಿತು ಅಧ್ಯಕ್ಷರು ಸಭೆಯಲ್ಲಿ ಪ್ರಾತ್ಯಕ್ಷಿಕೆ ಪ್ರಸ್ತುಪಡಿಸಿದರು. ಧಾರವಾಡ ವಲಯದ ಬಾಗಲಕೋಟಿ, ಗದಗ, ಧಾರವಾಡ, ಬೆಳಗಾವಿ, ಹಾವೇರಿ ಮತ್ತು ಬೆಳಗಾವಿ ವಲಯದ ವಿಜಯಪುರ, ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುವ ಮತ್ತು ಪ್ರತಿಯಲ್ಲಿ ನೀರಾವರಿ ಯೋಜನೆ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಸಭೆಯಲ್ಲಿ ಸಮಿತಿಯ ಅಧ್ಯಕ್ಷರ ತಾಂತ್ರಿಕ ಸಲಹೆಗಾರ ಶಂಕರೇಗೌಡ, ನಿವೃತ್ತ ಇಂಜಿನಿಯರ್‌ಗಳಾದ ಚೆಲುವರಾಜ್, ಇಂಜಿನಿಯರ್ ರಾಜಶೇಖರ್, ನೀರಾವರಿ ನಿಗಮದ ವ್ಯವಸ್ಥಾಪ ನಿರ್ದೇಶಕ ರಾಜೇಶ ಅಮ್ಮಿನಬಾವಿ, ವಿವಿಧ ಅಧಿಕಾರಿಗಳು ಇದ್ದರು.



ಮಕ್ಕಳ ಬಾಳಲ್ಲಿ ಜ್ಞಾನದ ಬೆಳಕು ಹೊತ್ತಿಸಿ: ಬಿಇಒ

ಧಾರವಾಡ: ಉತ್ತಮ ಫಲಿತಾಂಶ ಗುಣಮಟ್ಟದ ಶಿಕ್ಷಣಕ್ಕೆ ಕೈಗನ್ನಡಿ. ಈ ಮೂಲಕ ಶಿಕ್ಷಕರು ವಿದ್ಯಾರ್ಥಿಗಳ ಬಾಳಿನಲ್ಲಿ ಜ್ಞಾನದ ಬೆಳಕು ಹೊತ್ತಿಸಬೇಕು ಎಂದು ಬಿಇಒ ಸುಜಾತಾ ತಿಮ್ಮಾಪೂರು ಹೇಳಿದರು.

ನಗರದ ಜನತಾ ಶಿಕ್ಷಣ ಸಮಿತಿಯ ಶಾಲೆಗಳು ಎಸ್ಸೆಸ್ಸೆಲ್ಸಿಯಲ್ಲಿ ನೂರರಷ್ಟು ಫಲಿತಾಂಶ ದಾಖಲಿಸಿದ ಶಿಕ್ಷಕರ ಹಾಗೂ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಶಿಕ್ಷಕರ ಮಾರ್ಗದರ್ಶನವೇ ವಿದ್ಯಾರ್ಥಿಗಳ ಕನಸುಗಳಿಗೆ ಬಲ ತುಂಬಲಿದೆ. ಈ ಕಾರಣಕ್ಕೆ ಶಿಕ್ಷಕರು ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ನಡೆಸಿ ಅವರ ಬಾಳಿನ ಜ್ಯೋತಿ ಬೆಳಗಿಸಬೇಕು. ಶಿಕ್ಷಕರ ಪರಿಶ್ರಮ, ತ್ಯಾಗ ಮತ್ತು ಸಹನೆ ವಿದ್ಯಾರ್ಥಿಗಳ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಲಿದೆ. ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ಮುನ್ನಡೆದರೆ ಬದುಕಿನಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ ಎಂದರು.



ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂಸ್ಥೆಯ ಜೀವಾಳ. ಶಿಕ್ಷಕರು ಕೇವಲ ಬೋಧಿಸುವುದಿಲ್ಲ, ಸಂಸ್ಕಾರವೂ, ಮೌಲ್ಯಗಳು ಕಲಿಸುತ್ತಾರೆ ಎಂದರು. ವಿದ್ಯಾರ್ಥಿಗಳು ಬದುಕಿನಲ್ಲಿ ಎದುರಾಗುವ ಸವಾಲುಗಳು ದಾಟಲು ಶಿಕ್ಷಕರು ದಾರಿ ತೋರಿಸುತ್ತಾರೆ. ಉತ್ತಮ ಶಿಕ್ಷಕರಿಂದ ಉತ್ತಮ ನಾಗರಿಕರು ನಿರ್ಮಾಣ ಸಾಧ್ಯ. ವಿದ್ಯಾರ್ಥಿ-ಶಿಕ್ಷಕರ ಬಾಂಧವ್ಯ ಶ್ರೇಷ್ಠ ಎಂದರು.

ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ಮಕ್ಕಳಿಗೆ ಡಿಜಿಟಲ್ ಆಧಾರಿತ ಜ್ಞಾನವೂ ಅಗತವಿದೆ. ಹೀಗಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಡಿಜಿಟಲ್ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳಲು ಸಲಹೆ ನೀಡಿದರು.

ಡಿಡಿಪಿಐ ಉಮೇಶ ಬೊಮ್ಮಕ್ಕನವರ, ವಿವಿಧ ಶಾಲೆಗಳ ಪ್ರಾಚಾರ್ಯರಾದ ರಜನಿ ಪಾಟೀಲ, ತ್ರಿವೇಣಿ ಆರ್, ಮೈನಾವತಿ ದಿವಟೆ, ಪ್ರೇರಣಾ ಪಾತ್ರಾ, ಡಯಾನಾ ಜೋಗಿನ ಇದ್ದರು. ವಿದ್ಯಾರ್ಥಿನಿ ರುಬಿನಾ ಪ್ರಾರ್ಥಿಸಿದರು. ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ಸ್ವಾಗತಿಸಿದರು. ವಾಣೀಶ್ರೀ ನಿರೂಪಿಸಿ, ವಂದಿಸಿದರು.

ಹಿಂಜರಿಕೆ ಬಿಟ್ಟರೆ ಸಾಧನೆ ಸಾಧ್ಯ

ಹುಬ್ಬಳ್ಳಿ: ಹಿಂಜರಿಕೆ ಬಿಟ್ಟು ಆತ್ಮಸ್ಥೈರ್ಯದಿಂದ ಹೆಜ್ಜೆ ಇಟ್ಟಲ್ಲಿ ಸ್ವಯಂ ಉದ್ಯೋಗದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಸ್ವ ಉದ್ಯೋಗ ಮಾರ್ಗದರ್ಶಕಿ ವಿಜಯಲಕ್ಷ್ಮೀ (ಮೀರಾ) ಕುಲಕರ್ಣಿ ಹೇಳಿದರು.

ಶ್ರೀ ಸಮರ್ಥ ಸೇವಾ ಕೇಂದ್ರ ಟ್ರಸ್ಟ್ ನಿಂದ ಪ್ರವರ್ತಿತ ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ ಇಲ್ಲಿನ ಭವಾನಿ ನಗರ ಶ್ರೀ ರಾಘವೇಂದ್ರ ಮಠದ ಶ್ರೀ ಸುಜಯೀಂದ್ರ ಭವನದಲ್ಲಿ ಆಯೋಜಿಸಿದ್ದ ಜೀವನಮ್ ಸ್ವಾವಲಂಬನಮ್ ಕಾರ್ಯಾಗಾರದ ಮಹಿಳಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಂತ ಉದ್ಯೋಗದಲ್ಲಿ ಸಾಕಷ್ಟು ಸವಾಲುಗಳು ಬರುತ್ತವೆ. ಆದರೆ ಅವನ್ನು ಮೀರಿ ನಿಲ್ಲಬೇಕು. ಸುರಕ್ಷಿತ ವಲಯ ಬಿಟ್ಟು ಹೊರ ಬಂದರೆ ಮಾತ್ರ ಬೆಳೆಯಲು ಸಾಧ್ಯ ಎಂಬುದನ್ನು ನಾನು ಕಲಿತಿದ್ದೇನೆ ಎಂದರು.

ಮಂಜುಳಾ ಹಳ್ಯಾಳ ಮಾತನಾಡಿದರು. ಎರಡು ಸಾವಿರ ಹೂವುಗಳ ಕುರಿತು ಸಂಶೋಧನೆಗೈದ ಸವಿತಾ ಕುಲಕರ್ಣಿ, ವಿಪ್ರ ಬ್ಯುಜಿನೆಸ್ ಫೋರಂನ ವೈಶಾಲಿ, ಗಾಯತ್ರಿ ಕುಲಕರ್ಣಿ, ಹಿರಿಯ ಕಲಾವಿದೆ ಶಶಿಕಲಾ ದಾನಿ, ಸುರೇಖಾ ಕುಲಕರ್ಣಿ, ಮಧುಲಿಕಾ ದೇಸಾಯಿ, ಸಂಧ್ಯಾ ದೀಕ್ಷಿತ್ ಮಾತನಾಡಿದರು. ರಮಾದೇವಿ ಚಿದಂಬರ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಮಮತಾ ವೈಷ್ಣವ, ವಿನಿತಾ ಶೇವಡೆ, ಜಾಹ್ನವಿ ದೇಸಾಯಿ, ಡಾ.ಛಾಯಾ ದೀಕ್ಷಿತ್, ಅನಘಾ ಹಾನಗಲ್ ಮತ್ತಿತರರನ್ನು ಸನ್ಮಾನಿಸಲಾಯಿತು. ವನಿತಾ ಅನಂತ ಕುಲಕರ್ಣಿ ಸಂಚಾಲಕರಾಗಿದ್ದರು. ರಾಜಶ್ರೀ ಕುಲಕರ್ಣಿ ವಂದಿಸಿದರು.



ಗಾಯತ್ರಿ ಮಂತ್ರ ಜಪದಿಂದ ಸರ್ವಸಿದ್ಧಿ: ಡಾ.ಸಮೀರಣಾಚಾರ್ಯ

ಹುಬ್ಬಳ್ಳಿ: ಇಂದು ಶೈಕ್ಷಣಿಕವಾಗಿ ನಾವು ಸಾಕಷ್ಟು ಉನ್ನತಿ ಸಾಧಿಸಿದ್ದೇವೆ ಎಂದರೂ ಸಂಸ್ಕಾರದಲ್ಲಿ ಎಲ್ಲೋ ಎಡವುತ್ತಿದ್ದೇವೆ ಎನಿಸುತ್ತದೆ. ಅದಕ್ಕೆ ಪಾಶ್ಚಾತ್ಯ ಸಂಸ್ಕೃತಿ ಪ್ರಭಾವ ಕಾರಣ. ಆದರೆ ಗಾಯತ್ರಿ ಮಂತ್ರ ಜಪ ನಮ್ಮ ದಿನನಿತ್ಯದ ಬದುಕಿನ ಭಾಗವಾದರೆ ಸರ್ವಸಿದ್ಧಿ ಸಾಧ್ಯ ಎಂದು ವಿಶ್ವಭಾರತೀ ವೇದಪೀಠದ ಅಧ್ಯಕ್ಷ ಡಾ.ಸಮೀರಣಾಚಾರ್ಯ ಕಂಠಪಲ್ಲಿ ಹೇಳಿದರು.

ಶ್ರೀ ಸಮರ್ಥ ಸೇವಾ ಕೇಂದ್ರ ಟ್ರಸ್ಟ್ ನಿಂದ ಪ್ರವರ್ತಿತ ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ ಇಲ್ಲಿನ ಭವಾನಿ ನಗರ ಶ್ರೀ ರಾಘವೇಂದ್ರ ಮಠದ ಶ್ರೀ ಸುಜಯೀಂದ್ರ ಭವನದಲ್ಲಿ ಆಯೋಜಿಸಿದ್ದ ಜೀವನಮ್ ಸ್ವಾವಲಂಬನಮ್ ಕಾರ್ಯಾಗಾರದ ಸನಾತನ ಸಂಸ್ಕಾರ ಗೋಷ್ಠಿಯಲ್ಲಿ ಮಾತನಾಡಿದ ಅವರು, ಆಚಾರ್ಯ ಶಂಕರರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರೆಲ್ಲ ಪಠಿಸಿದ್ದು ಒಂದೇ ಗಾಯತ್ರಿ ಮಂತ್ರ. ಶ್ರೀ ಮತಾಚಾರ್ಯರು ಇದೇ ಗಾಯತ್ರಿ ಮಂತ್ರ ಕುರಿತು ವ್ಯಾಖ್ಯಾನವನ್ನೂ



ಬರೆದಿದ್ದಾರೆ. ವಿಪ್ರೇತರ ಸಮುದಾಯದ ಅನೇಕರು ಗಾಯತ್ರಿ ಮಂತ್ರ ಜಪದ ಪ್ರಭಾವದಿಂದ ಸಾಕಷ್ಟು ಉನ್ನತಿ ಹೊಂದಿದ್ದಾರೆ ಎಂದರು. ವೇ. ಮೂ. ಸತ್ಯನಾರಾಯಣಾಚಾರ್ಯ, ವೆಂಕಟೇಶ ಜೋಶಿ, ಹನುಮಂತಣ್ಣ ಟಕ್ಕಳಕಿ ಸಂಸ್ಕಾರದ ಮಹತ್ವ, ಮಕ್ಕಳು ,ಪಾಲಕರ ಜವಾಬ್ದಾರಿ ಕುರಿತು ಮಾತನಾಡಿದರು. ಡಾ.ಭಾಸ್ಕರ ಪಾಟೀಲ್ ಮತ್ತಿತರರು ಇದ್ದರು. ಶ್ರೀಪಾದ ಶಾಸ್ತ್ರಿ ಗೋಷ್ಠಿ ನಿರ್ವಹಿಸಿದರು. ಅಶೋಕ ಕುಲಕರ್ಣಿ ಸಂಗ್ರೇಶಕೊಪ್ಪ ವಂದಿಸಿದರು.

ಜೀವನಮ್ ಸ್ವಾವಲಂಬನಮ್ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿ ಟಿಟಿಡಿ ಜಿಲ್ಲಾ ಸಂಚಾಲಕ ಗೋಪಾಲ ಕುಲಕರ್ಣಿ ಮಾತನಾಡಿ, ಎಲ್ಲ ಕ್ಷೇತ್ರದಲ್ಲಿ ವಿಪ್ರರು ಸಾಕಷ್ಟು ಸಾಧನೆ ಮಾಡಿದ್ದರು. ಇಂದು ಸ್ವಾವಲಂಬಿ ಆಗುವ ಅಗತ್ಯ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಪರಸ್ಪರ ಸಹಾಯ, ಸಹಕಾರ ಮನೋಭಾವದಿಂದ ಉನ್ನತಿಯತ್ತ ಸಾಗೋಣ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ.ಸಿ.ಆರ್. ಜೋಶಿ ಮಾತನಾಡಿ, ಬ್ರಾಹ್ಮಣ ಸಮಾಜ ಒಗ್ಗಟ್ಟಾಗಬೇಕು, ಸಂಸ್ಕಾರಗಳು ಉಳಿಯಬೇಕು. ನಮ್ಮತನವನ್ನು ಕಳೆದುಕೊಳ್ಳಬಾರದು ಸ್ವಯಂ ಉದ್ಯೋಗಿಗಳಾಗುವತ್ತಲೂ ಗಮನ ಹರಿಸಬೇಕು ಎಂದರು. ಧಾರವಾಡದ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷ ರಾಜೀವ ಪಾಟೀಲ್ ಕುಲಕರ್ಣಿ, ಎಕೆಬಿಎಂಎಸ್ ನ ಹಿರಿಯ ಉಪಾಧ್ಯಕ್ಷ ಲಕ್ಷ್ಮಣ ಕುಲಕರ್ಣಿ ಮಾತನಾಡಿದರು. ನರಸಿಂಹರಾವ್ ಸೋಮಲಾಪೂರ ನಿರೂಪಿಸಿದರು. ಸಿ.ಎಂ.ದೀಕ್ಷಿತ್ ವಂದಿಸಿದರು.

ಕಿರುಸುದ್ದಿ

ರಾಷ್ಟ್ರೀಯ ಪ್ರೆಸ್ಟೀಜ್ ಪ್ರಶಸ್ತಿ-2026 ಪ್ರದಾನ ಸಮಾರಂಭ ಇಂದು

ಹುಬ್ಬಳ್ಳಿ: ನಗರದ ಗ್ಲೋಬಲ್ ರಿಸರ್ಚ್ ಫೌಂಡೇಶನ್ ವತಿಯಿಂದ ಮೇ 30ರಂದು ಗೋಕಲ ರಸ್ತೆಯ ಡೆನಿಸನ್ಸ್ ಹೋಟೆಲ್‌ನಲ್ಲಿ ರಾಷ್ಟ್ರೀಯ ಪ್ರೆಸ್ಟೀಜ್ ಪ್ರಶಸ್ತಿ-2026 ಪ್ರದಾನ ಸಮಾರಂಭ ನಡೆಯಲಿದೆ. ಸಮಾರಂಭದಲ್ಲಿ ಬಾಲಿವುಡ್ ನಟ ಅಮೀಷಾ ಪಟೇಲ್ ಹಾಗೂ ಅರ್ಬಾಜ್ ಖಾನ್ ಭಾಗವಹಿಸುವ ನಿರೀಕ್ಷೆ ಇದೆ. ಮಜೇಥಿಯಾ ಫೌಂಡೇಶನ್ ಚೇರಮನ್ ಜಿತೇಂದ್ರ ಮಜೇಥಿಯಾ, ಉದ್ಯಮಿ ವೀರೇಂದ್ರ ಕೌಜಲಗಿ, ವಿ.ಎಸ್.ವಿ.ಪ್ರಸಾದ, ಕೆಎಲ್‌ಇ ಸಂಸ್ಥೆ ನಿರ್ವಹಣಾ ಮಂಡಳಿ ಸದಸ್ಯ ಶಂಕರಣ್ಣ ಮುನವಳ್ಳಿ, ಶಾಸಕ ಬಸವರಾಜ ರಾಯರಡ್ಡಿ ಆಶಾ ರಾಯರೆಡ್ಡಿ ಭಾಗವಹಿಸಲಿದ್ದಾರೆ.

ಇಂದು ವಸಂತ ಗಾನಲಹರಿ

ಧಾರವಾಡ: ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಪ್ರೇರಿತ ಹುಬ್ಬಳ್ಳಿ-ಧಾರವಾಡ ರಾಷ್ಟ್ರೀಯ ಸಂಗೀತೋತ್ಸವವು ಪ್ರಸ್ತುಪಡಿಸುವ 'ವಸಂತ ಗಾನಲಹರಿ' ಇದೇ ಮೇ 30ರ ಬೆಳಗ್ಗೆ 9.30ರಿಂದ ರಾತ್ರಿ 9.30ರವರೆಗೆ ನಿರಂತರ ನಡೆಯಲಿದೆ. ಸತ್ತೂರಿನ ಡಾ.ಡಿ.ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ನಡೆಯುವ ಈ ಹಬ್ಬದಲ್ಲಿ ಖ್ಯಾತ ಗಾಯಕರು, ವಾದ್ಯ ಕಲಾವಿದರು, ಯುವ ಪ್ರತಿಭೆಗಳು, ಸುಗಮ ಮತ್ತು ಶಾಸ್ತ್ರೀಯ, ಜಾನಪದ ಸಂಗೀತ ಕಲಾವಿದರು ಸಮಾಗಮ ನಡೆಯಲಿದೆ. ಜಾಗತಿಕ ಮನ್ನಣೆ ಗಳಿಸಿದ ಹಿಂದುಸ್ತಾನಿ ಗಾಯಕರ ಸ್ವರಗಳ ಝೇಂಕಾರ ನಾದ ತಾಳಗಳ ರಸದೌತಣ ಹಾಗೂ ಕಲಾವೈಭವದ ಸಂಭ್ರಮದ ಹಬ್ಬಕ್ಕೆ ನಾಡಿನ ವಿವಿಧ ಗಾಯಕರು ಹಾಗೂ ವಾದ್ಯ ಸಂಗೀತ ಕಲಾವಿದರು ಜೀವ ತುಂಬಲಿದ್ದಾರೆ. ಸಂಜೆ 5.30ಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಈ 'ವಸಂತ ಗಾನಲಹರಿ'ಗೆ ಚಾಲನೆ ನೀಡುವರು. ಸಂಗೀತ ಪ್ರೀಯರು ಹಾಗೂ ಕಲಾ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ನಕಲಿ ರಸಗೊಬ್ಬರ: ದೂರು ದಾಖಲು

ಹಾವೇರಿ: ನಕಲಿ ರಸಗೊಬ್ಬರ ಚೀಲಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಶಿಗ್ಗಾವಿ ತಾಲೂಕು ತಡಸ ಗ್ರಾಮದ ಮಂಜು ಹಾಗೂ ಕಲಘಟಗಿ ತಾಲೂಕು ಮುಕ್ಕಲ ಗ್ರಾಮದ ಪ್ರಕಾಶ ಬೆನಕನಹಳ್ಳಿ ಎಂಬ ಲಾರಿ ಚಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿತರು ಸವಣೂರ ಪಟ್ಟಣದ ಟೀಚರ್ ಕಾಲೋನಿ ಬಳಿ ಕ್ಯಾಂಟರ್ ಲಾರಿಯಲ್ಲಿ ನಕಲಿ ಗೊಬ್ಬರವನ್ನು ತಂದು ಮಾರಾಟ ಮಾಡುತ್ತಿದ್ದಾಗ ಸಿಕ್ಕಿ ಬಿದ್ದಿದ್ದಾರೆ. ಆರೋಪಿತರಿಂದ ತಲಾ 50 ಕೆಜಿ ತೂಕದ 2ಲಕ್ಷಕ್ಕೂ ಹೆಚ್ಚು ಮೌಲ್ಯದ 180 ಚೀಲಗಳನ್ನು ಗೊಬ್ಬರವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸವಣೂರ ತಾಲೂಕು ಸಹಾಯಕ ಕೃಷಿ ನಿರ್ದೇಶಕಿ ಸವಿತಾ ಚಕ್ರಸಾಲಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋ ಮಾಂಸ ಸಾಗಾಟ: ಆರೋಪಿ ವಶಕ್ಕೆ

ಭಟ್ಕಳ: ಪಟ್ಟಣದ ಬಂದರ್ ರಸ್ತೆಯಲ್ಲಿರುವ ಎಕ್ಸಿಸ್ ಬ್ಯಾಂಕ್ ಸಮೀಪ ವಾಹನದಲ್ಲಿ ಜಾನುವಾರು ಮಾಂಸ ಸಾಗಿಸುತ್ತಿದ್ದ ಚಾಲಕನನ್ನು ನಗರ ಪೊಲೀಸರು ವಶಕ್ಕೆ ಪಡೆದ ಘಟನೆ ಗುರುವಾರ ರಾತ್ರಿ ನಡೆದಿದೆ. ಪೊಲೀಸರ ಮಾಹಿತಿ ಪ್ರಕಾರ, ಮಹೀಂದ್ರಾ ಸುಪ್ರೋ ವಾಹನದಲ್ಲಿ ಅಂದಾಜು 20 ಸಾವಿರ ಮೌಲ್ಯದ ಸುಮಾರು 150 ಕೆ.ಜಿ. ಜಾನುವಾರು ಮಾಂಸವನ್ನು ಸಾಗಿಸಲಾಗುತ್ತಿತ್ತು. ಇದರಲ್ಲಿ ದನದ ತಲೆ ಭಾಗ, ಕಾಲುಗಳು, ಮಾಂಸ, ಚರ್ಮ, ಎಲುಬು ಸೇರಿದಂತೆ ಇತರೆ ಅವಶೇಷಗಳೂ ಸೇರಿದ್ದವು. ಈ ಮಾಂಸವನ್ನು ಮುಗ್ದಂ ಕಾಲೋನಿಯಿಂದ ಭಟ್ಕಳ ಕಡೆಗೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ. ಸಂದೇಹದ ಮೇರೆಗೆ ತಪಾಸಣೆ ನಡೆಸಿದ ಪೊಲೀಸರು ವಾಹನವನ್ನು ಪರಿಶೀಲಿಸಿದ ವೇಳೆ ಜಾನುವಾರು ಮಾಂಸ ಪತ್ತೆಯಾಗಿದೆ. ತಕ್ಷಣವೇ ವಾಹನ ಸಮೇತ ಮಾಂಸವನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಜಾಲಿ ರಸ್ತೆ ನಿವಾಸಿ ಮೊಹಮ್ಮದ್ ಇರ್ಫಾನ್ (37) ವಿರುದ್ಧ ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1011	6689
ಉದ್ದಿನಕಾಳು	2369	7010
ಒಣ ಮೆಣಸಿನಕಾಯಿ	13000	32500
ಹೆಸರುಕಾಳು	1739	6399
ನೆಲಗಡಲೆ (ಶೇಂಗಾ)	5109	5700
ಜೋಳ	1709	4445
ಮೆಕ್ಕೆಜೋಳ	1610	2030
ಮಡಿಕೆ (ಮಟಕಿ)	2011	14741
ಈರುಳ್ಳಿ	400	1900
ಆಲೂಗಡ್ಡೆ	1200	1800
ಸೋಯಾಬಿನ್	4395	7410
ಗೋಧಿ	2050	3895

ಒಂದೇ ಸೂರಿನಡಿ ಎಲ್‌ಕೆಜಿ ಟು ಪಿಯುಸಿ
ಬಮ್ಮಿಗಟ್ಟಿ ಸರ್ಕಾರಿ ಶಾಲೆಗೆ ಡಿಮ್ಯಾಂಡ್!

ಮಲ್ಲೇಶ ಮುಕ್ಕಣ್ಣವರ

ದಿಗಂತ ವಿಶೇಷ

ಕಲಘಟಗಿ: ಸರ್ಕಾರಿ ಶಾಲೆ ಎಂದರೆ ಮೂಗು ಮುರಿಯುವವರ ಮಧ್ಯೆ ಇಲ್ಲೊಂದು ಸರ್ಕಾರಿ ಶಾಲೆ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ.

ಪಾಲಕರು ತಮ್ಮ ಮಕ್ಕಳನ್ನು ಇಲ್ಲಿ ದಾಖಲಿಸಲು ಪ್ರತಿ ವರ್ಷವೂ ರಾತ್ರಿ- ಹಗಲು ಗೇಟ್ ಮುಂದೆ ಜಾಗರಣೆ ಮಾಡುತ್ತಾರೆ.

ಒಂದೆಡೆ ಮಕ್ಕಳಿಲ್ಲದೆ ಪ್ರತಿ ವರ್ಷ ಎಷ್ಟೋ ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತಿವೆ. ಆದರೆ, ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಎಲ್ಲರ ಮೆಚ್ಚಿನ ಶೈಕ್ಷಣಿಕ ತಾಣವಾಗುತ್ತಿದೆ. ಈ ಶಾಲೆಗೆ ಅಡ್ಮಿಷನ್ ಸಿಕ್ಕರೆ ಸಾಕು ಅಂತ ಪೋಷಕರು ಹಗಲು-ರಾತ್ರಿ ಎನ್ನದೆ ಅರ್ಜಿ ಹಿಡಿದು ಶಾಲೆಯಲ್ಲಿಯೇ ವಾಸ್ತವ್ಯ ಹೂಡಿ ಅರ್ಜಿ ಪಡೆಯುತ್ತಾರೆ.

ಪ್ರತಿ ವರ್ಷವೂ ಶಾಲಾ ದಾಖಲಾತಿಗೆ ಒಂದು ದಿನ ಮೊದಲೇ ಶಾಲೆಯ ಗೇಟ್ ಎದುರು ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದ ಪಾಲಕರು ಈ ಬಾರಿ ಎರಡು ದಿನ ಮೊದಲೇ ಶಾಲಾ ಆವರಣದಲ್ಲಿ ವಾಸ್ತವ್ಯ ಹೂಡಿರುವುದು ಶಾಲೆಗಿರುವ ಬೇಡಿಕೆಗೆ ಸಾಕ್ಷಿಯಾಗಿದೆ.

2019ರಲ್ಲಿ ಮೇಲ್ದರ್ಜೆಗೆ ಏರಿದ ಕೆಪಿಎಸ್ (ಕರ್ನಾಟಕ ಪಬ್ಲಿಕ್ ಸ್ಕೂಲ)ನಲ್ಲಿ ಸದ್ಯ 800ಕ್ಕೂ ಹೆಚ್ಚು ಮಕ್ಕಳು ಅಧ್ಯಯನಕ್ಕೆ ಕಳೆದ ವರ್ಷ ದಾಖಲಾಗಿದ್ದರೂ ಈ ವರ್ಷವೂ ಈ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ.

ಕೆಪಿಎಸ್ ನ ಬಾಲಕ, ಬಾಲಕಿಯರ ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಕಾಲೇಜ್ ಗೆ ಎಲ್ಲಿಲ್ಲದ ಬೇಡಿಕೆ ಇದೆ. ಪ್ರತಿ ವರ್ಷವೂ 100ರಷ್ಟು ಫಲಿತಾಂಶ ಹೊಂದಿದ್ದು, ಶಾಲಾ ದಾಖಲಾತಿಯಲ್ಲೂ ಪ್ರತಿ ವರ್ಷವೂ ದಾಖಲೆ ಮಾಡುತ್ತಿದೆ.



> ಎಲ್‌ಕೆಜಿಗೆ ಮಕ್ಕಳನ್ನು ದಾಖಲಿಸಲು ಖಾಸಗಿ ಶಾಲೆಗಳಲ್ಲಿ 30 ಸಾವಿರಕ್ಕೂ ಅಧಿಕ ಹಣ ಖರ್ಚಾಗುತ್ತದೆ. ಯಾವುದೇ ಶುಲ್ಕವಿಲ್ಲದೇ ಗುಣಮಟ್ಟದ ಶಿಕ್ಷಣ ನಮ್ಮೂರಿನಲ್ಲೇ ಸಿಗುತ್ತಿರುವುದರಿಂದ ಮಕ್ಕಳನ್ನು ದಾಖಲಿಸಲು ರಾತ್ರಿ ಪಾಳೆ ಹಚ್ಚಿದ್ದೇವೆ.
> ■ ಶಂಕ್ರಪ್ಪ ಹೆಗ್ಗಣ್ಣವರ, ಪಾಲಕರು

> ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ದೊರೆಯುತ್ತಿರುವ ಪರಿಣಾಮ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಬೇಡಿಕೆ ಹೆಚ್ಚಾಗಿದೆ. 2019ರಿಂದಲೂ ಎಲ್‌ಕೆಜಿ ದಾಖಲಾತಿಯಲ್ಲಿ ಪಾಲಕರು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.
> ■ ಸುರೇಶ ಯಲ್ಲಾರಿ, ಪ್ರಭಾರಿ ಶಿಕ್ಷಕ ಪ್ರಾಥಮಿಕ ವಿಭಾಗ ಕೆಪಿಎಸ್ ಬಮ್ಮಿಗಟ್ಟಿ

ವಿಭಿನ್ನತೆ ಅಳವಡಿಕೆ

ಎಲ್‌ಕೆಜಿಯಿಂದ ಹಿಡಿದು ಪಿಯುಸಿಯವರೆಗೂ ಒಂದೇ ಸೂರಿನಡಿ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಕೆಪಿಎಸ್ ಪಠ್ಯಕ್ರಮದ ಜೊತೆಗೆ ಎಲ್‌ಕೆಜಿ ಹಾಗೂ ಯುಕೆಜಿಗೆ ಪೂರಕ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದೆ.

> ಮಕ್ಕಳಿಗೆ ಕಲಿಕಾಸಕ್ತಿ ಬೆಳಸಲು ಆಟದ ಮೂಲಕ ಪಾಠ ಮಾಡಲಾಗುತ್ತಿರುವುದು ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಕಾರಣವಾಗಿದೆ.
> ■ ಬಸಪ್ಪ ಟವಳಿ, ಗ್ರಾಮದ ಹಿರಿಯ

- ಎಲ್‌ಕೆಜಿ ದಾಖಲಿಸಲು ರಾತ್ರಿ ಸರತಿ ಸಾನಿನಲ್ಲಿ ನಿಲ್ಲುವ ಪಾಲಕರು
- ಎಸ್ಸೆಸ್ಸೆಲ್ಸಿಯಲ್ಲಿ ಶೇ 100 ರಷ್ಟು ಫಲಿತಾಂಶ
- ಎಸ್‌ಡಿಎಂಸಿ ಹಾಗೂ ಗ್ರಾಮಸ್ಥರ ಸಹಕಾರದಿಂದ ಶಾಲಾಭಿವೃದ್ಧಿ

ಮೃತ ಕುಟುಂಬಕ್ಕೆ ಪರಿಹಾರದ ಚೆಕ್ ವಿತರಿಸಿದ ಸಚಿವ ವೈದ್ಯ



ಕಪ್ಪೆಚಿಪ್ಪು ದುರಂತ

ಕಾರವಾರ: ಇತ್ತೀಚೆಗೆ ಭಟ್ಕಳ ತಾಲೂಕಿನ ಶಿರಾಲಿಯ ಅಳ್ವೆಕೋಡಿ ಸಮೀಪ ನದಿಯಲ್ಲಿ ಚಿಪ್ಪೆಕಲ್ಲು ತೆಗೆಯಲು ಹೋಗಿ ನೀರಿನಲ್ಲಿ ಮುಳಗಿ ಮೃತಪಟ್ಟ 11 ಮಂದಿಯ ಅವಲಂಬಿತರ ಮನೆಗಳಿಗೆ ತೆರಳಿ ಮೃತಪಟ್ಟವರ ವಾರಿಸುದಾರರಿಗೆ ತಲಾ ರೂ.16,50,000 ಗಳ ಪರಿಹಾರದ ಚೆಕ್‌ನ್ನು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಮಂಕಾಳ ಎಸ್. ವೈದ್ಯ ಶುಕ್ರವಾರ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಭಟ್ಕಳದಲ್ಲಿ ನಡೆದ ಕಪ್ಪೆ ಚಿಪ್ಪು ದುರಂತದಲ್ಲಿ ಮೃತಪಟ್ಟ 11 ಮಂದಿಗೆ ಪ್ರತಿಯೊಬ್ಬರಿಗೂ ರಾಜ್ಯ ಸರ್ಕಾರ ರೂ. 5 ಲಕ್ಷದಂತೆ ಪರಿಹಾರ ಘೋಷಿಸಿದ್ದ ಒಟ್ಟು ರೂ.55 ಲಕ್ಷ ಹಾಗೂ ಮೀನುಗಾರಿಕೆ ಇಲಾಖೆ ವತಿಯಿಂದ ತಲಾ 10 ಲಕ್ಷದಂತೆ ಒಟ್ಟು 1 ಕೋಟಿ 10 ಲಕ್ಷ ರೂಪಾಯಿಹಾಗೂ ಜನತಾ ಕೋ ಆಪರೇಟಿವ್ ಬ್ಯಾಂಕ ನಿಂದ ರೂ.50,000 ಮತ್ತು ವೈಯಕ್ತಿಕವಾಗಿ ಪ್ರತಿ ಕುಟುಂಬಕ್ಕೆ 1 ಲಕ್ಷ ಗಳ ಸಹಾಯಧನ ನೀಡಲಾಗಿದ್ದು, ಮನೆ ಇಲ್ಲ ಎಂದವರಿಗೆ ವೈಯಕ್ತಿಕವಾಗಿ 5 ಲಕ್ಷ ರೂ ನೀಡಿದ್ದು, ಸರ್ಕಾರದ ವತಿಯಿಂದಲೂ ಮನೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಭಾಗದಲ್ಲಿ ನದಿಯಲ್ಲಿ ಕಪ್ಪೆಚಿಪ್ಪು ತೆಗೆಯುವುದು ಹಿಂದಿನಿಂದಲೂ ಪಾರಂಪರಿಕವಾಗಿ ಬಂದ ವೃತ್ತಿಯಾಗಿದ್ದು, ನದಿಯಲ್ಲಿ ಕಲ್ಲಿನ ಮೇಲೆ ಕಪ್ಪೆಚಿಪ್ಪುಗಳು ಇರುವುದನ್ನು ತೆಗೆಯಲು ಹೋದಾಗ ಒಬ್ಬರುಆಳವಾದನೀರಿನಲ್ಲಿಮುಳುಗಿದಾಗ ಅವರನ್ನು ಕಾಪಾಡಲು ಹೋಗಿ ಎಲ್ಲರೂ ನೀರಿನಲ್ಲಿ ಮುಳುಗಿ ಮೃತ ಪಟ್ಟಿದ್ದಾರೆ. ಇಂತಹ ಅನಾಹುತಗಳ ಮರುಕಳಿಸದಂತೆ ಮುಂಜಾಗ್ರತ ಕ್ರಮವಿಲ್ಲದೇ ಯಾರೂ ನದಿಗೆ ಇಳಿಯದಂತೆ ಸೂಚನೆ ನೀಡಲಾಗಿದೆ ಎಂದರು.

ಮೃತ ಅವಲಂಬಿತರ ಕುಟುಂಬದಲ್ಲಿನ ಒಬ್ಬರಿಗೆ ಸಹಕಾರಿ ಬ್ಯಾಂಕ್‌ನಲ್ಲಿ ಉದ್ಯೋಗ ನೀಡುವ ಬಗ್ಗೆ ಚಿಂತನೆ ನಡೆಸಿದ್ದು, ಕುಟುಂದವರಿಗೆ ಸರ್ಕಾರದ ವತಿಯಿಂದ ಅಗತ್ಯವಿರುವ ಎಲ್ಲಾ ರೀತಿಯ ಸಹಾಯ ಸಹಕಾರ ಒದಗಿಸಲಾಗುವುದು. ಮೃತ ಕುಟುಂಬದ ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿ ಈ ಭಾಗದ ಶಾಸಕನಾಗಿ ನಾನು ವಹಿಸಿಕೊಳ್ಳಲಿದ್ದು, ಈ ಭಾಗದ ಜನರು, ಸಂಘ ಸಂಸ್ಥೆಗಳು, ದಾನಿಗಳೂ ಮೃತ ಕುಟುಂಬದ ಅವಲಂಬಿತರಿಗೆ ಸಹಾಯ ಹಸ್ತ ನೀಡಲು ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ, ಜನತಾ ಕೋ ಆಪರೇಟಿವ್ ಬ್ಯಾಂಕನ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.


ಭರತನಾಟ್ಯ: ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ



ಕಲಾದಗಿ: ಗ್ರಾಮದ ನಟರಾಜ ಸಂಗೀತ ನೃತ್ಯನಿಕೇತನ ವಿದ್ಯಾರ್ಥಿನಿಯರಾದ ಅನ್ವೇಷಾ, ನವ್ಯಾ, ಸಾನ್ವಿ, ಐಶ್ವರ್ಯ, ಪೃಥ್ವಿ ಹಾಗೂ ಪ್ರಿಯಾಂಕಾ ಇವರು ಇತ್ತೀಚೆಗೆ ಮಹಾರಾಷ್ಟದ ಪುಣೆಯಲ್ಲಿ ಜರುಗಿದ ರಾಷ್ಟಮಟ್ಟದ ಭರತನಾಟ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಐಶ್ವರ್ಯ ಶಿವೂರ, ಹಾಗೂ ತೃತೀಯ ಸ್ಥಾನವನ್ನು ಅನ್ವೇಷಾ ಪವಾರ ಮತ್ತು ನವ್ಯಾ ಅಂಗಡಿ ಪಡೆದುಕೊಂಡಿದ್ದಾರೆ.

ಅಂಡಮಾನ ಮತ್ತು ನಿಕೋಬಾರನಲ್ಲಿ ನಡೆಯುವ ಅಂತಾರಾಷ್ಟ್ರೀಯ ಮಟ್ಟದ ಭರತನಾಟ್ಯ ಸ್ಪರ್ಧೆಗೆ ಆಯ್ಕೆಯಾಗಿದ್ದು ವಿಧುಷಿ ಶುಭದಾ ದೇಶಪಾಂಡೆ ಮತ್ತು ವಿಶಾರದೆ ಕು.ಸಹನಾ ಆನಂದ ಮಠ ಅವರ ಮಾರ್ಗದರ್ಶನದಲ್ಲಿ ಭರತನಾಟ್ಯ ಅಭ್ಯಾಸ ಮಾಡಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಹಿಂದುಳಿದ ವರ್ಗದ ನಾಯಕನಿಗೆ ಕೊಡಲಿ ಪೆಟ್ಟು: ಬೊಮ್ಮಾಯಿ



ಹಾವೇರಿ: ಸಮಾಜವಾದಿಯಾಗಿ ಸಾಮಾಜಿಕ ಕಳಕಳಿ ಇರುವ ಸಿದ್ದರಾಮಯ್ಯ ಅವರನ್ನು ತೆಗೆಯುವ ಮೂಲಕ ಹಿಂದುಳಿದ ವರ್ಗದ ನಾಯಕನಿಗೆ ಕೊಡಲಿ ಪೆಟ್ಟು ನೀಡಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಯಾವಾಗಲೂ ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡುತ್ತಲೇ ಬಂದಿದೆ. ರಾಜೀವ್ ಗಾಂಧಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಏಕೆ ಬೇಕು ಎಂದು ಕೇಳಿದ್ದರು. ರಾಹುಲ್ ಗಾಂಧಿ ಜಾತಿ ಗಣತಿ ಮಾಡಬೇಕು ಎನ್ನುತ್ತಾರೆ. ಒಬಿಸಿಗೆ ಪರ ಮಾತನಾಡುತ್ತಲೇ ಒಬಿಸಿ ಮುಖ್ಯಮಂತ್ರಿಯನ್ನು ತೆಗೆದು ಹಾಕಿದ್ದಾರೆ. ಒಬಿಸಿ ಬಗ್ಗೆ ಇವರಿಗೆ ಏನು ಬದ್ಧತೆ ಇದೆ. ಹೀಗಾಗಿ ಕರ್ನಾಟಕದಲ್ಲಿ ಒಬಿಸಿ ಜನರು ಭ್ರಮ ನಿರಸನಗೊಂಡಿದ್ದು, ಸಿದ್ದರಾಮಯ್ಯ ಸುಮ್ಮನಿರಬಹುದು. ಅವರ ಭಾವನೆ ಅರ್ಥ ಮಾಡಿಕೊಂಡಿರುವ ಜನ ಸುಮ್ಮನಿರಲ್ಲ. ಅದರ ಪರಿಣಾಮ ಆಗುತ್ತದೆ ಎಂದು ಹೇಳಿದರು.

ಈ ಸರ್ಕಾರದ ವಿರುದ್ಧ ಯಾವುದೇ ಸಂದರ್ಭದಲ್ಲಿ ಚುನಾವಣೆ ನಡೆದರೂ ಬಿಜೆಪಿ ಸ್ವಂತ ಶಕ್ತಿಯಲ್ಲಿ ಬಹುಮತಕ್ಕೆ ಬರುತ್ತದೆ. ಈಗಿನ ಬೆಳವಣಿಗೆ ಅದಕ್ಕೆ ಪೂರಕವಾಗಿದೆ. 14ನೇ ಹಣಕಾಸು ಯುಪಿಎ ಸರ್ಕಾರದ ಅವಧಿಯಲ್ಲಿ ಬಂದಿತ್ತು. ಅದಕ್ಕಿಂತ ಹೆಚ್ಚು 1ಲಕ್ಷ ಕೋಟಿ 15ನೇ ಹಣಕಾಸು ಆಯೋಗದಿಂದ ಕರ್ನಾಟಕ್ಕೆ ಬಂದಿದೆ. ಸುಳ್ಳನ್ನು ಪದೇ ಪದೆ ಹೇಳಿ ಸತ್ಯ ಮಾಡಲು ಸಿಎಂ ಸಿದ್ದರಾಮಯ್ಯ ಪ್ರಯತ್ನ ಮಾಡಿದ್ದಾರೆ. ಶಿವಕುಮಾರ್ ಮುಂದೆ ಎಲ್ಲವನ್ನು ಸುಸ್ಥಿತಿಯಲ್ಲಿ ಇಟ್ಟಿದ್ದೇನೆ ಎಂದು ಹೇಳಿದ್ದಾರೆ. ಕಳೆದ ಮೂರು ವರ್ಷದಲ್ಲಿ ಸುಮಾರು 4ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಸಾಲ ತೆಗೆದುಕೊಂಡು ಆಸ್ತಿ ಮಾಡಿಲ್ಲ, ಗ್ಯಾರಂಟಿಗಳಿಗೆ ನೀಡಿದ್ದಾರೆ. ಇದರಿಂದ ರಾಜ್ಯಕ್ಕೆ ಆಸ್ತಿ ನಿರ್ಮಾಣ ಆಗಿಲ್ಲ, ಅದರಿಂದ ರಾಜ್ಯಕ್ಕೆ ಆದಾಯ ಬರುವುದಿಲ್ಲ ಎಂದರು.

ಈ ಬೆಳವಣಿಗೆಯಿಂದ ಬಿಜೆಪಿಗೆ ಪ್ಲಸ್ ಮೈನಸ್ ಅನ್ನುವುದಕ್ಕಿಂತ ಯಾರು ಅವರನ್ನು ನಂಬಿಕೊಂಡಿದ್ದರೋ ಅವರ ಮನಸ್ಸಿಗೆ, ಗೌರವಕ್ಕೆ ಧಕ್ಕೆ ತರುವ ಕೆಲಸ ಕಾಂಗ್ರೆಸ್ ಮಾಡಿದೆ. ಅದರ ರಾಜಕೀಯ ಪರಿಣಾಮ ಖಂಡಿತವಾಗಿ ಆಗುತ್ತದೆ. ಈಗ ಯಾರೂ ದಡ್ಡರಿಲ್ಲ, ದಲಿತ ಸಿಎಂ ಆಗುತ್ತಾರೆ ಎನ್ನುವ ಆಶಾಭಾವನೆ ಇತ್ತು. ಅದು ಕೂಡ ನಿರಾಶೆಯಾಗಿದೆ ಎಂದರು.

ಕಾಂಗ್ರೆಸ್ ಸೋತಿರುವ ಸಂದರ್ಭದಲ್ಲಿ ಸಿದ್ದರಾಮಯ್ಯ ತಳವರ್ಗದ ಓಟ್ ಬ್ಯಾಂಕ್ ಕ್ರಿಯೆಟ್ ಮಾಡಿದ್ದರು. ಅವರನನ್ನು ನಡೆಸಿಕೊಂಡ ರೀತಿ ಸರಿಯಲ್ಲ. ದೇವರಾಜ್ ಅರಸು ಆರು ವರ್ಷ ಮುಖ್ಯಮಂತ್ರಿಯಾಗಿದ್ದರು. 78ರಲ್ಲಿ ಗೆದ್ದು ಅಧಿಕಾರಕ್ಕೆ ಬಂದರೂ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರು. ವೀರೇಂದ್ರ ಪಾಟೀಲರು, ಬಂಗಾರಪ್ಪ ಅವರನ್ನು ತೆಗೆದರು. ಸಿದ್ದರಾಮಯ್ಯ ಅದೇ ಸಾಲಿಗೆ ಬರುತ್ತಾರೆ. ಈ ರಾಜ್ಯದಲ್ಲಿ ಏಳು ವರ್ಷ ಅಧಿಕಾರ ಮುಗಿಸಿದ ಸಿಎಂಗಳಿಗೆ ಆಘಾತ ಬರುತ್ತದೆ. ನಿಜಲಿಂಗಪ್ಪನವರು ಎರಡನೇ ಅವಧಿಗೆ ಸಿಎಂ ಆಗಿದ್ದಾಗ ಏಳು ವರ್ಷಕ್ಕೆ ಅಧಿಕಾರ ಕಳೆದುಕೊಂಡರು. ಅದೇ ರೀತಿ ದೇವರಾಜ ಅರಸು. ರಾಮಕೃಷ್ಣ ಹೆಗಡೆ ಈಗ ಸಿದ್ದರಾಮಯ್ಯ ಇದು ಒಂದು ರೀತಿ ಸೆವೆನ್ ಈಯರ್ ಸಿಂಡ್ರೋಮ್ ಎಂದು ವ್ಯಾಖ್ಯಾನಿಸಿದರು.

ವಿದ್ಯುತ್ ತಗುಲಿ ವಾಟರ್‌ಮ್ಯಾನ್ ಸಾವು: ಪ್ರತಿಭಟನೆ

ದೇವರಹಿಪ್ಪರಗಿ: ಕುಡಿಯುವ ನೀರಿನ ಬೋರ್‌ವೆಲ್ ಚಾಲು ಮಾಡುವ ವೇಳೆ ವಿದ್ಯುತ್ ಪ್ರವಹಿಸಿ, ಗ್ರಾಪಂ ವಾಟರ್‌ಮ್ಯಾನ್ ಸ್ಥಳದಲ್ಲೇ ಮೃತಪಟ್ಟ ಹಿನ್ನೆಲೆ ಆಕ್ರೋಶಗೊಂಡ ಗ್ರಾಮಸ್ಥರು ಪರಿಹಾರಕ್ಕೆ ಒತ್ತಾಯಿಸಿ ಸ್ಥಳದಲ್ಲಿ ಶವವಿಟ್ಟು ಪ್ರತಿಭಟನೆ ನಡೆಸಿದರು.

ತಾಲೂಕಿನ ಯಲಗೋಡ ಗ್ರಾಮ ಪಂಚಾಯಿತಿ ಯಲ್ಲಿ ವಾಟರ್‌ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರಾಮದ ತಿಪ್ಪಣ್ಣ ದುರ್ಗಪ್ಪ ಮಾದರ(50) ಮೃತಪಟ್ಟಿದ್ದಾರೆ ಎಂದು ಪತ್ನಿ ನೀಡಿರುವ ದೂರಿನ ಮೇರೆಗೆ ಕಲಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಯಲಗೋಡ ಗ್ರಾಮದಿಂದ ವಂದಾಲಗ್ರಾಮಕ್ಕೆಹೋಗುವರಸ್ತೆಯಲ್ಲಿರುವ ಪಂಪ್ ಹೌಸ್‌ನಲ್ಲಿ ಕುಡಿಯುವ ನೀರಿನ ಬೋರ್‌ವೆಲ್ ಚಾಲು ಮಾಡಲು ಹೋಗಿದ್ದ ವಾಟರ್ ಮ್ಯಾನ್ ತಿಪ್ಪಣ್ಣ ಮಾದರ(50) ಅವರಿಗೆ ವಿದ್ಯುತ್ ತಗುಲಿ ಇದರಿಂದ ವಿದ್ಯುತ್ ಪ್ರವಹಿಸಿ ಸ್ಥಳದಲ್ಲಿ ಮೃತಪಟ್ಟಿದ್ದಾರೆ.

ವಾಟರ್ ಮ್ಯಾನ್ ತಿಪ್ಪಣ್ಣ ಮಾದರ ಸಾವಿಗೆ ಸರ್ಕಾರದಿಂದ ಅವರ ಕುಟುಂಬಕ್ಕೆ ಪರಿಹಾರ ಒದಗಿಸಬೇಕು ಎಂದು ಗ್ರಾಮದ ಮುಖಂಡ ಹುಯೋಗಿ ತಳ್ಳೊಳ್ಳಿ ಅವರ ನೇತೃತ್ವದಲ್ಲಿ ಗ್ರಾಮಸ್ಥರು ಸ್ಥಳಕ್ಕೆ ತಾಪಂ ಇಒ ಭಾರತಿ ಚೆಲುವಯ್ಯ ಹಾಗೂ ಪಿಡಿಒ ಬರಬೇಕು ಸರ್ಕಾರದಿಂದ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಕುಟುಂಬಕ್ಕೆ ಯಜಮಾನನಾಗಿದ್ದ ತಿಪ್ಪಣ್ಣ ಮಾದರ ಅವರು ತಾಯಿ, ಪತ್ನಿ, ಎರಡು ಗಂಡು ಹಾಗೂ ಎರಡು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಈ ಸಂದರ್ಭದಲ್ಲಿ ಕಲಕೇರಿ ಪೊಲೀಸ್ ಠಾಣೆ ಪಿಎಸ್‌ಐ ಪ್ರಕಾಶ ಇದ್ದರು.

ಗಣೇಶಗುಡಿಯಲ್ಲಿ ಗೋ ಹತ್ಯೆ

ಜೋಯಿಡಾ: ಗಣೇಶ ಗುಡಿಯಲ್ಲಿ ಮಾಂಸಕ್ಕಾಗಿ ಗೋವೊಂದನ್ನು ಹತ್ಯೆ ಮಾಡಿದ ಘಟನೆ ನಡೆದಿದೆ. ಗೋ ಹತ್ಯೆ ಮಾಡಿರುವ ವಿಷಯವನ್ನು ತಿಳಿದು ಇದನ್ನು ಖಚಿತ ಪಡಿಸಿಕೊಳ್ಳಲು ಸ್ಥಳಕ್ಕೆ ಗೋ ರಕ್ಷಕರು, ಬಿಜೆಪಿ ಕಾರ್ಯಕರ್ತರಾದ ಅರುಣ್ ಕಾಮ್ರೇಕರ, ವಿಶ್ವನಾಥ ನಾಯ್ಕ, ಸಂತೋಷ್ ಸಾವಂತ್, ಅಭಿಷೇಕ್ ನಾಯ್ಕ, ದಿವಾಕರ ಕುಂಡಲ್ಕರ್, ಕಮಲಾಕರ್ ದೇಸಾಯಿ ದೀಪಕ್ ಗಾವಡಾ ಅವರ ತಂಡ ಭೇಟಿ ನೀಡಿ ಗೋ ಹತ್ಯೆ ಮಾಡಿರುವುದನ್ನು ಖಚಿತಪಡಿಸಿಕೊಂಡು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಗಣೇಶ ಗುಡಿಯ ಮನೆಯ ಆವರಣದಲ್ಲಿ ಈ ಘಟನೆ ನಡೆದಿದ್ದು, ಹತ್ಯೆ ಮಾಡಲಾದ ಗೋವಿನ ಹತ್ತಿರವೇ ಇನ್ನೊಂದು ಗೋವನ್ನು ಕಟ್ಟಿ ಹಾಕಲಾಗಿದ್ದು, ಇದನ್ನು ಕೂಡ ಮಾಂಸಕ್ಕಾಗಿ ಹತ್ಯೆ ಮಾಡುವ ಸಾಧ್ಯತೆಯಿತ್ತು ಎನ್ನಲಾಗಿದೆ. ಸ್ಥಳಕ್ಕೆ ಸಿಪಿಐ ಚಂದ್ರಶೇಖರ ಹರಿಹರ, ಪಿಎಸ್‌ಐ ಮಹಾಂತೇಶ್ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ದ್ವಿಸಾಪ್ತಾಹಿಕ ಎಕ್ಸ್‌ಪ್ರೆಸ್‌ವಿಶೇಷ ರೈಲು ಸಂಚಾರಕ್ಕೆ ಕೇಂದ್ರ ಅಸ್ತು

ನವದೆಹಲಿ: ಕರ್ನಾಟಕದ ಶಕ್ತಿ ಕೇಂದ್ರ, ರಾಜಧಾನಿ ಬೆಂಗಳೂರು ಮತ್ತು ಉತ್ತರ ಕರ್ನಾಟಕದ ಸಂಪರ್ಕ ಸೇತುವಾಗಿರುವ ವಿಜಯಪುರ ಮಧ್ಯೆ ಹೊಸ ದ್ವಿಸಾಪ್ತಾಹಿಕ ಎಕ್ಸ್‌ಪ್ರೆಸ್‌ವಿಶೇಷ ರೈಲು ಸಂಚಾರಕ್ಕೆ ಕೇಂದ್ರ ಸರ್ಕಾರ ಅಸ್ತು ಎಂದಿದೆ.

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ಅವರ ಒತ್ತಾಸೆ, ಪ್ರಸ್ತಾವನೆ ಮೇರೆಗೆ ಯಶವಂತಪುರ-ವಿಜಯಪುರ ನಡುವೆ ಇದೇ ಜೂನ್ 1ರಿಂದಲೇ ದ್ವಿಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ರೈಲ್ವೆ ಇಲಾಖೆ ಅನುಮೋದಿಸಿದೆ.

ವಿಜಯಪುರ ಭಾಗದ ಜನರ ಬಹು ದಿನದ ಬೇಡಿಕೆ ಮನಗಂಡು ಸಚಿವ ಪ್ರಹ್ಲಾದ ಜೋಶಿ ಅವರು ಕೆಲ ದಿನಗಳಿಂದ ರೈಲ್ವೆ ಇಲಾಖೆ, ಸಚಿವ ಅಶ್ವಿನಿ ವೈಷ್ಣವ ಅವರ ಗಮನ ಸೆಳೆದು ಅಂತೂ ಬೆಂಗಳೂರಿನ ಯಶವಂತಪುರದಿಂದ ವಿಜಯಪುರಕ್ಕೆ ಹೊಸ ದ್ವಿಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಸುಗಮಗೊಳಿಸಿದ್ದಾರೆ.

ಈ ವಿಶೇಷ ಹೈಸ್ಪೀಡ್ ರೈಲು ಯಶವಂತಪುರ-ವಿಜಯಪುರ ಮಧ್ಯೆ ನೇರ ಸಂಪರ್ಕ ಕಲ್ಪಿಸಲಿದೆ. ಪ್ರತಿ ಶನಿವಾರ ಮತ್ತು ಸೋಮವಾರ 06577 ಸಂಖ್ಯೆಯ ರೈಲು ಯಶವಂತಪುರದಿಂದ ವಿಜಯಪುರಕ್ಕೆ ಹಾಗೂ ಪ್ರತಿ ಭಾನುವಾರ ಮತ್ತು ಮಂಗಳವಾರ 06578 ಸಂಖ್ಯೆಯ ವಿಶೇಷ ರೈಲು ವಿಜಯಪುರದಿಂದ ಯಶವಂತಪುರಕ್ಕೆ ಸಂಚರಿಸಲಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಮಾಹಿತಿ ನೀಡಿದ್ದಾರೆ.

ರಾಜ್ಯದ ರೈಲ್ವೆ ಸೌಲಭ್ಯಕ್ಕೆ ಕೇಂದ್ರ ಬದ್ಧ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರ ಸಹಕಾರದಲ್ಲಿ ಕೇಂದ್ರ ಸರ್ಕಾರ ಕರ್ನಾಟಕ್ಕೆ ರೈಲ್ವೆ ಸೌಲಭ್ಯ ಕಲ್ಪಿಸಲು ಯಾವತ್ತೂ ಬದ್ಧವಾಗಿದೆ ಎಂದಿದ್ದಾರೆ.

ಪ್ರಧಾನಿಗೆ ಸಚಿವ ಜೋಶಿ ಧನ್ಯವಾದ: ಕರ್ನಾಟಕದ ರೈಲ್ವೆ ಮೂಲಸೌಕರ್ಯವನ್ನು ಬಲಪಡಿಸಲು ಕೇಂದ್ರ ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದ್ದು, ರಾಜ್ಯದ ಪ್ರತಿಯೊಂದು ಯೋಜನೆಗೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಹಾಗೂ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದಿದ್ದಾರೆ ಸಚಿವ ಜೋಶಿ.

322 ಚೀಲ ಪಡಿತರ ಅಕ್ಕಿ ಜಪ್ತಿ: ಇಬ್ಬರು ವಶಕ್ಕೆ



ಸಿರುಗುಪ್ಪ: ತಾಲೂಕಿನಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿದ್ದವರ ವಿರುದ್ಧ ಆಹಾರ ಇಲಾಖೆ ಹಾಗೂ ಪೊಲೀಸರ ಜಂಟಿ ಕಾರ್ಯಾಚರಣೆ ನಡೆಸಿ, ಅಂದಾಜು 145 ಕ್ವಿಂಟಲ್ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಬಂಡ್ರಾಳ್ ಗ್ರಾಮದಿಂದ ಹೊಳಗುಂದಿ ಕಡೆಗೆ ಓಮಿನಿ ವಾಹನದಲ್ಲಿ ಅಕ್ರಮವಾಗಿ ಅಕ್ಕಿ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಬುಧವಾರ ಆಹಾರ ಶಿರಸ್ತೇದಾರ ಹನುಮೇಶ ನೇತೃತ್ವದಲ್ಲಿ ಸಿರುಗುಪ್ಪ ಪೊಲೀಸ್ ಠಾಣೆ ಸಿಬ್ಬಂದಿ ದಾಳಿ ನಡೆಸಿದರು.

ಈ ವೇಳೆ ಓಮಿನಿ ವಾಹನವನ್ನು ತಡೆದು ಪರಿಶೀಲಿಸಿದಾಗ 40 ರಿಂದ 45 ಕೆಜಿ ತೂಕದ ಅಕ್ಕಿ ಚೀಲಗಳು ಪತ್ತೆಯಾಯಿತು. 322 ಚೀಲಗಳ ಪಡಿತರ ಅಕ್ಕಿಯನ್ನು ಗೋಡೌನ್ ನಲ್ಲಿ ಅಕ್ರಮವಾಗಿ ಸಂಗ್ರಹಿಸಿ ಸಾಗಿಸಲಾಗುತ್ತಿತ್ತು ಎಂದು ತಿಳಿದು ಬಂದಿದೆ.

ವಶಪಡಿಸಿಕೊಂಡ ಅಕ್ಕಿಯ ಅಂದಾಜು ಮೌಲ್ಯ 4,93,000 ಎಂದು ತಿಳಿದುಬಂದಿದೆ. ಚಾಲಕರಾದ ಶೇಕ್ಷಾವಲಿ ಹಾಗೂ ಹುಚ್ಚಿರ ಅವರನ್ನು ವಶಕ್ಕೆ ಪಡೆದು, ಅವರ ವಿರುದ್ಧ ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ.

ಆಹಾರ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡ ಅಕ್ಕಿ ಹಾಗೂ ವಾಹನವನ್ನು ಮುಂದಿನ ತನಿಖೆಗಾಗಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕನಿಷ್ಠ ವೇತನ ಹಿಂಪಡೆಯದಿದ್ದರೆ ಹೋರಾಟ: ಕೆಸಿಸಿಐ



ಹುಬ್ಬಳ್ಳಿ: ಇಲ್ಲಿಯ ಜೆ.ಸಿ.ನಗರದ ಕರ್ನಾಟಕ ವಾಣಿಜ್ಯೋದಮ ಸಂಸ್ಥೆ ಆವರಣದಲ್ಲಿ 2026-27ನೇ ಸಾಲಿನ ಕನಿಷ್ಠ ವೇತನ ಕರಡು ಅಧಿಸೂಚನೆಯ ಕುರಿತು ಉದ್ದಮಿಗಳು, ವಿವಿಧ ಕೈಗಾರಿಕಾ ಸಂಘಟನೆ, ಪ್ರತಿನಿಧಿಗಳ ಹಾಗೂ ವ್ಯಾಪಾರಸ್ಥರ ಅಭಿಪ್ರಾಯ ಹಾಗೂ ಸರ್ಕಾರಕ್ಕೆ ಸಲ್ಲಿಸಬೇಕಾದ ಏಕೀಕೃತ ಪ್ರಾತಿನಿಧ್ಯವನ್ನು ರೂಪಿಸುವ ಉದ್ದೇಶದಿಂದ ಶುಕ್ರವಾರ ವಿಶೇಷ ಸಭೆ ನಡೆಯಿತು.

ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಹೊರಡಿಸಿರುವ 2026-27ನೇ ಸಾಲಿನ ಕನಿಷ್ಠ ವೇತನ ಕರಡು ಅಧಿಸೂಚನೆಯ ಕುರಿತು ಸವಿಸ್ತಾರ ಚರ್ಚೆ ನಡೆಸಲಾಯಿತು.

ಸಭೆಯಲ್ಲಿದ್ದ ಉದ್ಯಮಿಗಳು, ವ್ಯಾಪಾರಸ್ಥರು ಹಾಗೂ ಕೈಗಾರಿಕಾ ಸಂಘಟನೆಗಳ ಪ್ರತಿನಿಧಿಗಳು ಕನಿಷ್ಠ ವೇತನ ಹೆಚ್ಚಳದಿಂದ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ನವೋದ್ಯಮಿಗಳು, ಹೊಸದಾಗಿ ಕೈಗಾರಿಕೆ ಆರಂಭಿಸಿರುವ ಉದ್ಯಮಿಗಳು ಹಾಗೂ ಸಣ್ಣ ಉದ್ದಿಮೆಗಳು ಈಗಾಗಲೇ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ವಿದ್ಯುತ್ ದರ ಏರಿಕೆ, ಬ್ಯಾಂಕ್ ಬಡ್ಡಿದರ, ಕಚ್ಚಾ ವಸ್ತುಗಳ ಬೆಲೆ ಏರಿಕೆ ಹಾಗೂ ಮಾರುಕಟ್ಟೆಯ ಸ್ಪರ್ಧಾತ್ಮಕ ಪರಿಸ್ಥಿತಿಯಿಂದ ಸಂಕಷ್ಟ ಎದುರಿಸುತ್ತಿದ್ದು, ಈ ಹಂತದಲ್ಲಿ ಕನಿಷ್ಠ ವೇತನದಲ್ಲಿ ಅತಿಯಾದ ಏರಿಕೆ ಮಾಡುವುದು ಉದ್ಯಮಗಳ ನಿರ್ವಹಣೆಗೆ ಹೆಚ್ಚುವರಿ ಹೊರೆತರಲಿದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಕನಿಷ್ಠ ವೇತನದ ಗಣನೀಯ ಏರಿಕೆಯಿಂದ ಅನೇಕ ಕಾರ್ಮಿಕರು ನಿಗದಿತ ವೇತನ ಮಿತಿಯನ್ನು ಮೀರಿ ನೌಕರರ ರಾಜ್ಯ ವಿಮಾ ಯೋಜನೆ ವ್ಯಾಪ್ತಿಯಿಂದ ಹೊರಬರುವ ಸಾಧ್ಯತೆ ಇದೆ. ಇದರಿಂದ ಕಾರ್ಮಿಕರು ಹಾಗೂ ಅವರ ಕುಟುಂಬಗಳು ಈಗ ಪಡೆಯುತ್ತಿರುವ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗುವ ಪರಿಸ್ಥಿತಿ ಉಂಟಾಗಬಹುದು. ಪರಿಣಾಮವಾಗಿ, ಆರೋಗ್ಯ ಮತ್ತು ವೈದ್ಯಕೀಯ ವೆಚ್ಚವನ್ನು ವೈಯಕ್ತಿಕವಾಗಿ ಭರಿಸಬೇಕಾದ ಹೊರೆ ಕಾರ್ಮಿಕರ ಮೇಲೆಯೇ ಬೀಳಲಿದೆ ಎಂದು ಸಭೆಯಲ್ಲಿ ತಿಳಿಸಿದರು.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಪ್ರಸ್ತುತ ಕರಡು ಅಧಿಸೂಚನೆಯನ್ನು ಹಿಂಪಡೆದು, ಉದ್ದಿಮೆದಾರರು ಹಾಗೂ ವ್ಯಾಪಾರಸ್ಥರೊಂದಿಗೆ ಸಮಾಲೋಚನೆ ನಡೆಸಿ ಪರಿಸ್ಕೃತ ಪ್ರಸ್ತಾವನೆ ತರಬೇಕು ಎಂದು ಸಭೆಯಲ್ಲಿ ಆಗ್ರಹಿಸಿದರು.

ಸರ್ಕಾರಕ್ಕೆ ಸಮಗ್ರ ಮನವಿ ಸಲ್ಲಿಸುವುದಾಗಿ ಹಾಗೂ ಸರ್ಕಾರ ನಮ್ಮ ಮನವಿಯನ್ನು ಪರಿಗಣಿಸದಿದ್ದಲ್ಲಿ ಕಾನೂನು ಹೋರಾಟ ಕೈಗೊಳ್ಳುವ ಬಗ್ಗೆ ಎಲ್ಲ ಉದ್ದಿಮೆದಾರರು ಮತ್ತು ಕೈಗಾರಿಕಾ ಸಂಘಟನೆಗಳ ಪ್ರತಿನಿಧಿಗಳು ಏಕಮತದ ನಿರ್ಧಾರ ಕೈಗೊಂಡರು.

ಈ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ, ಉಪಾಧ್ಯಕ್ಷ ಸಿದ್ದೇಶ್ವರ ಕಮ್ಮಾರ, ವೀರಣ್ಣ ಕಲ್ಲೂರ, ಮಾಜಿ ಅಧ್ಯಕ್ಷ ವಿನಯ ಜವಳಿ, ಹೊಸಪೇಟೆಯ ಅಶ್ವಿನ ಕೋತಂಬ್ರಿ, ತಾರಿಹಾಳ ಇಂಡಸ್ಟ್ರೀಯಲ್ ವಿಜಯ ಭಾರತಿ, ವರ್ತಕ ಸಂಘದ ಅಧ್ಯಕ್ಷರಾದ ರಾಜಕಿರಣ ಮೆಣಸಿನಕಾಯಿ, ಸದಸ್ಯ ಅಶೋಕ ಗಡಾದ ಇದ್ದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಶಿಕ್ಷಣ ಅವಶ್ಯ: ಶ್ರೀಗಳು



ಹುಬ್ಬಳ್ಳಿ: ಸಮಾಜ ಲೌಕಿಖ ಹಾಗೂ ಬೌದ್ಧಿಕವಾಗಿ ಮುಂದೆ ಬರಬೇಕು. ಅದಕ್ಕೆ ಶಿಕ್ಷಣ ಬಹಳ ಅವಶ್ಯಕ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದರು.

ಇಲ್ಲಿಯ ವಿದ್ಯಾನಗರ ವಾದಿರಾಜ ಸೇವಾ ಪ್ರತಿಷ್ಠಾನ ಹುಬ್ಬಳ್ಳಿ ಮಾಧ್ವ ಮಹಾ ಮಂಡಳಿ ವಿದ್ಯಾರ್ಥಿನಿಲಯ ಷಷ್ಠಿ ಪೂರ್ತಿ ಮಹೋತ್ಸವ ಹಾಗೂ ವಿದ್ಯಾರ್ಥಿ ನಿಲಯದ ನವೀಕೃತ ಕಟ್ಟಡಗಳ ಉದ್ಘಾಟನ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಶುದ್ಧ ಆಹಾರ ಪೂರೈಸುವ ಉದ್ದೇಶದಿಂದ ಇಲ್ಲಿಯ ವಿದ್ಯಾರ್ಥಿ ನಿಲಯ ಸ್ಥಾಪಿಸಲು ಭೂಮಿ ದಾನ ಮಾಡಿದರು. ಸಮಾನ ಮನಸ್ಕರನ್ನು ಕೂಡಿಸಿ ನಮ್ಮ ಗುರುಗಳು ವಿದ್ಯಾರ್ಥಿ ನಿಲಯ ಆರಂಭಕ್ಕೆ ಕಾರಣರಾದರು. ಈ ನಿಲಯದಿಂದ ಸಮಾಜಕ್ಕೆ ಸಹಸ್ರಾರು ಜನ ಉತ್ತಮ ನಾಗರಿಕರು ಲಭಿಸಿದ್ದಾರೆ ಎಂದರು.

ನಿಲಯದ ಹಳೇ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಈ ಸಂಸ್ಥೆಯನ್ನು ಬೆಳೆಗುಸುತ್ತಿದ್ದಾರೆ. ಕೆಲವರು ದಾನ ನೀಡಲು ಸಾಧ್ಯ. ಇನ್ನೂ ಕೆಲವರಿಗೆ ದಾನ ಕೊಡಿಸಲು ಸಾಧ್ಯ. ಹಲವರು ದಾನಕೊಟ್ಟು, ದಾನವನ್ನು ಸಹ ಕೊಡಿಸುತ್ತಾರೆ. ಅಂತಹ ಜನರಿಗೆ ಸಂಸ್ಥೆ ಈ ಮಟ್ಟಕ್ಕೆ ಬೆಳೆಯುತ್ತಿದೆ ಎಂದು ಹೇಳಿದರು.

ಮಂತ್ರಾಲಯದ ರಾಘವೇಂದ್ರ ಸ್ವಾಮಿ ಪೀಠಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿ, ಹಿಂದು ಸಮಾಜ ಕಟ್ಟಿ ಬೆಳೆಸಿದ ವಿಶ್ವೇಶ್ವರ ಶ್ರೀಗಳು ವಿದ್ಯಾರ್ಥಿ ನಿಲಯ ಕಟ್ಟಿದರು. ಸದ್ಯ ಹಿಂದು ಸಮಾಜದ ಉಳಿವಿಗೆ ಇಂತಹ ವಿದ್ಯಾರ್ಥಿ ನಿಲಯ ಹಾಗೂ ಕಾಲೇಜ್‌ಗಳ ಅವಶ್ಯಕತೆ ಇದೆ ಎಂದು ತಿಳಿಸಿದರು.

ಹಿಂದು ವಿದ್ಯಾರ್ಥಿಗಳು ತಮ್ಮ ಧರ್ಮ ಕಾಪಾಡಿಕೊಂಡು ಕಲಿಯಬೇಕಾದಕ್ಕಾಗಿ ಹಿಂದು ಸಮಾಜದ ಉಳಿವಿಗಾಗಿ ಈ ಮಾದರಿಯ ಹಲವಾರು ಸಂಸ್ಥೆಗಳನ್ನು ಶ್ರೀಗಳು ಕಟ್ಟಿದ್ದಾರೆ. ವಿದ್ಯಾರ್ಥಿಗಳು ಹೋಟೆಲ್ ಅಥವಾ ಬೇರೆಡೆ ಇದ್ದು ವಿದ್ಯಾರ್ಜನೆ ಮಾಡುತ್ತಿದ್ದರು. ಅಂತಹ ವಿದ್ಯಾರ್ಥಿಗಳಿಗೆ ಉತ್ತಮ ಆಹಾರ, ಸಂಸ್ಕಾರ ಜೊತೆಗೆ ಕಲಿಯಲಿ ಸಿಗಲಿ ಎಂಬ ಉದ್ದೇಶದಿಂದ ನಿಲಯ ಆರಂಭಿಸಿದ್ದಾರೆ ಎಂದು ಹೇಳಿದರು.

ಬೇರೆ ಸಮಾಜ ಆಯಾ ಮಠಗಳಿಗೆ ಸೀಮಿತ. ಆದರೆ, ಎಲ್ಲ ಸಮಾಜ, ಮಠ ಒಗ್ಗೂಡಿಸಿದ್ದು ಮಾಧ್ವ ಮಹಾಮಂಡಳ. ವಿದ್ಯೆಯ ಮಹತ್ವ ಹೇಳುವಾಗ ಸುಖ ಕೊನೆಯ ಹಂತ. ವಿನಯ ಮೊದಲ ಹಂತ. ಅಖಿಲ ಭಾರತ ಮಾಧ್ವ ಮಹಾಮಂಡಳದ ಅನೇಕ ಸಂಸ್ಥೆಗಳು ದೇಶಾದ್ಯಂತ ಇವೆ. ವಿಶ್ವೇಶ್ವರ ತೀರ್ಥರು ಹಾಗೂ ವಿಶ್ವ ಪ್ರಸನ್ನ ಶ್ರೀಗಳು ಎಲ್ಲರಿಗೂ ಸಂತಸವನ್ನು ನೀಡಿದ್ದಾರೆ ಎಂದು ಹೇಳಿದರು.

ಸಮಾರಂಭಕ್ಕೂ ಮೊದಲು ಶ್ರೀಗಳ ಮೆರವಣಿಗೆ ನಡೆಯಿತು. ಅನಂತ ಪದ್ಮನಾಭ ಐತಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಕಾಂತ ಕೆಮತೂರ ಸೇರಿದಂತೆ ಅನೇಕರಿದ್ದರು.

ಮೂರಿನಕಟ್ಟೆ ಮತ್ತೊಂದು ದತ್ತಪೀಠ ಆಗದಿರಲಿ: ಅಶೋಕ



ಭಟ್ಕಳ: ಹಿಂದುಗಳ ಶ್ರದ್ಧಾಕೇಂದ್ರವಾದ ಮೂರಿನಕಟ್ಟೆಯನ್ನು ಮತ್ತೊಂದು ದತ್ತಪೀಠದಂತೆ ವಿವಾದಿತ ಪ್ರದೇಶವನ್ನಾಗಿ ಮಾಡಬೇಡಿ ಎಂದು ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದ ರಾಜ್ಯದ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು, ತಕ್ಷಣ ಇದನ್ನು ಸರ್ಕಾರ ಮರು ನಿರ್ಮಾಣ ಮಾಡದೇ ಇದ್ದರೆ ನಾನೇ ಬಂದು ನಿರ್ಮಿಸುವೆ ಎಂದು ಎಚ್ಚರಿಸಿದ್ದಾರೆ.


ಅವರು ಶುಕ್ರವಾರ ಮೂರಿನಕಟ್ಟೆ ಧ್ವಂಸ ಖಂಡಿಸಿ ಇಲ್ಲಿನ ಬಿಜೆಪಿ ಮತ್ತು ಹಿಂದೂ ಸಂಘಟನೆಗಳ ವತಿಯಿಂದ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಮುರಿನಕಟ್ಟೆ ಪ್ರದೇಶ ಹಿಂದೂಗಳ ಶ್ರದ್ಧಾ ಭಕ್ತಿಯ ಸ್ಥಳವಾಗಿದೆ. ಈ ಪ್ರದೇಶ ದಲ್ಲಿ ನಿರ್ಮಿಸಿದ್ದ ಕಟ್ಟೆಯನ್ನು ಧ್ವಂಸ ಮಾಡಿದವರನ್ನು ಗೂಂಡಾ ಕಾಯ್ದೆ ಹಾಕಿ ಗಡಿಪಾರು ಮಾಡಬೇಕು. ಕಟ್ಟೆ ಧ್ವಂಸ ಮಾಡಿದವರು ದೇಶದ್ರೋಹಿಗಳು ಎಂದು ಆಕ್ರೋಶವ್ಯಕ್ತಪಡಿಸಿದ ಅವರು, ಕಟ್ಟೆಯನ್ನು ಇದ್ದ ಸ್ಥಳದಲ್ಲೇ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಇದ್ದ ಸ್ಥಳದಲ್ಲೇ ಕಟ್ಟೆ ಕಟ್ಟುತ್ತೇವೆ. ಮುಸ್ಲಿಮರಿಗೆ ಮೂರಿನಕಟ್ಟೆ ಸಂಬಂಧ ಇಲ್ಲದಿದ್ದರೂ ಧ್ವಂಸ ಮಾಡುವುದರ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಿದ್ದಾರೆ. ಕಟ್ಟೆ ಧ್ವಂಸಕ್ಕೆ ಕುಮ್ಮಕ್ಕು ನೀಡಿದ ಮುಖಂಡರ ಮೇಲೂ ಕೇಸು ದಾಖಲಿಸಿ ಬಂಧಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ, ಬಿಜೆಪಿ ಮುಖಂಡ ಗೋವಿಂದ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಮಾಜಿ ಎಮ್ಮೆಲ್ಸಿ ಸಿದ್ದರಾಮಣ್ಣ ಸೇರಿದಂತೆ ಸಾವಿರಾರು ಜನರು ಪಾಲ್ಗೊಂಡಿದ್ದರು.

ರಾಮ ಬಾಣ



ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರ: ಬೊಮ್ಮಾಯಿ



ಹಾವೇರಿ: ನಿರ್ಗಮಿತ ಸಿಎಂ ಸಿದ್ದರಾಮಯ್ಯ ರಾಜ್ಯ ರಾಜಕಾರಣದಲ್ಲಿಯೇ ಇರುತ್ತೇನೆ ಎಂದಿರುವುದು ಡಿ.ಕೆ.ಶಿವಕುಮಾರ್‌ಗೆ ತೂಗುಗತ್ತಿ. ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲಿ ಚುನಾವಣೆ ನಡೆದರೂ ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯನವರು 4 ದಶಕಗಳ ಕಾಲ ಸುದೀರ್ಘ ರಾಜಕಾರಣದಲ್ಲಿದ್ದಾರೆ. 1983ರಲ್ಲಿ ರಾಜಕೀಯಕ್ಕೆ ಬಂದಿದ್ದರು. ಅವರು ನಮ್ಮ ತಂದೆಯವರಿಗೆ ಆತ್ಮೀಯರು, ನಮ್ಮ ತಂದೆಯವರ ಕ್ಯಾಬಿನೆಟ್‌ನಲ್ಲಿ ಸ್ಟೇಟ್ ಮಿನಿಸ್ಟರ್ ಆಗಿದ್ದರು. ನಂತರ ಕ್ಯಾಬಿನೆಟ್ ಮಂತ್ರಿ ಮಾಡಿದರು. ಎಲ್ಲಕ್ಕಿಂತ ಹೆಚ್ಚು ಅವರು ಅಹಿಂದ ಮಾಡಿದಾಗ ನಾನೊಬ್ಬನೇ ಅಹಿಂದ ವರ್ಗ ಬಿಟ್ಟು ಮುಖ್ಯ ಭಾಷಣ ಮಾಡಿದ್ದೆ. ಸಭಾಪತಿ ಬಸವರಾಜ ಹೊರಟ್ಟಿ ಅವರ ಸನ್ಮಾನ ಸಮಾರಂಭಕ್ಕೆ ಬಂದಾಗ ಅವರೇ ನೆನಪು ಮಾಡಿದ್ದರು. 2007ರಲ್ಲಿ ಜೆಡಿಎಸ್‌ನಿಂದ ಹೊರ ಬಂದು ಕಾಂಗ್ರೆಸ್‌ನಿಂದ ಉಪ ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಆಗ ನಾನು ಅವರಿಗೆ ಸಹಾಯ ಮಾಡಿದ್ದೆ. ಯಾವಾಗ ಅವರಿಗೆ ಕಷ್ಟ ಕಾಲ ಬಂದಿದೆ ಆಗ ಸಹಾಯ ಮಾಡಿದ್ದೇನೆ. ಯಾವಾಗ ಅವರು ಕಾಂಗ್ರೆಸ್‌ಗೆ ಹೋದರೋ ಆಗ ಅವರ ರಾಜಕೀಯ ಸಿದ್ಧಾಂತ ಬೇರೆಯಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರ ಬೆಂಬಲಿಗರಿಗೆ ಎಷ್ಟು ಜನರಿಗೆ ಸಚಿವ ಸ್ಥಾನ ಸಿಗುತ್ತದೆ ಅವರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎನ್ನುವುದರ ಮೇಲೆ ಭವಿಷ್ಯ ನಿಂತಿದೆ. ಈ ಮೂರು ವರ್ಷದ ಕಾಂಗ್ರೆಸ್ ಆಡಳಿತದ ಬಗ್ಗೆ ಜನರು ಭ್ರಮ ನಿರಸನಗೊಂಡಿದ್ದಾರೆ. ಎಸ್ಸಿ ಎಸ್ಟಿ, ಒಬಿಸಿ ಜನರು ಬೇಸರಗೊಂಡಿದ್ದಾರೆ. ಅಭಿವೃದ್ಧಿ ಶೂನ್ಯವಾಗಿದೆ ಎಂದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಡಿಕೆಶಿಯವರು ಬಾಂಗ್ಲಾದವರನ್ನು ಬ್ರದರ್ಸ್ ಎನ್ನುತ್ತಾರೆ, ಅವರು ಇವರಿಗೆ ಯಾವ ರೀತಿ ಬ್ರದರ್ಸ್ ಅಂತ ತಿಳಿಯುತ್ತಿಲ್ಲ
– ಪ್ರಹ್ಲಾದ ಜೋಷಿ
– ಯಾವ ರೀತಿಯಲ್ಲೂ ಬ್ರದರ್ಸ್ ಅಲ್ಲವಾದರೂ ಯಾವುದೋ ಭೀತಿಯಿಂದ ಬ್ರದರ್ಸ್ ಆಗಲು ಸಾಧ್ಯವಾಗಿದೆ!

ದಿನ ಭವಿಷ್ಯ

ಮೇಷ
ಕೆಲಸದ ಒತ್ತಡ ಹೆಚ್ಚಾದರೂ ನಿಮ್ಮ ಉತ್ಸಾಹಕ್ಕೆ ಕೊರತೆಯಿಲ್ಲ. ವೃತ್ತಿಯಲ್ಲಿ ಪೂರಕ ಬೆಳವಣಿಗೆ. ಕೌಟುಂಬಿಕ ಹೊಣೆ ಅಧಿಕ.

ವೃಷಭ
ಕೆಲಸದಲ್ಲಿ ಸಂಕಷ್ಟ. ಆದರೆ ಖಾಸಗಿ ಬದುಕಿಗೆ ತೊಂದರೆ ಉಂಟಾಗದು. ಕುರುಡಾಗಿ ಅನ್ಯರನ್ನು ಅನುಕರಿಸಬೇಡಿ. ಸ್ವಂತಿಕೆಗೆ ಗಮನ ಕೊಡಿ.

ಮಿಥುನ
ವೃತ್ತಿಯಲ್ಲಿ ಹೆಚ್ಚುವರಿ ಹೊಣೆ. ಆಸ್ತಿಪಾಸ್ತಿ ಖರೀದಿಗೆ ಯೋಚಿಸಿದ್ದರೆ ಅನುಕೂಲ ಸಮಯ. ಬಂಧುಗಳ ಸಹಕಾರ. ಹೊಟ್ಟೆ ನೋವು ಕಾಡೀತು.

ಕಟಕ
ವೃತ್ತಿಯಲ್ಲಿ ಎಲ್ಲವೂ ಸಲೀಸು. ಆದರೆ ಮನೆಯಲ್ಲಿ ಅಭಿಪ್ರಾಯ ಭೇದ, ವಾಗ್ವಾದ ಸಂಭವ. ಮುಖ್ಯ ವಿಷಯದಲ್ಲಿ ಇಬ್ಬಂದಿತನ ಕಾಡಲಿದೆ.

ಸಿಂಹ
ಧಾರ್ಮಿಕ ಕ್ಷೇತ್ರದಲ್ಲಿ ಸಕ್ರಿಯರಾಗುವ ಅವಕಾಶ. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಆರೋಗ್ಯ ಸಮಸ್ಯೆ ಶಮನ. ಸಾಂಸಾರಿಕ ಸೌಹಾರ್ದ.

ಕನ್ಯಾ
ಪ್ರಮುಖ ವ್ಯಕ್ತಿಯ ಸಂಪರ್ಕ ಸಾಧಿಸುವಿರಿ. ನಿಮ್ಮ ಕಾರ್ಯಕ್ಕೆ ನೆರವು ದೊರಕಲಿದೆ. ದೈಹಿಕ ನೋವು ಇದ್ದರೆ ಇಂದು ಶಮನವಾಗಲಿದೆ.

ತುಲಾ
ಹಣದ ವಿಚಾರದಲ್ಲಿ ಎಚ್ಚರದ ಹೆಜ್ಜೆಯಿಡಿ. ರಿಸ್ಕ್ ಇರುವ ಕ್ಷೇತ್ರದಲ್ಲಿ ಹಣ ಹೂಡಬೇಡಿ. ಕೆಲವರ ಟೀಕೆ ಎದುರಿಸುವಿರಿ. ಕುಟುಂಬಸ್ಥರ ಬೆಂಬಲ.

ವೃಶ್ಚಿಕ
ನಿಮ್ಮ ಕ್ರಿಯಾಶೀಲತೆ ಎಲ್ಲರ ಗಮನವನ್ನು ಸೆಳೆಯಲಿದೆ. ವೃತ್ತಿ ಕ್ಷೇತ್ರದಲ್ಲಿ ವಾಗ್ವಾದಕ್ಕೆ ಆಸ್ಪದ ನೀಡದಿರಿ. ಆರೋಗ್ಯ ಸುಸ್ಥಿರ.

ಧನು
ವೃತ್ತಿಯಲ್ಲಿ ಒತ್ತಡ. ಹಾಗಾಗಿ ಅಸಹನೆ ಹೆಚ್ಚು. ಉದ್ಯಮ ಕ್ಷೇತ್ರ ವಿಸ್ತಾರಕ್ಕೆ ಅವಕಾಶವಿದೆ. ಎಲ್ಲರ ಮಧ್ಯೆ ಮನಸ್ಶಾಂತಿಗೆ ತುಡಿಯುವಿರಿ.

ಮಕರ
ಕೆಲಸದಲ್ಲಿ ಅಡ್ಡಿ. ಮಾನಸಿಕ ಖಿನ್ನತೆ. ಇತರರ ವಿಶ್ವಾಸದ ಕೊರತೆ. ದಂಪತಿ ಮಧ್ಯೆ ವಾಗ್ವಾದ ನಡೆದೀತು. ಹಣಕಾಸು ಪರಿಸ್ಥಿತಿ ಕ್ಲಿಷ್ಟಕರ.

ಕುಂಭ
ದೀರ್ಘಕಾಲದ ಬಳಿಕ ಆರ್ಥಿಕ ದೃಢತೆ. ಹೂಡಿಕೆಯಿಂದ ಲಾಭ. ಇತರರು ಹೇಳುವುದನ್ನು ಬೇಗ ನಂಬುತ್ತೀರಿ. ಪರಾಮರ್ಶೆ ಒಳಿತು.

ಮೀನ
ಫಲಪ್ರದ ದಿನ. ಆದರೂ ದಿನವಿಡೀ ಒತ್ತಡ. ವಿರಾಮದ ಅವಧಿಯಲ್ಲಿ ಪ್ರೀತಿಪಾತ್ರರ ಸಂಗದಲ್ಲಿ ಸಂಭ್ರಮಿಸುವ ಅವಕಾಶ. ಖರ್ಚು ಹೆಚ್ಚಲಿದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,7,0,4

ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅಭಿಮತ

ಯುವಕರಿಗೆ ರವಿಶಂಕರ್ ಗುರೂಜಿ ಮಾದರಿ

ಬೆಂಗಳೂರು: ಯುವ ಮನಸ್ಸುಗಳು ಆತ್ಮನಿಯಂತ್ರಣದಿಂದ ಮುನ್ನಡೆಯಬೇಕೇ ಹೊರತು ವ್ಯಸನಗಳಿಂದಲ್ಲ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಬೆಂಗಳೂರಿನಲ್ಲಿ ನಡೆದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಹಾಗೂ ರವಿಶಂಕರ್ ಗುರೂಜಿ ಅವರ 70ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, ಯುವ ಮನಸ್ಸುಗಳು ಹಾನಿಕಾರಕ ವ್ಯಸನಗಳಿಗಿಂತ ಹೆಚ್ಚಾಗಿ ಆತ್ಮನಿಯಂತ್ರಣ ಮತ್ತು ಸಕಾರಾತ್ಮಕ ಮೌಲ್ಯಗಳಿಂದ ಮಾರ್ಗ ದರ್ಶನ ಪಡೆಯಬೇಕು ಎಂದರು. ಆಧುನಿಕತೆ ಮತ್ತು ಪ್ರಾಚೀನ ಪರಂಪರೆ ಪರಸ್ಪರ ಪೂರಕವಾಗಿವೆ. ಯುವಜನರು ಪ್ರಾಚೀನ ಮತ್ತು ಆಧುನಿಕತೆಯನ್ನು ಒಟ್ಟಿಗೆ ಕೊಂಡೊಯ್ಯಬಹುದಾದ ಸ್ಫೂರ್ತಿದಾಯಕ ಮಾದರಿಯನ್ನು ರವಿಶಂಕರ್ ಗುರೂಜಿ ಸಮಾಜದ ಮುಂದೆ ಇಟ್ಟಿದ್ದಾರೆ. ಸಂಸ್ಥೆಯ ಸೇವಾ ಆಧಾರಿತ ಉಪಕ್ರಮಗಳಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಭಕ್ತಿ ಎಂದರೆ ಕೇವಲ ಆರಾಧನೆಯಲ್ಲ. ಭಕ್ತಿ ಎಂದರೆ ಸ್ವತಃ ತನ್ನ ಬಗ್ಗೆ, ಕುಟುಂಬ, ಸಮಾಜ, ರಾಷ್ಟ್ರ ಮತ್ತು ಮಾನವೀಯತೆಯೆಡೆಗಿನ ಸಮರ್ಪಣೆಯಾಗಿದೆ. ನಿಜವಾದ ಭಕ್ತಿ ಎಂದರೆ ಮಾನವೀಯತೆಗೆ ಸಮರ್ಪಿಸಿಕೊಳ್ಳುವುದು. ಆಧ್ಯಾತ್ಮಿಕತೆಯು ಜನರು ಇತರರೊಂದಿಗೆ ಶಾಂತಿಯಿಂದ ಬದುಕುವುದನ್ನು ಕಲಿಸುತ್ತದೆ ಮತ್ತು ಜೀವನವನ್ನು ಅರ್ಥಪೂರ್ಣ ಹಾಗೂ ಪರಿಪೂರ್ಣವಾಗಿಸುತ್ತದೆ ಎಂದು ಉಪ ರಾಷ್ಟ್ರಪತಿಯವರು ಹೇಳಿದರು.

ಸಂಘರ್ಷ ಮತ್ತು ಅನಿಶ್ಚಿತತೆಯಿಂದ ಕೂಡಿದ ಜಗತ್ತಿನಲ್ಲಿ ರವಿಶಂಕರ್ ಅವರು ಜ್ಞಾನ, ಜಾಗೃತಿ, ಶಾಂತಿ ಮತ್ತು ಸಾಮರಸ್ಯದ ಮೌಲ್ಯಗಳೊಂದಿಗೆ ಮಾನವಕುಲಕ್ಕೆ ಪ್ರೇರಣೆ ನೀಡುತ್ತಿದ್ದಾರೆ. ಧ್ಯಾನ, ಸೇವೆ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಪರಿಸರ ಉಪಕ್ರಮ ಗಳು ಮತ್ತು ಸರ್ವಧರ್ಮ ಸಂವಾದಗಳ ಮೂಲಕ ಸಾಮಾಜಿಕ ಪರಿವರ್ತನೆಯಲ್ಲಿ ಆಧ್ಯಾತ್ಮಿಕತೆಯು ವಹಿಸಬಹುದಾದ ಪ್ರಮುಖ ಪಾತ್ರವನ್ನು ಆರ್ಟ್ ಆಫ್ ಲಿವಿಂಗ್ ಪ್ರದರ್ಶಿಸಿದೆ. ಆರ್ಟ್ ಆಫ್ ಲಿವಿಂಗ್ ಆಂದೋಲನವು ಖಂಡಗಳು, ಸಂಸ್ಕೃತಿಗಳು ಮತ್ತು ತಲೆಮಾರುಗಳಾದ್ಯಂತ ಲಕ್ಷಾಂತರ ಜನರ ಜೀವನವನ್ನು ಸ್ಪರ್ಶಿಸಿದೆ. 181 ದೇಶಗಳಲ್ಲಿ ಕೇಂದ್ರಗಳನ್ನು ಹೊಂದಿದೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ಪ್ರೀತಿ, ಶಾಂತಿ, ಸೇವೆ, ಸಾಮರಸ್ಯದ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಿಂಸಾ ಚಾರ-ಮುಕ್ತ ಮತ್ತು ಒತ್ತಡ- ಮುಕ್ತ ಸಮಾಜ ನಿರ್ಮಾಣಕ್ಕೆ ಆಧ್ಯಾತ್ಮಿಕತೆ, ಮಾನ ವೀಯ ಸೇವೆ ಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಜಾಗತಿಕ ಚಳವಳಿ ಕರ್ನಾಟಕದ ಪವಿತ್ರ ನೆಲದಲ್ಲಿ ಬೇರು ಬಿಟ್ಟಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿ. ಮಾನವೀಯ ಸೇವೆಯೊಂದಿಗೆ ಪರಿಸರ ಸಂರಕ್ಷಣೆಯಲ್ಲಿಯೂ ಸಂಸ್ಥೆಯು ಮಹತ್ವದ ಕೊಡುಗೆ ನೀಡುತ್ತಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳು, ತ್ಯಾಜ್ಯ ಮರುಬಳಕೆ ನವೀನತೆಗಳು ಹಾಗೂ ಗ್ರಾಮೀಣ ವಿದ್ಯುದ್ದೀಕರಣ ಉಪಕ್ರಮಗಳ ಮೂಲಕ ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ ಎಂದರು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ರವಿಶಂಕರ್ ಗುರೂಜಿ ಉಪಸ್ಥಿತರಿದ್ದರು.

ನರೇಂದ್ರ ಮೋದಿಯಿಂದ ಡಿಜಿಟಲ್ ಇಂಡಿಯಾ



ದಾವಣಗೆರೆ: ಭಾರತವನ್ನು ತಾಂತ್ರಿಕ ಪ್ರಗತಿ ಮತ್ತು ಜಾಗತಿಕ ಜ್ಞಾನದ ನಾಯಕತ್ವದತ್ತ ಮುನ್ನಡೆಸುವ ಯುವ ಪ್ರತಿಭೆಗಳನ್ನು ರೂಪಿಸು ವಲ್ಲಿ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶುಕ್ರವಾರ ಕಾಲೇಜಿನ ಅಮೃತ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಭಾರತವು ತಂತ್ರಜ್ಞಾನ, ನಾವೀನ್ಯತೆ ಮತ್ತು ತನ್ನ ಯುವಶಕ್ತಿಯ ಅಪಾರ ಬಲದಿಂದ ಪ್ರೇರಿತವಾದ ಪರಿವರ್ತನಾ ಯುಗಕ್ಕೆ ಸಾಕ್ಷಿಯಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಸ್ಕಿಲ್ ಇಂಡಿಯಾ, ಸೆಮಿಕಂಡಕ್ಟರ್ ತಯಾರಿಕೆ, ಹಸಿರು ಇಂಧನ ಮತ್ತು ಆತ್ಮನಿರ್ಭರ ಭಾರತದಂತಹ ಉಪಕ್ರಮಗಳು ಯುವ ಇಂಜಿನಿಯರ್, ಸಂಶೋಧಕರು ಮತ್ತು ಉದ್ಯಮಿಗಳಿಗೆ ಅಭೂತಪೂರ್ವ ಅವಕಾಶ ಸೃಷ್ಟಿಸುತ್ತಿವೆ. 2047ರೊಳಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಭಾರತದ ಆಶಯವು ಬಹುಮಟ್ಟಿಗೆ ಎಂಜಿನಿಯರ್, ವಿಜ್ಞಾನಿಗಳು, ಸಂಶೋಧಕರು ಮತ್ತು ಉದ್ಯಮಿಗಳ ಮೇಲೆ ಅವಲಂಬಿತವಾಗಿದೆ ಎಂದರು.

ಯುಬಿಡಿಟಿ ಕಾಲೇಜಿನ 75 ವರ್ಷಗಳ ಪಯಣವು ದೃಷ್ಟಿಕೋನ, ಪರಿಶ್ರಮ, ಶೈಕ್ಷಣಿಕ ಶ್ರೇಷ್ಠತೆ ಮತ್ತು ಸಮಾಜಸೇವೆಯ ಪ್ರತಿಬಿಂಬವಾಗಿದೆ. ದೂರದೃಷ್ಟಿಯ ಸಂಸ್ಥಾಪಕರು, ಬದ್ಧತೆಯುಳ್ಳ ಶಿಕ್ಷಕರು, ಸಮರ್ಪಿತ ಆಡಳಿತಗಾರರು, ಪರಿಶ್ರಮಿ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳ ಕೊಡುಗೆಗಳಿಂದ ಶ್ರೇಷ್ಠ ಸಂಸ್ಥೆಗಳು ತಲೆಮಾರುಗಳ ಅವಧಿಯಲ್ಲಿ ನಿರ್ಮಾಣವಾಗುತ್ತವೆ. ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ್ ರವರ ದೂರದೃಷ್ಟಿಯ ದಾನಶೀಲತೆ ಮತ್ತು ಸಂಸ್ಥೆಯ ಸ್ಥಾಪನೆಗೆ ಆಶೀರ್ವಾದ ನೀಡಿದ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರ ಕೊಡುಗೆ ಸ್ಮರಣೀಯ. ಇಂತಹ ಸಂಸ್ಥೆಗಳು ಶಿಕ್ಷಣ ಮತ್ತು ರಾಷ್ಟ್ರ ನಿರ್ಮಾಣದತ್ತ ತಮ್ಮ ಶಾಶ್ವತ ಬದ್ಧತೆಯ ಮೂಲಕ ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತವೆ ಎಂದು ಪ್ರಶಂಶಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮಾಜಿ ಸಚಿವರಾದ ಎಂ.ಸಿ.ಸುಧಾಕರ್, ಎಸ್.ಎಸ್.ಮಲ್ಲಿಕಾರ್ಜುನ್, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇದ್ದರು.

ಡಿ.ಕೆ.ಶಿವಕುಮಾರ್‌ಗೆ ಇಂದು ಪಟ್ಟ

ಪುಟ ೧➜ ಬಳಿಕ ಲೋಕಭವನಕ್ಕೆ ಮಾಹಿತಿ ರವಾನಿಸಲಾಗುತ್ತದೆ.

ದಿಲ್ಲಿಯಲ್ಲಿ ಬಿರುಸಿನ ಚಟುವಟಿಕೆ: ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಹೊಸದಿಲ್ಲಿಗೆ ತೆರಳಿದ್ದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಶುಕ್ರವಾರ ದಿನವಿಡಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು. ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಭವನೀಯ ಸಿಎಂ ಡಿ.ಕೆ.ಶಿವಕುಮಾರ್ ಇಬ್ಬರೂ ಪ್ರತ್ಯೇಕವಾಗಿ ತಮ್ಮದೇ ಆದ ಕಾರ್ಯತಂತ್ರಗಳಲ್ಲಿ ತೊಡಗಿಸಿಕೊಂಡಿದ್ದರು.

ಸೋನಿಯಾ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ: 10 ಜನಪತ್‌ನಲ್ಲಿರುವ ಸೋನಿಯಾ ಗಾಂಧಿ ನಿವಾಸದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯರನ್ನು ಭೇಟಿ ಮಾಡಿದ ಸಿದ್ದರಾಮಯ್ಯ ಅವರು, ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದ ತಿಳಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ನನ್ನನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಂಡಿದ್ದೀರಿ. ನಾನು ನಿಮಗೆ ನೀಡಿದ ಮಾತಿನಂತೆ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರ ಬಳಿ ಹೇಳಿದ್ದಾರೆ.

ಖರ್ಗೆ ಆಶೀರ್ವಾದ ಪಡೆದ ಡಿಕೆಶಿ

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್ ಇಬ್ಬರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಅಲ್ಲದೇ ಮಲ್ಲಿಕಾರ್ಜುನ ಖರ್ಗೆ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡರು. ಅಂತೆಯೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್, ಹೊಸ ಸರ್ಕಾರ ರಚನೆ ಬಗ್ಗೆ ಮಾತುಕತೆ ನಡೆಸಿದ್ದಾರೆ.

ಸಿದ್ದರಾಮಯ್ಯ-ರಾಹುಲ್ ಆಲಿಂಗನ

ಪುಟ ೧➜ ಬಳಿಕ ರಾಜಾಜಿ ಮಾರ್ಗದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ ನೀಡಿ, ತಮಗೆ ಸಹಕಾರ ನಿಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಬಳಿಕ ಲೋದಿ ರಸ್ತೆಯಲ್ಲಿರುವ ಕೆ.ಸಿ.ವೇಣುಗೋಪಾಲ್ ನಿವಾಸಕ್ಕೆ ತೆರಳಿ ವೇಣುಗೋಪಾಲರನ್ನು ಭೇಟಿಯಾಗಿ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಹೈಕಮಾಂಡ್ ನಾಯಕರ ಭೇಟಿಯ ಸಿದ್ದರಾಮಯ್ಯ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ.



ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ

ಪುಟ ೧➜ ಈ ಮೂಲಕ ಸಿದ್ದರಾಮಯ್ಯ ನೇತೃತ್ವದ ಸಂಪುಟ ವಿಸರ್ಜನೆಗೊಂಡಿದೆ. ಆದರೆ, ಮುಂದಿನ ಸರ್ಕಾರ ರಚನೆಯಾಗುವರೆಗೂ ಹಂಗಾಮಿಯಾಗಿ ಮುಂದುವರಿಯುವಂತೆ ರಾಜ್ಯಪಾಲರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ. ರಾಜ್ಯ ಸಚಿವ ಸಂಪುಟ ವಿಸರ್ಜನೆಗೊಂಡಿರುವ ಬಗ್ಗೆ ಗೆಜೆಟ್ ಅಧಿಸೂಚನೆ ಪ್ರಕಟವಾಗಿದ್ದು, ಸಚಿವರಿಗೆ ಹಂಚಿಕೆಯಾಗಿದ್ದ ಸರ್ಕಾರಿ ವಾಹನಗಳನ್ನು ವಾಪಸ್ ತೆಗೆದುಕೊಳ್ಳಲಾಗಿದೆ. ಹೀಗಾಗಿ ಮಾಜಿ ಸಚಿವರೆಲ್ಲರೂ ಖಾಸಗಿ ವಾಹನಗಳಿಗೆ ಶಿಫ್ಟ್ ಆಗಿದ್ದಾರೆ. ಇನ್ನೊಂದೆಡೆ ಸಚಿವರ ಸರ್ಕಾರಿ ನಾಮಫಲಕಗಳನ್ನು ತೆರವುಗೊಳಿಸಲಾಗಿದೆ.

ಆಪ್ತರ ಪಟ್ಟಿ ಹಿಡಿದು ದಿಲ್ಲಿಗೆ ತೆರಳಿದ್ದ ಡಿಕೆಶಿ: ಡಿ.ಕೆ.ಶಿವಕುಮಾರ್, ತಮ್ಮ ಕ್ಯಾಬಿನೆಟ್ ಸಚಿವರ ಅಂತಿಮ ಪಟ್ಟಿಯೊಂದಿಗೆ ದಿಲ್ಲಿಗೆ ತೆರಳಿದ್ದರು. ವಿಮಾನದಲ್ಲೇ ಕುಳಿತು ಆಪ್ತ ಶಾಸಕರ ಪಟ್ಟಿಯನ್ನು ಪರಿಶೀಲಿಸಿರುವ ಅವರು, ಹೈಕಮಾಂಡ್ ನಾಯಕರಿಗೆ ಇದನ್ನೇ ಸಲ್ಲಿಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಹೈಕಮಾಂಡ್ ಒಪ್ಪಿಗೆ ನೀಡಿದರೆ, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರದ ಜತೆ ಜತೆಯಲ್ಲೇ ಸಚಿವರ ಪದಗ್ರಹಣವೂ ನಡೆಯುವ ಸಾಧ್ಯತೆಯಿದೆ.

> **ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ 2 ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಕರ್ನಾಟಕ ಹಾಗೂ ಕಾಂಗ್ರೆಸ್ ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ.**
> ■ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಸಂಸದರಿಂದ ಸೇತುವೆ ಕಾಮಗಾರಿ ಪರಿಶೀಲನೆ

ಬೈಂದೂರು: ಕರಾವಳಿ ಹಾಗೂ ಮಲೆನಾಡು ಭಾಗದ ಸಂಪರ್ಕ ಕ್ರಾಂತಿಗೆ ಅತ್ಯಂತ ನಿರ್ಣಾಯಕವಾಗಿರುವ ರಾಷ್ಟ್ರೀಯ ಹೆದ್ದಾರಿ-766ಸಿ ರಸ್ತೆ ಅಭಿವೃದ್ಧಿ ಯೋಜನೆಯಡಿ, ಶರಾವತಿ ಹಿನ್ನೀರಿನ ಬೆಕ್ಕೋಡಿ ಪ್ರದೇಶದಲ್ಲಿ ತಲೆಎತ್ತಲಿರುವ ಎರಡು ಪ್ರಮುಖ ಬೃಹತ್ ಸೇತುವೆಗಳ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಸಂಸದ ಬಿ. ವೈ. ರಾಘವೇಂದ್ರ ಅವರು ಸಂಬಂಧಿಸಿದ ರಾಷ್ಟ್ರೀಯ ಹೆದ್ದಾರಿ ವಲಯದ ಹಿರಿಯ ಇಲಾಖಾ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ಜಂಟಿ ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಒಟ್ಟು 13.832 ಕಿ.ಮೀ ಉದ್ದದ ಸಂಪೂರ್ಣ ಮರು-ಜೋಡಣೆ ಒಳಗೊಂಡಿರುವ ಈ ಬೃಹತ್ ಯೋಜನೆಯ ಒಟ್ಟು ಮಂಜೂರಾದ ವೆಚ್ಚ ರೂ. 313.56 ಕೋಟಿ. ಮಲೆನಾಡಿನ ಸಾರಿಗೆ ವ್ಯವಸ್ಥೆಯನ್ನೇ ಬದಲಾಯಿಸಲಿರುವ ಈ ಯೋಜನೆಯ ಪ್ರಗತಿಯನ್ನು ವೇಗಗೊಳಿಸಲು ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರೊಂದಿಗೆ ಸವಿಸ್ತಾರವಾಗಿ ಚರ್ಚಿಸಿದರು.

ಮಾಜಿ ಸಚಿವ ವೆಂಕಟರಮಣಪ್ಪ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ವೆಂಕಟರಮಣಪ್ಪ (80) ಶುಕ್ರವಾರ ನಿಧನರಾಗಿದ್ದಾರೆ. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದು, ಪುತ್ರ ಶಾಸಕ ಹೆಚ್.ವಿ. ವೆಂಕಟೇಶ್, ಕುಮಾರಸ್ವಾಮಿ, ಪುತ್ರಿ ಪದ್ಮಾವತಿ ಅವರನ್ನ ಅಗಲಿದ್ದಾರೆ. ಅನಾರೋಗ್ಯಕ್ಕೀಡಾಗಿದ್ದ ವೆಂಕಟರಮಣಪ್ಪ ಅವರನ್ನ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೆಂಕಟರಮಣಪ್ಪ ಅವರು 2008ರ ಅವಧಿಯಲ್ಲಿ ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ, 2018ರಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಒಟ್ಟು ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾಗಿದ್ದರು. ಪಟ್ಟಣದ ಗುರುಭವನದಲ್ಲಿ ಇಂದು ಮಧ್ಯಾಹ್ನ ಮೃತರ ಪಾರ್ಥೀವ ಶರೀರವನ್ನು ಸಾರ್ವಜನಿಕ ಅಂತಿಮ ದರ್ಶನಕ್ಕೆ ಇಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಣ್ಯರ ಕಂಬನಿ

ಮಾಜಿ ಸಚಿವ ವೆಂಕಟರಮಣಪ್ಪ ನಿಧನಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವರಾದ ಡಾ.ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್, ಶಿವರಾಜ್ ತಂಗಡಗಿ, ಕೃಷ್ಣ ಬೈರೇಗೌಡ ಸೇರಿದಂತೆ ಹಲವು ನಾಯಕರು ಕಂಬನಿ ಮಿಡಿದಿದ್ದಾರೆ.

ಕಟ್ಟಿಣ ಹಳ್ಳದಲ್ಲಿ ಪತ್ತೆಯಾದ ಚಾಲುಕ್ಯರ ಹೊಸ ಶಾಸನ | ಲಕ್ಕುಂಡಿ ಅಭಿವೃದ್ಧಿಗೆ ವಿಶೇಷ ಒತ್ತು

ಪ್ರಾಧಿಕಾರಕ್ಕೆ 300ಕ್ಕೂ ಹೆಚ್ಚು ಪ್ರಾಚ್ಯಾವಶೇಷ ಹಸ್ತಾಂತರ

ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ದಕ್ಷಿಣ ಭಾರತದ ಶಿಲ್ಪ ಕಲೆಯ ತೊಟ್ಟಿಲು ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಐತಿಹ್ಯವಿರುವ 101 ಗುಡಿ, 101 ಭಾವಿಗಳನ್ನು ಪತ್ತೆ ಹಚ್ಚಿ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವ ಕನಸು ಕಂಡಿರುವ ಸರ್ಕಾರಕ್ಕೆ ಮತ್ತಷ್ಟು ಬಲ ಬಂದಿದೆ. ರೈತನೋರ್ವ ತಮ್ಮ ಜಮೀನಿನಲ್ಲಿ ಹಾಕಲಾಗಿದ್ದ 300ಕ್ಕೂ ಹೆಚ್ಚು ಪ್ರಾಚ್ಯಾವಶೇಷ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದ್ದಾರೆ.

ಗ್ರಾಮದ ಪ್ರಸಿದ್ಧ ಮಾಣಿಕೇಶ್ವರ ಮತ್ತು ಮುಸ್ಕಿನ ಭಾವಿ ಕಲ್ಯಾಣಿಯ ಕೂಗಳತೆಯ ದೂರದಲ್ಲಿರುವ ರೈತ ಬಸಪ್ಪ ಮುಸ್ಕಿನಭಾವಿ ಜಮೀನಿನ ಬದುವಿನಲ್ಲಿ ಹೂತು ಹೋಗಿದ್ದ 300 ಪ್ರಾಚ್ಯಾವಶೇಷಗಳನ್ನು ಬಯಲು ವಸ್ತು ಸಂಗ್ರಾಲಯಕ್ಕೆ ಹಸ್ತಾಂತರಿಸಿದ್ದು ಮೆಚ್ಚುಗೆ ವ್ಯಕ್ತವಾಗಿದೆ.

3 ಬಾವಿ, ಶಾಸನ ತೋರಿಸಿದ ಬಸಪ್ಪ: ತನ್ನ ಜಮೀನಿನಲ್ಲಿ 300 ಪ್ರಾಚ್ಯಾವಶೇಷಗಳು ಸೇರಿದಂತೆ ಪ್ರಾಚ್ಯಾವಶೇಷಗಳಿಂದ ನಿರ್ಮಾಣವಾದ ಗ್ರಾಮದ ವಿವಿಧ ಭಾಗಗಳಲ್ಲಿದ್ದ ಕಳ್ಳಿಮಠ, ಉಮಚಗಿ, ಮತ್ತು ಶೆಟ್ಟರ ಭಾವಿಗಳನ್ನು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ತಂದಿರುವ ಬಸಪ್ಪ ಅವರು ಕಟ್ಟಿಣ ಹಳ್ಳದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದನ್ನು ತೋರಿಸಿದ್ದು ಈ ಶಾಸನವು ಅತ್ಯಂತ ಮಹತ್ವದ್ದಾಗಿದೆ.



ಎಚ್‌ಕೆಪಿ ಶ್ಲಾಘನೆ

ಮಾಜಿ ಸಚಿವ ಎಚ್.ಕೆ.ಪಾಟೀಲ ರೈತ ಬಸಪ್ಪ ಮುಸ್ಕಿನಭಾವಿಗೆ ದೂರವಾಣಿ ಮೂಲಕ ಸಂಪರ್ಕ ಮಾಡಿ ರೈತನ ಕಾರ್ಯವನ್ನು ಶ್ಲಾಘಿಸಿ ಪ್ರಾಚ್ಯಾವಶೇಷಗಳ ಅನ್ವೇಷಣೆಗೆ ಸರ್ಕಾರ ಜತೆಗೆ ಕೈಜೋಡಿಸಿದ್ದು ಉತ್ತಮ ಕಾರ್ಯವಾಗಿದೆ. ಸರ್ಕಾರದಿಂದ ನಿಮಗೆ ಬಹುಮಾನ ನೀಡುವ ಕಾರ್ಯವನ್ನು ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಚಾಲುಕ್ಯ ಚಕ್ರವರ್ತಿ ಶಾಸನ: ಲಕ್ಕುಂಡಿಯಿಂದ ಸುಮಾರು 2-3 ಕಿ.ಮೀ. ದೂರದಲ್ಲಿರುವ ಕಟ್ಟಿ ಹಾಳದಲ್ಲಿ ನಾಥವಾಗಿ ಬಿದ್ದಿರುವ ಶಾಸನವು ಕಲ್ಯಾಣ ಚಾಲುಕ್ಯರಸರ ಕಾಲದ್ದಾಗಿದೆ. ಇದೊಂದು ಹೊಸ ಶಾಸನವಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಒಂದು ತುಂಡು ಶಾಸನವಾಗಿದ್ದು 13 ಸಾಲುಗಳನ್ನು ಒಳಗೊಂಡಿದೆ. ಚಾಲುಕ್ಯ ಪ್ರಶಸ್ತಿ ಹೆಸರಿರುವ ಈ ಶಾಸನವು ಚಾಲುಕ್ಯ ಚಕ್ರವರ್ತಿ 2ನೇ ಜಗದೇಕಮಲ್ಲ ನಾಳ್ವಿಕೆಯನ್ನು ಸೂಚಿಸುತ್ತದೆ. ಇದರಲ್ಲಿ ಕುಂತಳನಾಡು, ಮಾಸವಾಡಿ ಆಡಳಿತದ ಘಟಕಗಳ ಉಲ್ಲೇಖವಿದೆ.

ಜಗದೇಕಮಲ್ಲ ದೇವನು ಒಬ್ಬ ಮಹಾಮಂಡೇಶ್ವರನ ಪ್ರಶಸ್ತಿಯನ್ನು ಹೊಗಳಿದೆ. ಆದರೆ, ಅವನ ಹೆಸರು ಲಭ್ಯವಿಲ್ಲ. ಶಾಸನದ ಭಾಗ ಬಹುತೇಕ ತುಂಡಾಗಿಕಳೆದು ಹೋಗಿರುವುದರಿಂದ ಹೆಚ್ಚಿನ ವಿವರಗಳು ಅಲಭ್ಯ. ಶಾಸನದ ಆರಂಭದಲ್ಲಿ ಶಿವಸ್ತುತಿ ಇರುವುದರಿಂದ ಶಿವಾಲಯಕ್ಕೆ ಭೂದಾನ ಕೊಟ್ಟ ಶಾಸನವಾಗಿರಬಹುದು. ಶಾಸನದ ಸ್ಪಷ್ಟ ಕಾಲ ಲಭ್ಯವಿಲ್ಲ, ಜಗದೇಮಲ್ಲನ ಆಳ್ವಿಕೆಯ ಕಾಲ ಕ್ರಿಶ 1139-1149 ಹಾಗಾಗಿ ಹತ್ತು ವರ್ಷದ ರಾಜ್ಯಾಡಳಿತ ಅವಧಿಯಲ್ಲಿ ಈ ಶಾಸನ ರಚನೆಯಾಗಿದೆ. ಲಿಪಿ ದೃಷ್ಟಿಯಿಂದ ಶಾಸನದ ಕಾಲ 12ನೇ ಶತಮಾನದ ರಚನೆ ಎಂದು ಶಾಸನ ಸಂಶೋಧಕ ಡಾ.ರವಿಕುಮಾರ ನವಲಗುಂದ ಸಂಶೋಧಿಸಿದ್ದಾರೆ ಎಂದು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಲಹಾ ಸಮಿತಿಯ ಸದಸ್ಯ ಸಿದ್ಧಲಿಂಗೇಶ್ವರ ಪಾಟೀಲ ಹಾಗೂ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

> **ಲಕ್ಕುಂಡಿ ಜನತೆ ತಮ್ಮೂರಿನ ಇತಿಹಾಸ ಬೆಳಕಿಗೆ ಬರಲು ಪ್ರಾಚ್ಯಾವಶೇಷಣೆಯಲ್ಲಿ ಪಾಲ್ಗೊಂಡು ಇಲ್ಲಿಯ ಸಂಸ್ಕೃತಿ, ಸಂಪ್ರದಾಯ ಎತ್ತರಕ್ಕೆ ಬೆಳೆಯಲು ಸಹಕರಿಸುತ್ತಿದೆ.**
> ■ ಎಚ್.ಕೆ.ಪಾಟೀಲ, ಮಾಜಿ ಸಚಿವ

> **ಗ್ರಾಮದ ಹಿರಿಯರು, ಯುವಕರು ಪ್ರಾಚ್ಯಾವಶೇಷಗಳ ಅನ್ವೇಷಣೆಯಲ್ಲಿ ಭಾಗವಹಿಸಿ ಈವರೆಗೂ 3 ಸಾವಿರಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆಯಾಗಲು ಬೆನ್ನೆಲುಬಾಗಿ ನಿಂತಿದ್ದು ಸಂತಸ ತಂದಿದೆ.**
> ■ ಸಿದ್ಧಲಿಂಗೇಶ್ವರ ಪಾಟೀಲ, ಸದಸ್ಯ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ

> **ನಮ್ಮ ಜಮೀನಿನ ಬದುವಿನಲ್ಲಿ ಹಳೆಯ ಕಾಲದ ಗುಡಿಯ ಕಲ್ಲಗಳು ಹಲವಾರು ವರ್ಷಗಳಿಂದ ಇದ್ದಿದ್ದವು ಅವುಗಳನ್ನು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಸಿದ್ದು ಪಾಟೀಲ ಅವರಿಗೆ ತಿಳಿಸಿ ಹಸ್ತಾಂತರ ಮಾಡಿದ್ದೇವೆ.**
> ■ ಬಸಪ್ಪ ಮುಸ್ಕಿನಭಾವಿ, ರೈತ

ಜೂ.5ರಿಂದ 21ರವರೆಗೆ ವಿಶೇಷ ಕಾರ್ಯಕ್ರಮ

ಕಲಬುರಗಿ: ಪ್ರಧಾನಮಂತ್ರಿ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರವು ದೇಶ ಮೊದಲು ಎಂಬ ಧ್ಯೇಯದೊಂದಿಗೆ ಕಳೆದ 12 ವರ್ಷಗಳಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಜೂನ್ 7ಕ್ಕೆ 12 ವರ್ಷಗಳನ್ನು ಪೂರ್ಣಗೊಳಿಸಲಿದೆ. ಈ



ನಿಟ್ಟಿನಲ್ಲಿ ದೇಶಾದ್ಯಂತ ಜೂನ್ 5ರಿಂದ 21ರ ವರೆಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪಕ್ಷದ ಸಂಘಟನೆ ಹಾಗೂ ಮುಂಬರುವ ದಿನಗಳಲ್ಲಿ ನಡೆಸುವ ಹೋರಾಟಗಳ ಕುರಿತಾದ ಜಿಲ್ಲಾ ಮಟ್ಟದ ಸಂಘಟನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಕೇಂದ್ರ ಸರ್ಕಾರವು ಬಡವರು, ಶೋಷಿತರು ಮತ್ತು ವಂಚಿತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು, ರೈತರ ಹಿತಾಸಕ್ತಿ ರಕ್ಷಣೆ, ಮಹಿಳಾ ಸಬಲೀಕರಣ, ದೇಶದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದೆ ಎಂದರು.

ಜಾಗತಿಕ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿ ವಿಕಸಿತ ಭಾರತ ಗುರಿಯತ್ತ ಸರ್ಕಾರ ವೇಗವಾಗಿ ಸಾಗುತ್ತಿದೆ.ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ದೀರ್ಘಕಾಲ ಸೇವೆ ಸಲ್ಲಿಸುತ್ತಿರುವ ನಿರಂತರವಾಗಿ ಚುನಾಯಿತ ಪ್ರಧಾನಮಂತ್ರಿಗಳಲ್ಲಿ ಒಬ್ಬರಾಗಿದ್ದು, ಸಾರ್ವಜನಿಕ ಸೇವೆಯಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲು ಸಾಧಿಸಿದ್ದು, ಎನ್‌ಡಿಎ ಸರ್ಕಾರದ 12 ವರ್ಷಗಳ ವಿಶ್ವಾಸ ಅಭಿವೃದ್ಧಿ ಮತ್ತು ಜನಕಲ್ಯಾಣ ಕಾರ್ಯಕ್ರಮದ ಅಂಗವಾಗಿ ಜೂನ್ 5ರಿಂದ 21ರವರೆಗೆ ದೇಶಾದ್ಯಂತ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಸೂಚನೆ ನೀಡಿದ್ದಾರೆ ಎಂದರು. ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಮಾಜಿ ಸಂಸದ ಡಾ.ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯ ಬಿ.ಜಿ. ಪಾಟೀಲ್ ಇದ್ದರು.



ಚಿಕ್ಕಬಳ್ಳಾಪುರದಲ್ಲಿ ಶುಕ್ರವಾರ ಸೇವಂತಿಗೆ ಹೂ ಬಿಡಿಸುವ ಕಾರ್ಯದಲ್ಲಿ ನಿರತರಾದ ಮಹಿಳೆಯರು.

ಭೀಮಾತೀರದಲ್ಲಿ 6 ಮಂದಿ ಹತ್ಯೆ

ವಿಜಯಪುರ/ಚಡಚಣ: ಕೆಲ ದಿನಗಳಿಂದ ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದಿದ್ದು, ಒಂದೇ ಕುಟುಂಬದ ಐದು ಜನ ಸೇರಿ 6 ಜನರನ್ನು ಕಬ್ಬು ಕಡಿಯುವ ಕೊಯ್ತಾದಿಂದ ಕೊಚ್ಚಿ ಬರ್ಬರ ಹತ್ಯೆ ಮಾಡಿರುವ ಘಟನೆ ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ಚಂದು ರೇವಣಸಿದ್ದಪ್ಪ ನಿರಾಳೆ (55), ದುಂಡಪ್ಪ ರೇವಣಸಿದ್ದ ನಿರಾಳೆ (65), ಶಿವಪುತ್ರ ರೇವಣಸಿದ್ದಪ್ಪ ನಿರಾಳೆ (58), ರಾಹುಲ್ ಶಿವಪುತ್ರ ನಿರಾಳೆ (25), ಸಮರ್ಥ ಶಿವಪುತ್ರ ನಿರಾಳೆ (23) ಹಾಗೂ ಶಬ್ಬೀರ್ ಬಾಬುಸಾಬ್ ಅತ್ತಾರ (45) ಮೃತಪಟ್ಟವರು. ಇನ್ನು ಈ ಘಟನೆಯಲ್ಲಿ ಅರವಿಂದ ಯಶವಂತ ಕಟಗೆ (72), ಸಂದೀಪ ಭಾರತ ಮಾನೆ (33) ಗಾಯಗೊಂಡಿದ್ದಾರೆ. ಚಡಚಣದ ನಿರಾಳೆ ಕುಟುಂಬವು ನೀವರಗಿಯ ತೇಲಿ ಕುಟುಂಬದಿಂದ ಗೋವಿಂದಪುರ ಗ್ರಾಮದ ಸುಮಾರು 25 ಎಕರೆ ಭೂಮಿಯನ್ನು ಖರೀಸಿದ್ದರು. ನೀವರಗಿ ಗ್ರಾಮದ ತೇಲಿ ಕುಟುಂಬ ಮತ್ತು ಆರೋಪಿಗಳು ಎನ್ನಲಾದ ಗೊಳಗಿ ಎಂಬವರ ಮಧ್ಯೆ ಕಳೆದ 15–16 ವರ್ಷಗಳಿಂದ ಈ ಜಮೀನಿನ ಕುರಿತು ವಿವಾದವಿತ್ತು. ತೇಲಿ ಕುಟುಂಬ ಕಳೆದ 15 ವರ್ಷಗಳಿಂದ ಈ ಜಮೀನಿನಲ್ಲಿ ಕೃಷಿ ಮಾಡುತ್ತಿರಲಿಲ್ಲ. ಅಲ್ಲದೆ ಅದನ್ನು ಚಡಚಣದ ನಿರಾಳೆ ಕುಟುಂಬಕ್ಕೆ ಮಾರಾಟ ಮಾಡಿತ್ತು. ಈ ಜಮೀನಿನ ವ್ಯಾಜ್ಯವೇ 6 ಜನರ ಕೊಲೆಗೆ ಕಾರಣವಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಆರೋಪಿಗಳ ಪತ್ತೆಗೆ ವಿಶೇಷ ತಂಡ

ಶುಕ್ರವಾರ ನಡೆದ ಘಟನೆಯಲ್ಲಿ ಒಂದೇ ಕುಟುಂಬದ ಐವರು ಸೇರಿದಂತೆ ಒಟ್ಟು ಆರು ಮಂದಿ ಮೃತಪಟ್ಟಿರುವುದು ಭೀಮಾತೀರ ಪ್ರದೇಶವನ್ನು ಬೆಚ್ಚಿ ಬೀಳಿಸಿದೆ. ಘಟನೆ ಗ್ರಾಮದಲ್ಲಿ ಆತಂಕದ ವಾತಾವರಣ ಸೃಷ್ಟಿಸಿದ್ದು, ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಆರೋಪಿಗಳ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಕಿರುಸುದ್ದಿ

ಒತ್ತಡಕ್ಕೆ ಮಣಿದು ಸಿಎಂ ರಾಜೀನಾಮೆ: ಅಶೋಕ

ಭಟ್ಕಳ: ರಾಜ್ಯ ಕಾಂಗ್ರೆಸ್ ಹೈಕಮಾಂಡಿಗೆ ಎ.ಟಿ.ಎಂ ಯಂತ್ರ ಆಗಲಿದೆ ಎಂದು ರಾಜ್ಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಭಟ್ಕಳದಲ್ಲಿ ಮೂರಿನಕಟ್ಟೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹುದ್ದೆಯನ್ನು ಸಿದ್ದರಾಮಯ್ಯ ಬಿಟ್ಟು ಕೊಟ್ಟಿಲ್ಲ ಡಿ.ಕೆ.ಶಿವಕುಮಾರ ಅವರು ಅದನ್ನು ಕಿತ್ತುಕೊಂಡಿದ್ದಾರೆ. ಅವರ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಸ್ವಲ್ಪವೂ



ಕಾಲಾವಕಾಶ ನೀಡದೆ ರಾಜೀನಾಮೆ ಪಡೆದಿದೆ ಎಂದರೆ ಕಾಂಗ್ರೆಸ್ ಹೈಕಮಾಂಡ್ ಕಣ್ಣಿಟ್ಟ ಎ.ಟಿ.ಎಂಗೆ ಡಿ.ಕೆ. ಶಿವಕುಮಾರ ಮುಖ್ಯಸ್ಥರಾಗಲಿದ್ದಾರೆ ಎಂದು ವ್ಯಂಗ್ಯವಾಡಿದರು. ಸಿದ್ದರಾಮಯ್ಯ ಅವರ ಅವಧಿಯಲ್ಲಿದ್ದ ಭ್ರಷ್ಟಾಚಾರ ಈಗ ಇನ್ನಷ್ಟು ಹೆಚ್ಚಲಿದ್ದು, ರಾಜ್ಯದ ಜನತೆ ಸಮಸ್ಯೆ ಹೆಚ್ಚಲಿದೆ.ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಇಬ್ಬರೂ ಒಂದೇ ಮನಸ್ಥಿತಿಯವರಾಗಿದ್ದು, ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಕ್ಕೆ ಯತ್ನಿಸಿದ ಉಗ್ರನನ್ನು ಬ್ರದರ್ ಎಂದು ಕರೆದ ಡಿ.ಕೆ.ಶಿವಕುಮಾರ ಸಿಎಂ ಆದರೆ ಯಾವ ಪರಿಸ್ಥಿತಿ ಇರಲಿದೆ ಎನ್ನುವುದನ್ನು ಯೋಚಿಸಬೇಕಿದೆ ಎಂದು ಹೇಳಿದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ ಇದ್ದರು.

ಹಣ ದುರುಪಯೋಗ; ಮೂವರು ಇಓ ಅಮಾನತು

ಮಧುಗಿರಿ: ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೃತ್ತ, ಸ್ವಯಂ ನಿವೃತ್ತಿ ಹಾಗೂ ಮರಣ ಹೊಂದಿದ ಸರ್ಕಾರಿ ನೌಕರರ ಗಳಿಕೆ ರಜೆ ನಗದೀಕರಣದಲ್ಲಿ ಬರೋಬ್ಬರಿ 4,24,06,997ರೂ. ಗಳ ಬೃಹತ್ ಆರ್ಥಿಕ ಅಕ್ರಮ ನಡೆದಿರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಮೂವರು ಕಾರ್ಯನಿರ್ವಾಹಕ ಅಧಿಕಾರಿಗಳನ್ನು (ಇಓ) ಸೇವೆಯಿಂದ ತಕ್ಷಣವೇ ಅಮಾನತುಗೊಳಿಸಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ಕಾರ್ಯದರ್ಶಿ ಜಯಲಕ್ಷ್ಮಿ ಆದೇಶ ಹೊರಡಿಸಿದ್ದಾರೆ. ವಿಶೇಷ ಲೆಕ್ಕ ಪರಿಶೋಧನಾ ತಂಡವು ನಡೆಸಿದ ಪರಿಶೀಲನೆಯಲ್ಲಿ ಈ ಭ್ರಷ್ಟಾಚಾರ ಬೆಳಕಿಗೆ ಬಂದಿದೆ.

ಅಮಾನತುಗೊಂಡ ಅಧಿಕಾರಿಗಳು: ದೊಡ್ಡಸಿದ್ದಯ್ಯ ಹಿಂದಿನ ಇಓ, ಮಧುಗಿರಿ – ಹಾಲಿ ಇಓ, ಚಿಕ್ಕನಾಯಕನಹಳ್ಳಿ, ಲಕ್ಷ್ಮಣ್ ಹಾಲಿ ಇಓ, ಮಧುಗಿರಿ, ಶಶಿಧರ್ ಎಚ್ ಹಿಂದಿನ ಇಓ, ಮಧುಗಿರಿ – ಹಾಲಿ ಇಓ, ಚಳ್ಳಕೆರೆ, ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ.

ರಸ್ತೆ ಅಪಘಾತ: ಐವರು ಸಾವು

ಚಿತ್ರದುರ್ಗ: ಕಾರಿನ ಟೈರ್ ಸ್ಫೋಟಗೊಂಡ ಪರಿಣಾಮ ಲಾರಿಗೆ ಕಾರಿಗೆ ಡಿಕ್ಕಿ ಹೊಡೆದು ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಐದು ಜನ ಮೃತಪಟ್ಟಿರುವ ಘಟನೆ ಮೊಳಕಾಲ್ಮುರು ತಾಲೂಕಿನ ತುಮಕೂರ್ಲಹಳ್ಳಿ ಬಳಿಯ ಶ್ರೀನಿವಾಸ ಡಾಬಾ ಬಳಿ ಗುರುವಾರ ರಾತ್ರಿ ಸಂಭವಿಸಿದೆ. ಮೃತರನ್ನು ಚಳ್ಳಕೆರೆ ನಗರದ ನಿವಾಸಿಗಳಾದ ಕಾರಿನ ಚಾಲಕ ರಘು (40), ರುದ್ರೇಶ್ (36), ಮಲ್ಲಿಕಾರ್ಜುನ (38), ಚಳ್ಳಕೆರೆ ನಗರಸಭೆ ಸದಸ್ಯ ಪ್ರಮೋದ್ (35) ಹಾಗೂ ಚಳ್ಳಕೆರೆ ತಾಲ್ಲೂಕಿನ ಮೀರಡಿಮ್ಮನಹಳ್ಳಿ ನಿವಾಸಿ ಸೋಮಶೇಖರ (35) ಎಂದು ಗುರುತಿಸಲಾಗಿದೆ.

ಸಿಎಂ ರಾಜೀನಾಮೆ ಕುರಿತು ಡಿ.ಕೆ.ಶಿವಕುಮಾರ್ ಎಕ್ಸ್‌ನಲ್ಲಿ ಭಾವನಾತ್ಮಕ ಪೋಸ್ಟ್

ಮೇರು ನಾಯಕ ಸಿದ್ದು

ಬೆಂಗಳೂರು: ದೇವರು ವರನೂ ಕೊಡಲ್ಲ, ಶಾಪನೂ ಕೊಡಲ್ಲ, ಅವಕಾಶ ಮಾತ್ರ ಕೊಡುತ್ತಾನೆ. ಆ ಕೊಟ್ಟಿರುವ ಅವಕಾಶದಲ್ಲಿ ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಮುಖ್ಯ. ಇದಕ್ಕೆ ಅತ್ಯುತ್ತಮ ಉದಾಹರಣೆಯೇ ನಮ್ಮ ಸಿದ್ದರಾಮಯ್ಯನವರು ಎಂದು ಸಿದ್ದರಾಮಯ್ಯ ರಾಜೀನಾಮೆ ಕುರಿತು ಡಿ.ಕೆ. ಶಿವ ಕುಮಾರ್ ಭಾವನಾತ್ಮಕವಾಗಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮೈಸೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಹುಟ್ಟಿ, ಬೆಳೆದು, ಹೋರಾಟದ ಮೂಲಕ ರಾಜಕೀಯಕ್ಕೆ ಬಂದು, ಸಾಮಾಜಿಕ ನ್ಯಾಯದ ಹರಿಕಾರ ಹಾಗೂ ಬಡವರ ಬಂಧುವಾಗಿ ಕರ್ನಾಟಕದ ಮುಖ್ಯಮಂತ್ರಿ ಯಾಗಿ ಸೇವೆ ಸಲ್ಲಿಸಿದ ನನ್ನ ಆತ್ಮೀಯರಾದ ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ, ಪ್ರಭಾವಶಾಲಿ ಹಾಗೂ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಜನಮಾನಸದಲ್ಲಿ ನೆಲೆಸಿರುವ ಅವರು, ಭಾರತೀಯ ರಾಜಕಾರಣದ ಧೀಮಂತ ನಾಯಕ.

ಜನಪರ ಯೋಜನೆಗಳಿಂದ ಹಿಡಿದು ರಾಜ್ಯದಲ್ಲಿ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಅವಿಸ್ಮರಣೀಯ. ಸುಮಾರು ಐವತ್ತು ವರ್ಷಗಳ ಅವರ ಅಗಾಧ ರಾಜಕೀಯ ಅನುಭವ, ಸಾಮಾಜಿಕ ಕಳಕಳಿ ಮತ್ತು ಜನಪರ ಯೋಜನೆಗಳು ಸದಾ ಸ್ಮರಣೀಯ. 2020ರಲ್ಲಿ ನಾನು ಕೆಪಿಸಿಸಿ ಅಧ್ಯಕ್ಷನಾಗಿ ಆಯ್ಕೆಯಾದ ದಿನದಿಂದಲೂ ಇಂದಿನವರೆಗೆ, ಸಿದ್ದರಾಮಯ್ಯನವರು ನನ್ನ ಹೆಗಲಿಗೆ ಹೆಗಲು ಕೊಟ್ಟು ಪಕ್ಷ ಸಂಘಟನೆಯಲ್ಲಿ ಜೊತೆಯಾಗಿ ನಿಂತಿದ್ದಾರೆ.

ಅವರ ಆಡಳಿತದಲ್ಲಿ ನಾನು ಸಚಿವನಾಗಿ, ಡಿಸಿಎಂ ಆಗಿ ಮಾರ್ಗದರ್ಶನ ಪಡೆದು ಕೊಂಡಿದ್ದು ನನ್ನ ಭಾಗ್ಯ. ಮುಂದಿನ ದಿನಗಳಲ್ಲೂ ರಾಜ್ಯದ ಹಿತದೃಷ್ಟಿಯಿಂದ ಹಾಗೂ ನಮ್ಮ ಪಕ್ಷದ ಬಲವರ್ಧನೆಗೆ ಅವರ ಮಾರ್ಗದರ್ಶನ, ಹಿರಿಯ ಅನುಭವ ನಮಗೆ ಹೀಗೆಯೇ ಮುಂದುವರಿಯಲಿ ಎಂದು ಆಶಿಸುತ್ತೇನೆ. ಕರ್ನಾಟಕದ ಪ್ರಗತಿಗಾಗಿ ನಾವೆಲ್ಲರೂ ಒಟ್ಟಾಗಿ ನಡೆಯೋಣ ಎಂದು ಪೋಸ್ಟ್ ಮಾಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಶ್ಲಾಘಿಸಿದ ಮಲ್ಲಿಕಾರ್ಜುನ ಖರ್ಗೆ

ಹೊಸದಿಲ್ಲಿ/ಬೆಂಗಳೂರು: ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಶ್ಲಾಘಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿರುವ ಅವರು, ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನ ಸದಾ ಗೌರವ, ಕರುಣೆ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಯನ್ನು ಪ್ರತಿಬಿಂಬಿಸಿದೆ ಎಂದು ಖರ್ಗೆ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಜೀವನದ ಆರಂಭದಿಂದಲೇ ಸಮಾನತೆ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಿದ್ದಾರೆ. ಸರಳ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಎರಡು ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ತಿಳಿಸಿದ್ದಾರೆ. ಕರ್ನಾಟಕ ಹಾಗೂ ಕಾಂಗ್ರೆಸ್ ಪಕ್ಷವು ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಸಿದ್ದರಾಮಯ್ಯ ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾರೈಸಿದ್ದಾರೆ.



ಅಹಿಂದ ಧ್ವಜ ಹಿಡಿದು ಮುನ್ನಡೆಯುತ್ತೇನೆ: ಸತೀಶ್

ಬೆಂಗಳೂರು: ಅಹಿಂದ ಅಂದರೆ ಸುಮಾರು 500 ಜಾತಿಗಳಿವೆ. ನಾನು ಅಹಿಂದ ಧ್ವಜ ಹಿಡಿದು ಮುನ್ನಡೆಯುತ್ತೇನೆ. ಯಾರಾದರೂ ಒಬ್ಬರು ಅಹಿಂದ ಧ್ವಜ ಒಯ್ಯಲೇಬೇಕಲ್ವಾ? ಹೊಸ ಅಹಿಂದ ನಾಯಕ ಉದಯ ಆಗಲೇಬೇಕು, ಆ ವ್ಯವಸ್ಥೆ ರಾಜ್ಯದಲ್ಲಿದೆ ಎಂದು ಸತೀಶ್ ಜಾರಕಿಹೊಳಿ ತಿಳಿಸಿದರು.

ಸಚಿವ ಸ್ಥಾನಕ್ಕಾಗಿ ಶಾಸಕರಿಂದ ಲಾಬಿ

ಬೆಂಗಳೂರು: ರಾಜೀನಾಮೆ ಪ್ರಹಸನ ಮುಗಿಯುತ್ತಿದ್ದಂತೆ ಸಿಎಂ ಮತ್ತು ಡಿಸಿಎಂ ದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದಂತೆ ಬೆಂಬಲಿಗ ಶಾಸಕರು ಮತ್ತು ಕೆಲ ವಿಧಾನ ಪರಿಷತ್ತಿನ ಸದಸ್ಯರು ಕೂಡ ಅವರನ್ನು ಹಿಂಬಾಲಿಸಿದ್ದಾರೆ. ಡಜನ್‌ಗೂ ಹೆಚ್ಚು ಶಾಸಕರು ಅಲ್ಲಿಯೇ ಬೀಡುಬಿಟ್ಟು, ಸಂಪುಟದಲ್ಲಿ ಸೇರಲು ಲಾಬಿ ಶುರು ಮಾಡಿದ್ದಾರೆ.

ಕೆಲ ಶಾಸಕರು ಶುಕ್ರವಾರ ಬೆಳಿಗ್ಗೆ ದೆಹಲಿಗೆ ಹಾರಿದ್ದರೆ, ಹಲವರು ರಾತ್ರಿಯೇ ತೆರಳಿದ್ದಾರೆ. ಜಾತಿ, ಪ್ರದೇಶ, ಪಕ್ಷನಿಷ್ಠೆ, ವ್ಯಕ್ತಿನಿಷ್ಠೆ ಹೀಗೆ ವಿವಿಧ ನೆಲೆಗಳಲ್ಲಿ ತಮ್ಮ ನಾಯಕರ ಮೇಲೆ ಪ್ರಭಾವ ಬೀರಲು ಕಸರತ್ತು ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ದೆಹಲಿ ನಾಯಕರನ್ನೂ ಭೇಟಿಯಾಗಲು ಯತ್ನಿಸುತ್ತಿದ್ದಾರೆ.

ಕ್ಷೇತ್ರದ ಪ್ರಮುಖ ಮುಖಂಡರೊಂದಿಗೆ ದೆಹಲಿ ಪ್ರಯಾಣ ಬೆಳೆಸಿರುವ ಶಾಸಕರು ಮತ್ತು ಮೂರ್ನಾಲ್ಕು ಜನ ಮೇಲ್ಮನೆ ಸದಸ್ಯರು, ತಮ್ಮ ರಾಜಕೀಯ ಪಯಣ ಸೇರಿದಂತೆ ಯುಕ್ತ ಮಾಹಿತಿಯ ಪ್ರತಿ ಹಿಡಿದುಕೊಂಡು ನಾಯಕರ ಸಂಪರ್ಕಕ್ಕೆ ಯತ್ನಿಸುತ್ತಿದ್ದಾರೆ. ಈ ತಂಡದಲ್ಲಿ 3 ಮತ್ತು ಅದಕ್ಕಿಂತ ಹೆಚ್ಚು ಸಲ ಶಾಸಕರಾದವರು ಹಾಗೂ ಯುವ ಶಾಸಕರೂ ಇದ್ದಾರೆ. ಇದರಲ್ಲಿ ಕೆಲವರು ಡಿ.ಕೆ. ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡವರಿದ್ದರೆ, ಹಲವರು ಸಿದ್ದರಾಮಯ್ಯ ಅವರಿಗೆ ನಿಷ್ಠರಾದವರು ಆಗಿದ್ದಾರೆ.

ಈ ಎರಡೂ ಬಣಗಳ ಹೊರತಾಗಿ ಪಕ್ಷಕ್ಕೆ ನಿಷ್ಠರಾಗಿದ್ದು, ವರಿಷ್ಠರ ಕೋಟಾದಲ್ಲಿ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ಹವಣಿಕೆಯಲ್ಲೂ ಕೆಲವರಿದ್ದಾರೆ. ಸಂಪುಟದಲ್ಲಿ ಸ್ಥಾನ ಸಿಗದಿದ್ದರೂ, ಕೊನೆಪಕ್ಷ ನಿಗಮ–ಮಂಡಳಿಯಾದರೂ ಸಿಗಬಹುದು ಎಂಬ ಲೆಕ್ಕಾಚಾರವೂ ಇದರ ಹಿಂದಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಒಳಗೊಂಡಂತೆ ಸಂಪುಟ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ ನಾಯಕರು ಈಗಾಗಲೇ ತಮ್ಮದೇ ಆದ ಪಟ್ಟಿ ಸಿದ್ಧಪಡಿಸಿಟ್ಟುಕೊಂಡಿದ್ದಾರೆ. ಅದನ್ನು ಕ್ರೋಢೀಕರಿಸಿ, ಅಂತಿಮ ಪಟ್ಟಿಯನ್ನು ವರಿಷ್ಠರ ಮುಂದಿಡಲಾಗುತ್ತದೆ ಎಂದು ಹೇಳಲಾಗಿದೆ.

ಕೋಲಾರಕ್ಕೆ ಮೂರು ಸಚಿವ ಸ್ಥಾನ ಕೊಡಿ

ಈ ಮಧ್ಯೆ ಕೋಲಾರ ಜಿಲ್ಲೆಯ ಕಾಂಗ್ರೆಸ್ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದು, ಜಿಲ್ಲೆಗೆ ಒಟ್ಟು ಮೂರು ಸಚಿವ ಸ್ಥಾನಗಳನ್ನು ನೀಡುವಂತೆ ಒತ್ತಾಯಿಸಿದ್ದಾರೆ. ಕೋಲಾರ ಜಿಲ್ಲೆಯ ಶಾಸಕರಿಗೆ ಸಾಮಾಜಿಕನ್ಯಾಯ ಮತ್ತು ಜಾತಿ ಸಮೀಕರಣದ ಆಧಾರದ ಮೇಲೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿರುವ ಮುಖಂಡರು, ಈ ಪೈಕಿ ಸತತ ಮೂರು ಬಾರಿ ಗೆದ್ದಿರುವ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಪರಿಶಿಷ್ಟ ಜಾತಿ (ಬಲಗೈ) ಕೋಟಾದಡಿ ಸಚಿವ ಸ್ಥಾನ ನೀಡಬೇಕು. ಅದೇ ರೀತಿ, ಎರಡನೇ ಬಾರಿ ಆಯ್ಕೆಯಾದ ಮಾಲೂರಿನ ಶಾಸಕ ಕೆ.ವೈ. ನಂಜೇಗೌಡ ಮತ್ತು ಕೋಲಾರ ಶಾಸಕ ಕೊತ್ತೂರು ಜಿ. ಮಂಜುನಾಥ್ ಅವರಿಗೆ ಸಾಮಾನ್ಯ ಕೋಟಾದಡಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಒಬಿಸಿಗೆ ರಾಹುಲ್ ಅಪಮಾನ: ಶ್ರೀರಾಮುಲು

ಬಳ್ಳಾರಿ: ಒಬಿಸಿ ನಾಯಕರ ಬಗ್ಗೆ ಮಾರುದ್ದ ಮಾತನಾಡುತ್ತಿದ್ದ ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಒಬಿಸಿ ಪ್ರಬಲ ನಾಯಕ ಸಿಎಂ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಒಬಿಸಿ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನ ಮಂತ್ರಿ ಮೋದಿ ಅವರ ಸಂಪುಟದಲ್ಲಿ ಎಷ್ಟು ಜನರು ಒಬಿಸಿ ಅವರಿದ್ದಾರೆ ಎಂದು ಪ್ರಶ್ನಿಸುತ್ತಿದ್ದ ರಾಹುಲ್ ಗಾಂಧಿ ಮಾಡಿದ್ದೇನು?. ಕುರುಬ ಸಮಾಜದ, ಒಬಿಸಿ ವರ್ಗದ ಪ್ರಭಾವಿ ನಾಯಕ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಅವರನ್ನು ಅಪಮಾನ ಮಾಡಿದ್ದಾರೆ. ಇದು ರಾಜ್ಯದ ಒಬಿಸಿ ಎಲ್ಲ ನಾಯಕರ ಕಣ್ಣನ್ನು ಕೆಂಪಾಗಿಸಿದೆ ಎಂದರು.

ಕುರುಬ ಸಮುದಾಯದವರು ಹೋರಾಟದ ಹಾದಿ ತುಳಿದಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ಕೆಳಗಿಳಿಸಲಾಗಿದೆ. ಸಿದ್ದರಾಮಯ್ಯ ಅವರ ಮೊಗದಲ್ಲಿ ತೀವ್ರ ದುಃಖ ಕಾಣಿಸುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯನ್ನಾಗಿ ಮುಂದುವರಿಯಲು ಕೈ ನಾಯಕರು ಬಿಡಲಿಲ್ಲ, ಒತ್ತಾಯದಿಂದ ಅವರನ್ನು ರಾಹುಲ್ ರಾಜೀನಾಮೆ ಕೊಡಿಸಿದ್ದಾರೆ. ಕಾಂಗ್ರೆಸ್‌ನ ಈ ಬೆಳವಣಿಗೆ ಇಡೀ ಒಬಿಸಿ ಸಮುದಾಯವರನ್ನು ಕೆರಳಿಸಿದೆ ಎಂದರು.

3 ವರ್ಷ ಸಿದ್ದರಾಮಯ್ಯ ಅವರನ್ನು ನೆಮ್ಮದಿಯಿಂದ ಆಡಳಿತ ನಡೆಸಲು ಬಿಡಲಿಲ್ಲ. ಅವರ ಕುರ್ಚಿ ಕಾಲನ್ನು ಡಿಕೆಶಿ, ಖರ್ಗೆ ಅವರು ಎಳೆಯುತ್ತಿದ್ದರು. ಬಹುತೇಕ ಆಕಾಂಕ್ಷಿಗಳು ಸಿಎಂ ಕುರ್ಚಿಯನ್ನು ಎಳೆದಾಡಿ,ಎಳೆದಾಡಿ ಕುರ್ಚಿ ಸಡಿಲವಾಗಿತ್ತು. ಬ್ಯಾಲೆನ್ಸ್ ತಪ್ಪಿರುವ ಕುರ್ಚಿಯನ್ನು ಡಿ.ಕೆ.ಶಿವಕುಮಾರ ಅವರಿಗೆ ಕೊಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಅಧಿಕಾರಕ್ಕೆ ತರಲು ಸಂಕಲ್ಪ

ರಾಜ್ಯದಿಂದ ಕಾಂಗ್ರೆಸ್ ತೊಲಗಬೇಕು ಎಂದು ಜನರು ಸಂಕಲ್ಪ ಮಾಡಿದ್ದಾರೆ. 2028ರಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ. ಇದರಲ್ಲಿ ಅನುಮಾನವೇ ಬೇಡ. ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಕಾಂಗ್ರೆಸ್ ದೊಡ್ಡ ತಪ್ಪು ಮಾಡಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಿದ್ದರಾಮಯ್ಯ ಅವರಿಂದಲೇ ಹೆಚ್ಚು ಶಾಸಕರು ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ನಿಂದ ಸಿದ್ದರಾಮಯ್ಯ ಅಲ್ಲ, ಸಿದ್ದರಾಮಯ್ಯ ಅವರಿಂದಲೇ ಕಾಂಗ್ರೆಸ್ ಇದೆ. ಇದನ್ನು ವರಿಷ್ಠರು ಮರೆತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎಲ್ಲ ಸಮುದಾಯದವರು ಸೇರಿ ಕಾಂಗ್ರೆಸ್ ಮುಗಿಸುವ ಕೆಲಸ ಮಾಡಲಿದ್ದಾರೆ ಎಂದರು.

ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ಧ

ಬೆಂಗಳೂರು: ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಪಕ್ಷ ನೀಡುವ ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ಧ ಎಂದು ಮಾಜಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಈ ಹಿಂದೆ ಪೌರಾಡಳಿತ ಸಚಿವನಾಗಿ ಹಲವು ಸುಧಾರಣೆ ತಂದಿದ್ದೇನೆ. ಸಮ್ಮಿಶ್ರ ಸರ್ಕಾರದ ಸಮಯದಲ್ಲಿ ಮತ್ತು ಬಿಜೆಪಿ ಆಡಳಿತ ಇದ್ದಾಗ 5 ವರ್ಷಗಳ ಕಾಲ ಕೆಪಿಸಿಸಿ ಕಾರ್ಯಾಧ್ಯಕ್ಷನಾಗಿ ಪಕ್ಷ ಸಂಘಟನೆಗಾಗಿ ಶ್ರಮಿಸಿದ್ದೇನೆ. ವರಿಷ್ಠರು ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧ ಎಂದರು. ಪಕ್ಷ ನಿಷ್ಠರು ಮತ್ತು ದಕ್ಷತೆಯಿಂದ ಕೆಲಸ ಮಾಡಿದವರನ್ನು ಕಾಂಗ್ರೆಸ್ ಪಕ್ಷ ಸದಾ ಗುರುತಿಸಿ, ಸ್ಥಾನಮಾನ ನೀಡಿದೆ. ನಾನು ಪ್ರಸ್ತುತ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷನೂ ಆಗಿದ್ದು, ನಮ್ಮ ಸಮುದಾಯಕ್ಕೆ ಸೂಕ್ತ ಸ್ಥಾನ ಮಾನ ದೊರಕಬೇಕು. ಹೆಚ್ಚಿನ ಶಾಸಕರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂಬುದು ನನ್ನ ಆಶಯ ಎಂದರು.

ಪಕ್ಷ ಯಾವುದೇ ಜವಾಬ್ದಾರಿ ನೀಡಿದರೂ ಕಾಯ, ವಾಚ, ಮನಸಾ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುತ್ತೇನೆ. ಪಕ್ಷದ ವರಿಷ್ಠರು, ಸಮಾಜದ ವಿವಿಧ ಸ್ತರಗಳ ಜನರು ಅರಣ್ಯ ಸಚಿವನಾಗಿ ನಾನು ಮಾಡಿರುವ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಘಟಿತ ಪ್ರಯತ್ನದಿಂದ ಪಕ್ಷಕ್ಕೆ ಬಲ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ಸ್ವಇಚ್ಛೆಯಿಂದ ರಾಜೀನಾಮೆ ನೀಡಿರುವುದಾಗಿ ಹೇಳಿದ್ದಾರೆ. ಜೊತೆಗೆ ರಾಜ್ಯ ರಾಜಕಾರಣದಲ್ಲೇ ಇದ್ದು ಪಕ್ಷ ಬೆಳೆಸುವುದಾಗಿ ತಿಳಿಸಿದ್ದಾರೆ. ಕಳೆದ 3 ವರ್ಷಗಳಲ್ಲಿ ಅವರು ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿ ಉತ್ತಮವಾಗಿ ಸರ್ಕಾರ ಕೊಟ್ಟಿದ್ದಾರೆ. ಅವರ ಹೆಗಲಿಗೆ ಹೆಗಲು ಕೊಟ್ಟು ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಗಳಾಗಿ ಉತ್ತಮ ಕಾರ್ಯ ಮಾಡಿದ್ದಾರೆ. ಉಪ ಚುನಾವಣೆಗಳಲ್ಲಿ ಪಕ್ಷ ಜಯಭೇರಿ ಬಾರಿಸಿದೆ. ತಾವೂ ಉಪ ಚುನಾವಣೆಗಳಲ್ಲಿ ಪಕ್ಷದ ಪರ ಪ್ರಚಾರ ಮಾಡಿದ್ದೇನೆ ಎಂದ ಅವರು ಕಳೆದ ಸಚಿವ ಸಂಪುಟದಲ್ಲಿದ್ದ ಎಲ್ಲ ಸಚಿವರೂ ತಮ್ಮ ಜವಾಬ್ದಾರಿ ನಿಭಾಯಿಸಿದ್ದಾರೆ. ಎಲ್ಲರ ಸಂಘಟಿತ ಪ್ರಯತ್ನದಿಂದ ಪಕ್ಷಕ್ಕೆ ಹೆಚ್ಚಿನ ಬಲ ಬರಲಿದೆ ಎಂದರು.

ಕೆಂಗಲ್ ಹನುಮಂತಯ್ಯ ಬಳಿಕ ಸಿಎಂ ಹುದ್ದೆಗೇರಿದ ಜಿಲ್ಲೆಯ 2ನೇ ನಾಯಕ ಡಿ.ಕೆ.ಶಿವಕುಮಾರ್!

ಬೆಂ.ದಕ್ಷಿಣ ಜಿಲ್ಲೆಗೆ ಐದು ಬಾರಿ ಮುಖ್ಯಮಂತ್ರಿ ಸ್ಥಾನ

ಎಸ್. ರುದ್ರೇಶ್ವರ

ರಾಮನಗರ: ರಾಜ್ಯಕ್ಕೆ ನಾಲ್ವರು ಮುಖ್ಯಮಂತ್ರಿಗಳನ್ನು ಕೊಡುಗೆಯಾಗಿ ನೀಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೂಲಕ ಐದನೇ ಬಾರಿಗೆ ಮುಖ್ಯಮಂತ್ರಿ ಸ್ಥಾನ ಸಿಗುವ ನಿರೀಕ್ಷೆ ದಟ್ಟವಾಗಿದೆ.



ಬೆಂ.ದಕ್ಷಿಣ(ರಾಮನಗರ)ಜಿಲ್ಲೆಯಿಂದ ಕಾಂಗ್ರೆಸ್ ಸರ್ಕಾರದಲ್ಲಿ ಸಿಎಂ ಗಾದಿ ಅಲಂಕರಿಸಿದವರಲ್ಲಿ 2ನೇ ನಾಯಕ ಎಂಬ ಪ್ರಶಂಸೆಗೆ ಪಾತ್ರರಾಗಲಿದ್ದಾರೆ. ಈ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಕೆಂಗಲ್ ಹನುಮಂತಯ್ಯ ಮುಖ್ಯ ಮಂತ್ರಿಯಾಗಿದ್ದರು. ಆ ನಂತರ ಜನತಾ ಪಕ್ಷ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ, ಜನತಾದಳ ಸರ್ಕಾರದಲ್ಲಿ ಎಚ್.ಡಿ. ದೇವೇಗೌಡ ಹಾಗೂ ಜೆಡಿಎಸ್–ಬಿಜೆಪಿ, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರಗಳಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯ ಮಂತ್ರಿಗಳಾಗಿ ಆಡಳಿತ ನಡೆಸಿದ್ದರು.

ವಿಧಾನಸೌಧದ ನಿರ್ಮಾತೃ ಮಾಜಿ ಸಿಎಂ ಕೆಂಗಲ್ ಹನುಮಂತಯ್ಯ ಮೂಲತಃ ರಾಮನಗರ ತಾಲ್ಲೂಕಿನವರು. 1952 ಮತ್ತು 1957ರ ಚುನಾವಣೆಗಳಲ್ಲಿ ರಾಮನಗರ ಕ್ಷೇತ್ರದಿಂದ ಕೆಂಗಲ್ ಆಯ್ಕೆ ಯಾಗಿದ್ದರು. 1952ರ ಮೊದಲ ವಿಧಾನಸಭೆಯಲ್ಲಿ ಮೈಸೂರು ರಾಜ್ಯದ ಪ್ರಭಾವಿ ನಾಯಕರಾಗಿದ್ದ ಕೆಂಗಲ್ ಅವರಿಗೆ ಮುಖ್ಯಮಂತ್ರಿ ಪದವಿ ಒಲಿದು 4 ವರ್ಷ 5 ತಿಂಗಳು ಆಡಳಿತ ನಡೆಸಿದ್ದರು.

1983ರಲ್ಲಿ ರಾಜ್ಯದಲ್ಲಿ ಮೊಟ್ಟದ ಮೊದಲ ಬಾರಿಗೆ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಿತು. ಬಿಜೆಪಿ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ ಅವರಿಗೆ ಸಿಎಂ ಹುದ್ದೆ ಒಲಿದಿತ್ತು. ಆದರೆ, ಹೆಗಡೆಯವರು ಉಭಯ ಸದನಗಳ ಸದಸ್ಯರಾಗಿರಲಿಲ್ಲ.

ಆರು ತಿಂಗಳೊಳಗೆ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರಾಗಬೇಕಿತ್ತು. ಅವರಿಗಾಗಿ ಕನಕಪುರದಿಂದ ಚುನಾಯಿತರಾಗಿದ್ದ ಪಿ.ಜಿ.ಆರ್. ಸಿಂಧ್ಯಾ ಸ್ಥಾನ ತೆರವು ಮಾಡಿಕೊಟ್ಟರು. ಕನಕಪುರದಲ್ಲಿ ನಡೆದ ಮರು ಚುನಾವಣೆಯಲ್ಲಿ ಬನ್ನಿಮಕೋಡ್ಲು ಲಿಂಗೇಗೌಡ ಎದುರು ರಾಮಕೃಷ್ಣ ಹೆಗಡೆ ಗೆಲುವು ಸಾಧಿಸಿ ಸದನದ ಸದಸ್ಯರಾದರು. 7ನೇ ವಿಧಾನಸಭೆಯಲ್ಲಿ ಹೆಗಡೆ ಅವರು 10ನೇ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ಈಗ ಶಿವಕುಮಾರ್ ಅವಕಾಶ ದೊರೆತರೆ 16ನೇ ವಿಧಾನಸಭೆಯಲ್ಲಿ 24ನೇ ಮುಖ್ಯಮಂತ್ರಿ ಆದಂತಾಗುತ್ತದೆ. ಇಷ್ಟೇ ಅಲ್ಲದೆ, ಕನಕಪುರ ಕ್ಷೇತ್ರಕ್ಕೆ 2ನೇ ಬಾರಿ ಸಿಎಂ ಹುದ್ದೆ ಲಭಿಸಿದಂತಾಗುತ್ತದೆ.

1994ರ ಚುನಾವಣೆಯಲ್ಲಿ ರಾಜ್ಯದಲ್ಲಿ ಜನತಾದಳ ಪರ ಅಲೆ ಇತ್ತು. ಆಗ ಪಕ್ಷದ ಚುಕ್ಕಾಣಿ ಹಿಡಿದಿದ್ದ ದೇವೇಗೌಡ ಅವರೇ ಮುಂದಿನ ಸಿಎಂ ಎನ್ನುವ ಕೂಗು ಎದ್ದಿತ್ತು. ಆ ವೇಳೆ ರಾಮನಗರದಿಂದ ಸ್ಪರ್ಧಿಸುವಂತೆ ಸ್ಥಳೀಯ ಮುಖಂಡರು ದುಂಬಾಲು ಬಿದ್ದಿದ್ದರು. ಸ್ವಕ್ಷೇತ್ರ ಹೊಳೆನರಸೀಪುರ, ರಾಮನಗರ ಪೈಕಿ ಯಾವ ಕ್ಷೇತ್ರದಿಂದ ಸ್ಪರ್ಧಿಬೇಕೆಂಬ ಗೊಂದಲದಲ್ಲಿದ್ದರು.

ಎಚ್‌ಡಿಡಿಗೆ ಪ್ರಧಾನಮಂತ್ರಿ ಹುದ್ದೆ

ಆ ಚುನಾವಣೆಯಲ್ಲಿ ರಾಮನಗರದಿಂದಲೇ ಗೆದ್ದ ದೇವೇಗೌಡರು ಮುಖ್ಯಮಂತ್ರಿ ಹುದ್ದೆಗೇರಿ 17 ತಿಂಗಳು ಆಡಳಿತ ನಡೆಸಿದರು. ಇಷ್ಟು ಮಾತ್ರವಲ್ಲದೆ, ರಾಮನಗರ ಪ್ರತಿನಿಧಿಯಾಗಿದ್ದಾಗಲೇ ಪ್ರಧಾನಮಂತ್ರಿ ಹುದ್ದೆಯೂ ಒಲಿಯಿತು. ಪ್ರಧಾನಿಯಾದ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 2004ರಲ್ಲಿ ರಾಮನಗರ ಕ್ಷೇತ್ರದಿಂದ ವಿಧಾನಸಭೆಗೆ ಮೊದಲ ಬಾರಿ ಪ್ರವೇಶಿಸಿದ ಕುಮಾರಸ್ವಾಮಿ ಜೆಡಿಎಸ್ – ಬಿಜೆಪಿ ಮೈತ್ರಿ ಸರ್ಕಾರದಲ್ಲಿ 20 ತಿಂಗಳು ಮುಖ್ಯಮಂತ್ರಿಯಾದರು. ಅನಂತರ 2018ರಲ್ಲಿ ಜೆಡಿಎಸ್ – ಕಾಂಗ್ರೆಸ್ ದೋಸ್ತಿ ಸರ್ಕಾರದಲ್ಲಿ 2ನೇ ಬಾರಿ ಕೇವಲ 14 ತಿಂಗಳು ಸಿಎಂ ಹುದ್ದೆ ನಿಭಾಯಿಸಿದ್ದರು. ಈಗ 2026ರಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವ ಯೋಗ ಕೂಡಿ ಬಂದಿದೆ.

ರಾಜ್ಯಸಭೆ ಅಭ್ಯರ್ಥಿಗಳ ಪಟ್ಟಿ ಶೀಘ್ರ

ಬೆಂಗಳೂರು: ನನಗೆ ಬಂದಿರುವ ಮಾಹಿತಿ ಪ್ರಕಾರ ಎಲ್ಲಾ ರಾಜ್ಯಗಳ ರಾಜ್ಯಸಭೆ ಅಭ್ಯರ್ಥಿಗಳ ಪಟ್ಟಿಯನ್ನು ಒಟ್ಟಿಗೆ ಬಿಡುಗಡೆ ಮಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಹೊಸದಿಲ್ಲಿಯಲ್ಲಿ ಶುಕ್ರವಾರ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಕುರಿತ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ವೇಣುಗೋಪಾಲ್ ಅವರು ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಚರ್ಚೆ ಮಾಡಿರುವುದನ್ನು ಈಗಾಗಲೇ ತಿಳಿಸಿದ್ದಾರೆ. ನಮ್ಮ ನಾಯಕರು ನಮ್ಮ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಎಲ್ಲಾ ತೀರ್ಮಾನ ಆದ ಬಳಿಕ ನಮ್ಮ ನಾಯಕರು ಮಾಹಿತಿ ನೀಡುತ್ತಾರೆ. ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದ್ದಾರೆ. ನೀವು ಮುಖ್ಯಮಂತ್ರಿ ಆಗಿ ಯಾವಾಗ ಪ್ರಮಾಣ ವಚನ ಸ್ವೀಕರಿಸುವಿರಿ ಎಂಬ ಪ್ರಶ್ನೆಗೆ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನ ಆಯ್ಕೆ ಆಗಬೇಕಿದೆ. ನಂತರ ತೀರ್ಮಾನ ಆಗಲಿದೆ ಎಂದರು.

ಯೋಜನಾಧಿಕಾರಿಗೆ ಶೋಕಾಸ್ ನೋಟಿಸ್

ಬೆಂಗಳೂರು: ಸುಮಾರು 9,590 ಕೆ.ಜಿ. ಹಾಲಿನ ಪುಡಿ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗೆ ಕಾರಣ ಕೇಳಿ ಸರ್ಕಾರ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಗೆ ತಡೆ ನೀಡಬೇಕು ಎಂದು ಕೋರಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ಎಂ. ಆರ್. ನಂದಕುಮಾರ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಅನಂತ್‌ರಾಮನಾಥ್ ಹೆಗಡೆ ಮತ್ತು ನ್ಯಾ. ಗೀತಾ ಕೆ.ಬಿ. ಅವರನ್ನೊಳಗೊಂಡ ವಿಭಾಗೀಯ ಪೀಠವು ಈ ಆದೇಶ ಮಾಡಿದೆ.

ಸಂಪಾದಕೀಯ

ಎಸ್ಐಆರ್: ವಿಪಕ್ಷ ಯತ್ನಕ್ಕೆ ಸೋಲು

ಚುನಾವಣಾ ಆಯೋಗವು ಕೈಗೊಂಡಿರುವ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್ಐಆರ್) ಅಡ್ಡಗಾಲು ಹಾಕುವ ವಿರೋಧ ಪಕ್ಷಗಳ ಮತ್ತು ಕೆಲವು ಸ್ಥಾಪಿತ ಹಿತಾಸಕ್ತಿಗಳ ಪ್ರಯತ್ನಕ್ಕೆ ಸೋಲಾಗಿದೆ. ಎಸ್ಐಆರ್ ಸಿಂಧುತ್ವವನ್ನು ಎತ್ತಿಹಿಡಿದಿರುವ ಸರ್ವೋಚ್ಚ ನ್ಯಾಯಾಲಯವು ಇದು ಮುಕ್ತ ಮತ್ತು ನ್ಯಾಯೋಚಿತ ರೀತಿಯಲ್ಲಿ ಚುನಾವಣೆ ನಡೆಸಲು ನೆರವೀಯುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಸಂವಿಧಾನದ 324ನೇ ವಿಧಿಯನ್ವಯ ಮತದಾರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ಚುನಾವಣಾ ಆಯೋಗಕ್ಕಿದೆ ಎಂಬುದನ್ನು ನ್ಯಾಯಾಲಯವು ಒಪ್ಪಿಕೊಂಡಿದೆ. ಮತದಾರ ಪಟ್ಟಿ ಪರಿಷ್ಕರಣೆಯ ಪ್ರಕ್ರಿಯೆ ನ್ಯಾಯೋಚಿತವಾಗಿದ್ದು, ಪ್ರತಿಯೊಬ್ಬ ಮತದಾರನಿಗೂ ತನ್ನ ಹೆಸರನ್ನು ಉಳಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಒದಗಿಸಲಾಗುತ್ತಿದೆ ಎಂದು ನ್ಯಾಯಾಲಯವು ಅಭಿಪ್ರಾಯಿಸಿದೆ. ಇದರಿಂದಾಗಿ ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ತಮ್ಮ ಸೋಲಿನ ನೆಪವನ್ನು ಎಸ್ಐಆರ್ ಮೇಲೆ ಜಾರಿಸಲು ಯತ್ನಿಸಿದ ಹಾಗೂ ದೇಶಾದ್ಯಂತ ಎಸ್ಐಆರ್ ಪ್ರಕ್ರಿಯೆಗೆ ತಡೆಯೊಡ್ಡುವ ವಿರೋಧ ಪಕ್ಷಗಳ



ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಇನ್ನೀಗ ದೇಶಾದ್ಯಂತ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲು ಚುನಾವಣಾ ಆಯೋಗಕ್ಕೆ ಮುಕ್ತ ಹಸ್ತ ದೊರಕಿದಂತಾಗಿದೆ.

ಸರ್ವೋಚ್ಚ ನ್ಯಾಯಾಲಯವು ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದ ಹಲವಾರು ಅನುಮಾನಗಳನ್ನು ನಿವಾರಿಸುವ ಪ್ರಯತ್ನವನ್ನೂ ನಡೆಸಿದ್ದು, ಮತದಾರ ಪಟ್ಟಿಯಿಂದ ಹೆಸರು ತೆಗೆದು ಹಾಕಿದಾಕ್ಷಣ ದೇಶದ ಪೌರತ್ವ ರದ್ದಾಗುವುದಿಲ್ಲ. ಪೌರತ್ವ ರದ್ದುಪಡಿಸುವ ಪ್ರಕ್ರಿಯೆಗೂ ಇದಕ್ಕೂ ಸಂಬಂಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಕೆಲವು ಪಕ್ಷಗಳು ಮತದಾರ ಪಟ್ಟಿಯಿಂದ ಹೆಸರು ತೆಗೆಯುವ ಮೂಲಕ ಕೆಲವರಿಗೆ ಪೌರತ್ವವನ್ನೆ ನಿರಾಕರಿಸಲಾಗುತ್ತಿದೆ ಎಂಬುದಾಗಿ ಹುಯಿಲೆಬ್ಬಿಸಿದ್ದವು. ಅವರ ಈ ಹುಯಿಲಿನ ಹಿಂದೆ ಅಕ್ರಮ ಬಾಂಗ್ಲಾ ದೇಶಿಗಳನ್ನು ಉಳಿಸಿಕೊಳ್ಳುವ ಹುನ್ನಾರ ಅಡಗಿದೆ ಎಂಬುದು ರಹಸ್ಯವೇನಲ್ಲ.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ನಂತರವಾದರೂ ವಿರೋಧ ಪಕ್ಷಗಳು ಹಾಗೂ ಕೆಲವು ಸ್ಥಾಪಿತ ಹಿತಾಸಕ್ತಿಯ ವ್ಯಕ್ತಿಗಳು ಮತ್ತು ಸಂಘಸಂಸ್ಥೆಗಳು ಎಸ್ಐಆರ್‌ಗೆ ವಿರೋಧ ಸೂಚಿಸುವುದನ್ನು ನಿಲ್ಲಿಸಬೇಕು. ಮತದಾರ ಪಟ್ಟಿಯ ಶುದ್ಧೀಕರಣವೇ ಚುನಾವಣಾ ಆಯೋಗದ ಪ್ರಧಾನ ಉದ್ದೇಶ ಎಂಬುದನ್ನು ಅರಿಯಬೇಕು. ಮತದಾರ ಪಟ್ಟಿಯಿಂದ ನಕಲಿ ಹೆಸರುಗಳನ್ನು ಮತ್ತು ಮೃತಪಟ್ಟವರ ಹೆಸರುಗಳನ್ನು ತೆಗೆಯುವುದು, ಅಕ್ರಮವಾಗಿ ದೇಶದಲ್ಲಿರುವ ವಿದೇಶಿಯರ ಹೆಸರುಗಳನ್ನು ಕಿತ್ತುಹಾಕುವುದು, ಒಬ್ಬನೇ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಹೆಸರು ಹೊಂದಿರುವುದನ್ನು ಪರಿಶೀಲಿಸುವುದು ಮುಂತಾದ ಸದುದ್ದೇಶ ಎಸ್ಐಆರ್ ಹಿಂದಿದೆ ಎಂಬುದನ್ನು ಎಲ್ಲರೂ ಮನಗಾಣಬೇಕು.

ಅಂಗೈ ಬಣ್ಣ ಯಾವುದು?

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು.

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನಿಮ್ಮ ಅಂಗೈನ ಬಣ್ಣ ಯಾವುದು ಎನ್ನುವುದರ ಮೇಲೆ ನಿಮ್ಮ ಕೀರ್ತಿ ಆರೋಗ್ಯ, ಆರ್ಥಿಕ ಸ್ಥಿತಿ, ವ್ಯಕ್ತಿತ್ವ ಎಲ್ಲಾ ನಿರ್ಧಾರವಾಗುತ್ತದೆ. ಗುಲಾಬಿ, ಕಪ್ಪು, ಬಿಳಿ, ನೀಲಿ, ಕೆಂಪು, ಹಸಿರು ಹೀಗೆ ನಿಮ್ಮ ಅಂಗೈ ಆಗಾಗ ಬಣ್ಣ ಬದಲಿಸುತ್ತಾ ಇರುತ್ತದೆ. ಡಾಕ್ಟರ್‌ಗಳು ಹಿಂದೆ ನಿಮ್ಮ ಕಣ್ಣಿನ ಒಳಭಾಗ, ನಾಲಿಗೆ, ನಾಡಿಗಳನ್ನು ಹಿಡಿದು ನೋಡಿ ರೋಗ ನಿರ್ಧಾರ ಮಾಡುತ್ತಿದ್ದರು. ಅದೇ ರೀತಿ ಹಸ್ತ ಸಾಮುದ್ರಿಕದಲ್ಲೂ ಸಹಾ ಅಂಗೈನ ಬಣ್ಣವನ್ನು ನೋಡಲಾಗುತ್ತದೆ. ಕೆಲವೊಮ್ಮೆ ಇಡೀ ಅಂಗೈ ಬೇರೆ ಬೇರೆ ಬಣ್ಣವಾಗಿರುವುದು ಸಹಾ ಉಂಟು. ಆಗ ಯಾವ ಭಾಗ ಯಾವ ಬಣ್ಣದಲ್ಲಿ ಇದೆ ಎನ್ನುವುದರ ಆಧಾರದ ಮೇಲೆ ಅವರ ಜೀವನದ ಆಗುಹೋಗುಗಳನ್ನು ತೀರ್ಮಾನಿಸಲಾಗುತ್ತದೆ. ಇಲ್ಲಿ ಮುಖ್ಯವಾಗಿ ಸೂರ್ಯ ಪರ್ವತದ ಬಣ್ಣವನ್ನು ಪರಿಗಣಿಸಿ ಸಂಗತಿಗಳನ್ನು ಚರ್ಚಿಸಲಾಗಿದೆ.

ಗುಲಾಬಿ ಬಣ್ಣ: ಸ್ವಾಭಾವಿಕವಾಗಿ ಆರೋಗ್ಯ ಚೆನ್ನಾಗಿದ್ದು, ರಕ್ತ ಸಂಚಾರ ಸರಿಯಾಗಿ ಇರುವವರಲ್ಲಿ ಅಂಗೈ ಬಣ್ಣ ಗುಲಾಬಿಯಾಗಿಯೇ ಇರುತ್ತದೆ. ವ್ಯಕ್ತಿಯ ಬಣ್ಣ ಕಪ್ಪಗೆ ಇದ್ದರೂ ಸಹಾ ಅಂಗೈ ಬಣ್ಣ ಗುಲಾಬಿ ಇರುವುದನ್ನು ನೀವು ನೋಡಬಹುದು. ಇವರು ಸಹಜವಾಗಿ ಎಲ್ಲರನ್ನೂ ಆಕರ್ಷಿಸುತ್ತಿರುತ್ತಾರೆ. ಕಲೆ ಮತ್ತು ಸಾಹಿತ್ಯದಲ್ಲಿ ಹೆಸರು ಮಾಡುತ್ತಾರೆ. ಹಣ ಇವರನ್ನು ಹುಡುಕಿಕೊಂಡು ಬರುತ್ತದೆ. ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗುತ್ತಾರೆ. ಇದರ ಮೇಲೆ ಯಾವುದೇ ಸಕಾರಾತ್ಮಕ ಚಿಹ್ನೆಗಳು ಇಲ್ಲದಿದ್ದರೂ ಸಹಾ ಗುಲಾಬಿ ಬಣ್ಣವೇ ಇವರ ಭವಿಷ್ಯವನ್ನು ಉನ್ನತಗೊಳಿಸುತ್ತದೆ. ರಾಜಯೋಗ ಪ್ರಾಪ್ತಿ. ಸೂರ್ಯ ಪರ್ವತವು ಗುಲಾಬಿ ಇದ್ದರೆ ಸಾಕು, ಸೂರ್ಯ ರೇಖೆ ಇಲ್ಲದಿದ್ದರೂ ಸಮಾನವಾದ ಫಲಗಳು ಲಭ್ಯವಾಗುತ್ತದೆ.

ಅತಿಯಾದ ಕೆಂಪು ಬಣ್ಣ: ಇಂತಹವರಿಗೆ ರಕ್ತದೊತ್ತಡ ಜಾಸ್ತಿ. ಕೋಪ ಮೂಗಿನ ತುದಿಯಲ್ಲೇ ಇರುತ್ತದೆ. ಆತುರದಿಂದ ಅನಾಹುತಗಳನ್ನು ಆಗಾಗ ಮಾಡುತ್ತಿರುತ್ತಾರೆ. ಆದರೂ ಇವರಿಗೂ ಹೆಸರು ಮತ್ತು ಗೌರವ ಸಿಗುತ್ತದೆ. ಆದರೆ ಇವರ ಮಾತು ಎಲ್ಲವನ್ನೂ ಹಾಳು ಮಾಡುತ್ತದೆ. ಇವರು ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುತ್ತಾರೆ. ಕೊನೆಗೆ ಸಿಕ್ಕಿ ಬಿದ್ದಾಗಲೂ ಸಹಾ ಏನೂ ಆಗಿಯೇ ಇಲ್ಲ, ನಾನು ಹೇಳಿದ್ದು ಈಗಲೂ ಸತ್ಯ, ನೀವು ತಪ್ಪು ತಿಳಿದುಕೊಂಡಿರಿ ಎಂದು ವಾದಿಸುತ್ತಾರೆ. ಮತ್ತು ತಮ್ಮ ಸುಳ್ಳು ಹೇಳುವ ಗುಣವನ್ನು ಮುಂದುವರೆಸುತ್ತಾರೆ. ಸರ್ಕಾರಿ ಕೆಲಸಗಳಲ್ಲಿ ಇವರು ತೊಡಗಿಸಿಕೊಳ್ಳುತ್ತಾರೆ. ಯಶಸ್ಸು ಬರುತ್ತಿರುತ್ತದೆ ಮತ್ತು ಹಾಗೆಯೇ ಹೋಗುತ್ತಿರುತ್ತದೆ. ಹೃದಯ ಸಂಬಂಧಿ ಸಮಸ್ಯೆ ಇವರನ್ನು ಕಾಡುತ್ತದೆ.

ಹಳದಿ ಬಣ್ಣ: ಲಿವರ್ ಸಮಸ್ಯೆ ಇದ್ದಾಗ ನಿಮ್ಮ ಅಂಗೈ ಅಥವಾ ಸೂರ್ಯ ಪರ್ವತ ಹಳದಿ ಬಣ್ಣವಾಗುತ್ತದೆ. ಅಂದರೆ ಪಿತ್ತ ಜನಕಾಂಗದ ಸಮಸ್ಯೆ ಇದೆ ಎಂದರ್ಥ. ಅಥವಾ ನೀವು ಅತಿಯಾಗಿ ನಿದ್ದೆಗೆಟ್ಟಿದ್ದೀರಿ, ಸೊಂಟದ ನೋವು ತುಂಬಾ ಇದೆ ಎಂದೂ ಆಗಬಹುದು.

ನಿಮ್ಮ ಮೇಲೆ ಅಪವಾದ ಬೇಗ ಬರುತ್ತದೆ. ಕೀರ್ತಿ ನಿಮ್ಮ ಕನಸು ಮಾತ್ರ. ಸದಾ ಕಾಲ ನಿಮ್ಮನ್ನು ನಿರಾಸೆ ಕಾಡುತ್ತಿರುತ್ತದೆ. ಆತ್ಮ ವಿಶ್ವಾಸ ಕಡಿಮೆ. ಹಣವಂತೂ ಯಾವಾಗಲೂ ಇರುವುದೇ ಇಲ್ಲ. ನೀವು ನಿಮ್ಮ ಯಕೃತ್‌ನ್ನು ಸರಿಪಡಿಸಿಕೊಂಡರೆ ಎಲ್ಲವೂ ಸರಿಹೋಗುತ್ತದೆ.

ನೀಲಿ ಅಥವಾ ನೇರಳೆ ಬಣ್ಣ: ನಿಮ್ಮಲ್ಲಿ ರಕ್ತ ಸಂಚಾರ ಸರಿಯಾಗಿ ಆಗುತ್ತಿಲ್ಲ, ಹೃದಯದಲ್ಲಿ ಸಮಸ್ಯೆ ಇದೆ ಎಂದು ಅರ್ಥ. ಅಥವಾ ನೀವು ಶೀತ ಪ್ರವೃತ್ತಿಯವರು ಇರಬಹುದು. ಚಳಿ ಮತ್ತು ಮಳೆಗಾಲದಲ್ಲಿ ನಿಮ್ಮ ಅಂಗೈ ನೀಲಿಯಾಗಿ ಇರುತ್ತದೆ ಎಂದಾದರೆ ಹೃದಯದ ಸಮಸ್ಯೆ ಇರಬೇಕೆಂದಿಲ್ಲ.

ಸೂರ್ಯ ಪರ್ವತ ನೀಲಿಯಾಗಿದ್ದರಂತೂ ನಿಮ್ಮ ಅವಕಾಶಗಳೆಲ್ಲಾ ತಪ್ಪಿಯೇ ಹೋಗುತ್ತದೆ. ನಿಮ್ಮ ಶ್ರಮವನ್ನು ಯಾರೂ ಲೆಕ್ಕಿಸುವುದೇ ಇಲ್ಲ. ನೀವೂ ಸಹಾ ಯಾವುದೇ ಕೆಲಸಕ್ಕೂ ಕೈ ಹಾಕದೇ ಹಾಗೇ ಉಳಿಯುತ್ತೀರಿ. ಕೀರ್ತಿ ಬಂದರೂ ಅದು ನಿಮಗೆ ತೃಪ್ತಿಯನ್ನು ನೀಡುವುದಿಲ್ಲ.

ಕಪ್ಪು ಬಣ್ಣ/ ಕಪ್ಪು ಕಲೆಗಳು: ಅಂಗೈ ಕಪ್ಪಾಗಿದ್ದರೆ ನಿಮ್ಮ ಭವಿಷ್ಯ ಸಹಾ ಕತ್ತಲಲ್ಲೇ ಇರುತ್ತದೆ. ನೀವು ಅಪರಾಧಿಗಳು. ಒಂದೊಮ್ಮೆ ಅಪರಾಧಿಗಳು ಅಲ್ಲದಿದ್ದರೂ ನಿಮ್ಮ ಮಾನಹಾನಿ ನಿರಂತರವಾಗಿ ನಡೆಯುತ್ತಿರುತ್ತದೆ. ಸೂರ್ಯ ರೇಖೆ ಕಪ್ಪಾಗಿದ್ದರಂತೂ ವೃತ್ತಿಯಲ್ಲಿ ಸದಾ ಸಂಕಟ.

ಬಿಳಿ/ ಬೂದು ಬಣ್ಣ: ನಿಮಗೆ ರಕ್ತ ಹೀನತೆಯಾಗಿದೆ, ಬೇಗ ಸರಿಪಡಿಸಿಕೊಳ್ಳಿ ಎಂದು ಅಂಗೈ ಹೇಳುತ್ತಿದೆ. ನಿಮ್ಮಲ್ಲಿ ಉತ್ಸಾಹದ ಹೀನತೆಯೂ ಆಗಿರುತ್ತದೆ. ನಿಮ್ಮಲ್ಲಿ ಪ್ರತಿಭೆ ಇದ್ದರೂ ನಿಮಗೆ ಯಾವುದೇ ಅವಕಾಶಗಳು ಸಿಗದೇ ಎಲೆ ಮರೆಯ ಕಾಯಂತೆ ಇರುತ್ತೀರಿ. ಒಂದೊಮ್ಮೆ ವೇದಿಕೆ ಸಿಗುತ್ತದೆ ಎಂದಾದಾಗ ಯಾರಾದರೂ ಅದನ್ನು ತಪ್ಪಿಸುತ್ತಾರೆ. ಆರೋಗ್ಯ ಆಗಾಗ ಬಿಗಡಾಯಿಸುವ ಕಾರಣ ಯಾವ ಕೆಲಸವೂ ಬೇಗನೆ ಆಗುವುದಿಲ್ಲ. ಯಶಸ್ಸಂತೂ ಸದಾ ಕೈ ತಪ್ಪಿ ಹೋಗುತ್ತಿರುತ್ತದೆ. ನೀವು ದೇವರಲ್ಲಿ ಬೇಡುವುದು ಒಂದೇ 'ಧೈರ್ಯ ಕೊಡು ದೇವರೇ' ಎಂದು ಮಾತ್ರ.

ನರಗಳು ನೇರಳೆ ಬಣ್ಣ: ಅತಿಯಾದ ಒತ್ತಡ, ನಿದ್ರಾ ಹೀನತೆ, ಯಾವಾಗ ಹೆಸರು ಗಳಿಸುತ್ತೇನೋ, ಯಾವಾಗ ಹಣ ಬರುತ್ತದೋ, ಬಂದಿದ್ದು ನಿಲ್ಲುತ್ತದೋ, ಇಲ್ಲವೋ ಎನ್ನುವ ಚಿಂತೆಯಿಂದಾಗಿ ನಿಮ್ಮ ಅಂಗೈಯಲ್ಲಿ ನರಗಳು ನೇರಳೆಯಾಗಿ ಕಾಣುತ್ತಿರುತ್ತವೆ.

ನಿಮ್ಮ ಆರೋಗ್ಯ ಸರಿಪಡಿಸಿಕೊಂಡರೆ ಬಣ್ಣದ ದೋಷಗಳ ನಿವಾರಣೆಯಾಗುತ್ತದೆ. ಸೂರ್ಯನಿಗೆ ಅರ್ಘ್ಯ ನೀಡುವುದು, ಸೂರ್ಯ ನಮಸ್ಕಾರ ಮಾಡುವುದು, ಬೆಳಗಿನ ಝಾವವೇ ಎದ್ದು ಸ್ನಾನ ಮಾಡಿ ಪೂಜೆ ಮಾಡುವುದು, ಬೆಳಗಿನ ವಾಕಿಂಗ್, ಮುಂಜಾನೆ ದಿನಾಲೂ ಹೂವುಗಳನ್ನು ಕೊಯ್ದು ಮಾಲೆ ಮಾಡುವುದು. ಹೀಗೆ ಸೂರ್ಯನನ್ನು ಸೇವಿಸುವ ಕೆಲಸಗಳನ್ನು ಮಾಡಬೇಕು.

ಅಲೆಯ ರೇಖೆ: ಸೂರ್ಯ ರೇಖೆಯು ಅಡ್ಡಾದಿಡ್ಡಿಯಾಗಿ ಹಾವು ಹರಿದಂತೆ ಓರೆಕೋರೆಯಾಗಿ ಇದ್ದರೆ, ಅದೆಂದೂ ಶುಭ ಲಕ್ಷಣವಲ್ಲ. ಏರಿಳಿತ ಸಾಮಾನ್ಯ, ಹಣ ಕೈಗೆ ಬರುತ್ತಿದ್ದಂತೆ ಹೋಗುತ್ತದೆ. ಇಂದು ಅರಸ ನಾಳೆ ಆಳು ಎನ್ನುವ ಅನಿಶ್ಚಿತತೆ ಕಾಡುತ್ತದೆ. ಸ್ಥಿರತೆಯಂತೂ ದೂರದ ಮಾತು

ನಿಮ್ಮ ಮನಸ್ಸು ಯಾವಾಗಲು ಚಂಚಲವಾಗಿಯೇ ಇರುತ್ತದೆ. ಒಮ್ಮೆ ಕಲೆ, ಇನ್ನೊಮ್ಮೆ ವ್ಯಾಪಾರ ಮಾಡುತ್ತೇನೆ ಎನ್ನುವುದು, ಮತ್ತೊಮ್ಮೆ ಸರ್ಕಾರಿ ಕೆಲಸಕ್ಕೆ ಟ್ರೈ ಮಾಡುತ್ತೇನೆ ಎನ್ನುವುದು. ಯಾವುದೇ ಕ್ಷೇತ್ರದಲ್ಲಿ ಇಂತಹವರು ಹೆಚ್ಚು ಕಾಲ ಇರುವುದಿಲ್ಲ. ಅಲ್ಲಲ್ಲಿ ಅಂಕುಡೊಂಕಾಗಿದ್ದರೆ, ಗುರಿ ಮುಟ್ಟುತ್ತೀರಿ. ಆದರೆ ಅಡ್ಡಿ ತಪ್ಪದು. ಅದೇ ತುಂಬಾ ಅಡ್ಡಡ್ಡ ಸರಪಳಿಯಂತೆ ಇದ್ದರೆ, ಜೀವನ ಪೂರ್ತಿ ಒಂದಲ್ಲಾ ಒಂದು ಹೋರಾಟ ನಿಶ್ಚಿತ. ಒಂದು ಸಮಸ್ಯೆ ಮುಗಿಯಿತೋ ಇನ್ನೊಂದು ಬರಲು ಸಿದ್ಧವಾಗಿರುತ್ತದೆ.

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು. ಸ್ವಂತ ಅನುಭವಗಳು ನಿಮ್ಮನ್ನು ಮಾಗುವಂತೆ ಮಾಡುತ್ತದೆ. ಅದೇ ಅಲೆಯ ರೇಖೆಯ ಅಕ್ಕಪಕ್ಕದಲ್ಲಿ ಸಮಾನಾಂತರ ರೇಖೆಗಳು ಇದ್ದರೆ, ನಿಮಗೆ ಗುರುಗಳ ಅಥವಾ ಗುರುಗಳಂತ ಸ್ನೇಹಿತರ ಸಹಾಯ ಸಿಗುತ್ತದೆ. ಚೌಕವು ಅಲೆಗಳ ನಡುವೆ ಇದ್ದರೆ, ದೊಡ್ಡ ನಷ್ಟದಿಂದ ಪಾರಾದ ಹಾಗೇ.

ನೀವು ಯಾವುದೇ ಕೆಲಸ ಮಾಡುವಾಗ ಮೊದಲೇ ಸಂಕಲ್ಪ ಮಾಡಬೇಕು. ನಿಮ್ಮ ಇಷ್ಟ ಯಾವುದು ಎನ್ನುವುದು ತಿಳಿಸುವುದು ಸೂಕ್ತ. ಉಪ್ಪು ಖಾರಗಳನ್ನು ವಾರದಲ್ಲಿ ಯಾವುದಾದರೂ ಒಂದು ದಿನ ಮಾತ್ರ ಸೇರಿಸಬೇಕು. ಸೂರ್ಯ ನಮಸ್ಕಾರ ಮತ್ತು ಪ್ರಾಣಾಯಾಮ ಮಾಡಲೇಬೇಕು. ಮಾಣಿಕ್ಯವನ್ನು ಧರಿಸಲೇ ಬೇಡಿ. ಜಾತಕ ಮತ್ತು ಬಲ ಅಂಗೈಯನ್ನು ನೋಡಿರಿ. ನೆನಪಿಡಿ, ಯಾವಾಗಲೂ ರೇಖೆಗಳು ಬದಲಾಗುತ್ತಿರುತ್ತವೆ. ಹೃದಯ ರೇಖೆ ಮತ್ತು ಶಿರೋ ರೇಖೆಗಳು ಬಲವಾಗಿದ್ದರೆ, ಬುದ್ಧಿಯಿಂದ ಅಸ್ಥಿರತೆಯನ್ನು ತಡೆಯಬಹುದು.

ಸೂರ್ಯ ರೇಖೆಯ ಮೇಲೆ ಗುಣಿಸು ಗುರುತು: ಇದು ಅಶುಭ ಸಂಕೇತ, ಸೂರ್ಯ ರೇಖೆಯ ಮೇಲೆ ಅಡ್ಡ ಗುರುತು ಅಥವಾ ಗುಣಿಸುವ ಚಿಹ್ನೆಯು ನಿಮ್ಮ ಯಶಸ್ಸು ಯಾವಾಗ ಡಮಾರ್ ಎಂದು ಬೀಳುವುದನ್ನು ತೋರಿಸುತ್ತದೆ. ಕೆಲಸ ಅರ್ಧಕ್ಕೆ ನಿಂತು ಹೋಗುವುದು, ಪ್ರಾಜೆಕ್ಟ್ ಕ್ಯಾನ್ಸಲ್ ಆಗುವುದು, ಉದ್ಯೋಗದಿಂದ ಹೊರಬರಬಹುದು. ಹಠಾತ್ ತಡೆ, ಕೋರ್ಟ್ ಕಚೇರಿ ಅಲೆದಾಟ. ಪೊಲೀಸ್ ಕೇಸ್, ಅಪವಾದ, ಮೀಡಿಯಾದಲ್ಲಿ ಕೆಟ್ಟ ಸುದ್ದಿ. ಜೀವನ ಪೂರ್ತಿ ಕೊರಗು ನಿಮ್ಮದು. ಅಂದರೆ ನೀವು ಯಾವುದಾದರೂ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆಯ ಮೇಲೆ ಬಹುಕಾಲ ಇರುವಂತಾಗುವುದು. ದೈಹಿಕವಾದ ಅಪಾಯಗಳು, ವೃತ್ತಿಗೆ ಸಮಸ್ಯೆ ಹೀಗೆ ಇವೆ. ಪರಿಹಾರ ಎಂದರೆ, ಪಾಲುದಾರಿಕೆ ಮಾಡಿಕೊಳ್ಳುವಾಗ ಎಚ್ಚರದಿಂದ ಇರಿ. ಗುಟ್ಟಾಗಿ ಪೋಲೀಸ್ ಕೇಸ್ ಆಗಬಹುದು. ಯಾವಾಗಲೂ ಸಾಮಾನ್ಯವಾದದ್ದು ನಿಮಗೆ ಮಾತ್ರ ಕಷ್ಟಕರ ಎನ್ನುತ್ತದೆ. ಒಟ್ಟಾರೆ ನೀವು ಸದಾ ಅಲೆಯುತ್ತಾ ಇರುತ್ತೀರಿ.

ಮಜ್ಜಿಗೆಯಿಂದ ಹಾಲು ರೂಪಾಂತರ

ಅಣುರಪ್ಯಸತಾಂ ಸಂಗಃ ಸದ್ಗುಣಂ ಹಂತಿ ವಿಸ್ತೃತಮ್।
ಗುಣರೂಪಾಂತರಂ ಯಾನಿ ತಕ್ರಯೋಗಾದ್ ಯಥಾ ಪಯಃ ॥

-ಸುಭಾಷಿತ ರತ್ನಭಾಂಡಾಗಾರ

ಮಜ್ಜಿಗೆಯ ಸಹಯೋಗದಿಂದ ಹಾಲು ರೂಪಾಂತರ ಹೊಂದುವಂತೆ ಅಸತ್ಪುರುಷರ ಸಂಗವು ಅಣುವಿನಷ್ಟಾದರೂ ಸಾಕು, ಅಪಾರವಾದ ಸದ್ಗುಣಗಳನ್ನು ನಾಶಪಡಿಸುತ್ತದೆ – ಎಂಬುದು ಶ್ಲೋಕಾರ್ಥ.

ನಮ್ಮಲ್ಲಿ 'ಸಹವಾಸ ದೋಷ' ಎಂಬ ನುಡಿಗಟ್ಟಿದೆ. ಇದರ ಅರ್ಥ ಕೆಟ್ಟವರ ಸಹವಾಸ, ಗೆಳೆತನ ಮಾಡಿದರೆ, ಸಂಬಂಧ ಬೆಳೆಸಿದರೆ ಕೆಟ್ಟವನಾಗುತ್ತಾನೆ ಎಂಬುದು. ಹೆಚ್ಚಿನವರು ಹಾಳಾಗುವುದು ಈ ಸಹವಾಸದಿಂದ. ಕೆಟ್ಟವರ ಒಡನಾಟವಾದರೆ ಬಹು ಬೇಗನೆ ಕೆಟ್ಟ ಚಟಗಳನ್ನು ಕಲಿತು ಕೊಳ್ಳುತ್ತಾರೆ. ಹಾಗಾಗಿ ಹಿರಿಯರು 'ಗುಣ ನೋಡಿ ಗೆಳೆತನ ಮಾಡು' ಎನ್ನುತ್ತಾರೆ, ಎಚ್ಚರಿಸುತ್ತಾರೆ. ಕೆಟ್ಟವರ ಸಹವಾಸ ಮಾಡಿ ಕೆಡುವವರೇ ಜಾಸ್ತಿ. ಒಳ್ಳೆಯವರ ಒಡನಾಟ ಮಾಡಿ ಒಳ್ಳೆಯರಾಗುವವರ ಸಂಖ್ಯೆ ತೀರಾ ಕಡಿಮೆ. ಕೆಟ್ಟದ್ದರಲ್ಲಿರುವ ಆಕರ್ಷಣೆ. ಕೆಟ್ಟದ್ದನ್ನು ಮಾಡುವಾಗ ಸಿಗುವ ಮಜಾ ಒಳ್ಳೆಯದರಲ್ಲಿ ಸಿಗುವುದಿಲ್ಲ. ಸಿಗಬೇಕಾದರೂ ಅಂತಹ ಸಂಸ್ಕಾರ ಪಡೆದಿರಬೇಕು.

ಕೆಟ್ಟ ಹಣ್ಣಿನ ಜೊತೆಗೆ ಒಳ್ಳೆಯ ಹಣ್ಣನ್ನಿಟ್ಟರೆ ಅದೆಂದೂ ಒಳ್ಳೆಯದಾಗುವುದಿಲ್ಲ. ಅದೇ ಕೆಟ್ಟು ಹೋಗುತ್ತದೆ. ಸುವಾಸನೆಯ ಹೂವನ್ನು ಅಲ್ಪವೇ ದುರ್ವಾಸನೆ ಬರುವ ವಸ್ತುವಿನ ಜೊತೆಗಿರಿಸಿದರೆ ಸುಹಾಸನೆಯನ್ನೇ ಕೆಡಿಸುತ್ತದೆ.



ಕೆಡುವುದಕ್ಕೆ ಹೆಚ್ಚು ಬೇಕಾಗಿಲ್ಲ. ಒಳ್ಳೆಯ ಹಾಲಿಗೆ ಒಂದೆರಡು ಹುಳಿಯ ಹುಂಡು ಬಿದ್ದರೆ ಸಾಕು ಕೆಟ್ಟು ಹೋಗುತ್ತದೆ. ಒಳ್ಳೆಯ ಶುಭ್ರವಾದ ಬಟ್ಟೆಯ ಮೇಲೆ ಒಂದೆರಡು ಕಲೆ ಬಿದ್ದರೆ ಸಾಕು ಬಟ್ಟೆ ಅಂದವೇ ಮಾಯವಾಗಿ ಬಿಡುತ್ತದೆ. ಆದ್ದರಿಂದ ವ್ಯವಹರಿಸುವಾಗ ಎಚ್ಚರವಹಿಸಿದಷ್ಟು ಒಳ್ಳೆಯದು. ಅದರಲ್ಲಿಯೂ ದುಷ್ಟರ ಸಹವಾಸ ಮಾಡುವಾಗ, ಅವರೊಂದಿಗೆ ವ್ಯವಹಾರ ಮಾಡುವಾಗ ಜಾಗ್ರತೆ ವಹಿಸಿದಷ್ಟೂ ಕಡಿಮೆ.

ಅಸತ್ಪುರುಷರ, ಅವಿವೇಕಿಗಳ ಸಹವಾಸ ಅಣುವಿನಷ್ಟಾದರೂ ಮಹತ್ತಾದ ನಷ್ಟವನ್ನೇ ಉಂಟುಮಾಡುತ್ತದೆ. ಅಪಾರವಾದ ಸದ್ಗುಣವನ್ನು ನಾಶಪಡಿಸುತ್ತದೆ. ಒಮ್ಮೆ ನಾಶವಾದರೆ ಪುನಃ ತುಂಬಿಕೊಳ್ಳುವುದು ಕಷ್ಟ ಸಾಧ್ಯ.

ಹಾಲು ಅಮೃತಕ್ಕೆ ಸಮಾನ. ಮಗುವಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಈ ಪಾತ್ರೆ ತುಂಬಾ ಹಾಲಿದ್ದರೂ ಅದಕ್ಕೆ ಒಂದಿಷ್ಟು ಮೊಸರು ಬಿದ್ದರೆ ಪಾತ್ರೆಯಲ್ಲಿರುವ ಹಾಲು ಹಾಲಾಗಿ ಉಳಿಯದೆ ಮೊಸರಾಗಿ ಪರಿವರ್ತನೆ ಹೊಂದುತ್ತದೆ. ಹಾಲು ಮೊಸರಾಗಲು ಹೆಚ್ಚೇನು ಮೊಸರು ಬೇಕಿಲ್ಲ, ಸ್ವಲ್ಪವೇ ಸಾಕು. ಹಾಲಿನ ಪಾತ್ರೆಯನ್ನು ಮೊಸರಿನ ಪಾತ್ರೆಯನ್ನಾಗಿಸುತ್ತದೆ. ಹಾಲು ಮೊಸರಾಗುವುದನ್ನು ತಡೆಯಲೂ ಸಾಧ್ಯವಿಲ್ಲ, ಅದನ್ನು ಹಾಲಾಗಿ ಪರಿವರ್ತಿಸಲೂ ಸಾಧ್ಯವಿಲ್ಲ.

ಅಸತ್ಪುರುಷರ ಸಹವಾಸವು ಇದೇ ಪರಿಣಾಮವನ್ನು ಬೀರಬಲ್ಲದು. ಅವರ ಸಹವಾಸಕ್ಕೆ ಸಿಕ್ಕಿಕೊಂಡರೆ ಕಬ್ಬಿನ ಗಾಣಕ್ಕೆ ಕೈ ಕೊಟ್ಟಂತೆ. ಹಿಂದಿರುಗುವುದು ಕಷ್ಟ ಸಾಧ್ಯ. ಆದ್ದರಿಂದ ಎಚ್ಚರವಹಿಸಿ ಗೆಳೆತನಕ್ಕೆ, ಒಡನಾಟಕ್ಕೆ ಮುಂದಾಗಬೇಕು. ಬದುಕನ್ನು ಮೇಲೆತ್ತುವುದಕ್ಕೂ ಸಹವಾಸವೇ ಕಾರಣ. ಕೆಳಕ್ಕೆ ತಳ್ಳುವುದಕ್ಕೂ ಸಹವಾಸವೇ ಕಾರಣ. ತತ್ಪುರುಷರ ಸಂಗ ಮಾಡಿ ಸಜ್ಜನರಾಗೋಣ. ಅಸತ್ಪುರುಷರ ಸಹವಾಸ ಮಾಡಿ ಅವಿವೇಕಿಗಳಾಗದೆ ಇರೋಣ.

ರಾಬರ್ಟ್ ಕಾಲ್ಡ್‌ವೆಲ್‌ನಿಂದ ಜೋಸೆಫ್ ವಿಜಯ್‌ವರೆಗೆ

ಹಿಂದುಗಳನ್ನು ವಿಭಜಿಸುವ ತಂತ್ರಗಳು ತಮಿಳ್ನಾಡಿನಲ್ಲಿ ಆಳವಾಗಿ ಬೇರೂರಿವೆ. ಅದು ಬದಲಾವಣೆಯಾಗದೆ ಹಿಂದು ಏಕತೆ ಅಸಾಧ್ಯ.

ಒಳನೋಟ

• ಕೆ.ಬಾ. ಮಲ್ಯ



ಇತ್ತೀಚೆಗೆ ನಡೆದ 5 ವಿಧಾನಸಭೆಗಳ ಚುನಾವಣೆಯ ಫಲಿತಾಂಶ ಭಾರತೀಯ ರಾಜಕೀಯ ಕ್ಷೇತ್ರದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿದೆ. ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಆಗಿರುವ ಅಗಾಧ ಬದಲಾವಣೆ. ಒಂದೇ ತಿಂಗಳಲ್ಲಿ ದಿಗ್ಗಜರು, ಅಜೇಯರು ಎನಿಸಿಕೊಂಡಿದ್ದ ಮೂವರು ಮುಖ್ಯಮಂತ್ರಿಗಳು – ಕೇರಳದ ಪಿಣರಾಯಿ ವಿಜಯನ್, ತಮಿಳ್ನಾಡಿನ ಎಂ.ಕೆ. ಸ್ಟಾಲಿನ್, ಪ.ಬಂಗಾಳದ ಮಮತಾ – ಇವರ ಮಹಾಪತನದ ಜೊತೆಗೆ ಅವರ ಪಕ್ಷಗಳ ಹೀನಾಯ ಸೋಲು. ಆದರೆ ಹಿಂದುಗಳ ಮಟ್ಟಿಗೆ ದೊಡ್ಡ ಗೆಲುವು ಎಂದರೆ ಪಶ್ಚಿಮ ಬಂಗಾಳದಲ್ಲಿ ಮಮತಾ ಹಾಗೂ ಟಿ.ಎಂ.ಸಿ.ಯ ಹೀನಾಯ ಸೋಲು ಹಾಗೂ ಸುವೇಂದು ಅಧಿಕಾರಿಯವಂಥ ಮುಖ್ಯಮಂತ್ರಿ, ಅಧಿಕಾರಕ್ಕೇರಿದ್ದು. ಇನ್ನು ಪಿಣರಾಯಿ ವಿಜಯನ್ ಹಾಗೂ ಅವರ ಮಾರ್ಕ್ಸಿಸ್ಟ್ ಪಕ್ಷದ ಸೋಲು, ಕಮ್ಯೂನಿಸ್ಟ್ – ನಕ್ಸಲ್‌ಮುಕ್ತ ಭಾರತದ ಘೋಷಣೆಯನ್ನು ನಿಜಮಾಡಿ ತೋರಿಸಿದೆ. ಅಲ್ಲಿ ಭಾಜಪ ಭದ್ರವಾದ ನೆಲೆ ಕಂಡುಕೊಳ್ಳುವಲ್ಲಿ ಯಶಸ್ಸು ಕಂಡಿದೆ. ಈಗ ಕರ್ನಾಟಕದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟ ಮೇಲೆ, ಕಾಂಗ್ರೆಸ್ ಅಸ್ಥಿರತೆಯತ್ತ ಸಾಗುತ್ತಿರುವುದು ನಿಶ್ಚಿತ. ಇಂಡಿ ಕೂಟ ಛಿದ್ರವಾಗಿದೆ.

ತಮಿಳ್ನಾಡಿನ ಫಲಿತಾಂಶದ ಕುರಿತಂತೆ ಹಿಂದು ಸಮಾಜ ಆಳವಾಗಿ ಚಿಂತಿಸಬೇಕಾದ ಆವಶ್ಯಕತೆಯಿದೆ. ಸನಾತನ ಧರ್ಮ ನಾಶ ಮಾಡಲು ಹೊರಟ ಸ್ಟಾಲಿನ್, ಉದಯನಿಧಿಯ ಡಿ.ಎಂ.ಕೆ. ಪಕ್ಷವೇ ನಾಶದ ಅಂಚಿನಲ್ಲಿದೆ. ಅದು ಸಮಾಧಾನ ತಂದಿದೆ. ಆದರೆ ಜೋಸೆಫ್ ವಿಜಯ್ ಹಾಗೂ ಅವರ ಟಿ.ವಿ.ಕೆ. ಪಕ್ಷ ಅಪಾರ ಯಶಸ್ಸು ಸಾಧಿಸಿದ್ದರಿಂದ ಹಿಂದುಗಳು ಸಂತಸಪಡುವ ಅಗತ್ಯವಿಲ್ಲ. ಹಳೆಯ ಪಾಸ್ಟರ್ (ಕ್ರೈಸ್ತ ಪುರೋಹಿತ) ಹೋಗಿ ಹೊಸ ಪಾಸ್ಟರ್ ಬಂದಷ್ಟೇ ಬದಲಾವಣೆ ತಮಿಳ್ನಾಡಿನದು. ತಮಿಳ್ನಾಡಿನ ಹಿಂದುಗಳ ಸ್ವಭಾವ ವಿಚಿತ್ರವಾದದ್ದು. ಅಲ್ಲಿ ಹಿಂದುಗಳು 86%ರಷ್ಟಿದ್ದಾರೆ. ಕ್ರೈಸ್ತರು 7% ಹಾಗೂ ಮುಸಲ್ಮಾನರು 7%. ವಿಚಿತ್ರವೆಂದರೆ ಅಲ್ಲಿ ಸತತವಾಗಿ ಕ್ರೈಸ್ತ ಮುಖ್ಯಮಂತ್ರಿಗಳೇ ಅಧಿಕಾರದಲ್ಲಿದ್ದಾರೆ. ವಾಸ್ತವದಲ್ಲಿ ಅಲ್ಲಿ ನಡೆಯುತ್ತಿರುವುದು ಚರ್ಚ್ ಆಡಳಿತ. ಇದಕ್ಕೆ 200 ವರ್ಷಗಳ ಸುದೀರ್ಘ ಇತಿಹಾಸವಿದೆ.

ತಮಿಳ್ನಾಡಿನ ಪರಿಸ್ಥಿತಿ ಪ. ಬಂಗಾಳದ ಪರಿಸ್ಥಿತಿಗಿಂತ ಭಿನ್ನವಾಗಿದೆ. ಮುಸ್ಲಿಮರಲ್ಲಿನ ಕೆಲವು ಜಿಹಾದಿಗಳು ಯಾವ ಮುಲಾಜಿಲ್ಲದೆ ಹಿಂದುಗಳ ಮೇಲೆ ನೇರವಾಗಿ ದೌರ್ಜನ್ಯ ಎಸಗುವ ಸ್ವಭಾವದವರು. ಹಿಂದುಗಳು ದೌರ್ಜನ್ಯ ಅತೀವವಾದಾಗ ಒಮ್ಮೆಲೇ ಎದ್ದು ಘರ್ಜಿಸಿ ಇದಿರಾಳಿಯನ್ನು ನಾಶ ಮಾಡುತ್ತಾರೆ. ಪ. ಬಂಗಾಳದಲ್ಲಾದುದು ಇದೇ. ಆದರೆ ಕ್ರೈಸ್ತ ಮಿಷನರಿಗಳು ಬಹಳ ಹಿಂದೆಯೇ ಕ್ರುಸೇಡ್ ಮಾನಸಿಕತೆಯನ್ನು ಬಿಟ್ಟುಕೊಟ್ಟು, ಆಮಿಷ, ಸೇವೆಯ ಸೋಗಿನಲ್ಲಿ ಮೌನವಾಗಿ ಹಿಂದುಗಳ ಮಾನಸಿಕತೆಯನ್ನೇ ಬದಲಾಯಿಸುತ್ತಾರೆ. ಕಳೆದ 200 ವರ್ಷಗಳಿಂದ ಬ್ರಿಟಿಷರು, ಮಿಷನರಿಗಳು ಈ ತಂತ್ರವನ್ನು ಬಳಸಿ ಹಿಂದುಗಳನ್ನು ಮನೋದಾಸ್ಯದಲ್ಲಿ ಇಡುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದು ಸಮಾಜದೊಳಗೆ, ಜಾತಿ–ಜಾತಿಗಳೊಳಗೆ ಒಡಕು ಸೃಷ್ಟಿಸುವುದು, ಅದಕ್ಕೆ ಪೂರಕವಾದ ಭ್ರಮಾತ್ಮಕ ನರೇಟಿವ್‌ಗಳನ್ನು ಸೃಷ್ಟಿಸಿ ಹಿಟ್ಲರ್ ಅನುಯಾಯಿ ಗೊಬೆಲ್ಸ್‌ನಂತೆ ನಿರಂತರವಾಗಿ ಪ್ರಚಾರ ಮಾಡುತ್ತಲೇ ಇರುವುದು ಅವರ ತಂತ್ರ. ತಮಿಳ್ನಾಡಿನಲ್ಲಾದುದು ಇದೇ.

ನೇರ ಶಾರೀರಿಕ ಆಕ್ರಮಣವನ್ನು ಎದುರಿಸುವುದು ಹಿಂದುಗಳಿಗೆ ಕಷ್ಟವೇನೂ ಅಲ್ಲ. ಆದರೆ ಪರೋಕ್ಷವಾದ, ಮನಸ್ಸಿನ ಮೇಲಿನ ಆಕ್ರಮಣ ಎದುರಿಸುವುದು ಅಷ್ಟು ಸುಲಭವಲ್ಲ. ಪ. ಬಂಗಾಳ ಮತ್ತು ತಮಿಳ್ನಾಡಿನ ಪರಿಸ್ಥಿತಿಗಳಲ್ಲಿ ಇಂಥ ಭಿನ್ನತೆ ಇರುವುದರಿಂದಲೇ ಅಲ್ಲಿನ ಫಲಿತಾಂಶಗಳಲ್ಲೂ ಭಿನ್ನತೆ ಸಹಜ.

ಇಷ್ಟು ವಿಶಾಲ ದೇಶವನ್ನು ಹಾಗೂ ಇಲ್ಲಿನ ಅಪಾರ ಸಂಖ್ಯೆಯ ಹಿಂದುಗಳನ್ನು ದೀರ್ಘಕಾಲ ದಾಸ್ಯದಲ್ಲಿ ಇಡಲು ಸಾಧ್ಯವಿಲ್ಲವೆಂದರಿತ ಬ್ರಿಟಿಷರು ಕ್ರೈಸ್ತ ಮಿಷನರಿಗಳ ಸಹಾಯ ಪಡೆದರು. ಇಲ್ಲಿ ಹಿಂದು ಸಂಸ್ಕೃತಿ –ಸಂಪ್ರದಾಯ, ಭಕ್ತಿ, ಭಜನೆ, ದೇವರು, ವೇದ–ಪುರಾಣ ಇತ್ಯಾದಿಗಳು ಹಿಂದುಗಳ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿರುವುದರಿಂದ ಅವುಗಳನ್ನು ಕುಟಿಲೋಪಾಯದಿಂದಲೇ ನಾಶ ಮಾಡಲು ಯೋಜನೆ ರೂಪಿಸಿದರು. ಸುಮಾರು 120 ವರ್ಷಗಳ ಹಿಂದೆ ಫ್ರಾನ್ಸಿಸ್ ವೈಟ್ ಎಲ್ಲಿಸ್ ಎಂಬಾತ ಒಂದು ಪುಸ್ತಕ ಬರೆದು, ತಮಿಳು ಸಂಸ್ಕೃತಿಗೂ ಹಿಂದು ಸಂಸ್ಕೃತಿಗೂ ಸಂಬಂಧವಿಲ್ಲವೆಂಬ ನರೇಟಿವ್ ರೂಪಿಸಿದ. ಹಿಂದುಗಳು ಬ್ರಾಹ್ಮಣರು, ಆರ್ಯರು, ಉತ್ತರ ಭಾರತದವರು, ತಮಿಳರು ಸಂಪೂರ್ಣ ಭಿನ್ನವಾದ ದ್ರಾವಿಡ ಸಂಸ್ಕೃತಿಗೆ ಸೇರಿದವರು ಎಂಬ ವಾದ ಮಂಡಿಸಿದ. ತಮಿಳು ಭಾಷೆಗೂ ಸಂಸ್ಕೃತಕ್ಕೂ ಸಂಬಂಧವಿಲ್ಲವೆಂದು ವಾದಿಸಿದ. ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಆಡಳಿತವು ಸಿವಿಲ್ ಸರ್ವಿಸ್‌ನಲ್ಲಿ ಇಂಗ್ಲಿಷಿನ ಜೊತೆ ತಮಿಳನ್ನು ಸೇರಿಸಿತು. ನಂತರ ಬಂದವನೇ ರಾಬರ್ಟ್ ಕಾಲ್ಡ್‌ವೆಲ್. ಈತ ತಿರುನಲ್ವೇಲಿಗೆ ಆ್ಯಂಗ್ಲಿಕನ್ ಬಿಷಪ್ ಆಗಿಬಂದ. ಜಾತೀಯ, ಸಾಂಸ್ಕೃತಿಕ ಭಿನ್ನತೆ ಸೃಷ್ಟಿಸಿದ. ನಂತರ ಒಂದು ರಾಜಕೀಯ ವೇದಿಕೆಯನ್ನು ಸೃಷ್ಟಿಸುವ ಯೋಜನೆ ನಡೆಯಿತು. ಈ ಕಾಲ್ಡ್‌ವೆಲ್ 'ಕಂಪೇರಿಟೀವ್ ಗ್ರಾಮರ್ ಆಫ್ ದ ದ್ರಾವಿಡಿಯನ್ ಲ್ಯಾಂಗ್ವೇಜಸ್' ಎಂಬ ಗ್ರಂಥ ರಚಿಸಿ ತಮಿಳು ಹಾಗೂ ದಕ್ಷಿಣದ ದ್ರಾವಿಡಿಯನ್ ಭಾಷೆಗಳಿಗೂ ಉತ್ತರ ಭಾರತದ ಭಾಷೆ, ಸಂಸ್ಕೃತಿಗಳಿಗೂ ಸಂಬಂಧವಿಲ್ಲ ಹಾಗೂ ದ್ರಾವಿಡ ಭಾಷೆಗಳು ಸ್ವತಂತ್ರ ಭಾಷೆಗಳು ಎಂಬ ನರೇಟಿವ್ ಸೃಷ್ಟಿಸಿದ. ಬ್ರಿಟಿಷ್ ಸರಕಾರದ ಸಹಾಯವಿದ್ದುದರಿಂದ ಆಂಗ್ಲ ಶಾಲೆಗಳನ್ನು ತೆರೆದು ಇಂಗ್ಲಿಷ್ –ತಮಿಳಿಗೆ ಪ್ರಾಧಾನ್ಯತೆ ನೀಡಲು ಸುಲಭವಾಯಿತು. ಅವರಿಗೆ ತಮ್ಮ ದ್ರಾವಿಡ ಸಿದ್ಧಾಂತ, ಆರ್ಯ ಆಕ್ರಮಣ ಹಾಗೂ ಉತ್ತರ ದಕ್ಷಿಣ ಭೇದಗಳನ್ನು ಮಕ್ಕಳಲ್ಲಿ ತುಂಬುವ ಕಾರ್ಯ ಪ್ರಾರಂಭವಾಯಿತು. ಹಿಂದುಗಳೆಂದರೆ ಬ್ರಾಹ್ಮಣರು, ಉತ್ತರ ಭಾರತದವರು, ಆರ್ಯರು. ದನಗಾಹಿಗಳಾದ ಅವರು ಹೊರಗಿನಿಂದ ಅಂದರೆ ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದು ಇಲ್ಲಿನ ಮೂಲನಿವಾಸಿಗಳಾಗಿದ್ದ ದ್ರಾವಿಡರನ್ನು ಸೋಲಿಸಿ ದಕ್ಷಿಣಕ್ಕೆ ಓಡಿಸಿದರು. ಈ ಬ್ರಾಹ್ಮಣರು ನಿರಂತರವಾಗಿ ದ್ರಾವಿಡರನ್ನು ಶೋಷಣೆ ಮಾಡಿದರು ಎಂಬಿತ್ಯಾದಿ ಕಾಗಕ್ಕ–ಗೂಬಕ್ಕ ಕತೆಗಳನ್ನು ಕಟ್ಟಿ ಮಕ್ಕಳ ಮನಸ್ಸಿನಲ್ಲಿ ಬಿತ್ತಿದರು. ಇದು ಕ್ರಮೇಣ ಹಿಂದು ತಮಿಳು ಜನಾಂಗದ ಮೆದುಳಿನಲ್ಲಿ ಇಳಿದು ಭದ್ರವಾಗತೊಡಗಿತು. ಇಂದಿನ 'ದಲಿತ' ಎಂಬ ಹೊಸ ಪದ ಈ ದ್ರಾವಿಡ ಮೂಲದ್ದೆ ಆಗಿದೆ. ಇದರಿಂದಾಗಿ ಅಲ್ಲಿ ಬಹು ಸಂಖ್ಯೆಯಲ್ಲಿರುವ ಹಿಂದುಳಿದವರು 'ದಲಿತ' ಎಂಬ ಹೆಸರಿನಲ್ಲಿ ತಮಗೆ ಪ್ರತ್ಯೇಕ ದ್ರಾವಿಡ ಸ್ಥಾನ ಬೇಕು ಎಂಬ ಬೇಡಿಕೆ ಇಡಲಾರಂಭಿಸಿದರು. ಇದಕ್ಕೊಂದು ರಾಜಕೀಯ ವೇದಿಕೆ ಬೇಕಾಗಿತ್ತು. 1916ರಲ್ಲಿ ಸಿ. ನಟೇಶ್ ಮೊದಲಿಯಾರ್, ಪಿ.ಎಂ. ನಾಯರ್, ತ್ಯಾಗರಾಜ ಶೆಟ್ಟಿ ಮುಂತಾದ ಬ್ರಿಟಿಷ್ ಪರ ವ್ಯಕ್ತಿಗಳು ಸೇರಿ ಜಸ್ಟೀಸ್ ಪಾರ್ಟಿ ಸ್ಥಾಪಿಸಿದರು. ಇದು ಬ್ರಿಟಿಷರ ಪರವಾಗಿತ್ತು. ಸರಕಾರದ ಸಹಾಯದಿಂದ ಶಾಲೆಗಳನ್ನು ಪ್ರಾರಂಭಿಸಿದರು. ಗುರುಕುಲಗಳು, ಸಂಸ್ಕೃತ ಹಾಗೂ ವೇದಾಧ್ಯಯನ ಮೂಲೆಗುಂಪಾದವು. ಬ್ರಾಹ್ಮಣೇತರರಿಗೆ ಮೀಸಲಾತಿ ಬೇಕೆಂಬ ನಿರ್ಣಯ ಮಂಡಿಸಿದರು. ಹೀಗೆ ಹಿಂದು ಸಮಾಜದಲ್ಲಿ ಒಡಕು ಮೂಡಿಸುವಲ್ಲಿ ಬ್ರಿಟಿಷರು– ಮಿಷನರಿಗಳು ಯಶಸ್ವಿಯಾದರು.

ನಂತರ ಬಂದವರು ಪೆರಿಯಾರ್ ಇ. ವಿ. ರಾಮಸ್ವಾಮಿ ನಾಯ್ಕರ್. ಇವರು ಪಕ್ಕಾ ನಾಸ್ತಿಕರು. ಹಿಂದು ವಿರೋಧಿ, ಬ್ರಾಹ್ಮಣ ವಿರೋಧಿ. ನಾಟಕ, ಭಾಷಣಗಳ ಮೂಲಕ ದ್ರಾವಿಡ– ದಲಿತವಾದವನ್ನು ಗಟ್ಟಿಗೊಳಿಸಿದರು. ಇವರ ಶಿಷ್ಯ ಅಣ್ಣಾದೊರೈ ಹಾಗೂ ಕರುಣಾನಿಧಿ. ಇವರು ನಾಟಕ, ಸಿನಿಮಾ, ಭಾಷಣಗಳ ಮೂಲಕ ಹಿಂದು ವಿರೋಧ ಮುಂದುವರಿಸಿದರು. ಅದಕ್ಕಾಗಿ 1949ರಲ್ಲಿ ಡಿ.ಎಂ.ಕೆ (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷವನ್ನು ಸ್ಥಾಪಿಸಿದರು. 1967ರಲ್ಲಿ ಮೊದಲ ದ್ರಾವಿಡ ಸರಕಾರ ಅಧಿಕಾರಕ್ಕೆ ಬಂತು. 1968ರಲ್ಲಿ ಚೆನ್ನೈನ ಮರಿನಾ ಬೀಚಿನಲ್ಲಿ ರಾಬರ್ಟ್ ಕಾಲ್ಡ್‌ವೆಲ್ ಮೂರ್ತಿ ಸ್ಥಾಪಿಸಲಾಯಿತು. 2010ರಲ್ಲಿ ಆತನ ಚಿತ್ರವಿರುವ ಅಂಚೆ ಚೀಟಿ ಬಿಡುಗಡೆ ಮಾಡಲಾಯಿತು.

1996ರ ಲೋಕಸಭಾ ಚುನಾವಣೆಯಲ್ಲಿ ವಾಜಪೇಯಿ ನೇತೃತ್ವದಲ್ಲಿ ಬಿಜೆಪಿ ಅತಿ ದೊಡ್ಡ ಬಹುಮತದ ಪಕ್ಷವಾದರೂ ಸಂಖ್ಯಾ ಬಲವಿಲ್ಲದೆ 13 ದಿನದೊಳಗೆ ಪತನವಾಯಿತು. ನಂತರ ಜಯಲಲಿತಾ ತಮಿಳ್ನಾಡಿನ ಎಐಡಿಎಂಕೆ ಮುಖ್ಯಮಂತ್ರಿಯಾಗಿದ್ದಾಗ ಅವರ ಪಕ್ಷದ 27 ಸಂಸತ್ ಸದಸ್ಯರ ಬೆಂಬಲ ವಾಜಪೇಯಿಗೆ ಲಭಿಸಿ ಅವರು ಮತ್ತೆ ಪ್ರಧಾನಿಯಾದರು. ಆದರೆ ಜಯಲಲಿತಾ ತನ್ನ ಬೆಂಬಲ ಹಿಂತೆಗೆದುಕೊಂಡುದುದರಿಂದ ಒಂದೇ ಒಂದು ಓಟಿನ ಕೊರತೆಯಿಂದ ವಾಜಪೇಯಿ ಸರಕಾರ ಬಿದ್ದು ಹೋಯಿತು. ಆಗ ಕರುಣಾನಿಧಿ ಹಾಗೂ ಅವರ ಡಿಎಂಕೆ ಪಕ್ಷ ವಾಜಪೇಯಿಗೆ ಬೆಂಬಲ ನೀಡಿದ್ದರಿಂದ ವಾಜಪೇಯಿ ಮತ್ತೆ ಪ್ರಧಾನಿಯಾದರು.

ಇತ್ತೀಚೆಗೆ ಜೋಸೆಫ್ ವಿಜಯ್ ಪ್ರಧಾನಿ ಮೋದಿಯವರ ಭೇಟಿ ಮಾಡಿ ಇಂಡಿಕೂಟದಿಂದ ಹೊರಬಂದು ಲೋಕಸಭೆಯಲ್ಲಿ ಪ್ರತ್ಯೇಕ ಆಸನ ನೀಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಈಗ ತಮಿಳ್ನಾಡಿನಲ್ಲಿ ಬಿಜೆಪಿ ನೆಲೆ ಕಂಡುಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಹಿಂದುಗಳಲ್ಲಿ ವಿಶೇಷವಾಗಿ ಅಲ್ಲಿನ ದಲಿತ ಎಂದು ಕರೆಸಿಕೊಳ್ಳುವ ಹಿಂದುಳಿದವರ ಜೊತೆ ಪ್ರೀತಿಯಿಂದ ವ್ಯವಹರಿಸಿ ಅವರ ಮನೆಗೆದ್ದು ಅವರ ಮಾನಸಿಕತೆಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಅದು ತಕ್ಷಣವೇ ಆಗುತ್ತದೆ ಎಂದು ಹೇಳಲಾಗುವುದಿಲ್ಲ.

ಡಿಎಂಕೆಯವರು ರಚಿಸಿದ ಸಿನಿಮಾಗಳು, ನಾಟಕಗಳು ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿವೆ. ಜಯಲಲಿತಾ, ಎಂ.ಜಿ. ರಾಮಚಂದ್ರನ್, ಈಗ ಜೋಸೆಫ್ ವಿಜಯ್ ಎಲ್ಲರೂ ಸಿನಿಮಾ ನಟರೇ. ತಮಿಳ್ನಾಡಿನ ಜನರು ಸಿನಿಮಾ ನಟರ ಮಾತಿಗೆ ಹುಚ್ಚರಾಗಿ ಬೆಂಬಲಿಸುತ್ತಾರೆ. ಜೋಸೆಫ್ ವಿಜಯರ ಭಾರೀ ಗೆಲುವಿಗೆ ತಮಿಳರ ಈ ಮನಸ್ಥಿತಿಯೂ ಕಾರಣ. ಹಾಗಾಗಿ ಇಲ್ಲಿ ಬದಲಾವಣೆ ತರಬೇಕಾದರೆ ಬಿಜೆಪಿ ಹಾಗೂ ಹಿಂದುಗಳು ಬಹಳ ಹೋಂವರ್ಕ್ ಮಾಡಿ ಎಚ್ಚರಿಕೆಯಿಂದ ಹೆಜ್ಜೆ ಇರುವ ಅಗತ್ಯವಿದೆ. ಹಾಗೆಂದು ನಿರಾಶೆಗೆ ಅವಕಾಶವಿಲ್ಲ, ಮುಂದೊಂದು ದಿನ ಗೆಲುವು ನಿಶ್ಚಿತ.

ಹಿಂದುಗಳ ಕಡೆಗಣನೆ ಏಕೆ?

ಭಟ್ಕಳ ತಾಲೂಕಿನ ವೆಂಕಟಾಪುರ ಪ್ರದೇಶದಲ್ಲಿ ಹಿಂದುಗಳ ಧಾರ್ಮಿಕ ನಂಬಿಕೆಗೆ ಸಂಬಂಧ ಪಟ್ಟ 'ಮುರಿಕಟ್ಟೆ'ಯನ್ನು ರಸ್ತೆ ಅಗಲೀಕರಣ ಸಂದರ್ಭ ತೆರವುಗೊಳಿಸಲಾಗಿತ್ತು. ಈಗ ರಸ್ತೆಗೆ ಬಾಧಕವಾಗದ ರೀತಿಯಲ್ಲಿ ಇನ್ನೊಂದು ಸ್ಥಳದಲ್ಲಿ ಕಟ್ಟೆಯನ್ನು ಪುನರ್ ನಿರ್ಮಾಣ ಮಾಡಲು ಹೋದ ಹಿಂದೂ ಪ್ರಮುಖರನ್ನು ಪೊಲೀಸರು ವಶಕ್ಕೆ ಪಡೆದು ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇದು ಏನನ್ನು ಸೂಚಿಸುತ್ತದೆ. ನಮ್ಮ ದೇಶದಲ್ಲೇ ನಮಗೆ ನಮ್ಮ ಧರ್ಮಾನುಸಾರ ನಡೆಯುವ ಅವಕಾಶವಿಲ್ಲವೆಂದೆ? ಪೊಲೀಸರೇನು ಅವರಷ್ಟಕ್ಕೇ ಈ ನಿರ್ಧಾರ ತೆಗೆದುಕೊಂಡಿರಲಾರರು. ಸರಕಾರದ ಕಡೆಯಿಂದ ಅದಕ್ಕೆ ಸೂಕ್ತ ಆದೇಶ ಬಂದಿರಲೇ ಬೇಕಲ್ಲವೆ? ಹಾಗಿದ್ದರೆ, ಸರಕಾರವು ಎಲ್ಲರನ್ನು ಸಮಾನವಾಗಿ ನೋಡುವುದನ್ನು ಬಿಟ್ಟು ಕೆಲವರ ಹಿತಾಸಕ್ತಿಯನ್ನಷ್ಟೇ ಕಾಯುತ್ತಿದೆ ಎಂದರ್ಥವೆ? ಧಾರ್ಮಿಕ ಸ್ವಾತಂತ್ರ್ಯ ಹಿಂದುಗಳಿಗೂ ಇಲ್ಲವೆ? ಅಭಿವೃದ್ಧಿ ದೃಷ್ಟಿಯಿಂದ ಈ ಹಿಂದೆ ಇದ್ದ ಸ್ಥಳವನ್ನು ಬಿಟ್ಟುಕೊಟ್ಟದ್ದೇ ದಡ್ಡತನವಾಯಿತೆ ? ಹಿಂದುಗಳೆಂದೂ ಸಂಕುಚಿತ ಭಾವದಿಂದ ಯೋಚಿಸುವುದಿಲ್ಲ. ದೇಶದ ಅಭಿವೃದ್ಧಿಯ ವಿಷಯದಲ್ಲಿ ಸಹಕಾರ ನೀಡುತ್ತಾರೆ.

ಇಂದು, ಭಟ್ಕಳ ಅಂದಕೂಡಲೇ ಅದು ಮುಸ್ಲಿಮರದ್ದು ಅಂದುಕೊಂಡವರೂ ಇದ್ದಾರೆ. ಆದರೆ ಅಲ್ಲಿ ಹಿಂದುಗಳೂ ಸಾಕಷ್ಟು ಪ್ರಮಾಣದಲ್ಲಿದ್ದಾರೆ ಎಂಬುದನ್ನು ಮರೆಯಲಾಗದು ಮತ್ತು ಮರೆಯಬಾರದು. ಈ ಹಿಂದೆಯೂ, ಭಟ್ಕಳದಲ್ಲಿ ಹಿಂದುಗಳ ಮೇಲೆ ಮಾರಣಾಂತಿಕ ಹಲ್ಲೆಗಳೂ ನಡೆದಿವೆ. ಇದಕ್ಕೆಲ್ಲ ಕಾರಣ ಅವರಿಗೆ ಸರಕಾರದಿಂದ ಸಿಗುತ್ತಿರುವ ಬೆಂಬಲ. ಈಗಷ್ಟೇ ರಾಜ್ಯ ಸರಕಾರ ಮುಸ್ಲಿಮರ ಮೇಲಿನ ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆದ ಬೆಳವಣಿಗೆಯೂ ನಡೆದಿದೆ. ಕಾಂಗ್ರೆಸ್ ಆಳ್ವಿಕೆಯಿರುವಲ್ಲೆಲ್ಲ ಈ ರೀತಿ ಅಲ್ಪಸಂಖ್ಯಾತ ಓಲೈಕೆ ನಡೆಯುತ್ತಿರುವುದೇಕೆ? ಹಿಂದುಗಳನ್ನೇಕೆ ಕಡೆಗಣಿಸಲಾಗುತ್ತಿದೆ?

-ಶಂಕರನಾರಾಯಣ ಭಟ್, ಮಾಡಗೇರಿ

ಪತ್ರ ಮಿತ್ರ

ಮಾವು ಆಮದಿಗೆ ನಿಷೇಧ

ಜಪಾನ್ ಭಾರತದಿಂದ ಮಾವುಗಳ ಆಮದಿಗೆ ನಿಷೇಧ ಹೇರಿರುವ ಬಗ್ಗೆ ವರದಿಯಾಗಿದೆ. ಅದಕ್ಕೆ ಕಾರಣ ಭಾರತದಲ್ಲಿ ಮಾವುಗಳ ಶೇಖರಣೆಯಲ್ಲಿ ಮತ್ತು ಮಾವುಗಳು ಹಣ್ಣಾಗುವಂತೆ ಮಾಡುವಲ್ಲಿ ಸರಿಯಾದ ನಿಯಮ ಪಾಲಿಸದಿರುವುದು. ಆಮದಿಗೆ ತಯಾರಾದ ಮಾವುಗಳನ್ನು ದಾಸ್ತಾನು ಮಾಡುವಲ್ಲಿ ದೊಡ್ಡ ಪ್ರಮಾಣದಲ್ಲಿ ನೊಣ ಹಾಗೂ ಕೀಟಗಳ ಹಾವಳಿಯಿರುವುದು ಕೂಡಾ ಜಪಾನೀಯರ ಅಸಮಾಧಾನಕ್ಕೆ ಕಾರಣವಾಗಿದೆಯಂತೆ. ಜಪಾನಿನ ತಪಾಸಕರು ಭಾರತದಲ್ಲಿ ಇಂತಹ ಗೋದಾಮುಗಳಿಗೆ ಭೇಟಿ ನೀಡಿ ಮಾವಿನ ಹಣ್ಣಿನ ಸಂಸ್ಕರಣೆಯಲ್ಲಿ ನಿಯಮ ಪಾಲಿಸದಿರುವುದು, ಅತಿಯಾದ ಪ್ರಮಾಣದಲ್ಲಿ ಕೀಟ ನಾಶಕ ಬಳಸುತ್ತಿರುವುದನ್ನು ಕಂಡುಕೊಂಡ ಬಳಿಕ ಈ ವರ್ಷ ಮಾವು ಆಮದು ಮಾಡದಿರಲು ನಿರ್ಧರಿಸಿದ್ದಾರೆ. ಅತ್ತ ಅಮೆರಿಕದಲ್ಲಿ ಕೂಡಾ ಭಾರತದಿಂದ ಬರುವ ಮಾವಿನ ಹಣ್ಣುಗಳನ್ನು ಖರೀದಿಸಲು ಕೆಲವರು ಹಿಂದೇಟು ಹಾಕುವ ಪ್ರಸಂಗಗಳು ವರದಿಯಾಗುತ್ತಿವೆ.

ಈಗಾಗಲೆ ಭಾರತದಲ್ಲಿ ಹಣ್ಣುಗಳು ಬೇಗ ಕಳಿಯುವಂತೆ ಮಾಡಲು ರಾಸಾಯನಿಕಗಳನ್ನು ಬಳಸುವ ಕುರಿತಂತೆ, ದೊಡ್ಡ ಪ್ರಮಾಣದಲ್ಲಿ ಕೀಟನಾಶಕಗಳನ್ನು ಬಳಸುವ ಕುರಿತಂತೆ ಆರೋಪಗಳಿವೆ. ನಮಗೆ ನೈಸರ್ಗಿಕವಾಗಿ ಮಾಗಿದ ಹಣ್ಣುಗಳು ಸಿಗುವುದೇ ಅಪರೂಪ ಎಂಬಂತಾಗಿದೆ. ನಮ್ಮ ಸರಕಾರಗಳು ಕೂಡಾ ಹಣ್ಣುಗಳನ್ನು ಕೃತಕವಾಗಿ ಮಾಗಿಸುವುದರ ವಿರುದ್ಧ, ರಾಸಾಯನಿಕ ಬಳಸುವುದರ ವಿರುದ್ಧ ಕ್ರಮ ಕೈಗೊಳ್ಳಬೇಕು.

-ಚಿದಂಬರ ರಾವ್, ಕುಂದಾಪುರ

ರೈತರಿಗೆ ಅನ್ಯಾಯ

ಬೆಂಗಳೂರಿನ ಸುತ್ತಮುತ್ತಲಿನ ಹಸಿರು ವಲಯವನ್ನು ನುಂಗಿ ಹಾಕಲು ಹೊರಟಿರುವ ಬೃಹತ್ ಉಪನಗರ ಯೋಜನೆಗಳು ಕೇವಲ ಅಧಿಕೃತ ರಿಯಲ್ ಎಸ್ಟೇಟ್ ದಂಧೆಯಾಗಿ ಮಾರ್ಪಟ್ಟಿದೆ ಎಂಬುದು ಜನಜನಿತ. ಕೃಷಿ ಪ್ರಧಾನ ವಲಯವಾಗಿರುವ ಬಿಡದಿಯ ತೆಂಗು, ಹಿಪ್ಪುನೇರಳೆ ಬೆಳೆಯುವ ಫಲವತ್ತಾದ 8000 ಕ್ಕೂ ಹೆಚ್ಚು ಎಕರೆ ನೀರಾವರಿ ಭೂಮಿಯನ್ನು ಬಲವಂತವಾಗಿ ಕಸಿದುಕೊಳ್ಳುತ್ತಿರುವುದು ಅತ್ಯಂತ ಕ್ರೂರ ಹಾಗೂ ಅಮಾನವೀಯ ಕ್ರಮ. ರೈತರ ಜಮೀನಿಗೆ ಕೇವಲ ತಲಾ 2 ಕೋಟಿ ರೂಪಾಯಿ ನಿಗದಿಪಡಿಸಿ, ಖಾಸಗಿ ಹಿತಾಸಕ್ತಿಗಳ ಜಾಗಕ್ಕೆ ಬರೋಬ್ಬರಿ 14 ಕೋಟಿ ರೂಪಾಯಿ ಬೆಲೆ ಕಟ್ಟುವುದು ಸರ್ಕಾರದ ಪರಮ ವಂಚನೆ ಮತ್ತು ಹಗಲು ದರೋಡೆ. ಶೇಕಡಾ 80ರಷ್ಟು ರೈತರು ಸಮ್ಮತಿಸಿದ್ದಾರೆ ಎಂದು ಆಡಳಿತಶಾಹಿ ಸುಳ್ಳು ಹೇಳುತ್ತಿದೆ. ಸೈಟುಗಳ ಮಾರಾಟ ಮತ್ತು ತೆರಿಗೆಯ ಮೂಲಕ ಬಡ ಅನ್ನದಾತರನ್ನು ಬೀದಿಗೆ ತಳ್ಳಿ 40,000 ಕೋಟಿ ರೂಪಾಯಿಗೂ ಅಧಿಕ ಹಣ ಲೂಟಿ ಮಾಡಲು ಹೊರಟಿರುವ ಈ ಜನವಿರೋಧಿ ಯೋಜನೆ ತಕ್ಷಣ ನಿಲ್ಲಿಸಬೇಕಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಈ ದಲ್ಲಾಳಿ ಆಡಳಿತ ಖಂಡನೀಯ.

-ಡಾ. ವಿಜಯಕುಮಾರ್, ರಾಯಚೂರು

ಹಳಿಯೇರಬಹುದೆ ?

ಮಲೆನಾಡು–ಕರಾವಳಿಯನ್ನು ಬೆಸೆಯುವ ಹಾಗೂ ಪಶ್ಚಿಮಘಟ್ಟವನ್ನು ಸೀಳಿ ಹಾದುಹೋಗುವ ಶಿವಮೊಗ್ಗ– ಶೃಂಗೇರಿ– ಮಂಗಳೂರು ರೈಲುಮಾರ್ಗ ನಿರ್ಮಿಸುವ ಬೃಹತ್ ಯೋಜನೆ ಡಿಪಿಆರ್ ಸಲ್ಲಿಸುವ ಹಂತದಲ್ಲಿದ್ದು, ಈ ಭಾಗದ ಜನರ ದಶಕಗಳ ಕನಸು ನನಸಾಗುವ ಸಾಧ್ಯತೆ ಕಾಣುತ್ತಿದೆ. ಆದರೆ, ಕರಾವಳಿಯನ್ನು ಕರ್ನಾಟಕದ ಉತ್ತರ ಹಿನ್ನಾಡಿಗೆ ಸೇರಿಸುವ, ಪಶ್ಚಿಮಘಟ್ಟದಲ್ಲಿ ಹಾದುಹೋಗುವ 162 ಕಿಮೀ ಉದ್ದದ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗೆ 1998ರಲ್ಲಿ ಅಂದಿನ ಪ್ರಧಾನಿ ವಾಜಪೇಯಿಯವರು ಅಡಿಗಲ್ಲು ಹಾಕಿದ್ದರು. ಅದಕ್ಕೆ ಈಗಾಗಲೇ ಸುಮಾರು 400 ಕೋಟಿ ವ್ಯಯವಾಗಿದ್ದರೂ ಪರಿಸರ ಸಂಬಂಧಿ ವಿರೋಧದಿಂದ ಹಳಿತಪ್ಪಿ ಆಡಳಿತಾತ್ಮಕ ಅನುಮತಿ ಮತ್ತು ಅನುದಾನಕ್ಕೆ ಕಾಯುತ್ತಿದೆ. ಹಾಗಿರುವಾಗ ಪ್ರಸ್ತಾವಿತ ಶಿವಮೊಗ್ಗ–ಮಂಗಳೂರು ಯೋಜನೆಯೂ ಅದೇ ಹಾದಿಯನ್ನು ಹಿಡಿಯುವ ಸಾಧ್ಯತೆ ಇದೆ. ಪರಿಸರವಾದಿಗಳು ಇಲ್ಲೂ ರೆಡ್ ಸಿಗ್ನಲ್ ತೋರಿಸುವುದನ್ನು ಅಲ್ಲಗಳೆಯಲಾಗದು.

ಮಲೆನಾಡನ್ನು ಕರಾವಳಿಗೆ ಸೇರಿಸುವ ಇನ್ನೊಂದು ರೈಲು ಯೋಜನೆ ತಾಳಗುಪ್ಪ –ಹೊನ್ನಾವರ ಮಾರ್ಗ ಕೂಡಾ ಪರಿಸರ ಸಂಬಂಧಿ ಕಾರಣದಿಂದ ದಶಕಗಳಿಂದ ಹಳಿ ಏರಲು ಕಾಯುತ್ತಿದೆ. ಹಾಗಾಗಿ ಶಿವಮೊಗ್ಗ– ಮಂಗಳೂರು ರೈಲು ಯೋಜನೆ ಶ್ಲಾಘನೀಯವಾದರೂ ಅದು ಅನುಷ್ಠಾನಗೊಳ್ಳುವುದು ಸಂದೇಹ ಅನಿಸುತ್ತದೆ.

-ರಮಾನಂದ ಎಸ್, ಬೆಂಗಳೂರು

ಯುವಜನರ ಆತಂಕಗಳ ಬಗ್ಗೆ ಕೇಂದ್ರ ಕಾಳಜಿ

ನೀಟ್ ಪರೀಕ್ಷೆ: ಮೋದಿ ಖುದ್ದು ಮೇಲ್ವಿಚಾರಣೆ

ಹೊಸದಿಲ್ಲಿ: ಕೇಂದ್ರ ಸರ್ಕಾರ ಯುವಜನರ ಆತಂಕಗಳ ಬಗ್ಗೆ ಗಂಭೀರವಾಗಿ ಕಾಳಜಿ ವಹಿಸುತ್ತಿದೆ. ಯಾವುದೇ ಲೋಪವಾಗದಂತೆ ನೋಡಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ವೈಯಕ್ತಿಕವಾಗಿ ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಕೇಂದ್ರ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಸುಪ್ರೀಂ ಕೋರ್ಟ್ ಪೀಠಕ್ಕೆ ತಿಳಿಸಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರನ್ನೊಳಗೊಂಡ ಪೀಠ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದೆ. ಇದೇವೇಳೆ ನಾವು ನಮ್ಮ ಯುವಕರನ್ನು ನಿರಾಶೆಗೊಳಿಸಬಾರದು. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಅವರ ಕುಟುಂಬಗಳ ಮೇಲೂ ಇದು ನಕರಾತ್ಮಕವಾಗಿ ಪರಿಣಮಿಸುತ್ತದೆ ಎಂದು ಪೀಠ ಕಳವಳ ವ್ಯಕ್ತಪಡಿಸಿದೆ. ಇದಕ್ಕೆ ಕೇಂದ್ರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಯುವಜನರ ಕಾಳಜಿಯ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವೈಯಕ್ತಿಕವಾಗಿ ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಅಂತೆಯೇ ಜೂ.21ಕ್ಕೆ ನಿಗದಿಪಡಿಸಲಾದ ನೀಟ್-ಯುಜಿ ಮರು ಪರೀಕ್ಷೆಗೆ ಕೆಲವು ಹೊಸ ಕಾರ್ಯವಿಧಾನಗಳನ್ನು ಜಾರಿಗೆ ತರಲಾಗಿದೆ ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

ಪುನರಾವರ್ತಿತ ಲೋಪ ಸಲ್ಲ: ವಿಚಾರಣೆ ವೇಳೆ ಪೀಠವು ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣವಾದ ಲೋಪಗಳ ಹೊಣೆಗಾರಿಕೆಯನ್ನು ಪ್ರಶ್ನಿಸಿದ್ದು, ಉನ್ನತ ಮಟ್ಟದ ಸಮಿತಿ ಇದ್ದರೂ ಈ ರೀತಿ ಅವ್ಯವಸ್ಥೆ ಸಂಭವಿಸಿದೆ ಎಂದರೇ ಮೂಲ ಶಿಫಾರಸ್ಸಿನಲ್ಲೇ ಏನೋ ತಪ್ಪಿದೆ ಎಂದೇ ಅರ್ಥ ಎಂದು ಹೇಳಿದೆ. ಅಂತೆಯೇ ದೊಡ್ಡ ಪ್ರಮಾಣದ ಪರೀಕ್ಷೆಗಳನ್ನು ನಡೆಸುವಲ್ಲಿ ಪುನರಾವರ್ತಿತ ವೈಫಲ್ಯಗಳಿಗಾಗಿ ನ್ಯಾಯಾಲಯವು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿತು. ಇದರಲ್ಲಿ ಭಾಗಿಯಾಗಿರುವ ಯಾವುದೇ ಅಧಿಕಾರಿಗಳು ಅಥವಾ ಮಧ್ಯವರ್ತಿಗಳು ಸೇರಿದಂತೆ ತಪ್ಪಿತಸ್ಥರೆಂದು ಕಂಡುಬಂದವರನ್ನು ಬಿಡಬಾರದು ಎಂದು ಪೀಠ ಎಚ್ಚರಿಸಿದೆ.

ಟಿಇಟಿಯಲ್ಲಿ ಉತ್ತೀರ್ಣಕ್ಕೆ ಅವಧಿ ವಿಸ್ತರಿಸಿದ ಕೋರ್ಟ್

ಸೇವೆಯಲ್ಲಿರುವ ಶಿಕ್ಷಕರಿಗೆ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ(ಟಿಇಟಿ) ಉತ್ತೀರ್ಣರಾಗುವುದು ಕಡ್ಡಾಯವಾಗಿದೆ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ. ಸೇವೆಯಲ್ಲಿ ಉಳಿಯಲು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು 2028 ಆಗಸ್ಟ್ 31ವರೆಗೆ ಸಮಯವನ್ನು ವಿಸ್ತರಿಸಿದೆ. ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ಮನಮೋಹನ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು ಅಂಜುಮಾನ್ ಇಶಾತ್-ಎ-ತಲೀಮ್ ಟ್ರಸ್ಟ್ ಪ್ರಕರಣದಲ್ಲಿ ನ್ಯಾಯಾಲಯದ ಹಿಂದಿನ ತೀರ್ಪನ್ನು ಪ್ರಶ್ನಿಸಿ ಹಲವಾರು ರಾಜ್ಯ ಸರ್ಕಾರಗಳು, ಶಿಕ್ಷಕರ ಸಂಘಗಳು ಮತ್ತು ವೈಯಕ್ತಿಕ ಶಿಕ್ಷಕರು ಸಲ್ಲಿಸಿದ್ದ 65ಕ್ಕೂ ಹೆಚ್ಚು ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಿದೆ.

ದುರ್ಗಾ ಮಂದಿರದ ಮೇಲೆ ಧ್ವಜಾರೋಹಣ

ಅಯೋಧ್ಯೆ: ಸರಿಯೂ ನದಿಯೂ ನೀರು ಕರಸೇವಕರ ರಕ್ತದಿಂದ ಕೆಂಪಾಗಿದೆ. ಸಾವಿರಾರು ತಾಯಂದಿರು ತಮ್ಮ ಲಕ್ಷಾಂತರ ಮಕ್ಕಳನ್ನು ರಾಮ ಜನ್ಮಭೂಮಿ ಆಂದೋಲನದಲ್ಲಿ ಸಮರ್ಪಣೆ ಮಾಡಿದರ ಫಲವಾಗಿ ಇಂದು ಭವ್ಯ ಮಂದಿರ ನಿರ್ಮಾಣವಾಗಿದೆ ಎಂದು ಸಾಧ್ವಿ ರಿತಂಬರ ಹೇಳಿದ್ದಾರೆ.



ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿರುವ ದುರ್ಗಾ ಮಂದಿರದ ಮೇಲೆ ಶುಕ್ರವಾರ ಸಂಜೆ ಸಾಧ್ವಿ ನಿರಂಜನ ಜ್ಯೋತಿ ಹಾಗೂ ಸಾಧ್ವಿ ರಿತಂಬರ ಧ್ವಜಾರೋಹಣ ನೆರವೇರಿಸಿದ್ದಾರೆ.

ಈ ವೇಳೆ ಮಾತನಾಡಿದ ಸಾಧ್ವಿ ರಿತಂಬರ ಅವರು, ನಾವು ನದಿ,ಗೋವು, ಪರಿಸರವನ್ನು ತಾಯಿ ಎಂದು ಕರೆಯುತ್ತೇವೆ ಅದಕ್ಕೆ ಗೌರವ ಕೊಡುವುದನ್ನು ಕಲಿಯಬೇಕು. ದೇಶದಲ್ಲಿ ಗೋವು ಹತ್ಯೆ ನಿಲ್ಲಬೇಕು ಹಾಗೂ ಲವ್ ಜಿಹಾದ್ ನಂತಹ ಕೃತ್ಯಗಳಿಗೆ ಕಡಿವಾಣ ಹಾಕಬೇಕು ಎಂದರು.

ತಮ್ಮ ಭಾಷಣದುದ್ದಕ್ಕೂ ಶ್ರೀ ರಾಮ ಜನ್ಮಭೂಮಿ ಆಂದೋಲನದಲ್ಲಿ ಮಹತ್ತರ ಪಾತ್ರ ವಹಿಸಿದ ಅಶೋಕ್ ಸಿಂಘಲ್, ಪರಮಹಂಸ ಮಹಾರಾಜ್, ಯುಗಪುರುಷ ಮಹಾರಾಜ್ ಹೀಗೆ ಅನೇಕರ ಹೆಸರನ್ನು ಪ್ರಸ್ತಾಪಿಸಿದ ಸಾಧ್ವಿ ನಿರಂಜನ ಜ್ಯೋತಿ ನಾನು ಇಲ್ಲಿ ಸಾಮಾನ್ಯ ಹಿಂದೂ ಕಾರ್ಯಕರ್ತೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದರು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂಪತರಾಯ್, ಟ್ರಸ್ಟಿಗಳಾದ ಅನಿಲ ಮಿಶ್ರಾ, ಕೃಷ್ಣ ಮೋಹನ್ ,ಮಹಂತ ದಿನೇಂದ್ರ ದಾಸ ಮಹಾರಾಜ್, ಗೋಪಾಲ ಜಿ, ಹಾಗೂ ದುರ್ಗಾವಾಹಿನಿಯ ಕಾರ್ಯಕರ್ತೆಯರು ಸೇರಿದಂತೆ 4000 ಕ್ಕೂ ಮಹಿಳೆಯರು ಈ ಕಾರ್ಯಕ್ರಮ ಉಪಸ್ಥಿತರಿದ್ದರು.

ಅಯ್ಯೋ ಅಬ್ರಹಾಂ ಒಪ್ಪಂದ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಮಧ್ಯಪ್ರಾಚ್ಯ ರಾಜತಾಂತ್ರಿಕತೆಯನ್ನು ಚುರುಕುಗೊಳಿಸುವ ಪ್ರಯತ್ನ ಆರಂಭಿಸಿದ್ದು, ಪಾಕಿಸ್ತಾನ ಸೇರಿದಂತೆ ಹಲವು ಮುಸ್ಲಿಂ ರಾಷ್ಟ್ರಗಳು ಅಬ್ರಹಾಂ ಒಪ್ಪಂದಕ್ಕೆ ಸೇರ್ಪಡೆಯಾಗಬೇಕೆಂದು ಕರೆ ನೀಡಿದ್ದಾರೆ. ಆದರೆ ಈ ಪ್ರಸ್ತಾಪ ಪಾಕಿಸ್ತಾನವನ್ನು ಅಪರೂಪದ ರಾಜತಾಂತ್ರಿಕ ದ್ವಂದ್ವಕ್ಕೆ ತಳ್ಳಿದೆ. ಕಾರಣ, ಇಸ್ರೇಲ್ ಜತೆಗೆ ಸಂಬಂಧ ಸಾಮಾನ್ಯೀಕರಿಸುವ ಯಾವುದೇ ನಿರ್ಧಾರವು ಕೇವಲ ವಿದೇಶಾಂಗ ನೀತಿಗೆ ಸೀಮಿತವಾಗದೇ ದೇಶದ ಪಾಸ್‌ಪೋರ್ಟ್, ಕಾನೂನು ಮತ್ತು ಸಾಂಪ್ರದಾಯಿಕ ರಾಜಕೀಯ ನಿಲುವಿನ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ.





ಇಸ್ರೇಲ್ ಜತೆ ಸ್ನೇಹಕ್ಕೆ ಟ್ರಂಪ್ ಒತ್ತಡ

ಪಾಕಿಸ್ತಾನಕ್ಕೆ ನುಂಗಲಾರದ ತುತ್ತು

ಸುದ್ದಿ ಸಮಗ್ರ

ಅಬ್ರಹಾಂ ಒಪ್ಪಂದ ಎಂದರೇನು?

2020ರಲ್ಲಿ ಅಮೆರಿಕದ ಮಧ್ಯಸ್ಥಿಕೆಯಲ್ಲಿ ರೂಪುಗೊಂಡ ಒಪ್ಪಂದಗಳ ಸರಣಿಯೇ ಅಬ್ರಹಾಂ ಒಪ್ಪಂದ. ಇದರ ಉದ್ದೇಶ ಇಸ್ರೇಲ್ ಮತ್ತು ಹಲವು ಅರಬ್ ಅಥವಾ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ, ಆರ್ಥಿಕ ಹಾಗೂ ಭದ್ರತಾ ಸಂಬಂಧಗಳನ್ನು ಸಾಮಾನ್ಯೀಕರಿಸುವುದು. ಈ ಒಪ್ಪಂದಕ್ಕೆ ಯೆಹೂದಿ, ಕ್ರೈಸ್ತ ಮತ್ತು ಇಸ್ಲಾಂಗಳ ಸಾಮಾನ್ಯ ಪೂರ್ವಜ ಎಂದು ಪರಿಗಣಿಸಲ್ಪಡುವ ಅಬ್ರಹಾಂ ಹೆಸರನ್ನು ನೀಡಲಾಗಿದೆ.

ಟ್ರಂಪ್‌ಗೆ ಈಗ ಏಕೆ ಮುಖ್ಯ?

ಇರಾನ್ ಜತೆ ನಡೆಯುತ್ತಿರುವ ಶಾಂತಿ ಮಾತುಕತೆಗಳಿಗೆ ಪೂರಕವಾಗಿ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಸ್ವೀಕಾರಾರ್ಹತೆಯನ್ನು ಹೆಚ್ಚಿಸಲು ಟ್ರಂಪ್ ಪ್ರಯತ್ನಿಸುತ್ತಿದ್ದಾರೆ. ಹೊಸ ದೇಶಗಳು ಅಬ್ರಹಾಂ ಒಪ್ಪಂದಕ್ಕೆ ಸೇರಿದರೆ ಅದು ಪ್ರಾದೇಶಿಕ ಸ್ಥಿರತೆಗೆ ಸಹಕಾರಿ ಎಂದು ಅವರು ವಾದಿಸಿದ್ದಾರೆ. ವಿಶೇಷವಾಗಿ ಸೌದಿ ಅರೇಬಿಯಾ ಸೇರ್ಪಡೆಯಾದರೆ ಅದು ದೊಡ್ಡ ರಾಜತಾಂತ್ರಿಕ ಯಶಸ್ಸಾಗಲಿದೆ ಎಂದು ಅಮೆರಿಕದ ವಲಯಗಳು ಪರಿಗಣಿಸುತ್ತಿವೆ.

ಈ ಒಪ್ಪಂದದಿಂದ ಏನು ಲಾಭ?

ಅಬ್ರಹಾಂ ಒಪ್ಪಂದದ ಬಳಿಕ ಇಸ್ರೇಲ್ ಮತ್ತು ಸಹಿ ಹಾಕಿದ ರಾಷ್ಟ್ರಗಳ ನಡುವೆ ನೇರ ವಿಮಾನ ಸೇವೆಗಳು ಆರಂಭವಾದವು. ವ್ಯಾಪಾರ ಹಾಗೂ ಹೂಡಿಕೆ ಹೆಚ್ಚಾಯಿತು. ತಂತ್ರಜ್ಞಾನ, ರಕ್ಷಣಾ ಹಾಗೂ ಗುಪ್ತಚರ ಸಹಕಾರ ವಿಸ್ತರಿಸಿತು. ಪ್ರವಾಸೋದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ಸೃಷ್ಟಿಯಾದವು. ಮಧ್ಯಪ್ರಾಚ್ಯದಲ್ಲಿ ಇರಾನ್ ಪ್ರಭಾವಕ್ಕೆ ಪ್ರತಿರೋಧವಾಗಿ ಹೊಸ ಸಹಕಾರದ ವೇದಿಕೆಯೂ ರೂಪುಗೊಂಡಿತು.

ಪಾಕ್ ಪಾಸ್ ಪೋರ್ಟ್ ಬದಲಾಗಬೇಕೇ?

ಪ್ರಸ್ತುತ ಪಾಕಿಸ್ತಾನದ ಪಾಸ್‌ಪೋರ್ಟ್‌ನಲ್ಲಿ ಇಸ್ರೇಲ್ ಹೊರತುಪಡಿಸಿ ವಿಶ್ವದ ಎಲ್ಲ ರಾಷ್ಟ್ರಗಳಿಗೆ ಮಾನ್ಯ ಎಂಬ ಉಲ್ಲೇಖವಿದೆ. ಹೀಗಾಗಿ ಒಂದು ವೇಳೆ ಇಸ್ರೇಲ್‌ಗೆ ಅಧಿಕೃತ ಮಾನ್ಯತೆ ನೀಡಿದರೆ ಈ ನಿರ್ಬಂಧವನ್ನು ತೆಗೆದುಹಾಕುವುದು ಅನಿವಾರ್ಯವಾಗಲಿದೆ. ಪರಿಣಾಮವಾಗಿ ಹೊಸ ಪಾಸ್ ಪೋರ್ಟ್ ಮುದ್ರಣ, ವಲಸೆ ನಿಯಮಗಳ ಪರಿಷ್ಕರಣೆ ಹಾಗೂ ಕೆಲವು ಕಾನೂನು ತಿದ್ದುಪಡಿಗಳ ಅಗತ್ಯವೂ ಎದುರಾಗಬಹುದು.

ಪಾಕಿಸ್ತಾನ ಏಕೆ ವಿರೋಧಿಸುತ್ತಿದೆ?

ಪಾಕಿಸ್ತಾನವು ತನ್ನ ಸ್ಥಾಪನೆಯಿಂದಲೂ ಇಸ್ರೇಲ್ ಅನ್ನು ಅಧಿಕೃತವಾಗಿ ಮಾನ್ಯತೆ ನೀಡಿಲ್ಲ. ಪ್ಯಾಲೆಸ್ತೀನ್‌ಗೆ ಸ್ವತಂತ್ರ ರಾಷ್ಟ್ರದ ಮಾನ್ಯತೆ ದೊರೆಯುವವರೆಗೆ ಇಸ್ರೇಲ್ ಜತೆ ಸಂಬಂಧ ಸ್ಥಾಪಿಸುವ ಪ್ರಶ್ನೆಯೇ ಇಲ್ಲ ಎಂಬುದು ಅದರ ಸಾಂಪ್ರದಾಯಿಕ ನಿಲುವು. ಗಾಜಾ ಯುದ್ಧದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜನಾಭಿಪ್ರಾಯವೂ ಇಸ್ರೇಲ್ ವಿರುದ್ಧ ತೀವ್ರವಾಗಿದೆ. ಹೀಗಾಗಿ ಅಬ್ರಹಾಂ ಒಪ್ಪಂದಕ್ಕೆ ಸೇರ್ಪಡೆಯಾಗುವ ಯಾವುದೇ ನಿರ್ಧಾರ ದೇಶೀಯ ರಾಜಕೀಯವಾಗಿ ದೊಡ್ಡ ಪ್ರತಿಕ್ರಿಯೆ ಹುಟ್ಟುಹಾಕುವ ಸಾಧ್ಯತೆಯಿದೆ.

ಅರಬ್ ಮತ್ತು ಇಸ್ರೇಲ್

1979ರಲ್ಲಿ ಈಜಿಪ್ಟ್ ಹಾಗೂ 1994ರಲ್ಲಿ ಜೋರ್ಡನ್ ಇಸ್ರೇಲ್ ಜತೆ ಶಾಂತಿ ಒಪ್ಪಂದ ಮಾಡಿಕೊಂಡ ಬಳಿಕ, ಅರಬ್ ಜಗತ್ತಿನಲ್ಲಿ ಇಸ್ರೇಲ್ ಜತೆ ಸಂಬಂಧ ಸಾಮಾನ್ಯೀಕರಣದ ಅತಿದೊಡ್ಡ ಹೆಜ್ಜೆಯಾಗಿ ಅಬ್ರಹಾಂ ಒಪ್ಪಂದವನ್ನು ಪರಿಗಣಿಸಲಾಗುತ್ತದೆ. ಮಧ್ಯಪ್ರಾಚ್ಯದ ಭೌರಾಜಕೀಯ ಸಮೀಕರಣಗಳನ್ನು ಬದಲಿಸಿದ ಈ ಒಪ್ಪಂದ ಈಗ ಮತ್ತೊಮ್ಮೆ ಜಾಗತಿಕ ರಾಜತಾಂತ್ರಿಕ ಚರ್ಚೆಯ ಕೇಂದ್ರಬಿಂದುವಾಗಿದೆ.



ಪ್ರಮುಖ ದೇಶಗಳ ನಿಲುವು

ದೇಶ	ಪ್ರಸ್ತುತ ನಿಲುವು
ಯುಎಇ	ಒಪ್ಪಂದಕ್ಕೆ ಸಹಿ
ಬಹ್ರೇನ್	ಒಪ್ಪಂದಕ್ಕೆ ಸಹಿ
ಮೊರಾಕೊ	ಒಪ್ಪಂದಕ್ಕೆ ಸಹಿ
ಸೂಡಾನ್	ಪ್ರಕ್ರಿಯೆಯಲ್ಲಿ, ಪೂರ್ಣ ಜಾರಿಯಾಗಿಲ್ಲ
ಸೌದಿ ಅರೇಬಿಯಾ	ಪ್ಯಾಲೆಸ್ತೀನ್ ಪ್ರಶ್ನೆ ಬಗೆಹರಿದ ಬಳಿಕ ಮಾತ್ರ
ಪಾಕಿಸ್ತಾನ	ಸ್ಪಷ್ಟ ವಿರೋಧ
ಕತಾರ್	ಇನ್ನೂ ನಿರ್ಧಾರವಿಲ್ಲ
ಟರ್ಕಿಯೆ	ಒಪ್ಪಂದಕ್ಕೆ ಸೇರಿಲ್ಲ
ಈಜಿಪ್ಟ್	ಈಗಾಗಲೇ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ
ಜೋರ್ಡನ್	ಈಗಾಗಲೇ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ

ಸೌದಿ ಅರೇಬಿಯಾ ಯಾಕೆ ಇನ್ನೂ ಕಾಯುತ್ತಿದೆ?

ಅಬ್ರಹಾಂ ಒಪ್ಪಂದದ ವಿಸ್ತರಣೆಯಲ್ಲಿ ಸೌದಿ ಅರೇಬಿಯಾವನ್ನು ಕ್ರೌನ್ ಜುವೆಲ್ ಎಂದು ಕರೆಯಲಾಗುತ್ತದೆ. ಆದರೆ ರಿಯಾದ್ ಸ್ಪಷ್ಟವಾಗಿ ಹೇಳಿರುವುದು ಏನೆಂದರೆ, ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆಗೆ ಸ್ಪಷ್ಟ ಮಾರ್ಗಸೂಚಿ ಸಿಗದೆ ಇಸ್ರೇಲ್ ಜತೆ ಪೂರ್ಣ ಪ್ರಮಾಣದ ಸಂಬಂಧ ಸಾಮಾನ್ಯೀಕರಣ ಸಾಧ್ಯವಿಲ್ಲ. 2023ರ ಬಳಿಕ ಗಾಜಾ ಸಂಘರ್ಷ ತೀವ್ರಗೊಂಡಿರುವುದು ಸೌದಿ ನಿಲುವನ್ನು ಇನ್ನಷ್ಟು ಕಠಿಣಗೊಳಿಸಿದೆ.

ಯಾವ ದೇಶಗಳು ಈಗಾಗಲೇ ಸೇರಿವೆ?

2020ರಲ್ಲಿ ಮೊದಲಿಗೆ ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ಮತ್ತು ಬಹ್ರೈನ್ ಇಸ್ರೇಲ್ ಜತೆ ಸಂಬಂಧ ಸಾಮಾನ್ಯೀಕರಣ ಒಪ್ಪಂದಕ್ಕೆ ಸಹಿ ಹಾಕಿದವು. ನಂತರ ಮೊರಾಕೊ ಮತ್ತು ಸೂಡಾನ್ ಸಹ ಪ್ರಕ್ರಿಯೆಯಲ್ಲಿ ಭಾಗಿಯಾದವು. ಇದರಿಂದ ದಶಕಗಳ ಕಾಲ ಇಸ್ರೇಲ್ ವಿರುದ್ಧದ ನಿಲುವು ಹೊಂದಿದ್ದ ಕೆಲವು ಅರಬ್ ರಾಷ್ಟ್ರಗಳು ಹೊಸ ರಾಜತಾಂತ್ರಿಕ ಅಧ್ಯಾಯ ಆರಂಭಿಸಿದವು.

ಕಿರುಸುದ್ದಿ

ಪುಣೆಯಲ್ಲಿ ನಕಲಿ ಮದ್ಯ ಸೇವಿಸಿ 14 ಮಂದಿ ಸಾವು

ಪುಣೆ: ಮಹಾರಾಷ್ಟ್ರದ ಪುಣೆಯ ಪಿಂಪ್ರಿ ಚಿಂಚ್ ವಾಡ್ ಪ್ರದೇಶದಲ್ಲಿ ನಕಲಿ ಮದ್ಯ ಸೇವನೆಯಿಂದ ಕನಿಷ್ಠ ಪಕ್ಷ 14 ಮಂದಿ ಸಾವಿಗೀಡಾಗಿದ್ದಾರೆ. ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಪೊಲೀಸರು ಈ ಸಂಬಂಧ ಎಂಟು ಮಂದಿಯನ್ನು ಬಂಧಿಸಿದ್ದು, ಇನ್ನಷ್ಟು ಮಂದಿಯ ಬಂಧನವಾಗಲಿದೆ ಎಂದಿದ್ದಾರೆ.

ಪ್ರಕರಣ ಸಂಬಂಧ 8 ಮಂದಿ ಬಂಧನ

ಪಿಂಪ್ರಿ ಚಿಂಚ್‌ವಾಡ್‌ನ ಫುಗೆವಾಡ್ ಪ್ರದೇಶದಲ್ಲಿ 7 ಮಂದಿ ಬಲಿಯಾಗಿದ್ದು, ಹಡಪ್ಸಾರ್‌ನ ಪಂಧಾರೆಮಾಲಾ ಪ್ರದೇಶದಲ್ಲಿ ಐವರು ಮೃತಪಟ್ಟಿದ್ದಾರೆ. ಈ ಸಾವಿಗೆ ನಿಖರ ಕಾರಣ ಏನೆಂಬ ಬಗ್ಗೆ ಪರೀಕ್ಷಾ ವರದಿಗಾಗಿ ಕಾಯಲಾಗುತ್ತಿದ್ದು, ಇಂತಹ ಪಿಡುಗಿನ ಹಿಂದೆ ಇರುವ ಇಡಿ ವ್ಯವಸ್ಥೆಯನ್ನು ಗುರುತಿಸಲಾಗಿದ್ದು, ಇದನ್ನು ಸದೆಬಡಿಯಲಾಗುವುದು ಎಂದು ಘೋಷಿಸಿದ್ದಾರೆ. ಈ ಪ್ರದೇಶಗಳಿಗೆ ಮದ್ಯ ಪೂರೈಕೆದಾರನಾಗಿರುವ ಯೋಗೀಶ್ ವಾಂಖೇಡೆಯನ್ನು ಬಂಧಿಸಲಾಗಿದ್ದು, ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದು ರಾಜ್ಯ ಅಬಕಾರಿ ಆಯುಕ್ತ ಅತುಲ್ ಕನಾಡೆ ತಿಳಿಸಿದರು.


ಎಲ್-ನಿನೋ ಪ್ರಭಾವ ಎದುರಿಸಲು ಸಿದ್ಧ: ಕೇಂದ್ರ

ಹೊಸದಿಲ್ಲಿ: ಈ ವರ್ಷ ಎಲ್-ನಿನೋ ಪ್ರಭಾವ ಮತ್ತು ಅದರಿಂದ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಹವಾಮಾನ ಇಲಾಖೆಯ ಮುನ್ಸೂಚನೆಯ ಹಿನ್ನೆಲೆಯಲ್ಲಿ , ಇಂತಹ ಯಾವುದೇ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳನ್ನು ಎದುರಿಸಲು ಸಜ್ಜಾಗುವಂತೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ರಾಜ್ಯ ಸರಕಾರಗಳಿಗೆ ಸೂಚಿಸಿದ್ದಾರೆ. ಇಂತಹ ಯಾವುದೇ ಸಂಭವನೀಯತೆಯನ್ನು ಪರಿಹರಿಸುವಲ್ಲಿ ಕೇಂದ್ರ ಕೃಷಿ ಸಚಿವಾಲಯವು ಯೋಜನೆಗಳನ್ನು ರೂಪಿಸುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಜೂನ್‌ನಲ್ಲಿ ನೈಋತ್ಯ ಮುಂಗಾರಿನೊಂದಿಗೆ ಪ್ರಾರಂಭವಾಗುವ ಮುಂಬರುವ ಖಾರಿಫ್ ಋತುವಿನಲ್ಲಿ ಬೇಡಿಕೆಯನ್ನು ಪೂರೈಸಲು ಅಗತ್ಯವಿರುವ ಬೀಜಗಳು ಮತ್ತು ರಸಗೊಬ್ಬರಗಳ ಲಭ್ಯತೆ ಸಾಕಷ್ಟಿದೆ ಎಂದು ಅವರು ತಿಳಿಸಿದ್ದಾರೆ. ರಾಷ್ಟ್ರೀಯ ಕೃಷಿ ಸಮ್ಮೇಳನ - ಖಾರಿಫ್ ಅಭಿಯಾನ 2026ರ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಎಲ್-ನಿನೋ ಅಪಾಯದ ಕುರಿತು ಕೇಂದ್ರ ಸರಕಾರ ಸತತ ನಿಗಾ ಇಟ್ಟಿದೆ. ನಮಗೆ ಈಗ ಆ ಬಗ್ಗೆ ಖಚಿತವಿಲ್ಲ, ಆದರೆ ಅಂತಹ ಪರಿಸ್ಥಿತಿ ಉದ್ಭವಿಸಿದರೆ ಈ ಬಾರಿಯ ಮುಂಗಾರಿನಲ್ಲಿ ಮಳೆ ವಿಳಂಬವಾದರೆ ಅದನ್ನು ಎದುರಿಸಲು ನಾವು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದರು. ಎಲ್- ನಿನೋ ಎಂಬುದು ಪೂರ್ವ ಪೆಸಿಫಿಕ್ ಮಹಾಸಾಗರದಲ್ಲಿ ಮೇಲ್ಮೈ ನೀರಿನ ಅಸಹಜ ತಾಪಮಾನದಿಂದ ಉಂಟಾಗುವ ಹವಾಮಾನ ವೈಪರೀತ್ಯವಾಗಿದ್ದು, ಇದು ಜಾಗತಿಕ ಮಟ್ಟದಲ್ಲಿ ಸಹಜ ಹವಾಮಾನಕ್ಕೆ ತೊಡಕುಂಟು ಮಾಡುತ್ತದೆ.

ಈ ಬಾರಿ ಮುಂಗಾರು ಮಳೆ ದುರ್ಬಲ: ಐಎಂಡಿ

ಹೊಸದಿಲ್ಲಿ: ದೇಶದಲ್ಲಿ 2026ರ ನೈಋತ್ಯ ಮುಂಗಾರು ಅವಧಿಯಲ್ಲಿ (ಜೂನ್-ಸೆಪ್ಟೆಂಬರ್) ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಶುಕ್ರವಾರ ಮುನ್ಸೂಚನೆ ನೀಡಿದೆ. ಈ ಮೂಲಕ ತಾನೇ ಹಿಂದೆ ನೀಡಿದ್ದ



ಮುನ್ಸೂಚನೆಯನ್ನು ಪರಿಷ್ಕರಿಸಿದೆ. ದೇಶಾದ್ಯಂತ ಈ ವರ್ಷದ ಮುಂಗಾರು ಮಳೆ ದೀರ್ಘಾವಧಿ ಸರಾಸರಿಯ (ಎಲ್‌ಪಿಎ) ಶೇ.90ರಷ್ಟು ದಾಖಲಾಗುವ ಸಾಧ್ಯತೆ ಇದೆ. ಏ.13ರಂದು ಪ್ರಕಟಿಸಿದ್ದ ಮೊದಲ ಮುನ್ಸೂಚನೆಯಲ್ಲಿ ಶೇ.92ರಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಹೇಳಿತ್ತು. ಆದರೆ ಇದೀಗ ಅಂದಾಜನ್ನು ಮತ್ತಷ್ಟು ತಗ್ಗಿಸಲಾಗಿದೆ. ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಮಾತನಾಡಿ, ದೇಶದ ಬಹುತೇಕ ಮಳೆಆಧಾರಿತ ಕೃಷಿ ಪ್ರದೇಶಗಳನ್ನು ಒಳಗೊಂಡಿರುವ ಮುಂಗಾರು ಕೇಂದ್ರ ವಲಯದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಹೆಚ್ಚಿದೆ ಎಂದು ತಿಳಿಸಿದ್ದಾರೆ. ಐಎಂಡಿಯ ವರ್ಗೀಕರಣದ ಪ್ರಕಾರ, ಮುಂಗಾರು ಅವಧಿಯಲ್ಲಿ ಮಳೆ ದೀರ್ಘಾವಧಿ ಸರಾಸರಿಯ ಶೇ.90ಕ್ಕಿಂತ ಕಡಿಮೆಯಾದರೆ ಅದನ್ನು ಮಳೆ ಕೊರತೆ ಎಂದು ಪರಿಗಣಿಸಲಾಗುತ್ತದೆ. ಕೇರಳದಲ್ಲಿ ಮೇ 26ರಂದು ಮುಂಗಾರು ಪ್ರವೇಶಿಸಲಿದೆ ಎಂದು ಈ ಹಿಂದೆ ಅಂದಾಜಿಸಲಾಗಿತ್ತು.

ಜೂನ್‌ನಲ್ಲಿ ಉಷ್ಣ ಅಲೆ ತೀವ್ರ: ಜೂನ್ ತಿಂಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಸಾಧಾರಣಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನ ದಾಖಲಾಗುವ ಸಾಧ್ಯತೆ ಇದೆ. ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಬಿಹಾರ, ಒಡಿಶಾ, ಛತ್ತೀಸ್‌ಗಢ, ಗುಜರಾತ್ ಮತ್ತು ಆಂಧ್ರ ಪ್ರದೇಶದ ಅನೇಕ ಭಾಗಗಳಲ್ಲಿ ಉಷ್ಣ ಅಲೆ ದಿನಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ.

ಭಾರತದ ಬೆಂಬಲ ಉಲ್ಲೇಖಿಸಿದ ಇಸ್ರೇಲ್

ಹೊಸದಿಲ್ಲಿ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಭಾರತದೊಂದಿಗಿನ ದೃಢವಾದ ದ್ವಿಪಕ್ಷೀಯ ಸಂಬಂಧವನ್ನು ಒತ್ತಿಹೇಳಿದ್ದು, ಭಾರತದಿಂದ ಸಿಗುತ್ತಿರುವ ವ್ಯಾಪಕ ಸಾರ್ವಜನಿಕ ಬೆಂಬಲವನ್ನು ಶ್ಲಾಘಿಸಿದ್ದಾರೆ. ವಿಶ್ವದ ಹಲವು ರಾಷ್ಟ್ರಗಳು ಇಸ್ರೇಲ್ ಅನ್ನು ಕಾನೂನುಬಾಹಿರ ಎಂದು ಬಿಂಬಿಸಲು ಪ್ರಯತ್ನಿಸುತ್ತಿರುವ ವೇಳೆಯಲ್ಲಿ, ಭಾರತದಿಂದ ಇಸ್ರೇಲ್‌ಗೆ ಅನನ್ಯ ಬೆಂಬಲ ಸಿಗುತ್ತಿದೆ. ಜಾಗತಿಕವಾಗಿ ತಮಗೆ ಬೇರೆಲ್ಲಾ ಪ್ರದೇಶಗಳಿಗಿಂತ ಭಾರತದಲ್ಲೇ ಹೆಚ್ಚಿನ ಅನುಯಾಯಿಗಳಿದ್ದಾರೆ ಎಂದು ತಾವು ನಂಬುವುದಾಗಿ ನೆತನ್ಯಾಹು ತಿಳಿಸಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿಯಲ್ಲಿ ಇಸ್ರೇಲ್‌ಗೆ ಕೈಗೊಂಡಿದ್ದ ಅಧಿಕೃತ ಪ್ರವಾಸದ ಬೆನ್ನಲ್ಲೇ ಈ ಹೇಳಿಕೆಗಳು ಹೊರಬಿದ್ದಿವೆ. ಆ ಭೇಟಿಯ ಸಂದರ್ಭದಲ್ಲಿ ಉಭಯ ನಾಯಕರು ಆತ್ಮೀಯ ಸೌಹಾರ್ದತೆ ಪ್ರದರ್ಶಿಸಿದ್ದರು ಮತ್ತು ಪ್ರಧಾನಿ ಮೋದಿಗೆ ಇಸ್ರೇಲ್‌ನ ಅತ್ಯುನ್ನತ ಸಂಸದೀಯ ಗೌರವ 'ಸ್ಪೀಕರ್ ಆಫ್ ದಿ ಕೆನೆಸೆಟ್' ಪದಕವನ್ನು ನೀಡಿ ಗೌರವಿಸಲಾಗಿತ್ತು.



ಫೆಬ್ರವರಿ ಪ್ರವಾಸದ ವೇಳೆ, ನೆತನ್ಯಾಹು ತಮ್ಮ ಪತ್ನಿ ಸಾರಾ ಅವರೊಂದಿಗಿನ ಮೊದಲ ಭೇಟಿಗಳು, ಟೆಲ್ ಅವಿವ್‌ನ ಭಾರತೀಯ ಉಪಹಾರ ಗೃಹವೊಂದರಲ್ಲಿ ನಡೆದಿದ್ದವು, ಎಂಬ ವೈಯಕ್ತಿಕ ನೆನಪನ್ನೂ ಹಂಚಿಕೊಂಡಿದ್ದರು. ಇದೇ ವೇಳೆ ನೆತನ್ಯಾಹು, ಭಾರತದ ಸಾಮಾಜಿಕ ಮಾಧ್ಯಮ ಬಳಕೆದಾರರು ಇಸ್ರೇಲ್ ಪರವಾಗಿ ಸಕ್ರಿಯವಾಗಿ ನಿಂತಿರುವುದನ್ನು ಕೃತಜ್ಞತೆಯಿಂದ ಸ್ಮರಿಸಿದರು.

ನೌಕಾಪಡೆಗೆ 48ನೇ ವೈಸ್‌ಚೀಫ್ ಆಗಿ ಅಜಯ್ ಅಧಿಕಾರ

ಹೊಸದಿಲ್ಲಿ: ಆಪರೇಷನ್ ಸಿಂದೂರ ವೇಳೆ ಉನ್ನತ ಮಟ್ಟದಲ್ಲಿ ನೌಕಾ ಯುದ್ಧ ಸನ್ನದ್ಧತೆಯನ್ನು ನಿರ್ವಹಿಸಿದ ವೈಸ್ ಅಡ್ಮಿರಲ್ ಅಜಯ್ ಕೊಚ್ಚರ್ ಅವರು ಭಾರತೀಯ ನೌಕಾಪಡೆಯ 48ನೇ ಉಪಮುಖ್ಯಸ್ಥರಾಗಿ ಶುಕ್ರವಾರ ಅಧಿಕಾರ ವಹಿಸಿಕೊಂಡರು. ಈ ಮೂಲಕ ನೌಕಾಪಡೆಯ ಕೇಂದ್ರಕಚೇರಿಗೆ ಮುಂಚೂಣಿ ಅನುಭವದ ಸಂಪತ್ತು ಬಂದಂತಾಗಿರುವುದಾಗಿ ವಿಶ್ಲೇಷಿಸಲಾಗಿದೆ. ನೌಕಾಪಡೆಯ ಸೆಕೆಂಡ್ -ಇನ್ -ಕಮಾಂಡ್ ಆಗಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಅವರು, ಭಾರತದ ಮೊದಲ ಮತ್ತು ಏಕೈಕ ಜಂಟಿ ತ್ರಿ-ಸೇವೆಗಳ ಥಿಯೇಟರ್ ಕಮಾಂಡ್ ಆದ ಅಂಡಮಾನ್ ಮತ್ತು ನಿಕೋಬಾರ್‌ನ(ಎಎನ್‌ಸಿ) ಕಮಾಂಡರ್ -ಇನ್-ಚೀಫ್ ಆಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಅದಕ್ಕೂ ಮುನ್ನ, ಪಶ್ಚಿಮ ನೌಕಾ ಕಮಾಂಡ್‌ನ ಸಿಬ್ಬಂದಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಆಪರೇಷನ್ ಸಿಂದೂರ್‌ನ ವೇಳೆ, ಪಶ್ಚಿಮದ ಕಡಲ ತೀರದಲ್ಲಿ ಎದುರಾದ ಭದ್ರತಾ ಸವಾಲು ಎದುರಿಸುವಲ್ಲಿ, ನೌಕಾ ಪಡೆ ಪ್ರಮುಖ ಯುದ್ಧೋಪಕರಣಗಳನ್ನು ಮುಂಚೂಣಿಯಲ್ಲಿ ನಿಯೋಜಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಸಂವಿಧಾನದ 142ನೇ ವಿಧಿ ಪ್ರಯೋಗಿಸಿದ ಸುಪ್ರೀಂ ಕೋರ್ಟ್

ಹೈಕೋರ್ಟ್‌ಗಳಲ್ಲಿ ತೀರ್ಪು ವಿಳಂಬಕ್ಕೆ ಬ್ರೇಕ್

ಹೊಸದಿಲ್ಲಿ: ಹೈಕೋರ್ಟ್‌ಗಳಲ್ಲಿ ವಾದ ಮುಗಿದ ಬಳಿಕ ತೀರ್ಪು ಪ್ರಕಟಿಸಲು ಆಗುತ್ತಿರುವ ದೀರ್ಘ ವಿಳಂಬಕ್ಕೆ ಕಡಿವಾಣ ಹಾಕಲು ಸುಪ್ರೀಂ ಕೋರ್ಟ್ ಮಹತ್ವದ ಹೆಜ್ಜೆ ಇಟ್ಟಿದೆ. ಸಂವಿಧಾನದ 142ನೇ ವಿಧಿಯ ವಿಶೇಷ ಅಧಿಕಾರವನ್ನು ಬಳಸಿಕೊಂಡಿರುವ ಸುಪ್ರೀಂ ಕೋರ್ಟ್, ಕಾಯ್ದಿರಿಸಿದ 3 ತಿಂಗಳ ಒಳಗೆ ತೀರ್ಪು ಪ್ರಕಟ ಮಾಡಬೇಕು ಎಂದು ಹೇಳಿದೆ. ನ್ಯಾಯಮೂರ್ತಿಗಳ ಪೀಠವು, 'ನ್ಯಾಯ ವಿಳಂಬವಾದರೆ ಅದು ನ್ಯಾಯ ನಿರಾಕರಣೆಯಂತೆಯೇ' ಎಂದು ಸ್ಪಷ್ಟಪಡಿಸಿದ್ದು, ಕಾಯ್ದಿರಿಸಿದ ತೀರ್ಪುಗಳನ್ನು ಅನಗತ್ಯವಾಗಿ ಬಾಕಿ ಇಡುವುದು ನ್ಯಾಯಾಂಗ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತದೆ ಎಂದು ಕಳವಳ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್ ದೇಶದ ವಿವಿಧ ಹೈಕೋರ್ಟ್‌ಗಳಿಂದ ಮಾಹಿತಿ ಸಂಗ್ರಹಿಸಿ, ನ್ಯಾಯಾಧೀಶರು ತೀರ್ಪು ಕಾಯ್ದಿರಿಸಿದ ಬಳಿಕ ಅದನ್ನು ಪ್ರಕಟಿಸಲು ತೆಗೆದುಕೊಳ್ಳುವ ಸಮಯದ ಕುರಿತು ಪರಿಶೀಲನೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಎಲ್ಲ ಹೈಕೋರ್ಟ್‌ಗಳಿಗೆ ಏಕರೂಪದ ನಿಯಮಗಳನ್ನು ರೂಪಿಸುವ ಅಗತ್ಯವಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಹಾಗೆಯೇ, ಹೈಕೋರ್ಟ್‌ಗಳು ಜಾಮೀನು ಅರ್ಜಿ ಬಗ್ಗೆ ಅಂದೇ ತೀರ್ಪು ನೀಡಬೇಕು, ಒಂದು ವೇಳೆ ತೀರ್ಪು ಕಾಯ್ದಿಟ್ಟರೆ ಮಾರನೇ ದಿನವೇ ಪ್ರಕಟಿಸಬೇಕು ಎಂದಿದೆ. ಒಂದು ವೇಳೆ ಜಾಮೀನು ನೀಡಿದಲ್ಲಿ ಅಂದೇ, ಕೆಳ ಹಂತದ ನ್ಯಾಯಾಲಯಗಳಿಗೆ ಮಾಹಿತಿ ನೀಡಬೇಕು. ಇದರಿಂದಾಗಿ ಜಾಮೀನು ಸಿಕ್ಕವರು ಅಂದೇ ಜೈಲಿನಿಂದ ಬಿಡುಗಡೆಯಾಗುವ ಅವಕಾಶ ಸಿಗುತ್ತದೆ ಎಂದಿದೆ.

ಹೈಕೋರ್ಟ್‌ಗಳು ತೀರ್ಪುಗಳನ್ನು ಪ್ರಕಟಿಸಿದ 24 ಗಂಟೆಗಳಲ್ಲಿ ತಮ್ಮ ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡಬೇಕು ಎಂಬಿತ್ಯಾದಿ ಅಂಶಗಳ ಬಗ್ಗೆಯೂ ಅದು ಸೂಚನೆ ನೀಡಿದೆ. ಹಾಗೆಯೇ, ಈ ಆದೇಶಗಳು ಯಾರೋ ಒಬ್ಬ ನ್ಯಾಯಮೂರ್ತಿ ಅಥವಾ ನ್ಯಾಯ ಸಂಸ್ಥೆಗಳಿಗೆ ಸೂಚಿಸಿ ಹೇಳಿರುವಂಥದ್ದಲ್ಲ ಎಂದು ಸ್ಪಷ್ಟಪಡಿಸಿರುವ ಕೋರ್ಟ್, ತೀರ್ಪು ಪ್ರಕಟಿಸುವಲ್ಲಿ ಆಗುತ್ತಿದ್ದ ದೀರ್ಘಾವಧಿ ವಿಳಂಬದಿಂದಾಗಿ ದೇಶಕ್ಕೇ ಅನ್ವಯವಾಗುವಂತೆ ರಚಿಸಲಾಗಿದೆ ಎಂದು ಹೇಳಿದೆ ಎಂಬುದಾಗಿ ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಹೈಕೋರ್ಟ್‌ಗಳಿಗೆ ಸುಪ್ರೀಂ ಸೂಚನೆ

- ಕಾಯ್ದಿರಿಸಿದ ತೀರ್ಪುಗಳ ಕುರಿತು ನಿಯಮಿತ ಮೇಲ್ವಿಚಾರಣೆ ನಡೆಸಬೇಕು.
- ತೀರ್ಪು ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು ಪಾರದರ್ಶಕವಾಗಿ ನಿರ್ವಹಿಸಬೇಕು.
- ತೀರ್ಪು ಪ್ರಕಟಣೆಗೆ ಅನಗತ್ಯ ವಿಳಂಬವಾಗದಂತೆ ಮುಖ್ಯ ನ್ಯಾಯಮೂರ್ತಿಗಳು ಕ್ರಮ ಕೈಗೊಳ್ಳಬೇಕು.
- ನ್ಯಾಯಾಂಗ ಆಡಳಿತದಲ್ಲಿ ಉತ್ತರದಾಯಿತ್ವ ಹೆಚ್ಚಿಸಲು ವ್ಯವಸ್ಥೆ ರೂಪಿಸಬೇಕು.

ವರದಕ್ಷಿಣೆಗಾಗಿ ಸೊಸೆ ಅವಮಾನಿಸುವುದು ಅಮಾನವೀಯ: ಸುಪ್ರೀಂ

ಮದುವೆ ಏಕೆ? ವಧು ಅವಮಾನಿಸುವುದೇಕೆ?

ಹೊಸದಿಲ್ಲಿ: ವರದಕ್ಷಿಣೆ ಕಿರುಕುಳ ಮತ್ತು ಸಾವು ಪ್ರಕರಣಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಒಬ್ಬ ಹುಡುಗಿಯನ್ನು ಮದುವೆಯಾಗಿ, ಆಕೆಯನ್ನು ಹಾಗೂ ಆಕೆಯ ಕುಟುಂಬವನ್ನು ಅವಮಾನಿಸುವುದು ಏಕೆ? ಎಂದು ಪ್ರಶ್ನಿಸಿದೆ. ಜತೆಗೆ, ಮದುವೆ ಎನ್ನುವುದು ಪರಸ್ಪರ ಗೌರವ, ವಿಶ್ವಾಸ ಮತ್ತು ಸಹಜೀವನದ ಪವಿತ್ರ ಬಂಧವಾಗಿದ್ದು, ಅದನ್ನು ಹಣ ಮತ್ತು ಆಸ್ತಿಗಾಗಿ ನಡೆಸುವ ವ್ಯವಹಾರವನ್ನಾಗಿ ಪರಿವರ್ತಿಸಿರುವುದು ಸಮಾಜದ ದುರಂತ ಎಂದು ನ್ಯಾಯಾಲಯ ಕಿಡಿಕಾರಿದೆ.

ವರದಕ್ಷಿಣೆ ಸಾವಿನ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿದ ವೇಳೆ ನ್ಯಾಯಮೂರ್ತಿಗಳ ಪೀಠ ಈ ಕಠಿಣ ಅಭಿಪ್ರಾಯ ವ್ಯಕ್ತಪಡಿಸಿದೆ. ಇಂತಹ ಗಂಭೀರ ಪ್ರಕರಣಗಳಲ್ಲಿ ನ್ಯಾಯಾಲಯಗಳು ಜಾಮೀನು ನೀಡುವಾಗ ಅತ್ಯಂತ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ಸಮಾಜದಲ್ಲಿ ತಪ್ಪು ಸಂದೇಶ ಹೋಗುವುದರ ಜತೆಗೆ ಅಪರಾಧಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಾಲಯದ ಪ್ರಕಾರ, ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗು ಮದುವೆಯ ಪಾವಿತ್ರ್ಯವನ್ನಷ್ಟೇ ಹಾಳುಮಾಡುತ್ತಿಲ್ಲ; ಮಹಿಳೆಯರ ಮೇಲೆ ವ್ಯವಸ್ಥಿತ ದೌರ್ಜನ್ಯ ಮತ್ತು ಶೋಷಣೆಯನ್ನೂ ಮುಂದುವರಿಸುತ್ತಿದೆ. ವರದಕ್ಷಿಣೆ ಬೇಡಿಕೆಗಳು ಕ್ರೌರ್ಯಕ್ಕೆ, ಅಂತಿಮವಾಗಿ ಯುವ ವಧುವಿನ ಅಸಹಜ ಸಾವಿಗೆ ಕಾರಣವಾದಾಗ ಅದು ಕೇವಲ ಒಂದು ಕುಟುಂಬದ ಖಾಸಗಿ ಸಮಸ್ಯೆಯಾಗಿ ಉಳಿಯುವುದಿಲ್ಲ, ಅದು ಇಡೀ ಸಮಾಜದ ಆತ್ಮಸಾಕ್ಷಿಗೆ ಸವಾಲಾಗುವ ಗಂಭೀರ ಸಾಮಾಜಿಕ ಅಪರಾಧವಾಗುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿಗಳು, ವಧುವಿನ ಕುಟುಂಬದಿಂದ ಹಣ, ವಾಹನ ಅಥವಾ ಇತರೆ ಆಸ್ತಿ ಪಡೆಯುವ ಉದ್ದೇಶದಿಂದ ಮದುವೆ ಮಾಡಿಕೊಳ್ಳುವುದು ಸಮಾಜದಲ್ಲಿ ಇನ್ನೂ ಮುಂದುವರಿದಿರುವ ಕಳವಳಕಾರಿ ಪ್ರವೃತ್ತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮದುವೆಯ ನಂತರ ಸೊಸೆ ಮತ್ತು ಆಕೆಯ ಕುಟುಂಬವನ್ನು ಹೀನಾಯವಾಗಿ ನಡೆಸಿಕೊಳ್ಳುವುದು ನಾಗರಿಕ ಸಮಾಜಕ್ಕೆ ಶೋಭೆ ತರುವುದಿಲ್ಲ ಎಂದು ಹೇಳಿದರು.

ನ್ಯಾಯಾಲಯವು ವರದಕ್ಷಿಣೆ ಸಾವು ಕೇವಲ ಒಬ್ಬ ಮಹಿಳೆಯ ವಿರುದ್ಧದ ಅಪರಾಧವಲ್ಲ, ಇಡೀ ಸಮಾಜದ ವಿರುದ್ಧದ ಅಪರಾಧ ಎಂದು ಪುನರುಚ್ಚರಿಸಿದೆ. ಇಂತಹ ಪ್ರಕರಣಗಳಲ್ಲಿ ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನ ಅಗತ್ಯವಾಗಿದ್ದು, ನ್ಯಾಯಾಂಗವು ಯಾವುದೇ ರೀತಿಯ ಮೃದು ಧೋರಣೆ ತೋರಬಾರದು ಎಂದು ಸ್ಪಷ್ಟಪಡಿಸಿದೆ.

ಜಾನಪದ ವಿವಿಯಲ್ಲಿ ಅಕ್ರಮ ನೇಮಕಾತಿ

ಸೂಕ್ತ ತನಿಖೆ ಕೈಗೊಳ್ಳದೆ ವಿಳಂಬ: ನಿಟ್ಟೂರ



ಹಾವೇರಿ: ಕರ್ನಾಟಕಜಾನಪದವಿಶ್ವವಿದ್ಯಾಲಯಕ್ಕೆ ಅಕ್ರಮವಾಗಿ ಬೋಧಕ, ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಮೇ 29ಕ್ಕೆ ಮೂರು ವರ್ಷ ಕಳೆದಿದ್ದು, ಕಜಾವಿವಿ ಉಳಿಸಿ ಹೋರಾಟಗಾರರು ಮೂರನೇ ವರ್ಷದ ಕರಾಳ ದಿನಾಚರಣೆ ಆಚರಿಸುತ್ತಿದ್ದೇವೆ. ಸರ್ಕಾರ ಅಕ್ರಮ ನೇಮಕಾತಿ ಕುರಿತು ಸೂಕ್ತ ತನಿಖೆ ಕೈಗೊಳ್ಳದೆ, ವಿಳಂಬ ಮಾಡಿ ಅನ್ಯಾಯ ಎಸಗುತ್ತಿದೆ ಎಂದು ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟದ ಅಧ್ಯಕ್ಷ ಡಾ.ಶಿವಸೋಮಪ್ಪ ನಿಟ್ಟೂರ ಆರೋಪಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟ ಮತ್ತು ಕರ್ನಾಟಕ ಜಾನಪದ ವಿವಿ ಹಿತರಕ್ಷಣಾ ಟ್ರಸ್ಟ್ ಕಳೆದ ಮೂರು ವರ್ಷಗಳಿಂದ ಜಾನಪದ ವಿವಿ ಅಕ್ರಮ ನೇಮಕಾತಿ ತನಿಖೆಗೆ ಆಗ್ರಹಿಸಿ ನಿರಂತರ ಹೋರಾಟ ನಡೆಸುತ್ತಾ ಬಂದಿದೆ.

ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಜಾನಪದ ವಿವಿ, ಬೆಳಗಾವಿ ಸುವರ್ಣಸೌಧದ ಎದುರು ಹೀಗೆ ಹಲವೆಡೆ ಪ್ರತಿಭಟನೆ ನಡೆಸಿ, ಶಾಸಕರು, ಸಚಿವರು, ಸ್ಪೀಕರ್‌ಗೆ ಮನವಿ ಸಲ್ಲಿಸಿ ತನಿಖೆಗೆ ಒತ್ತಾಯಿಸಲಾಗಿದೆ. ವಿಧಾನಸಭೆ ಅಧಿವೇಶನದಲ್ಲೂ ಧ್ವನಿ ಎತ್ತಿದಾಗ ಸ್ಪೀಕರ್ ಅವರು ತನಿಖೆ ನಡೆಸುವುದಾಗಿ ಭರವಸೆ ನೀಡಿದ್ದರು. ಆದರಂತೆ ಬೆಳಗಾವಿ ಆರ್‌ಸಿ ಜಾನಕಿ ಹಾಗೂ ನಿವೃತ್ತ ನ್ಯಾ.ಅಡಿಗ ನೇತೃತ್ವದಲ್ಲಿ ಎರಡು ತಂಡಗಳನ್ನು ರಚಿಸಿ ತನಿಖೆ ನಡೆಸಲು ಸೂಚಿಸಿದ್ದರು. ಆದರೆ, ಇದುವರೆಗೂ ಸರಿಯಾದ ರೀತಿಯಲ್ಲಿ ತನಿಖೆ ನಡೆಯುತ್ತಿಲ್ಲ. ತನಿಖಾಧಿಕಾರಿಗಳು ಸಂಪೂರ್ಣವಾಗಿ ತನಿಖೆ ಮಾಡದಿರುವುದು ಸರ್ಕಾರದ ಮೇಲೆ ನಮಗೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಂತಾಗಿದೆ. ಪ್ರಭಾವಿ ಸಚಿವರೊಬ್ಬರು ತನಿಖೆಗೆ ಅಡ್ಡಿ ಪಡಿಸುತ್ತಿದ್ದಾರೆಂಬ ಸಂಶಯ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಜಾನಪದ ವಿವಿ ಕುಲಪತಿ ಹಾಗೂ ಸಹಾಯಕ ಕುಲಸಚಿವರು ತನಿಖಾಧಿಕಾರಿಗಳು ಕೇಳುವ ಮಾಹಿತಿಯನ್ನು ಸಮರ್ಪಕವಾಗಿ ಒದಗಿಸದೆ ತನಿಖೆಯ ದಿಕ್ಕನ್ನು ತಪ್ಪಿಸುತ್ತಿದ್ದಾರೆ. ಪ್ರಭಾವಿ ಸಚಿವರು ಜಾನಪದ ವಿವಿ ಕುಲಪತಿ ಹಾಗೂ ಸಹಾಯಕ ಕುಲಸಚಿವರ ಬೆನ್ನಿಗೆ ನಿಂತಿದ್ದು, ತನಿಖೆಗೆ ಅಡ್ಡಿಪಡಿಸುತ್ತಿರುವುದು ಅಕ್ರಮ ನೇಮಕಾತಿ ಪ್ರಶ್ನಿಸುವ ಹೋರಾಟಗಾರರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಒಕ್ಕೂಟದ ಉಪಾಧ್ಯಕ್ಷ ಡಾ.ನಾಗರಾಜ ಎಸ್., ಜಾನಪದ ವಿವಿ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಬಸವರಾಜ ಗೊಬ್ಬಿ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಸವರಾಜ ದುಗ್ಗಾಣಿ ಇದ್ದರು.

ವಿಪ್ರ ಸಮಾಜ ಒಂದಾಗಲಿ, ಸ್ವಾವಲಂಬಿಯಾಗಲಿ

ಹುಬ್ಬಳ್ಳಿ: ವಿಪ್ರರು ಯಾವುದೇ ಮತಭೇದವಿಲ್ಲದೇ, ಎಲ್ಲರೂ ಒಂದು ಎಂಬ ಭಾವ ಹೊಂದಲಿ. ಹಾಗೆಯೇ ನಮ್ಮ ಸಮಾಜ ಸ್ವಾವಲಂಬಿಯಾಗುವತ್ತ ದೃಢ ಹೆಜ್ಜೆ ಹಾಕಲಿ ಎಂದು ಭವಾನಿ ನಗರ ಶ್ರೀ ರಾಘವೇಂದ್ರ ಮಠದ ವ್ಯವಸ್ಥಾಪಕರಾದ ವಿದ್ವಾನ್ ಹುಲಿರಾಜಾಚಾರ್ಯರು ಹೇಳಿದರು.

ಶ್ರೀ ಸಮರ್ಥ ಸೇವಾ ಕೇಂದ್ರ, ಟ್ರಸ್ಟ್‌ನಿಂದ ಪ್ರವರ್ತಿತ ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ ಗುರುವಾರ ಇಲ್ಲಿನ ಭವಾನಿ ನಗರ ಶ್ರೀ ರಾಘವೇಂದ್ರ ಮಠದ ಶ್ರೀ ಸುಜಯೀಂದ್ರ ಭವನದಲ್ಲಿ ಆಯೋಜಿಸಿದ್ದ 'ಜೀವನಮ್ ಸ್ವಾವಲಂಬನಮ್' ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕವಾಗಿ ಸಾಕಷ್ಟು ಉತ್ತಮ ಪ್ರಗತಿ ಹೊಂದಿದ್ದರೂ ಕೂಡ ಇಂದಿನ ಈ ಪರಿಸ್ಥಿತಿಯಲ್ಲಿ, ನೌಕರಿಯು ಎಲ್ಲರಿಗೂ ಮರೀಚಿಕೆ, ಇಂಥ ಸಂದರ್ಭದಲ್ಲಿ ಸ್ವಾವಲಂಬಿಯಾಗಿ ಬದುಕಲು ಸ್ವ ಉದ್ಯೋಗಾವಕಾಶ ಸಾಕಷ್ಟು ಇದ್ದು, ಈ ನಿಟ್ಟಿನಲ್ಲಿ ವಿಪ್ರ ಸಮಾಜ ಮುನ್ನಡೆಯಬೇಕಿದೆ ಎಂದರು.

ಉದ್ಯಮಿ, ಆಯುರ್ವೇದ ಮಹಾವಿದ್ಯಾಲಯದ ಅಧ್ಯಕ್ಷ ಗೋವಿಂದ ಜೋಶಿ ಮಾತನಾಡಿ, ಉನ್ನತ ಶಿಕ್ಷಣ, ಉದ್ಯೋಗ ಹೊಂದಿ ವಿದೇಶಕ್ಕೆ ಹೋಗುವುದು ಸ್ವಾಗತಾರ್ಹವಾದರೂ, ಇನ್ನೊಂದೆಡೆ ಇಲ್ಲಿ ತಂದೆ, ತಾಯಿಗಳ ಯೋಗಕ್ಷೇಮ ನೋಡಿಕೊಳ್ಳುವವರೇ ಇಲ್ಲವಾಗುತ್ತದೆ, ಅದು ಮಾನವೀಯತೆಯಲ್ಲ. ಕಾರಣ, ಕೌಶಲ್ಯ ವೃದ್ಧಿಸಿಕೊಂಡು, ಸ್ವ ಉದ್ಯೋಗ ಮಾಡುವ ಮೂಲಕ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಬಹುದು ಎಂದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿಯ ಅಧ್ಯಕ್ಷ ವಾದಿರಾಜ ಪಾಟೀಲ್, ದೇಶದ ಪ್ರಗತಿಯಲ್ಲಿ ಬ್ರಾಹ್ಮಣ ಸಮಾಜದ ಕೊಡುಗೆ ಅನನ್ಯವಾಗಿದೆ. ಇಂಥ ಸಮಾಜ ಇಂದು ಸ್ವಾವಲಂಬಿಯಾಗುವ ಅಗತ್ಯವಿದ್ದು, ಇದಕ್ಕೆ ಪೂರಕವಾಗಿ ಸಮಾಜದ ಸಾಕಷ್ಟು ಗಣ್ಯರು ಸಹಾಯ, ಸಹಕಾರ, ಮಾರ್ಗದರ್ಶನ ನೀಡಲು ಸಿದ್ಧರಿದ್ದಾರೆ ಎಂದು ಹೇಳಿದರು. ಮಾಜಿ ಮಹಾಪೌರ ಹನುಮಂತ ಡಂಬಳ ಶಿಕ್ಷಣ ಹಾಗೂ ಸ್ವ ಉದ್ಯೋಗ ಮಾರ್ಗದರ್ಶನ ಕೇಂದ್ರ ಉದ್ಘಾಟಿಸಿ ಮಾತನಾಡಿದರು. ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜ ದೇಸಾಯಿ ಶುಭಪ್ರದ ವಧುವರಾನ್ವೇಷಣಾ ಕೇಂದ್ರ ಉದ್ಘಾಟಿಸಿದರು. ಡಾ.ಗೌತಮ ಹಳದಿಪುರ, ಬಿ.ಎಂ.ಪುರೋಹಿತ ಮಾತನಾಡಿದರು. ವಿಪ್ರ ಸಮಾಜದ ಮುಖಂಡರಾದ ವಸಂತ ನಾಡಜೋಶಿ, ಶಂಕರ ಪಾಟೀಲ್, ಅರವಿಂದ ಕುರ್ತಕೋಟಿ, ಲಕ್ಷ್ಮಣ ಕುಲಕರ್ಣಿ, ಗೋಪಾಲ ಕುಲಕರ್ಣಿ, ಪ್ರಕಾಶ ಜೋಶಿ, ಅರವಿಂದ ಪೂಜಾರ, ಹನುಮಂತಣ್ಣ ಟಕ್ಕಳಕಿ, ಮೃತ್ಯುಂಜಯ ದೇಶಪಾಂಡೆ, ಮಾಲತೇಶ ಕುಲಕರ್ಣಿ, ಸಿ.ಎಂ.ದೀಕ್ಷಿತ್, ಶ್ರೀಪಾದಶಾಸ್ತ್ರಿ ದೊಡವಾಡ, ವೈಶಾಲಿ ಪಾಟೀಲ್, ಮಂಜುಳಾ ಹಳ್ಯಾಳ, ವಂದನಾ ಪುರೋಹಿತ ಮತ್ತಿತರರು ಇದ್ದರು.

ವೇ.ಮೂ. ವೆಂಕಟೇಶ ಜೋಶಿ ವೇದಘೋಷ ಮಾಡಿದರು. ಶಶಿಕಲಾ ದಾನಿ ಪ್ರಾರ್ಥಿಸಿದರು. ಚಿದಂಬರ ತೋರಗಲ್ ಸ್ವಾಗತಿಸಿದರು. ನರಸಿಂಹರಾವ್ ಸೋಮಲಾಪೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಅನಂತ ಕುಲಕರ್ಣಿ ವಂದಿಸಿದರು. ಅಂಬರೀಷ ಹಾನಗಲ್ ನಿರೂಪಿಸಿದರು.



ಡಿಕೆಶಿಗೆ ವೀರಗಂಗಾಧರ ಮಹಾಸ್ವಾಮಿಗಳ ಅನುಗ್ರಹವಿದೆ: ಶ್ರೀಗಳು

ಕೊಲ್ಹಾರ: ಕಳೆದ ವರ್ಷ ಮೇ ತಿಂಗಳಲ್ಲಿ ಪಟ್ಟಣದ ಪಟ್ಟದೇವರು ಹಿರೇಮಠದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಉಪಮುಖ್ಯಮಂತ್ರಿಯಾಗಿ ಆಗಮಿಸಿದ್ದ ಡಿ.ಕೆ.ಶಿವಕುಮಾರ ಕೊಲ್ಹಾರ ಪಟ್ಟಣಕ್ಕೆ ಬಂದು ವರ್ಷದೊಳಗಾಗಿ ಇಂದು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ಶುಭ ಘಳಿಗೆಗೆ ಮಠದ ಪರಂಪರೆಯ ಭಕ್ತಿಗೆ ಒಲಿದಿದೆ ಎಂದು ವೇ.ಮೂ. ಮುರಘೇಂದ್ರ ಮಹಾಸ್ವಾಮಿಗಳು ಹೇಳಿದರು.

ಸುದ್ದಿಗಾರರು ಡಿ.ಕೆ. ಶಿವಕುಮಾರ ನಿಮ್ಮ ಮಠಕ್ಕೆ ಆಗಮಿಸಿ ಒಂದು ವರ್ಷವಾಗಲಿಲ್ಲ ಮುಖ್ಯಮಂತ್ರಿಯಾಗುವ ಯೋಗ ಕೂಡಿ ಬರಲು ಏನು ಕಾರಣ ಎಂಬ ಪ್ರಶ್ನೆ ಕೇಳಿದಾಗ, ಶ್ರೀಗಳು ಮಾರ್ಮಿಕವಾಗಿ ದೈವತ್ವದಲ್ಲಿ ಅಚಲವಾದ ನಂಬಿಕೆ ತಾಳ್ಮೆ ಸಹನೆ ನಿಷ್ಠುರವಾದ ಪಕ್ಷ ನಿಷ್ಠೆಯ ದುಡಿಮೆಯ ಫಲದಿಂದ ಜಗದ್ಗುರು ವೀರಗಂಗಾಧರ ಮಹಾಸ್ವಾಮಿಗಳ ಅನುಗ್ರಹ ಅವರ ಮೇಲೆ ಆಗಿರುವುದರಿಂದ ಸಿಕ್ಕಿರುವ ಸುವರ್ಣ ಅವಕಾಶವಾಗಿದೆ ಎಂದರು. ಡಿ.ಕೆ.ಶಿವಕುಮಾರವರು ಈಗ ದೊರೆತ ಅವಕಾಶವನ್ನು ಸರ್ವ ಜನಾಂಗದ ಒಳಿತಿಗಾಗಿ ನಾಡಿನ ಅಭಿವೃದ್ಧಿಗಾಗಿ ರೈತರ ಕಲ್ಯಾಣಕ್ಕಾಗಿ ದೀನ ದಲಿತರ ಬಡವರ ಶ್ರೇಯೋಭಿವೃದ್ಧಿಗಾಗಿ ನಿಸ್ವಾರ್ಥ ಸೇವೆಯಲ್ಲಿ ಅಧಿಕಾರ ನಡೆಸಿದರೆ ಬರುವಂತಹ ದಿನಗಳು ಉತ್ತಮವಾಗಲು ಕಾರಣಕರ್ತರಾಗುತ್ತಾರೆ ಎಂದರು.

ಕೊಲ್ಹಾರ ಪಟ್ಟಣದ ಹಿರೇಮಠದ ಧಾರ್ಮಿಕ ಸಮಾರಂಭದಲ್ಲಿ ಪೀಠಾಧಿಕಾರಿ ಪ್ರಭುಕುಮಾರ ಶಿವಾಚಾರ್ಯರರು ಡಿ.ಕೆ. ಶಿವಕುಮಾರ ಅವರಿಗೆ ಮಠದಲ್ಲಿರುವ ಗದ್ದುಗೆಯ ಮುಂದೆ ಹೇಳಿದ ಉಪದೇಶಾಮೃತದ ಫಲವೇ ಇಂದು ಅವರು ಮುಖ್ಯಮಂತ್ರಿಯ ಕುರ್ಚಿಯನ್ನು ಏರಲು ಪ್ರೇರಣೆಯಾಗಿದೆ ಎಂದರು.



'ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ' ಬೆಳೆದು ಬಂದ ಹಾದಿ

ಮಹಾತ್ಮಾ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಯಲ್ಲಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ, ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಾವಲಂಬನೆಗೆ ಪ್ರಾಮುಖ್ಯತೆಯನ್ನು ನೀಡುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ಕನಸಿನ ಕೂಸು 'ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ'.

ಡಾ. ಡಿ. ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿಯ ನಾಯಕತ್ವದಲ್ಲಿ ಸ್ಥಾಪಿತವಾದ ಎಸ್‌ಕೆಡಿಆರ್‌ಡಿಪಿ ಮತ್ತು ರುಡ್‌ಸೆಟ್ ಸಂಸ್ಥೆ ಮುಂತಾದ ಮಹತ್ವದ ಸಾಮಾಜಿಕ ಸಂಸ್ಥೆಗಳ ಸಾಲಿನಲ್ಲಿ, ಸಿರಿ ತನ್ನ ವಿಶಿಷ್ಟ ಸಾಮಾಜಿಕ ದೃಷ್ಟಿಕೋನದಿಂದ ವಿಶೇಷ ಸ್ಥಾನವನ್ನು ಪಡೆದಿದೆ.

ಸಿರಿ ಸಂಸ್ಥೆಯ ಪ್ರಮುಖ ವೈಶಿಷ್ಟ್ಯವೆಂದರೆ ಇದು ಲಾಭಗಳಿಸುವ ಉದ್ದೇಶದಿಂದ ಆರಂಭಿಸಲ್ಪಟ್ಟ ಸಂಸ್ಥೆಯಲ್ಲ. ಬದಲಾಗಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ ಮುಖ್ಯವಾಗಿ ಸಮಾಜದ ಹಿಂದುಳಿದವರ್ಗಗಳು, ಪರಿಶಿಷ್ಟಜಾತಿ ಸಮುದಾಯಗಳು, ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ಮಹಿಳೆಯರಿಗೆ ಗೌರವಯುತ ಜೀವನ, ಉದ್ಯೋಗ, ಆತ್ಮವಿಶ್ವಾಸ ಮತ್ತು ಆರ್ಥಿಕ ಸ್ವಾವಲಂಬನೆ ಒದಗಿಸುವ ಮಹತ್ತರವಾದ ಉದ್ದೇಶದಿಂದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಣಕಾಸಿನ ನೆರವಿನೊಂದಿಗೆ 'ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯನ್ನು 2004ರಲ್ಲಿ ಬೆಳ್ತಂಗಡಿಯಲ್ಲಿ ಪ್ರಾರಂಭಿಸಿದರು.

ಹೀಗೆ ಪ್ರಾರಂಭಗೊಂಡ ಸಿರಿ ಸಂಸ್ಥೆಯಲ್ಲಿ, ಯಾವುದೇ ರೀತಿಯ ವಿಶೇಷ ಅನುಭವ, ಪರಿಣತಿ ಇಲ್ಲದ ಗ್ರಾಮೀಣ ಮಹಿಳೆಯರಿಗೆ ವೇತನ ಸಹಿತವಾಗಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಿ ಅವರಿಂದ ಉತ್ತಮ ಗುಣಮಟ್ಟದ ಸಿದ್ಧ ಉಡುಪು ಉತ್ಪನ್ನಗಳು, ಫಿನಾಯಿಲ್, ಅಗರಬತ್ತಿ, ಕೋಕಂ ಜ್ಯೂಸ್, ಉಪ್ಪಿನಕಾಯಿ ಉತ್ಪನ್ನಗಳು ಸೇರಿದಂತೆ ಹಲವು ಬಗೆಯ ಗೃಹೋಪಯೋಗಿ ಉತ್ಪನ್ನಗಳನ್ನು ತಯಾರಿಸುವಂತೆ ಮಾಡುವುದು ಸಿರಿಯ ವಿಶೇಷತೆಯಾಗಿದೆ.

ಸಿರಿ ಉತ್ಪನ್ನಗಳನ್ನು ತಯಾರಿಸಲು ಪೂರಕ ವಾಗುವಂತೆ ಸುಮಾರು 50-60 ಹಳ್ಳಿಗಳಲ್ಲಿ ಘಟಕಗಳನ್ನು ಸ್ಥಾಪಿಸಿ, ಅಲ್ಲಿರುವ ಬಡಮಹಿಳೆಯರಿಗೆ ಉತ್ಪಾದನೆಗೆ ಬೇಕಾಗುವ ಕಚ್ಚಾಸಾಮಾಗ್ರಿಗಳನ್ನು ಪೂರೈಸಿ, ಅವರಿಂದ ತಯಾರಿಸಲಾದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ತಂದು ಆಯ್ದ ಪ್ರದೇಶಗಳಲ್ಲಿ ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿತ್ತು.

ಬೇರೆ ಬೇರೆ ಕಡೆಗಳಲ್ಲಿರುವ ಘಟಕಗಳಿಂದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ಸಾಗಿಸಲು ಅಧಿಕ ಸಾಗಾಟದ ವೆಚ್ಚ ವ್ಯಯವಾಗುತ್ತಿರುವುದರ ಜೊತೆಗೆ ಉತ್ಪನ್ನಗಳ ಗುಣಮಟ್ಟವನ್ನು ಕಾಪಾಡಲು ಬಹಳಷ್ಟು ಸಮಸ್ಯೆಗಳಾಗುತ್ತಿರುವ ಬಗ್ಗೆ ಸಿರಿಯ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್. ಜನಾರ್ದನ ಅವರು ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರಲ್ಲಿ ಚರ್ಚಿಸಿದಾಗ, ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಜೊತೆಗೆ ಸಿರಿಯ ವಿವಿಧ ಉತ್ಪಾದನಾ ವಿಭಾಗಗಳು ಒಂದೇ ಸೂರಿನಡಿ ಕಾರ್ಯಾಚರಿಸುವ ನಿಟ್ಟಿನಲ್ಲಿ ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರು ಬೆಳ್ತಂಗಡಿಯ ರೆಂಕೆದಗುತ್ತುವಿನ ಬಳಿ ಸುಮಾರು ಏಳು ಎಕರೆ ನಿವೇಶನವನ್ನು 2023 ಫೆಬ್ರವರಿಯಲ್ಲಿ ಖರೀದಿಸಿ, ಈ ವಿಶಾಲವಾದ ಸೌರಶಕ್ತಿಯಿಂದ ಬೆಳಗುವ ಸಿರಿ ಪರಿಸರದಲ್ಲಿ 71.00 ಕೋಟಿ ರೂ. ವೆಚ್ಚದಲ್ಲಿ ಸುಮಾರು 1.50ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಸಿರಿ ಸಂಸ್ಥೆಗೆ ನೂತನವಾದ ಬೃಹತ್ ಕಟ್ಟಡವನ್ನು ನಿರ್ಮಿಸಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸುವಂತಹ ಐತಿಹಾಸಿಕ ಕಾರ್ಯಕ್ಕೆ 2023ನೇ ವರ್ಷದ ಮಾರ್ಚ್ ತಿಂಗಳಲ್ಲಿ ಪೂಜ್ಯರು ಹಾಗೂ ಅಮ್ಮನವರು ಶಿಲಾನ್ಯಾಸವನ್ನು ನೆರವೇರಿಸಿದರು. 20-03-2025ರಂದು ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ತದನಂತರ ಹೊಸ ಕಟ್ಟಡದಲ್ಲಿ ಸಿರಿ ಉತ್ಪನ್ನಗಳ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯು ದಕ್ಷಿಣಕನ್ನಡ ಜಿಲ್ಲೆಯ 2000 ಸ್ವ-ಸಹಾಯ ಗುಂಪುಗಳ ಮಾಲಿಕತ್ವ ಹೊಂದಿರುವ ಕಲಂ 8ರ ಕಂಪೆನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾವಣೆಗೊಂಡ ಸಂಸ್ಥೆಯಾಗಿದ್ದು, ಸಿರಿ ಸಂಸ್ಥೆಯು ಯಾವುದೇ ಲಾಭದ ಉದ್ದೇಶವಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಆದಾಯ ತೆರಿಗೆ ಕಾಯ್ದೆ-1961ರ ಅಡಿಯಲ್ಲಿ ವಿಶೇಷವಾಗಿ ನೀಡಲ್ಪಡುವ ಕಲಂ 12ಎ ಮತ್ತು ಕಲಂ 80ಜಿಯ ಆದಾಯ ತೆರಿಗೆ ವಿನಾಯಿತಿಯನ್ನು ಪಡೆದುಕೊಂಡಿದೆ. ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಇಂತಹ ಮಹಿಳಾ ಸಿಬ್ಬಂದಿಗಳನ್ನು ಹೊಂದಿರುವ ಸಿರಿ ಸಂಸ್ಥೆಯಲ್ಲಿ ಗ್ರಾಮೀಣ ಮಹಿಳೆಯರು ಉತ್ಪಾದಿಸುವ ಉತ್ಕೃಷ್ಟ ಗುಣಮಟ್ಟದ ಗೃಹೋಪಯೋಗಿ ಆಹಾರೋತ್ಪನ್ನಗಳು, ಸಿರಿಧಾನ್ಯಗಳು, ಸಿದ್ಧ ಉಡುಪುಗಳು, ಅಗರಬತ್ತಿ, ರೆಕ್ಸಿನ್, ಶುಚಿಕಾರಕ ಇತ್ಯಾದಿ ಉತ್ಪನ್ನಗಳನ್ನು ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿದ್ದು, ಈ ಮೂಲಕ ಪ್ರತ್ಯಕ್ಷವಾಗಿ/ಪರೋಕ್ಷವಾಗಿ 5000ಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ಆಶ್ರಯ ನೀಡಿ, ಅವರ ಬಾಳು ಹಸನಾಗಿಸುವಲ್ಲಿ ಶ್ರಮಿಸುತ್ತಿದೆ.

ಸಿರಿ ಕೇಂದ್ರ ಕಚೇರಿಗೆ ಧರ್ಮಸ್ಥಳ, ಉಜಿರೆ, ಬೆಳ್ತಂಗಡಿ, ವೇಣೂರು, ಗೇರುಕಟ್ಟೆ, ಉಪ್ಪಿನಂಗಡಿ, ನಾರಾವಿ, ಗುರುವಾಯನಕೆರೆ, ಮಡಂತ್ಯಾರು, ಪುಂಜಾಲಕಟ್ಟೆ ಇತ್ಯಾದಿ ಕಡೆಗಳಿಂದ ಕೆಲಸಕ್ಕಾಗಿ ಬರುವ ಸಿಬ್ಬಂದಿಗಳಿಗೆ ಬೆಳಿಗ್ಗೆ ಮತ್ತು ಸಂಜೆ ತಮ್ಮ ಕರ್ತವ್ಯದ ಸ್ಥಳಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಉಚಿತವಾಗಿ ಎರಡು ಬಸ್ಸುಗಳ ಸೌಕರ್ಯವನ್ನು ಒದಗಿಸಲಾಗಿದೆ.

ಕೆ. ಎನ್. ಜನಾರ್ಧನ, ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ (ಆರ್)



ಸಿದ್ಧ ಉಡುಪುಗಳ ಉತ್ಪಾದನಾ ಘಟಕ

ಕೇಂದ್ರ ಕಚೇರಿ ಆವರಣದಲ್ಲಿರುವ ಶ್ರೀ ಸನ್ನಿಧಿ ಬ್ಲಾಕ್‌ನಲ್ಲಿ ಸಿರಿ ಸಂಸ್ಥೆಯ ಸಿದ್ಧ ಉಡುಪು ಉತ್ಪಾದನಾ ಘಟಕ ಕಾರ್ಯಾಚರಿಸುತ್ತಿದ್ದು, ಸದ್ರಿ ಘಟಕದಲ್ಲಿ ಅಳವಡಿಸಲಾಗಿರುವ ಬ್ಯಾಂಡ್ ನೈಫ್ ಮೆಷಿನ್, ಫ್ಯಾಬ್ರಿಕ್ ಚೆಕ್ಕಿಂಗ್ ಮೆಷಿನ್, ಕಫ್ ಟರ್ನಿಂಗ್ ಮೆಷಿನ್, ಕೀಹೋಲ್ ಮೆಷಿನ್, ಪ್ರೊಫೈಲ್ ಮೆಷಿನ್‌ಗಳನ್ನು ಹೊಂದಿರುವ ಮೆಷಿನರಿಗಳನ್ನು ಉಪಯೋಗಿಸಿಕೊಂಡು, ಪುರುಷರಿಗಾಗಿ ಅಡಿಸ್ಟೆಡ್ ಪ್ರೀಮಿಯಂ ಶರ್ಟ್‌ಗಳು, ಸ್ವದೇಶಿ ಪ್ರೀಮಿಯಂ ಶರ್ಟ್‌ಗಳು, ಖಾದಿ ಶರ್ಟ್, ಅಡಿಸ್ಟೆಡ್ ಪ್ಯಾಂಟ್ ಇತ್ಯಾದಿ ಉತ್ತಮ ಗುಣಮಟ್ಟವನ್ನು ಹೊಂದಿರುವ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಮಹಿಳೆಯರಿಗಾಗಿ ಕುರ್ತಿಗಳು, ಟಾಪ್ಸ್, ನೈಟಿ, ಸೀರೆ, ಸ್ಕರ್ಟ್ ಮೊದಲಾದ ನವನವೀನ ಮಾದರಿಯ ಸಿದ್ಧ ಉಡುಪುಗಳನ್ನು ಉತ್ಪಾದಿಸಲಾಗುತ್ತಿದೆ. ಅಲ್ಲದೆ ಎಸ್.ಡಿ.ಎಮ್. ಶಿಕ್ಷಣ ಸಂಸ್ಥೆಗಳು ಸೇರಿದಂತೆ ರಾಜ್ಯಾದ್ಯಂತ ಇರುವ ಹಲವಾರು ಶಾಲಾ-ಕಾಲೇಜುಗಳು, ವಿವಿಧ ಭಜನಾ ಮಂಡಳಿಗಳು, ಪೆಟ್ರೋಲ್ ಪಂಪ್‌ಗಳು, ಖಾಸಗಿ ಆಸ್ಪತ್ರೆಗಳು ಮುಂತಾದ ಸಂಸ್ಥೆಗಳಿಂದ ಸಮವಸ್ತ್ರ ಉತ್ಪನ್ನಗಳಿಗೆ ಬೇಡಿಕೆ ಸಂಗ್ರಹಿಸಿ ಸಕಾಲದಲ್ಲಿ ಸಿದ್ಧಪಡಿಸಿ ಉತ್ಪನ್ನಗಳನ್ನು ಪೂರೈಕೆ ಮಾಡಲಾಗುತ್ತಿದೆ.

ಅಗರಬತ್ತಿ ಉತ್ಪನ್ನಗಳ ಉತ್ಪಾದನಾ ಘಟಕ

ಅದೇ ರೀತಿ ವೈಷ್ಣವಿ ಬ್ಲಾಕ್‌ನ ಒಂದನೇ ಮಹಡಿಯಲ್ಲಿ ಅತ್ಯಾಧುನಿಕ ಮೆಷಿನರಿಗಳೊಂದಿಗೆ ಸಿರಿ ಸಂಸ್ಥೆಯ ಅಗರಬತ್ತಿ ಉತ್ಪಾದನಾ ಘಟಕವು ಕಾರ್ಯಾಚರಿಸುತ್ತಿದ್ದು, ಇಲ್ಲಿ ಅಗರಬತ್ತಿ ಉತ್ಪನ್ನಗಳ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಡಿಪ್ಪಿಂಗ್ ಮೆಷಿನ್, ಕೌಂಟಿಂಗ್ ಮತ್ತು ಲೇಡಿ ಪ್ಯಾಕಿಂಗ್ ಮೆಷಿನರಿಗಳನ್ನು, ವಿಭೂತಿ ಸುವಾಸನೆಯ ಒಟ್ಟು 22 ಬಗೆಯ ಅಗರಬತ್ತಿಗಳನ್ನು ಉತ್ಪಾದಿಸಿ ರೋಲ್, ಪೌಚ್ ಹಾಗೂ ಪ್ಯಾಕೆಟ್‌ಗಳಲ್ಲಿ ಗ್ರಾಹಕರಿಗೆ ಪೂರೈಸಲಾಗುತ್ತಿದೆ.

ಬೈಕ್-ಟ್ರ್ಯಾಕ್ಟರ್ ಡಿಕ್ಕಿ: ಇಬ್ಬರ ದುರ್ಮರಣ



ಕಲಬುರಗಿ: ಮದುವೆ ಪಾರ್ಟಿಗೆ ತೆರಳುತ್ತಿದ್ದ ವೇಳೆ ಬೈಕ್ ಹಾಗೂ ಟ್ರ್ಯಾಕ್ಟರ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನವವಿವಾಹಿತ ಯುವಕ ಸೇರಿ ಇಬ್ಬರು ಮೃತಪಟ್ಟ ದುರ್ಘಟನೆ ನಗರದ ಹೊರವಲಯದ ಸೇಡಂ ರಸ್ತೆಯಲ್ಲಿ ಗುರುವಾರ ತಡರಾತ್ರಿ ನಡೆದಿದೆ.

ಮೃತರನ್ನು ಮುಗಟಿ ಗ್ರಾಮದ ಸಂದೀಪ್ ಕಂಟೀಕರ್ (25) ಹಾಗೂ ಅಂಕಲಗಿ ಗ್ರಾಮದ ದಿನೇಶ್ (31) ಎಂದು ಗುರುತಿಸಲಾಗಿದೆ. ಕಳೆದ ಮೇ 15ರಂದು ಸಂದೀಪ್ ವಿವಾಹವಾಗಿದ್ದು, ಮದುವೆಯ ಸಂಭ್ರಮದ ಭಾಗವಾಗಿ ಸ್ನೇಹಿತರಿಗೆ ಪಾರ್ಟಿ ನೀಡಲು ತನ್ನ ಊರಿನತ್ತ ಕರೆದುಕೊಂಡು ಹೋಗುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ.ಸಂದೀಪ್ ಹಾಗೂ ದಿನೇಶ್ ಬೈಕ್‌ನಲ್ಲಿ ತೆರಳುತ್ತಿದ್ದರೆ, ಇತರೆ ಸ್ನೇಹಿತರು ಕಾರಿನಲ್ಲಿ ಹಿಂಬಾಲಿಸುತ್ತಿದ್ದರು. ಈ ವೇಳೆ ಸೇಡಂ ರಸ್ತೆಯಲ್ಲಿ ಎದುರಾದ ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.ಮದುವೆಯಾಗಿ ಕೇವಲ 15 ದಿನಗಳಲ್ಲೇ ಸಂದೀಪ್ ಅಪಘಾತದಲ್ಲಿ ಮೃತಪಟ್ಟಿರುವುದು ಕುಟುಂಬಸ್ಥರ ಆಕ್ರಂದನಕ್ಕೆ ಕಾರಣವಾಗಿದೆ. ಸ್ಥಳದಲ್ಲಿ ಮನಕಲಕುವ ದೃಶ್ಯಗಳು ಕಂಡು ಬಂದಿದ್ದು ಘಟನೆ ಕುರಿತು ಸಂಚಾರಿ-2 ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ವಿದ್ಯುತ್ ತಂತಿ ಸ್ಪರ್ಶಿಸಿ ರೈತ ಸಾವು

ಕುಂದಗೋಳ: ತಾಲೂಕಿನ ಗೌಡಗೇರಿ ಗ್ರಾಮದಲ್ಲಿ ವಿದ್ಯುತ್ ತಂತಿಯ ಸ್ಪರ್ಶದಿಂದ ರೈತ ಮೃತಪಟ್ಟ ಘಟನೆ ನಡೆದಿದೆ.



ಗೌಡಗೇರಿ ಗ್ರಾಮದ ನಿವಾಸಿ ಸುರೇಶ ಬಸಪ್ಪ ಮಣ್ಣೂರ (52) ಮೃತ ದುರ್ದೈವಿ ಎಂದು ಗುರುತಿಸಲಾಗಿದೆ.

ಗುರುವಾರ ಮಧ್ಯಾಹ್ನ ತಮ್ಮ ಜಮೀನಿನ ಸರ್ವೆ ನಂ.117/2ರಲ್ಲಿ ಇರುವ ವಿದ್ಯುತ್ ಕಂಬ ಹಾಗೂ ಬೋರ್‌ವೆಲ್ ಪಂಪ್‌ಸೆಟ್ ನಡುವಿನ ಪ್ರದೇಶದಲ್ಲಿ ಹುಲ್ಲು ತೆಗೆಯುವ ಕೆಲಸ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ವಿದ್ಯುತ್ ಹರಿಯುತ್ತಿದ್ದ ತಂತಿಯ ಸ್ಪರ್ಶಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಈ ಕುರಿತು ಗುಡಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

IN THE COURT OF THE V ADDITIONAL CIVIL JUDGE & J.M.FC. AT BALLARI

Crl. M.C. NO. 373 OF 2026

Between:

1) Chiranjivi.H. S/o Jamadhagni, aged about 26 years, Coolie, 2) Minor Harijna Pandu S/o Chiranjivi H., aged about 5 years, student, since minor represented by his natural guardian and father by name Chiranjivi.H. S/o Jamadhagni, aged about 26 years, Coolie, both are resident of W.No.4, D.No.432, Ambedkar Colony, Koluru village, Kurugodu taluk, Ballari district. ....Petitioners

And

The Tahasildar cum Register of Births and deaths, Taluk office, Kurugodu, Ballari district .....Respondent

TO WHOMSOEVER IT MAY CONCERN

NOTICE

WHEREAS above named petitioner herein have instituted above petition under section 13(2) of Births and Deaths Act 1969 before the respondent for the purpose of seeking death certificate of the petitioner No.1's wife by name Smt.Jayamma @ Harijana Jayamma W/o H.Chiranjivi, who was died on 07-04-2024 at petitioners residence.

Any person interested are hereby summoned to appear before this court in person or by pleader duly instructed and able to answer all material questions relating to the petition on 30/06/2026 at 11-00.a.m. before this court.

In default of your appearance on the date/day of above petition will be heard an determined as 'ex-parte'.

Given under my hand and seal of the court of this 27th day of 05-2026

By order of the court

Sd/- Chief Ministerial Officer

V Addl. Civil Judge & J.M.F.C. Court Ballari

Sd/- H. Eranna, Advocate for petitioners

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 548/2026

ಅರ್ಜಿದಾರರು : ಶ್ರೀ ಮಲ್ಲಯ್ಯ ಹಿರೇಮಠ ತಂದೆ ಚನ್ನವೀರಯ್ಯ, ವಯಸ್ಸು 76 ವರ್ಷ, ಸಾ॥ ಅಡವಿಮಲ್ಲನಕೆರೆ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಚಿಕ್ಕಪ್ಪನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ಚಿಕ್ಕಪ್ಪನಾದ ಶಿವಾನಂದಯ್ಯ ತಂದೆ ಲೇಟ್ ಹೆಚ್.ಎಂ. ಮಹಾಲಿಂಗಯ್ಯ ಇವರು ದಿನಾಂಕ: 06-04-1985 ರಂದು ಅಡವಿಮಲ್ಲನಕೇರಿ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 12/08/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 26/05/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/– ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ
ಹೂವಿನಹಡಗಲಿ
ಸಹಿ/– ಶ್ರೀ ಭಾಸ್ಕರ್ ಕೆ. (ಬಿ.ಕೆ.)
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 91/2026

ಅರ್ಜಿದಾರರು : ಮಂಜುನಾಯ್ಕ್ ವಾಕ್ಲೋತ್ ತಂದೆ ಲೇ॥ ಮೀಠ್ಯಾನಾಯ್ಕ, ವಯಸ್ಸು 32 ವರ್ಷ, ಸಾ॥ ದಾಸರಹಳ್ಳಿತಾಂಡ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಅಜ್ಜನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ನನ್ನ ಅಜ್ಜನಾದ ಸಾಮ್ಯಾನಾಯ್ಕ ತಂದೆ ಶೇವ್ಯಾನಾಯ್ಕ ಇವರು ದಿನಾಂಕ: 01-01-1980 ರಂದು ದಾಸರಹಳ್ಳಿತಾಂಡ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 03/06/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 19/05/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/– ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ
ಹೂವಿನಹಡಗಲಿ
ಸಹಿ/– ಶ್ರೀ ಪ್ರವೀಣಕುಮಾರ ಅಂಬಿಗರ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕ್ರಿಮಿನಲ್ ಮಿಸಲೆನಿಯಸ್ ನಂ : 475/2026

ಮಾನ್ಯ ಜೆ.ಎಂ.ಎಫ್.ಸಿ ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ರೇಣುಕಾ ಕೋಂ ಗದಿಗೆಪ್ಪ ಲಕ್ಷ್ಮಣನವರ ವಯಾ 59 ವರ್ಷ, ಉದ್ಯೋಗ: ಮನೆಗೆಲಸ, ಸಾ: ಸವಣೂರ ದಂಡಿನಪೇಟೆ ಓಣಿ, ತಾ॥ ಸವಣೂರ ಜಿ॥ ಹಾವೇರಿ ಹಾಗೂ ಇತರರು

ವಿರುದ್ಧ

ಎದುರುಗಾರರು : ಜನನ ಮರಣಗಳ ನೋಂದಣಿ ಅಧಿಕಾರಿಗಳು, ಇವರ ಪರವಾಗಿ ಮುಖ್ಯಾಧಿಕಾರಿಗಳು, ಪುರಸಭೆ ಸವಣೂರ.

ಇಸ್ತಿಯಾರ

ಈ ಮೇಲ್ಕಾಣಿಸಿದ ಪ್ರಕರಣದಲ್ಲಿ ಕೊಡುವ ನೋಟೀಸು ಏನೆಂದರೆ,

ಈ ಮೇಲ್ಕಂಡ ಪ್ರಕರಣದಲ್ಲಿ 1 ರಿಂದ 3ನೇ ಅರ್ಜಿದಾರರ ತಂದೆಯಾದ ಫಕ್ಕೀರಪ್ಪ ತಂದೆ ಗೋವಿಂದಪ್ಪ ತೊಂಡೂರ ಇವರು ದಿನಾಂಕ: 10-03-2003 ರಂದು ಸವಣೂರಿನಲ್ಲಿ 1ನೇ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಕುರಿತು ಮೇಲ್ಕಂಡ ನ್ಯಾಯಾಲಯದಲ್ಲಿ ಆದೇಶ ಪಡೆದು ಎದುರುಗಾರರ ಜನನ ಮರಣ ನೊಂದಣಾಧಿಕಾರಿಗಳಲ್ಲಿ ಹೆಸರು ಮತ್ತು ದಿನಾಂಕವನ್ನು ನಮೋದ ಮಾಡಿಕೊಳ್ಳುವವರು ಇರುತ್ತಾರೆ. ಆದರ ಬಗ್ಗೆ ಸಾರ್ವಜನಿಕರು ಯಾರದಾದರೂ ತಂಟೆ ವ, ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ದಿನಾಂಕ : 01-07-2026 ರಂದು ಮಾನ್ಯ ನ್ಯಾಯಾಲಯಕ್ಕೆ ಬೆಳಿಗ್ಗೆ 11-00 ಘಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೇ ನಿಮ್ಮ ಪರವಾಗಿ ನ್ಯಾಯವಾದಿಗಳ ಮುಖಾಂತರ ಹಾಜರಾಗಿ ತಮ್ಮ ಹೇಳಿಕೆ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರ್ ಹಾಜರಾತಿಯಲ್ಲಿ ಅರ್ಜಿಯನ್ನು ನಿಕಾಲಿ ಮಾಡಲಾಗುವುದು ಅಂತಾ ಕೊರ್ಟಿನ ನೋಟೀಸು. ಇಂದು ದಿನಾಂಕ : 29-05-2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತು.

ಸ್ಥಳ : ಸವಣೂರ
ದಿನಾಂಕ : 29-05-2026

ಸಹಿ/– ಶಿರಸ್ತೇದಾರರು
ಸಿವ್ಹಿಲ್ ಜಡ್ಜ್ ನ್ಯಾಯಾಲಯ, ಸವಣೂರ
ಸಹಿ/– ಏಮ್.ಎಸ್. ಮುದಗಲ್
ಅರ್ಜಿದಾರರ ಪರ ವಕೀಲರು, ಸವಣೂರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆ, ನ್ಯಾಯಾಲಯದ ರಸ್ತೆ
ಚಾಮರಾಜನಗರ ವಿಭಾಗ, ಚಾಮರಾಜನಗರ

Ph : Office & EE - 08226-226054 E-mail: eerdwsd.chn2014gmail.com

ಟೆಂಡರ್ ಪ್ರಕಟಣೆ

ಸಂಖ್ಯೆ : 01 / 2026-27 ದಿನಾಂಕ : 29.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ 2026-27 Construction of 50KL Over Head Tanks of Gundlupete Taluk (2 Packages) in Chamarajanagara District, ಕಾಮಗಾರಿಯ ಅಂದಾಜು ಮೊತ್ತವು ರೂ. 30.00 ಲಕ್ಷದಿಂದ ರೂ. 45.00 ಲಕ್ಷ ಮಿತಿಯೊಳಗೆ ಇರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಎಲ್ಲಾ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ- 2.0 kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ. 29.05.2026 ಮಧ್ಯಾಹ್ನ 3.00 ನಂತರ ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 08.06.2026, ಸಂಜೆ 17.00, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.06.2026 ಬೆಳಿಗ್ಗೆ 11.00 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.06.2026 ಬೆಳಿಗ್ಗೆ 11.00 ಮತ್ತು ಆರ್ಥಿಕ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ ನೈರ್ಮಲ್ಯ ಇಲಾಖೆ,
ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ : ಚಾ.ನಗರ : 136:2026-27

ರೈತರಿಗೆ ಶುಭ ಸುದ್ದಿ

ಭಾರತ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಹೊರಡಿಸಿದ ಆದೇಶ ಸಂಖ್ಯೆ S.O.2900(E), ದಿನಾಂಕ: 24-10-2015, ಅನುಸಾರ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಕೆಳಗಿನ 100% ಜಲದಲ್ಲಿ ಕರಗುವ ಮಿಶ್ರ ರಸಗೊಬ್ಬರಗಳನ್ನು (ದ್ರವ /ಗ್ರಾನುಲರ್ ರೂಪದಲ್ಲಿ) ಮಾರುಕಟ್ಟೆಗೆ ತರಲು ಉದ್ದೇಶಿಸಲಾಗಿದೆ.

ಮಾರುಕಟ್ಟೆಗೊಳಿಸಿದವರು: ಎಂ/ಎಸ್ ಕಿಸಾನ್ ಪ್ಲಾಂಟ್ಕೇರ್ ಪ್ರೈವೇಟ್ ಲಿಮಿಟೆಡ್, ಮೊದಲ ಮಹಡಿ, ಬಿಲ್ಡಿಂಗ್ ನಂ./ಫ್ಲಾಟ್ ನಂ.: 1-1, ಶಾಪ್ ನಂ. 2, APMC ಯಾರ್ಡ್, ಅಮರಗೋಳ್, 2ನೇ ಮೇನ್ ರಸ್ತೆ, ಹುಬ್ಬಳ್ಳಿ, ಜಿಲ್ಲೆ: ಧಾರವಾಡ, ಕರ್ನಾಟಕ - 580025.

ಇಮೇಲ್: kisanplantcare27@gmail.com, ದೂರವಾಣಿ: 7207892229

ಕ್ರಮ ಸಂಖ್ಯೆ	ರಸಗೊಬ್ಬರ	ಪ್ರಕಾರಪೋಷಕಾಂಶ ಶೇಕಡಾವಾರು
1	N:P:K	19:19:19
2	N:P:K	00:00:50
3	N:P:K:Mg:B	15:05:30:2:0.02
4	N:P:K	24:24:16
5	N:P:K	15:08:35
6	N:P:K	13:40:13
7	N:P:K:S	16:00:09:19
8	N:P:K	10:05:30
9	N:P:K	28:28:00
10	N:P:K:S	9:27:18:7.5
11	N:P:K	20:20:20

ಈ ರಸಗೊಬ್ಬರಗಳು ಬೆಳೆಗಳ ಅಭಿವೃದ್ಧಿಗೆ ಹಾಗೂ ಹೆಚ್ಚಿನ ಉತ್ಪಾದನೆಗೆ ರೈತರಿಗೆ ಸಹಾಯಕವಾಗುತ್ತವೆ.

ತಯಾರಿಸಿದವರು : ಎಂ/ಎಸ್ ಕಿಸಾನ್ ಪ್ಲಾಂಟ್ಕೇರ್ ಪ್ರೈವೇಟ್ ಲಿಮಿಟೆಡ್ ಪ್ಲಾಟ್ ನಂ. 46, ಸರ್ವೆ ನಂ. 682 ರಿಂದ 717, ಐಪಿ ದಂಡು ಮಲ್ಕಾಪುರ, ಚೌಟುಪ್ಪಲ್ ಮಂಡಲ, ದಂಡು ಮಲ್ಕಾಪುರ ಇಂಡಸ್ಟ್ರಿಯಲ್ ಪಾರ್ಕ್, ಯಾದಾದ್ರಿ ಭುವನಗಿರಿ ಜಿಲ್ಲೆ, ತೆಲಂಗಾಣ - 508252.

ದಿನಾಂಕ: 30-05-2026

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,ರಾಮದುರ್ಗ ಉಪವಿಭಾಗ, ರಾಮದುರ್ಗ ಎಂ.ಎಲ್.ಬಿ.ಸಿ. ಕಾಲೋನಿ, ರಾಮದುರ್ಗ–591123,

Phone (Off.) 08332-241084 Email: acfrmd1990@gmail.com

ಕ್ರ.ಸಂ.ಸಅಸಂ/ರಾಮದುರ್ಗ/ಉವಿಭಾ/ಟೆಂಡರ್/2026–27, ದಿನಾಂಕ.29–05–2026.

: ಟೆಂಡರ್ ಪ್ರಕಟಣೆ 3ನೇ ಕರೆ: (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ)

ರಾಮದುರ್ಗ ಪ್ರಾದೇಶಿಕ ಉಪ ವಿಭಾಗ ವ್ಯಾಪ್ತಿಯ ವಿವಿಧ ವಲಯಗಳಲ್ಲಿ ಸನ್ 2026–27ನೇ ಸಾಲಿನ ಮುಂದುವರೆದ ಅರಣ್ಯೀಕರಣ, ಕಾಮಗಾರಿಗಳಿಗೆ ನೊಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ ಪುಸ್ತಕವನ್ನು ದಿನಾಂಕ:29–05–2026 ರಿಂದ ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ www.kppp.karnataka.gov.in ದಲ್ಲಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿನಾಂಕ:06–05–2026 ಸಾಯಂಕಾಲ 05.00 ಗಂಟೆಯವರೆಗೆ ಇ–ಪೋರ್ಟದಲ್ಲಿ ಅಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರನ ತಾಂತ್ರಿಕ ಬಿಡ್‌ನ್ನು ದಿನಾಂಕ:08–06–2026 ಮುಂಜಾನೆ 11.00 ಗಂಟೆಗೆ ಮತ್ತು ಹಣಕಾಸು (Financial) ಬಿಡ್‌ನ್ನು ದಿನಾಂಕ:09–06–2026 ಮುಂಜಾನೆ 11.00 ಗಂಟೆಗೆ ಅಥವಾ ಸದರಿ ದಿನದಂದು ಸರಕಾರಿ ರಜೆ ಘೋಷಣೆಯಾದಲ್ಲಿ ಮುಂದಿನ ಸರಕಾರಿ ಕೆಲಸದ ದಿನದಂದು ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ರಾಮದುರ್ಗ ಉಪವಿಭಾಗ, ರಾಮದುರ್ಗ

DIPR/BGM/RO-NO-336/KSMCA/2026-27

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.

ಆಸ್ತಿ ಅಧಿಕಾರಿಯವರ ಕಛೇರಿ, ಇರುವಕ್ಕಿ, ಆನಂದಪುರ–577412, ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979, ಇ–ಮೇಲ್: eo@uahs.edu.in

ಸಂಖ್ಯೆ: ಕೆಶಿನಾಕೃತೋವಿವಿ(ಇ)/ಆ.ಅ/ಉಖಿಅ/06/2026–27 ದಿನಾಂಕ : 27.05.2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿಗೆ ಅವಶ್ಯಕವಿರುವ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–3 ನಿಬಂಧನೆಗೊಳಪಟ್ಟಂತೆ ನೋಂದಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 16.06.2026 ಸಂಜೆ 4.00 ಗಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 17.06.2026 ಸಂಜೆ 4.30 ಗಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 19.06.2026 ಬೆಳಿಗ್ಗೆ 10.00 ಗಂಟೆಗೆ.

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬೇಕು ಹೆಚ್ಚಿನ ವಿವರಗಳಿಗಾಗಿ ಇ–ಪೋರ್ಟಲ್ ವೆಬ್‌ಸೈಟ್ ಇ–ಮೇಲ್ @ hphelpdesk.blr@intarvo.com ಅಥವಾ ಸಹಾಯವಾಣಿ ಸಂಖ್ಯೆ : 91–940214000 ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಉಗ್ರಾಣ ಖರೀದಿ ಅಧಿಕಾರಿ, ಕೇಂದ್ರ ಉಗ್ರಾಣ, ಕೆಶಿನಾಕೃತೋವಿವಿ, ಇರುವಕ್ಕಿ, ಆನಂದಪುರ –577412, ಸಾಗರ ತಾಲ್ಲೂಕು, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.130–05/ ಝೇಂಕಾರ್/2026–27

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ–ವಿಭಾಗ, ವಿಜಯಪುರ

ಸಂಖ್ಯೆ: ವಿಜೆಪಿ/ಸಾಅವಿ/ಇ–ಪ್ರೊಕ್ಯೂರ್‌ಮೆಂಟ್/ಕ.ಟೆಂ/2026–27

ದಿನಾಂಕ: 29.05.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ–ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026–27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಗಳಡಿ ಅನುದಾನ ನಿರೀಕ್ಷೆಯ ಮೇರೆಗೆ ನೆಡುತೋಪು ನಿರ್ಮಾಣ ಹಾಗೂ 14x20 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ದಿನಾಂಕ: 29.05.2026 ರಿಂದ 06.06.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಕರೆಯಲಾಗಿದೆ ಹಾಗೂ **(ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 08.06.2026 ರಂದು ಬೆಳಿಗ್ಗೆ 11.00 ಘಂಟೆಗೆ)** ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/116/ಕೆಎಸ್ಎಂಸಿಎ/2026–27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು–560 029
ಫೋನ್: 25536567/26096832/910/922 ಫ್ಯಾಕ್ಸ್: 080–25536105
E-mail: purchase@kmf.coop

ಸಂ. ಕಹಾಮ/ಖರೀದಿ/NPFP/ಇ–ಪ್ರೊಕ್./ಟೆಂಡರ್–928/2026 ದಿನಾಂಕ: 27.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆಯನ್ನು ಪಡೆಯಲು ದ್ವೈವಾರ್ಷಿಕ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Unit	Approximate qty For the period of Two Years	EMD Amount (Rs.)
1	Transportation of Nandini Packaging Film from NPFP, Bangalore to Unions/Units of KMF (in 3MTs/ 6MTs/ 10MTs Vehicle)	MTs	7200	5,40,000/-

ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 18.06.2026 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.

ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

\# 49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು–560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080–25586321
E-mail: ho@kspcb.gov.in, Website: https://kspcb.karnataka.gov.in

ಮಾನಿಮಂ/338/ಹಿಪಅ/ಗಣಿ/ಪಸಾಸ/2026–27/802 ದಿನಾಂಕ : 29.05.2026

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಶ್ರೀ. ಶರಣಬಸವ ಬಿನ್ ಜಂಬಣ್ಣ ಇವರು ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಚೀಕಲಪರ್ವಿ ಬ್ಲಾಕ್–04 ಗ್ರಾಮದ ಸರ್ವೆ ನಂ. 1 ಮತ್ತು 2/1ರ ಸಮೀಪದಲ್ಲಿರುವ ತುಂಗಭದ್ರ ನದಿಪಾತ್ರ ಯೋಜನೆಯ ಸಾಮಾನ್ಯ ಮರಳು ಬ್ಲಾಕ್–ಆರ್.ಎಸ್.ಬಿ.–63ರಲ್ಲಿ ಒಟ್ಟು 5.0585 ಹೆಕ್ಟೇರ್ (12.20 ಎಕರೆ) ಪ್ರದೇಶದಲ್ಲಿ ವಾರ್ಷಿಕ 83,550 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ಮತ್ತು ತಿದ್ದುಪಡಿಗಳಂತೆ ಬಿ1 ವರ್ಗದ ಚಟುವಟಿಕೆ 1(ಎ) – 'ಖನಿಜಗಳ ಗಣಿಗಾರಿಕೆ' ವರ್ಗವೆಂದು ಪರಿಗಣಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 32 MIN 2026, ದಿನಾಂಕ: 03.03.2026 ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ ದಿನಾಂಕ:20.03.2026ರ ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಯಚೂರು, ಇವರ ಪತ್ರ ದಿನಾಂಕ: 21.05.2026ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ** : ಶ್ರೀ. ಶರಣಬಸವ ಬಿನ್ ಜಂಬಣ್ಣ, # 1, ಆಲ್ದಾಳ್, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ–584 102.
2. **ಉದ್ದೇಶಿತ ಯೋಜನೆಯ ಸ್ಥಳ** : ಸರ್ವೆ ನಂ. 1 ಮತ್ತು 2/1ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯ ಸಾಮಾನ್ಯ ಮರಳು ಬ್ಲಾಕ್–ಆರ್.ಎಸ್.ಬಿ.–63, ಚಿಕಲಪರ್ವಿ ಬ್ಲಾಕ್–04 ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.
3. **ಉದ್ದೇಶಿತ ಯೋಜನೆಯ ವಿವರ** : ವಾರ್ಷಿಕ 83,550 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ : 30.06.2026 (ಮಂಗಳವಾರ), ಸಮಯ : ಬೆಳಿಗ್ಗೆ 10:30 ಗಂಟೆ, ಸ್ಥಳ: ಗುರು ವಿರೂಪಾಕ್ಷೇಶ್ವರ ಕಲ್ಯಾಣ ಮಂಟಪ, ಚಿಕಲಪರ್ವಿ ಗ್ರಾಮ, ಮಾದ್ಲಾಪುರ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.**
5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ : (ಅ) ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ, ರಾಯಚೂರು. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಜಿಲ್ಲೆ, ರಾಯಚೂರು. (ಈ) ತಹಶೀಲ್ದಾರರ ಕಾರ್ಯಾಲಯ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ. (ಉ) ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಯಚೂರು ಜಿಲ್ಲೆ. (ಊ) ನಗರ ಸಭೆ ಕಾರ್ಯಾಲಯ, ಮಾನ್ವಿ, ರಾಯಚೂರು ಜಿಲ್ಲೆ. (ಋ) ಗ್ರಾಮ ಪಂಚಾಯತ್ ಕಾರ್ಯಾಲಯ, ಮಾದ್ಲಾಪುರ, ಮಾನ್ವಿ ತಾಲ್ಲೂಕು. (ಎ) ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ. (ಏ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು. (ಐ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು–560 001. (ಒ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು, ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:-khsdrp.divmys@gmail.com)

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುವ ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. 4 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಕನಿಷ್ಟ ಅಂದಾಜು ಮೊತ್ತ ರೂ.53.63 ರಿಂದ ಗರಿಷ್ಟ ಅಂದಾಜು ಮೊತ್ತ ರೂ.54.83 ಲಕ್ಷಗಳಾಗಿರುತ್ತವೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: **1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 08.06.2026 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 09.06.2026 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS/239/KSMCA/176/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ
ಕಾರ್ಯಾಲಯ, ಅಥಣಿ–591304, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಕೆರೆ/ಬಾಬಾನಗರ/2026–27/595
ದಿನಾಂಕ: 26–05–2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಕರೆ-2

(ಕೆ.ಪಿ.ಪಿ. ಪ್ರೋಟಲ್–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ಅಥಣಿ ತಾ:ಅಥಣಿ ಜಿ:ಬೆಳಗಾವಿ** ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಸಿ–4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, **A Valid Copy of the Registration of the firm/Company with the Register of companies** ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ **(as per KTPP act 2000)** ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ **www.kpp-portal.karnataka.gov.in** ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 109.96 ಲಕ್ಷಗಳು

1) ಇ–ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: 30–05–2026 ರ 10.30 ಬೆಳಗ್ಗೆ ರಿಂದ 06–06–2026 ರ ಸಾಯಂಕಾಲ 4.00 ಗಂಟೆ ವರಗೆ 2) ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 04–06–2026 ರ ಸಾಯಂಕಾಲ 4.00 ಗಂಟೆ ವರೆಗೆ 3) ಪೂರ್ಣವಾಗಿ ತುಂಬಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 30–05–2026ರ 10.30 ಬೆಳಿಗ್ಗೆ ರಿಂದ 06–06–2026 ರ ಸಾಯಂಕಾಲ 4.00 ಗಂಟೆ ವರಗೆ 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08–06–2026 ರ ಬೆಳಿಗ್ಗೆ 11.00 ಗಂಟೆವರೆಗೆ. (ಎಚ್.ಬಿ.ಸಿ ವಿಭಾಗ ಕಚೇರಿ ಅಥಣಿಯಲ್ಲಿ) 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 10–02–2026 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ).

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ–ಸಂಗ್ರಹಣಾ ಕೋಶ ವೆಬ್‌ಸೈಟ್ **http//:www.kppp. karnataka.gov.in/kpp-portal/index.seam link** ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ..

ಡಿಐಪಿಆರ್/ಬೆಳಗಾವಿ/339/ಮಣಿಪಾಲ್/2026–27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/854 ಫ್ಯಾಕ್ಸ್: 080–25536105
ಇ–ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–919/2026–27 ದಿನಾಂಕ: 29.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವಿರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approximate Nos.	Nominal EMD (Rs.)
1	Providing health Insurance coverage for the following 1. KMF Employees and their direct dependents, 2. Workmen Compensation policy covering casual and contract labours at all units of KMF, 3. Group Personnel Accident Policy covering KMF employees and 4. Public Liability Policy covering KMF and Its Units.	As per tender document	1,000/-

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಯಾವುದೇ Addendum/Corrigendum ಹೊರಡಿಸಿದಲ್ಲಿ, ಅದು ಕೇವಲ KPPP ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾತ್ರ ಲಭ್ಯವಾಗುತ್ತದೆ.

ಟೆಂಡರ್ ಪ್ರಾರಂಭವಾಗುವ ದಿನಾಂಕ : 29.05.2026 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05.06.2026 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 12.06.2026 ರ ಸಂಜೆ 5.30 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : 15.06.2026 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಉಪ ವಿಭಾಗ, ರವರ ಕಛೇರಿ ಕಲಬುರಗಿ

ಸಂಖ್ಯೆ: ಎ2/ಸಅಸಂ/ಇ–ಟೆಂಡರ/ಸಿಆರ್–/2026–27 ದಿನಾಂಕ : 27–05–2026

:: ಟೆಂಡರ್ ಪ್ರಕಟಣೆ (ಕರೆ–3) ::

(KPPP ಮೊದಲನೆ ಆವೃತ್ತಿಯಲ್ಲಿನ ಪ್ರೋರ್ಟಲ್ ಮೂಲಕ ಮಾತ್ರ)

ಕಲಬುರಗಿ ಸಾಮಾಜಿಕ ಅರಣ್ಯ ವಿಭಾಗ ಕಛೇರಿಯಿಂದ 2026–27ನೇ ಸಾಲಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ (ಎಸ್.ಎಫ್.ಪಿ), ಆರ್.ಎಸ್.ಪಿ. ಕೆ.ಎಫ್.ಡಿ.ಎಫ್ ಮತ್ತು ಕೆ.ಕೆ.ಆರ್.ಡಿ.ಬಿ. ಯೋಜನೆಗಳಡಿ ನೆಡುತೋಪು ನಿರ್ಮಾಣ/ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಗೆ ಇ–ಟೆಂಡರ್‌ನ್ನು kppp.karnataka.gov.in ನಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಕಾಮಗಾರಿಯ ವಿವರ : **ಕಲಬುರಗಿ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಪ್ರತ್ಯಕವಾಗಿ ಟೆಂಡರ್ ಅಹ್ವಾನಿಸಲಾಗಿದೆ.**

1) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಠ 520200/–, ಗರಿಷ್ಠ 2293700/–,** 2) ಲೆಕ್ಕ ಶೀರ್ಷಿಕೆ : ಸಾಮಾಜಿಕ ಅರಣ್ಯ ಯೋಜನೆ (ಎಸ್.ಎಫ್.ಪಿ.) ಆರ್.ಎಸ್.ಪಿ. ಕೆ.ಎಫ್.ಡಿ.ಎಫ್ ಮತ್ತು ಕೆ.ಕೆ.ಆರ್.ಡಿ.ಬಿ., 3) ಗುತ್ತಿಗೆದಾರರ ಅರ್ಹತೆ : 2026–27ನೇ ಸಾಲಿನಲ್ಲಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೊಂದಣಿ ಮಾಡಿರಬೇಕು. 4) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **04–06–2026 ಅಪರಾಹ್ನ 4.00 ಗಂಟೆಯವರೆಗೆ,** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **05–06–2026 ಅಪರಾಹ್ನ 4.00 ಗಂಟೆ ನಂತರ,** 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **06–06–2026 ಅಪರಾಹ್ನ 4.00 ಗಂಟೆ ನಂತರ** (ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದಲ್ಲಿ ಮಾತ್ರ ಆರ್ಥಿಕ ಬಿಡ್ ತೆರೆಯಲಾಗುವುದು. 7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ ಉಪ ವಿಭಾಗ ಎಸ್.ಬಿ. ಟೆಂಪಲ್ ರೋಡ, ಕಲಬುರಗಿ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ಉಪ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/171/ಕೆ.ಎಸ್.ಎಂ.ಸಿ.&ಎ/2026–27

ಪಟ್ಟಣ ಪಂಚಾಯತ್ ಕಾರ್ಯಾಲಯ, ಯಲಬುರ್ಗಾ

ಸಂ:ಪ.ಪಂ.ಯ/ಎಸ್ಎಫ್‌ಸಿ/ಕು.ನಿ.ಕಾ/2026–27/72 ದಿನಾಂಕ:–22–05–2026.

ಟೆಂಡರ್ ಪ್ರಕಟಣೆ

ಯಲಬುರ್ಗಾ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ್ ಯಲಬುರ್ಗಾ ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಮತ್ತು ಕೆ.ಡಬ್ಲ್ಯೂ 1 ಹಾಗೂ ಕೆ.ಜಿ–1 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ http://www.eproc.karnataka. gov.in ನಲ್ಲಿ ಪಿ.ಡಬ್ಲ್ಯೂ.ಡಿ.ಯಲ್ಲಿ ನೋಂದಣಿ ಮಾಡಿದ ಅಧಿಕೃತ ಗುತ್ತಿಗೆದಾರರು ಅರ್ಹ ಟೆಂಡರ್‌ದಾರರಿಂದ ದರಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಬೆಲೆಯನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಾವತಿಸಲು ಸೂಚಿಸಲಾಗಿದೆ.

ಕಾಮಗಾರಿಗಳ ವಿವರ: ಎಸ್.ಎಫ್.ಸಿ. ಕು.ನೀ 2026–27: 1 Package No.1 DMA/2026-27/WS/WORK_INDENT58028 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): **2.00** ಇ. ಎಂ. ಡಿ ಮೊತ್ತ (ರೂ.ಗಳಲ್ಲಿ): **5000.00** ಅರ್ಹ ಗುತ್ತಿಗೆದಾರರ ದರ್ಜೆ: **4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು**

2 Package No.2 DMA/2026-27/WS/WORK_INDENT58029 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): **2.80** ಇ. ಎಂ. ಡಿ ಮೊತ್ತ (ರೂ.ಗಳಲ್ಲಿ): **7000.00** ಅರ್ಹ ಗುತ್ತಿಗೆದಾರರ ದರ್ಜೆ: **ಅಧಿಕೃತ ಪೂರೈಕೆದಾರರು**


:: ಷರತ್ತುಗಳು :: 1 ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **05–06–2026** ಸಂಜೆ 5.30 ಗಂಟೆಯವರೆಗೆ 2 ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ: **08–06–2026** ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುವುದು. 3 ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ: **11–06–2026** ಬೆಳಿಗ್ಗೆ 11.00 ಗಂಟೆಗೆ ಅಥವಾ ಮುಂದಿನ ದಿನಗಳಲ್ಲಿ ಹಣಕಾಸು ಬಿಡ್ ತೆರೆಯಲಾಗುವುದು. 4 ಪ್ಯಾಕೇಜ್‌ಗಳ ವಿವರಗಳು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗವನ್ನು ಅಥವಾ www.yelburgatown.mrc.gov.in ನಲ್ಲಿ ಪಡೆಯಬಹುದಾಗಿದೆ. 5 ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ) : 2 ತಿಂಗಳು 6 As per Govt Order No. PWD65RDF2017, D:11-10-2018 ರನ್ವಯ ಶೇಕಡಾ 18%ರಷ್ಟು ಜಿ.ಎಸ್.ಟಿ. ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಪಾವತಿಸಲಾಗುವುದು. 7 ಪಟ್ಟಣ ಪಂಚಾಯತ್ ಕಾರ್ಯಾಲಯ, ಯಲಬುರ್ಗಾ ಟೆಂಡರ್‌ನ್ನು ಮಂಜೂರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– (ನಾಗೇಶ) ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಯಲಬುರ್ಗಾ.

ಸಹಿ/–(ಪ್ರಕಾಶ ಎಂ ನಾಶಿ) ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ್ ಯಲಬುರ್ಗಾ.

ಡಿಐಪಿಆರ್/ಕೊಪ್ಪಳ/115/ಕೆಎಸ್ಎಂಸಿಎ/2026–27

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ



ಸಾಯಿ ಸುದರ್ಶನ್ 58 ರನ್, ನಾಯಕ ಶುಬ್ಮನ್ 104 ರನ್ | ವೈಭವ್ ಹೋರಾಟ ವ್ಯರ್ಥ

ನಾಳೆ ಆರ್‌ಸಿಬಿ-ಗುಜರಾತ್ ಫೈನಲ್!

ಚಂಡೀಗಢ: ರಾಜಸ್ಥಾನ ನೀಡಿದ 215 ರನ್ ಸವಾಲನ್ನು ಸುಲಭದಲ್ಲಿ ಬೆನ್ನತ್ತಿದ ಶುಬ್ಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ ಐಪಿಎಲ್ 2026ರ ಫೈನಲ್ ಪ್ರವೇಶಿಸಿದೆ. ತಾವೇ ಫೈನಲಿಸ್ಟ್, ಐಪಿಎಲ್ ಟ್ರೋಫಿ ಗೆಲ್ಲೋದು ಎಂಬ ರೀತಿಯಲ್ಲಿ ಗುಜರಾತ್ ಫೈನಲ್‌ಗೆ ಗಜಗಾಂಭೀರ್ಯದಿಂದ ಫೈನಲ್‌ಗೆ ಲಗ್ಗೆ ಇಟ್ಟಿದ್ದು, ಮೇ 31ರಂದು ಭಾನುವಾರ ನಡೆಯುವ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವನ್ನು ಎದುರಿಸಲಿದೆ.

ಪವರ್‌ಪ್ಲೇ 6 ಓವರ್‌ಗಳಲ್ಲಿ ಗುಜರಾತ್ ವಿಕೆಟ್‌ನಷ್ಟವಿಲ್ಲದೆ ಭರ್ಜರಿ 69 ರನ್ ಸ್ಕೋರ್ ಮಾಡುವ ಮೂಲಕ ಪ್ರಾಬಲ್ಯ ಮೆರೆದಿತ್ತು. ಆತ್ಮವಿಶ್ವಾಸದಿಂದ ಬ್ಯಾಟ್ ಬೀಸಿದ ಗುಜರಾತ್ ನಾಯಕ ಶುಬ್ಮನ್ ಗಿಲ್ ಮತ್ತು ಸಾಯಿ ಸುದರ್ಶನ್ ರಾಜಸ್ಥಾನ ಡಗೌಟ್, ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದರು. ಸೂರ್ಯವಂಶಿ ಬ್ಯಾಟಿಂಗ್ ಮರೆಸುವಂತೆ ಬ್ಯಾಟೆತ್ತಿ ಎತ್ತಿ ಹೊಡೆದ ಇಬ್ಬರು ಆರಂಭಿಕರು ಮೊದಲ ವಿಕೆಟ್‌ಗೆ 12.5 ಓವರ್‌ಗಳಲ್ಲಿ 167 ರನ್ ಪೇರಿಸಿದರು. ದ್ವಿತೀಯ ಕ್ವಾಲಿಫೈಯರ್‌ನಲ್ಲಿ ಸೂರ್ಯವಂಶಿ ಸ್ಫೋಟಕ 96 ರನ್, ಜಡೇಜಾ ಅಜೇಯ 45 ರನ್ ಹಾಗೂ ಇನ್ನಿಂಗ್ಸ್ ಕೊನೆಯಲ್ಲಿ ಫೆರೇರಾ ನೀಡಿದ ಅದ್ಭುತ ಫಿನಿಶಿಂಗ್ ಟಚ್ ನೆರವಿನಿಂದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 214 ರನ್ ಕಲೆಹಾಕಿತು. ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ಬ್ಯಾಟಿಂಗ್ ಆಯ್ದುಕೊಂಡಿತು. ಮೊದಲ ಓವರ್‌ನಲ್ಲಿಯೇ ವೇಗಿ ಮೊಹಮ್ಮದ್ ಸಿರಾಜ್ ವಿಕೆಟ್ ಕಬಳಿಸಿದರು.

ಕಳೆದ ಪಂದ್ಯದಲ್ಲಿ 21 ಎಸೆತಗಳಲ್ಲಿ ಅರ್ಧ ಶತಕ ದಾಖಲಿಸಿದ್ದ ಧ್ರುವ್ ಜ್ಯುರೆಲ್(7) ಕಗಿಸೊ ರಬಾಡ ವೇಗದ ಬಲೆಗೆ ಸಿಲುಕಿದರು. ಒಟ್ಟಿನಲ್ಲಿ ಯಾವುದೇ ರಾಯಲ್ ಬ್ಯಾಟರ್ ಹೆಚ್ಚು ಹೊತ್ತು ನಿಂತಿಲ್ಲ.

ಸುದರ್ಶನ ಮತ್ತೊಮ್ಮೆ ಹಿಟ್ ವಿಕೆಟ್!: ಸ್ಫೋಟಕ ಆಟವಾಡಿದ ಸುದರ್ಶನ್ 58 ರನ್ ಗಳಿಸಿದ್ದಾಗ ಸತತ 2ನೇ ಬಾರಿಗೆ ಹಿಟ್ ವಿಕೆಟ್ ಆಗಿದ್ದಾರೆ. ಇದು ಐಪಿಎಲ್ ಇತಿಹಾಸದ 15ನೇ ಹಾಗೂ ಸುದರ್ಶನ್ ಅವರ 3ನೇ ಹಿಟ್‌ವಿಕೆಟ್.



- 46 ರನ್ ಗಳಿಸಿದ್ದಾಗ ಸುದರ್ಶನ್‌ರಿಂದ ವೈಭವ್‌ಗೆ ಜೀವದಾನ
- ಎಲಿಮಿನೇಟರ್‌ನಲ್ಲಿ ವೈಭವ್ 97, ಕ್ವಾಲಿಫೈಯರ್-2ನಲ್ಲಿ 96 ರನ್

ಮತ್ತೊಮ್ಮೆ ವೈಭವ್ ಶತಕವಂಚಿತ


ಯಾರ್ಕರ್ ಎಸೆದರೂ ಸುತ್ತಿಗೆಯಲ್ಲಿ ಹೊಡೆದಂತೆ ಚೆಂಡನ್ನು ಬೌಂಡರಿ ಗಟ್ಟುವ ವೈಭವ್ ಜಿಟಿ ಬೌಲರ್‌ಗಳನ್ನು ಕಾಡಿದರು. ರಬಾಡ, ಸಿರಾಜ್, ಹೋಲ್ಡರ್‌ರಂತಹ ವೇಗಿಗಳಿಗೆ ಕರುಣೆ ತೋರಿಸದೆ ಬೌಂಡರಿ ಸಿಕ್ಸರ್‌ಗಳನ್ನು ಚಚ್ಚಿದರು. ನಿರಂತರ ವಿಕೆಟ್‌ಗಳನ್ನು ಕಳೆದುಕೊಂಡ ರಾಜಸ್ಥಾನದ ರನ್‌ರೇಟ್ ಕಾಯ್ದುಕೊಂಡು ಆಪದ್ಬಾಂಧವನಾದರು. ದ್ವಿತೀಯ ಕ್ವಾಲಿಫೈಯರ್‌ನಲ್ಲಿ ಜಿಟಿ ವಿರುದ್ಧ ವೈಭವ್ ಆಟವು 90ರ ದಶಕದ ಸಚಿನ್ ತೆಂಡುಲ್ಕರ್ ಆಟವನ್ನು ನೆನಪಿಸಿದ್ದು ಸುಳ್ಳಲ್ಲ. ಹಿಂದಿನ ಇನ್ನಿಂಗ್ಸ್‌ಗಳಿಗೂ ಈ ಇನ್ನಿಂಗ್ಸ್‌ಗೂ ಅಜಗಜಾಂತರ ವ್ಯತ್ಯಾಸ ಕಂಡುಬಂದಿತ್ತು. ತಂಡದ ಇತರ ಬ್ಯಾಟರ್‌ಗಳ ವೈಫಲ್ಯದ ಜವಾಬ್ದಾರಿ ಹೆಗಲಿಗೇರಿಸಿಕೊಂಡ 15ರ ಪೋರ ತಮ್ಮ ಬ್ಯಾಟ್ ಎತ್ತಿ ಬೀಸುತ್ತಿದ್ದ ಪರಿ ಯಾವ ಕ್ರಿಕೆಟ್ ಅಭಿಮಾನಿಯೂ ಮರೆಯುವಂತಿಲ್ಲ. ಕೆಲವೊಂದು ಹೊಡೆತಗಳೂ ಮಿಸ್‌ಹಿಟ್ ಆಗಿ ಆಗಸದೆತ್ತರ ಹೋಗಿ ಬಿದ್ದರೂ ಯಾವ ಕ್ಷೇತ್ರರಕ್ಷಕರಿಲ್ಲದ ಜಾಗಗಳಲ್ಲಿ ಬಿದ್ದಿದ್ದರಿಂದ ವೈಭವ್ ಔಟಾಗಲಿಲ್ಲ. ಆದರೆ ರಬಾಡ ಎಸೆದ ಶಾರ್ಟ್ ಎಸೆತವನ್ನು ಬಲವಾಗಿ ಹೊಡೆಯುವ ಪ್ರಯತ್ನದಲ್ಲಿ ಡೀಪ್ ಥರ್ಡ್ ಮ್ಯಾನ್ ಕ್ಷೇತ್ರದಲ್ಲಿ ಪ್ರಸಿದ್ಧ್‌ಗೆ ಸುಲಭ ಕ್ಯಾಚಿತ್ತರು. ವೈಭವ್ ಔಟಾಗುತ್ತಿದ್ದಂತೆ ಒಂದು ಕ್ಷಣ ಸಂಪೂರ್ಣ ನಿಶ್ಶಬ್ದ ಆವರಿಸಿದ್ದು, ಆಮೇಲೆ ಪ್ರೇಕ್ಷಕರ ಕರತಾಡನ ಲಭಿಸಿತು. ಕಳೆದ ಪಂದ್ಯದಂತೆ ಮತ್ತೊಮ್ಮೆ ಶತಕ ಪೂರೈಸುವಲ್ಲಿ ವಿಫಲರಾದರು. 47 ಎಸೆತಗಳಿಂದ 96 ರನ್ ಗಳಿಸಿದ್ದ ಅವರು 7 ಸಿಕ್ಸರ್ ಮತ್ತು 8 ಬೌಂಡರಿ ಬಾರಿಸಿದ್ದರು. ಕೆಲವು ಇನ್ನಿಂಗ್ಸ್ ಶತಕಗಳಿಗೂ ಮೀರಿದ್ದು, ವೈಭವ್ ಔಟಾದಾಗ ರಾಯಲ್ಸ್ ಸ್ಕೋರ್ 172ಕ್ಕೆ 6.

ದುಬಾರಿ ಕೊನೆಯ ಓವರ್: 4 ಸಿಕ್ಸರ್!

ಲೆಗ್‌ಸ್ಪಿನ್ನರ್ ರಶೀದ್ ಖಾನ್ ಎಸೆದ ಇನ್ನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಡೊನೊವನ್ ಫೆರೇರಾ ಸತತ 3 ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ರಾಯಲ್ಸ್ ಸ್ಕೋರ್ 200ರ ಗಡಿ ದಾಟಿಸಿದರು. ಕೊನೆಯ ಎಸೆತದಲ್ಲಿ ಇನ್ನೊಂದು ಸಿಕ್ಸರ್ ಹೊಡೆದ ಫೆರೇರಾ 11 ಎಸೆತಗಳನ್ನು ಎದುರಿಸಿ 38 ರನ್ ಚಚ್ಚಿದರು. ಮುರಿಯದ 7ನೇ ವಿಕೆಟ್‌ಗೆ ಫೆರೇರಾ ಮತ್ತು ಜಡೇಜಾ 16 ಎಸೆತಗಳಿಂದ ಭರ್ಜರಿ 42 ರನ್ ಸೇರಿಸಿದರು. ರಶೀದ್ ಎಸೆದ ಕೊನೆಯ ಓವರ್‌ನಲ್ಲೇ 27 ರನ್ ಹರಿದುಬಂತು. ಅದರಲ್ಲಿ 4 ಸಿಕ್ಸರ್ ಸಹಿತ 26 ರನ್ ಫೆರೇರಾ ಬಾರಿಸಿದ್ದರು.

ಶುಬ್ಮನ್ ಗಿಲ್ ಸ್ಫೋಟಕ ಶತಕ!

ಇತ್ತೀಚೆಗೆ 2026ರ ಭಾರತ ಟಿ20 ವಿಶ್ವಕಪ್ ತಂಡದಲ್ಲಿ ಆಯ್ಕೆಯಾಗದ ಏಕದಿನ, ಟೆಸ್ಟ್ ತಂಡದ ನಾಯಕ ಶುಬ್ಮನ್ ಗಿಲ್ ತಮ್ಮನ್ನು ಟಿ20ಗೆ ಅನ್‌ಫಿಟ್ ಎಂದವರಿಗೆ ಸ್ಫೋಟಕ ಶತಕದ ಮೂಲಕ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. 200+ ಸ್ಟ್ರೈಕ್‌ರೇಟ್‌ನಲ್ಲಿ 49 ಎಸೆತಗಳಲ್ಲೇ ಶತಕ ದಾಖಲಿಸಿದ್ದಾರೆ. ಜಿಟಿ ನಾಯಕನಾಗಿ ಶತಕ ದಾಖಲಿಸಿದ್ದಷ್ಟೇ ಅಲ್ಲದೆ ಜಿಟಿ ತಂಡವನ್ನು 3ನೇ ಬಾರಿಗೆ ಫೈನಲ್ ಗೇರಿಸಿದ್ದಾರೆ.



ಕಿರುಸುದ್ದಿ

ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್: ವಿನೇಶ್‌ಗೆ ಸ್ಪರ್ಧಿಸಲು ಅನುಮತಿ

ಹೊಸದಿಲ್ಲಿ: ಕುಸ್ತಿಪಟು ವಿನೇಶ್ ಫೋಗಾಟ್ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಈ ಮೂಲಕ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ವಿನೇಶ್ ಫೋಗಾಟ್ ಬಯಕೆಗೆ ಇಂಬು ದೊರೆತಂತಾಗಿದೆ. ಇದಕ್ಕೆ ಮುನ್ನ ದಿಲ್ಲಿ ಹೈಕೋರ್ಟ್ ವಿನೇಶ್‌ಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಿತ್ತು. ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಹೋಗಿದ್ದ ಭಾರತೀಯ ಕುಸ್ತಿ ಒಕ್ಕೂಟವು, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರಿತ್ತು. ಈ ಕುರಿತು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಲು ನಿರಾಕರಿಸಿತು. ಆದರೆ ಹೈಕೋರ್ಟ್ ತನ್ನ ತೀರ್ಪಿನ ವೇಳೆ ವ್ಯಕ್ತಪಡಿಸಿದ ಹಲವಾರು ಅಭಿಪ್ರಾಯಗಳಿಗೆ ಸುಪ್ರೀಂ ಅಸಮ್ಮತಿ ಸೂಚಿಸಿದೆ. ತಾನು ಈಗ ನೀಡಿರುವ ಆದೇಶವು ಹೈಕೋರ್ಟಿನ ಆದೇಶವನ್ನು ಪುರಸ್ಕರಿಸಿದಂತಲ್ಲ ಎಂದು ಅದು ಹೇಳಿದೆ.

ಮೇ.30ರಿಂದ ಆಯ್ಕೆ ಟ್ರಯಲ್ಸ್ ಶುರುವಾಗಲಿದೆ. ವಿನೇಶ್ ಫೋಗಾಟ್ ಕುಸ್ತಿ ಒಕ್ಕೂಟದ ನಿಯಮಗಳನ್ನು ಒಪ್ಪಿಕೊಳ್ಳದ ಕಾರಣ ಅವರನ್ನು ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಕುಸ್ತಿ ಒಕ್ಕೂಟವು ನಿರಾಕರಿಸಿತ್ತು. ಆದರ ವಿರುದ್ಧ ಫೋಗಾಟ್ ನ್ಯಾಯಾಲಯದ ಮೊರೆ ಹೋಗಿದ್ದರು. ವಿನೇಶ್ ಫೋಗಾಟ್ ಅವರು ಡೋಪಿಂಗ್ ಪರೀಕ್ಷೆಗೆ ಒಳಪಡಲು ನಿರಾಕರಿಸುವುದಕ್ಕೆ ಕುಸ್ತಿ ಒಕ್ಕೂಟವು ಪ್ರಧಾನವಾಗಿ ಆಕ್ಷೇಪ ವ್ಯಕ್ತಪಡಿಸುತ್ತಿದೆ. ನ್ಯಾಯಾಲಯ ಕೂಡ ಈ ವಿಚಾರದಲ್ಲಿ ಫೋಗಾಟ್‌ರ ವರ್ತನೆಗೆ ಅಸಮಾಧಾನ ಸೂಚಿಸಿತು.

100 ಮೀ. ಓಟ: ಭಾರತಕ್ಕೆ ಕಂಚು

ಹೊಸದಿಲ್ಲಿ: ಭಾರತದ ನಿಪಮ್ 20ರ ಕೆಳಹರಯದ ಏಷ್ಯನ್ ಗೇಮ್ಸ್‌ನ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಭಾರತವು ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ 100 ಮೀಟರ್ ಮಹಿಳಾ ವಿಭಾಗದ ಸ್ಪರ್ಧೆಯಲ್ಲಿ ಪದಕವೊಂದನ್ನು ಗೆಲ್ಲುತ್ತಿರುವುದು 25 ವರ್ಷಗಳ ಬಳಿಕವಾಗಿದೆ. ನಿಪಮ್ 11.62 ಸೆಕೆಂಡುಗಳಲ್ಲಿ ಗುರಿ ತಲುಪಿ ಮೂರನೆಯ ಸ್ಥಾನ ಪಡೆದರು. ಕತಾರ್‌ನ ದಾನಾ ನೂರ್ ಚಿನ್ನ ಗಳಿಸಿದರೆ, ಚೀನಾದ ಕ್ವಿನ್‌ಕ್ಸುವಾನ್ ಬೆಳ್ಳಿ ಪಡೆದರು. ಉತ್ತರ ಪ್ರದೇಶದವರಾದ ನಿಪಮ್ 100 ಮೀಟರ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.



ಫೀಫಾ ವಿಶ್ವಕಪ್: ಅರ್ಜೆಂಟೀನಾ ತಂಡ ಪ್ರಕಟ, ಮೆಸ್ಸಿ ನಾಯಕ

ಚೆನ್ನೈ: 2026ರ ಫೀಫಾ ಫುಟ್ಬಾಲ್ ವಿಶ್ವಕಪ್‌ಗೆ 26 ಸದಸ್ಯರ ಅರ್ಜೆಂಟೀನಾ ತಂಡವನ್ನು ಕೋಚ್ ಲಿಯೊನೆಲ್ ಸ್ಕಲೋನಿ ಪ್ರಕಟಿಸಿದ್ದು, 38 ವರ್ಷದ ಲಿಯೊನೆಲ್ ಮೆಸ್ಸಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವನ್ನು ಮುನ್ನಡೆಸಲಿದ್ದಾರೆ. ಕಳೆದ ಬಾರಿ 2022ರ ಕತಾರ್ ವಿಶ್ವಕಪ್‌ನಲ್ಲಿ ತಮ್ಮ ನಾಯಕತ್ವದಲ್ಲಿ ಅರ್ಜೆಂಟೀನಾ ಗೆಲ್ಲಿಸಿ ಟ್ರೋಫಿಗೆ ಮುತ್ತಿಟ್ಟಿದ್ದರು. ಈ ಬಾರಿ ಬಹುಶಃ ಮೆಸ್ಸಿ ಕೊನೆಯ ವಿಶ್ವಕಪ್ ಆಗಿರುವ ಸಾಧ್ಯತೆಯಿದೆ. ಆದರೆ ಗಾಯದಿಂದ ಬಳಲುತ್ತಿದ್ದ ಮೆಸ್ಸಿ ವಿಶ್ವಕಪ್ ಆಡುತ್ತಾರೋ ಇಲ್ಲವೋ ಎಂಬ ಊಹಾಪೋಹಗಳಿದ್ದವು. ಎಲ್ಲದಕ್ಕೂ ಕೋಚ್ ಸ್ಕಲೋನಿ ತೆರೆ ಎಳೆದಿದ್ದಾರೆ. ಇಂಟರ್ ಮಯಾಮಿ ಕ್ಲಬ್ ಪರ ಮೇಜರ್ ಲೀಗ್ ಆಡುತ್ತಿದ್ದಾಗ ಮೆಸ್ಸಿ ಗಾಯಗೊಂಡಿದ್ದರು.

ಐಪಿಎಲ್‌ನಲ್ಲಿ ಸ್ಮಾರ್ಟ್‌ಗ್ಲಾಸ್ ಬಳಕೆ ನಿಷೇಧಿಸಿದ ಬಿಸಿಸಿಐ

ಹೊಸದಿಲ್ಲಿ: ಐಪಿಎಲ್‌ನಲ್ಲಿ ಆಟಗಾರರು ಹಾಗೂ ಪಂದ್ಯಾಧಿಕಾರಿಗಳು ಸ್ಮಾರ್ಟ್ ಸನ್‌ಗ್ಲಾಸ್ ಬಳಸುವುದನ್ನು ಬಿಸಿಸಿಐ ಭ್ರಷ್ಟಾಚಾರ ವಿರೋಧಿ ಘಟಕ (ಎಸಿಎಸ್‌ಯು) ನಿಷೇಧಿಸಿದೆ. ಈ ಸಾಧನಗಳಲ್ಲಿ ಲೈವ್ ಸ್ಟ್ರೀಮಿಂಗ್, ವಿಡಿಯೋ ಕಾಲ್ ಹಾಗೂ ಸಂದೇಶ ವಿನಿಮಯದಂತಹ ಸುಧಾರಿತ ಸಂವಹನ ಸೌಲಭ್ಯಗಳಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಲೀಗ್ ಫ್ರಾಂಚೈಸಿಗಳಿಗೆ ನೀಡಿದ ಸಲಹಾ ಪತ್ರದಲ್ಲಿ, ಕೆಲವು ಕಂಪನಿಗಳು ಆಟಗಾರರು ಹಾಗೂ ಸಹಾಯಕ ಸಿಬ್ಬಂದಿಗೆ ಸ್ಮಾರ್ಟ್ ಸನ್ ಗ್ಲಾಸ್‌ಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಸಾಧನಗಳಲ್ಲಿ ಲೈವ್ ಸ್ಟ್ರೀಮಿಂಗ್, ಸಂದೇಶ ಕಳುಹಿಸುವುದು ಮತ್ತು ಸ್ವೀಕರಿಸುವುದು, ಮೊಬೈಲ್ ಡೇಟಾ ಅಥವಾ ವೈ-ಫೈ ಮೂಲಕ ಆಡಿಯೋ ಹಾಗೂ ವಿಡಿಯೋ ಕರೆ ಮಾಡುವ ಸಾಮರ್ಥ್ಯಗಳಿವೆ. ಆದ್ದರಿಂದ, ಆಟಗಾರರು ಮತ್ತು ಪಂದ್ಯಾಧಿಕಾರಿಗಳು ಸ್ಮಾರ್ಟ್ ಗಾಗಲ್ಸ್‌ಗಳನ್ನು ಹೊಂದಿರುವುದು ಅಥವಾ ಬಳಸುವುದು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ.

ಮಹಿಳಾ ಹಾಕಿ: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ 2-0 ಜಯ

ಪರ್ತ್: ಮಹಿಳಾ ನೇಷನ್ಸ್ ಕಪ್ ಹಾಕಿ ಪಂದ್ಯಾವಳಿಗೆ ಮುನ್ನ ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತೀಯ ಮಹಿಳಾ ಹಾಕಿ ತಂಡವು ಆತಿಥೇಯರ ವಿರುದ್ಧ ಶುಕ್ರವಾರದ ಸ್ನೇಹ ಪಂದ್ಯದಲ್ಲಿ 2-0 ಗೋಲ್‌ಗಳಿಂದ ಗೆಲುವು ಸಾಧಿಸಿದೆ. ನಾಲ್ಕು ಪಂದ್ಯಗಳ ಹಾಕಿ ಸರಣಿಯಲ್ಲಿ ಭಾರತ ವನಿತೆಯರು 2-1 ಗೆಲುವಿನ ಮುನ್ನಡೆ ದಾಖಲಿಸಿದರು.

ಮೊದಲ ಟಿ20: ಮಂದನಾ ಪಡೆಗೆ 38 ರನ್ ಗೆಲುವು

ಲಂಡನ್: ಭಾರತೀಯ ಮಹಿಳೆಯರು ಇಂಗ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯವನ್ನು 38 ರನ್‌ಗಳಿಂದ ಜಯಿಸಿ ಸರಣಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಮೊದಲು ಬ್ಯಾಟ್ ಮಾಡಿದ ಭಾರತವು ನಿಧಾನ ಆರಂಭ ತೋರಿದರೂ ಬಳಿಕ 7ವಿಕೆಟ್ ಕಳಕೊಂಡು 188 ರನ್ ಗಳಿಸಲು ಶಕ್ತವಾಯಿತು. ಇದಕ್ಕುತ್ತರವಾಗಿ ಇಂಗ್ಲೆಂಡ್ 8 ವಿಕೆಟಿಗೆ 150 ರನ್ ಗಳಿಸಲಷ್ಟೆ ಶಕ್ತವಾಯಿತು. ಭಾರತವು ಮೊದಲ ಓವರಿನಲ್ಲೆ ಸ್ಮೃತಿ ಮಂಧಾನ ಮತ್ತು ಶೆಫಾಲಿ ಅವರನ್ನು ಕಳಕೊಂಡರೂ ಯಸ್ತಿಕಾ ಭಾಟಿಯಾ (54) ಮತ್ತು ಜೆಮಿಮಾ ರೋಡ್ರಿಗಸ್ (69) ಮೂರನೇ ವಿಕೆಟ್‌ಗೆ 76 ಎಸೆತಗಳಲ್ಲಿ 126 ರನ್ ಕಲೆಹಾಕುವ ಮೂಲಕ ತಂಡಕ್ಕೆ ಆಸರೆ ನೀಡಿದರು. ಇಬ್ಬರೂ 31 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು. 2024ರ ಏಪ್ರಿಲ್ ಬಳಿಕ ಯಸ್ತಿಕಾ ಮೊದಲ ಟಿ20 ಆಡಿದ್ದರು. ವೇಗಿ ಲೌರೆನ್ ಬೆಲ್ ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದರು. ದೀಪ್ತಿ ಶರ್ಮಾ 22 ರನ್ ಗಳಿಸಿದರು. ಇಂಗ್ಲೆಂಡ್ ಪರ 48 ಎಸೆತಗಳಿಂದ 67 ರನ್ ಹೊಡೆದ ಜೋನ್ಸ್‌ವೊಬ್ಬರೆ ಹೋರಾಟ ಪ್ರದರ್ಶಿಸಿದ್ದರು. ಭಾರತದ ಪರವಾಗಿ ಪದಾರ್ಪಣಾ ಪಂದ್ಯವನ್ನಾಡಿದ ನಂದಿನಿ ಶರ್ಮಾ 3 ವಿಕೆಟ್ ಹಾಗೂ ಕ್ರಾಂತಿ ಗೌಡ 2 ವಿಕೆಟ್ ಗಳಿಸಿದರು. ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಸ್ಮೃತಿ ಮಂದನಾ ನೇತೃತ್ವದ ಭಾರತ 1-0 ಮುನ್ನಡೆಯನ್ನು ಸಾಧಿಸಿದೆ. ಮುಂದಿನ ತಿಂಗಳು (ಜೂ.12ರಿಂದ) ಆರಂಭವಾಗುವ ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಇದು ಭಾರತದ ಕೊನೆಯ ಸರಣಿಯಾಗಿದೆ. ಜೂ.14ರಂದು ಭಾರತೀಯರು ಪಾಕಿಸ್ತಾನ ವನಿತೆಯರನ್ನು ಎದುರಿಸಲಿದ್ದಾರೆ.



ಸಂಕ್ಷಿಪ್ತ ಸ್ಕೋರ್
ಭಾರತ 188/7(20): ಜೆಮಿಮಾ 69(40), ಯಸ್ತಿಕಾ 54(40), ಲೌರೆನ್ ಬೆಲ್ 34ಕ್ಕೆ 3.
ಇಂಗ್ಲೆಂಡ್ 150/8(20): ಜೋನ್ಸ್ 67(48), ನಂದಿನಿ 34ಕ್ಕೆ 3, ಕ್ರಾಂತಿ 24ಕ್ಕೆ 2.
ಪಂದ್ಯಶ್ರೇಷ್ಠ: ಜೆಮಿಮಾ ರಾಡ್ರಿಗ್ಸ್

- ಪದಾರ್ಪಣಾ ಪಂದ್ಯದಲ್ಲಿ 3ವಿಕೆಟ್ ಕಬಳಿಸಿದ ನಂದಿನಿ
- ಸಿಡಿದ ಜೆಮಿಮಾ, ಯಸ್ತಿಕಾ ಚೊಚ್ಚಲ ಅರ್ಧ ಶತಕ

ಕಳಪೆ ಪ್ರದರ್ಶನ, ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ
ನಾಯಕತ್ವಕ್ಕೆ ರಿಷಬ್ ರಾಜೀನಾಮೆ

ಲಖನೌ: ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್‌ನ ಕಳಪೆ ನಿರ್ವಹಣೆಯ ಹೊಣೆ ಹೊತ್ತುಕೊಂಡಿರುವ ರಿಷಬ್ ಪಂತ್ ನಾಯಕತ್ವ ತ್ಯಜಿಸಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ಕೇವಲ 4 ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿತ್ತು. ಕಳೆದ ವರ್ಷ ಕೂಡಾ ಎಲ್‌ಎಸ್‌ಜಿ ಗಳಿಸಿದ್ದು 7ನೇ ಸ್ಥಾನವನ್ನು.

ರಿಷಬ್ ಪಂತ್ ನಾಯಕನಾಗಿಯಷ್ಟೇ ಅಲ್ಲದೆ ಬ್ಯಾಟಿಂಗ್‌ನಲ್ಲೂ ವೈಫಲ್ಯ ಕಂಡಿದ್ದರು. 2025ರಲ್ಲಿ ಋತುವಿನಲ್ಲಿ ರಿಷಬ್ 133.16 ಸ್ಟ್ರೈಕ್ ರೇಟ್‌ನಲ್ಲಿ 269 ರನ್ ಗಳಿಸಿದ್ದರು. ಈ ವರ್ಷ ಅವರು ಗಳಿಸಲಾದುದು 138.05 ಸ್ಟ್ರೈಕ್ ರೇಟ್‌ನಲ್ಲಿ ಕೇವಲ 312 ರನ್‌ಗಳನ್ನು. 2025ರಲ್ಲಿ ಎಲ್‌ಎಸ್‌ಜಿ ರಿಷಬ್ ಅವರನ್ನು 27 ಕೋಟಿ ರೂ. ದುಬಾರಿ ಬೆಲೆಗೆ ಖರೀದಿಸಿತ್ತು. ಆದರೆ ಅವರು ತಮ್ಮ ಫ್ರಾಂಚೈಸಿಯ ನಿರೀಕ್ಷೆ ಉಳಿಸಿಕೊಳ್ಳಲು ಶಕ್ತರಾಗಲಿಲ್ಲ.



ಐಪಿಎಲ್‌ನ ಲೀಗ್ ಹಂತದ ಪಂದ್ಯ ಮುಗಿದ ಕೂಡಲೇ ಎಲ್‌ಎಸ್‌ಐ ನಿರ್ದೇಶಕ ಟಾಮ್ ಮೂಡಿ ಅವರು ನಾಯಕತ್ವ ಬದಲಾವಣೆಯ ಸುಳಿವು ನೀಡಿದ್ದರು. ರಿಷಬ್ ಪಂತ್ ಬದಲಿಗೆ ಬೇರೆಯವರನ್ನು ನಾಯಕನಾಗಿ ನೇಮಿಸುವುದಾಗಿ ಹೇಳಿದ್ದರು. ಅದರ ಬೆನ್ನಿಗೇ ಈಗ ರಿಷಬ್ ನಾಯಕತ್ವದಿಂದ ಕೆಳಗಿಳಿದಿದ್ದಾರೆ.

ಮುಂಬೈ ಇಂಡಿಯನ್ಸ್ ತೊರೆಯಲಿರುವ ಪಾಂಡ್ಯ
ಚೆನ್ನೈಗೆ ಹಾರ್ದಿಕ್ ಸ್ವಾಗತ?

ಮುಂಬೈ: ಹಾರ್ದಿಕ್ ಪಾಂಡ್ಯ ಮುಂಬೈ ಇಂಡಿಯನ್ಸ್ ತೊರೆಯಲಿದ್ದಾರೆಂದು ವರದಿಯಾಗಿದೆ. ಮಾನಸಿಕವಾಗಿ ತೀವ್ರ ಒತ್ತಡ ಮತ್ತು ಮುಂಬೈ ನಿರ್ವಹಣೆಯಿಂದ ನಿರಾಶೆಗೆ ಒಳಗಾಗಿರುವ ಹಾರ್ದಿಕ್ ಫ್ರಾಂಚೈಸಿ ತೊರೆಯುವ ನಿರ್ಧಾರವನ್ನು ಫ್ರಾಂಚೈಸಿ ಮಾಲಕರಿಗೆ ಕೆಲದಿನಗಳ ಹಿಂದೆಯೇ ತಿಳಿಸಿದ್ದಾರೆನ್ನಲಾಗಿದೆ. ಮುಂಬೈ ಹಾರ್ದಿಕ್‌ರನ್ನು ಚೆನ್ನೈ ಸೂಪರ್ ಕಿಂಗ್ಸ್ ಜತೆ ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯಿದೆ.



ಐಪಿಎಲ್ ಟೂರ್ನಿಯ ಮಧ್ಯಂತರದ ವೇಳೆಯೇ ಪಾಂಡ್ಯ ಈ ನಿರ್ಧಾರ ತಳೆದಿದ್ದಾರೆಂದು ಹೇಳಲಾಗುತ್ತಿದೆ. ಅವರು ಚೆನ್ನೈ ಸೂಪರ್ ಕಿಂಗ್ಸ್ ಸೇರಲಿದ್ದಾರೆಂಬ ಮಾತುಗಳೂ ಕೇಳಿಬರುತ್ತಿವೆ. ಇನ್ನೂ ಅಧಿಕೃತವಾಗಿಲ್ಲ. 32ರ ಹರೆಯದ ಪಾಂಡ್ಯಾ 2024ರಲ್ಲಿ ಮುಂಬೈ ಇಂಡಿಯನ್ಸ್ ನಾಯಕರಾಗಿ ನೇಮಕರಾಗಿದ್ದರು. ರೋಹಿತ್‌ರಿಂದ ಪಾಂಡ್ಯರಿಗೆ ನಾಯಕತ್ವ ವರ್ಗಾಯಿಸಿದ ಬಗ್ಗೆ ಆಗಲೇ ಅಸಮಾಧಾನದ ಮಾತುಗಳು ಕೇಳಿಬಂದಿದ್ದವು. ಕಳೆದ ವರ್ಷದ ಐಪಿಎಲ್‌ನಲ್ಲಿ ಮುಂಬೈ ಉತ್ತಮ ನಿರ್ವಹಣೆ ತೋರಿರಲಿಲ್ಲ. ಈ ಬಾರಿಯಂತೂ ಇನ್ನೂ ಕಳಪೆ ನಿರ್ವಹಣೆ ತೋರಿತ್ತು. ಪಾಂಡ್ಯ ಮತ್ತು ಮುಂಬೈ ಇಂಡಿಯನ್ಸ್ ಪರಸ್ಪರ ಬೇರ್ಪಡಲು ಸೌಹಾರ್ದಯುತವಾಗಿ ಸಮ್ಮತಿಸಿದ್ದಾರೆಂದು ಹೇಳಲಾಗಿದೆ. ಪಾಂಡ್ಯ ಮಾನಸಿಕವಾಗಿ ತುಂಬಾ ಒತ್ತಡಕ್ಕೆ ಒಳಗಾಗಿದ್ದಾರೆ ಮತ್ತು ಬಳಲಿದ್ದಾರೆ. ಜತೆಗೇ ಬೆನ್ನು ನೋವಿಗೂ ಒಳಗಾದರು. ತಂಡವು ಪ್ಲೇಆಫ್‌ಗೆ ಏರಲು ವಿಫಲವಾದ ಬಳಿಕ ಅವರು ಮುಂಬೈ ತೊರೆಯಲು ನಿರ್ಧರಿಸಿದರು ಎಂದು ಅವರನ್ನು ಬಲ್ಲ ಮೂಲಗಳು ಹೇಳಿವೆ. ಹಿರಿಯ ನಾಯಕರು ಪಾಂಡ್ಯ ಅವರಿಗೆ ಪೂರ್ಣ ಸಹಕಾರ ನೀಡಲಿಲ್ಲ, ಆಟದಲ್ಲೂ ಸಂಪೂರ್ಣ ನಿರ್ವಹಣೆ ತೋರಲಿಲ್ಲ, ಇದು ಪಾಂಡ್ಯಾಗೆ ನೋವು ತಂದಿತು ಎಂದು ಮೂಲಗಳು ತಿಳಿಸಿವೆ.

ಪಾಂಡ್ಯ ನಿರ್ಗಮನದಿಂದಾಗಿ ರೋಹಿತ್ ಶರ್ಮಾ ಅವರು ಮುಂದಿನ ವರ್ಷದ ಐಪಿಎಲ್‌ಗೆ ತಂಡದ ನಾಯಕರಾಗಿ ಪುನರಾಯ್ಕೆಗೊಳ್ಳುವ ಸಾಧ್ಯತೆಗಳೂ ಇವೆ.

ಸುಳಿವು ನೀಡಿದ ಹಾರ್ದಿಕ್

ಹಾರ್ದಿಕ್ ಮತ್ತವರ ಸ್ನೇಹಿತೆ ಮಾಹೀಕಾ ಶರ್ಮಾ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಚೆನ್ನೈ ಸೇರುವ ಸುಳಿವು ನೀಡಿದ್ದಾರೆ. ಇತ್ತೀಚೆಗೆ 07:07 ಎಂಬ ಸಮಯದ ಸ್ಟೋರಿ ಹಾಗೂ ಹಾರ್ದಿಕ್ ಫ್ರಾನ್ಸ್ ಪ್ರವಾಸದ ಹೆಲಿಕಾಪ್ಟರ್ ರೈಡ್ ಚಿತ್ರಗಳನ್ನು ಹಂಚಿಕೊಂಡಿದ್ದರು. ಮಾಹೀಕಾ ಹೆಲಿಕಾಪ್ಟರ್ ಹೆಲಿಕಾಪ್ಟರ್ ಎಂದು ಕಾಮೆಂಟ್ ಮಾಡಿದ್ದರು. ಎಂಎಸ್ ಧೋನಿ ಜನ್ಮದಿನ ಜು.7 ಮತ್ತು ಅವರು ಹೆಲಿಕಾಪ್ಟರ್ ಶಾಟ್‌ಗೆ ಪ್ರಸಿದ್ಧರು.

ಚಿರಾಗ್-ರಾಂಕಿರೆಡ್ಡಿ ಸೆಮಿಫೈನಲ್ ಎಂಟ್ರಿ

ಸಿಂಗಾಪುರ: ಸಿಂಗಾಪುರ ಓಪನ್ ಬ್ಯಾಡ್ಮಿಂಟನ್‌ನಲ್ಲಿ ಶುಕ್ರವಾರ ಭಾರತವು ಮಿಶ್ರಫಲ ಅನುಭವಿಸಿತು. ಮಹಿಳಾ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರೆ, ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಸೆಮಿಫೈನಲ್‌ಗೆ ಪ್ರವೇಶ ಪಡೆಯಿತು.

ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಬ್ಬರೂ ಕ್ವಾರ್ಟರ್ ಫೈನಲಿನಲ್ಲಿ ಮಲೇಶಿಯಾದ ಕಾಂಗ್ ಕಾಯಿ ಕ್ಸಿಂಗ್ ಮತ್ತು ಆರೋನ್ ಥಾಯ್ ಜೋಡಿಯ ವಿರುದ್ಧ 19-21, 21-17, 21-13 ಸೆಟ್‌ಗಳ ಪ್ರಯಾಸದ ಗೆಲುವು ಕಂಡರು. ಮೊದಲ ಸೆಟ್‌ನಲ್ಲಿ ಭಾರತೀಯ ಜೋಡಿ ಕಠಿಣ ಸವಾಲು ನೀಡಿದರೂ ಸೋಲು ಕಾಣಬೇಕಾಯಿತು. ಆದರೆ ಎರಡನೇ ಮತ್ತು ಮೂರನೇ ಸೆಟ್‌ನಲ್ಲಿ ಪ್ರತಿಹೋರಾಟ ನೀಡಿ ಗೆಲುವು ಸಾಧಿಸಲು ಸಫಲರಾದರು. ಇದೇ ವೇಳೆ, ಪಿ.ವಿ. ಸಿಂಧು ಅವರ ಜೈತ್ರಯಾತ್ರೆಯು ಕ್ವಾರ್ಟರ್ ಫೈನಲ್‌ನಲ್ಲಿ ಅಂತ್ಯ ಕಂಡಿತು. ಅವರು ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವ ನಂಬರ್ 1 ಆಟಗಾರ್ತಿ ಆನ್ ಸೆ ಯಂಗ್ ವಿರುದ್ಧ 17-21, 14-21 ನೇರ ಸೆಟ್‌ಗಳ ಸೋಲು ಕಂಡರು. ಸಿಂಧು ಮೊದಲ ಸೆಟ್‌ನಲ್ಲಿ ಹೋರಾಟಕಾರಿ ಮನೋಭಾವ ಪ್ರದರ್ಶಿಸಿದರಾದರೂ ಎದುರಾಳಿಯ ಆಕ್ರಮಣಕಾರಿ ಆಟದೆದುರು ಕೊನೆಗೂ ಮಣಿಯಬೇಕಾಯಿತು. ಎರಡನೇ ಸೆಟ್‌ನಲ್ಲಿ ಯಂಗ್ ಸುಲಭ ಜಯ ಸಾಧಿಸಿದರು.

ಸಿಂಗಾಪುರ ಓಪನ್: ಪಿವಿ ಸಿಂಧು ಜೈತ್ರಯಾತ್ರೆ ಅಂತ್ಯ

ಏಷ್ಯನ್ ಅಥ್ಲೆಟಿಕ್ಸ್: ಹಲವು ಪದಕಗಳನ್ನು ಗೆದ್ದ ಭಾರತ



ಹಾಂಕಾಂಗ್: ಭಾರತದ ಹಲವು ಕ್ರೀಡಾಪಟುಗಳು ಚೀನಾದಲ್ಲಿ ನಡೆಯುತ್ತಿರುವ 20ರ ಕೆಳಹರಯದ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪದಕಗಳನ್ನು ಗೆದ್ದು ಮಿಂಚಿದ್ದಾರೆ. ವನಿತೆಯರ ಡಿಸ್ಕಸ್ ಎಸೆತದಲ್ಲಿ ಅಮಾನತ್ (52.27 ಮೀ.) ಸ್ವರ್ಣ, ಪುರುಷರ ಡೆಕಾಥ್ಲಾನ್‌ನಲ್ಲಿ 7,185 ಅಂಕಗಳನ್ನು ಸಂಪಾದಿಸಿದ ರಾಹುಲ್ ಸ್ವರ್ಣ ಮತ್ತು 6854 ಅಂಕಗಳನ್ನು ಸಂಪಾದಿಸಿದ ಉಪ್ಕಾರ್ ರಜತ ಪದಕ ಗೆದ್ದರು. ಮಹಿಳೆಯರ 400 ಮೀ. ಓಟದಲ್ಲಿ ನೀರು ಪಾಠಕ್ 53.23 ಸೆಕೆಂಡುಗಳಲ್ಲಿ ಗುರಿಮುಟ್ಟಿ ಕಂಚು ಗೆದ್ದಿದ್ದಾರೆ. ಪುರುಷರ 5000 ಮೀ. ಓಟ ನಡಿಗೆಯಲ್ಲಿ ನಿತಿನ್ ಗುಪ್ತಾ ಸ್ವರ್ಣ ಮತ್ತು ಮಹಿಳೆಯರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಸಾಧನಾ ರವಿ 12.84 ಮೀ. ಜಿಗಿತದೊಂದಿಗೆ ರಜತ ಪದಕ ಗೆದ್ದುಕೊಂಡರು.

ವನಿತೆಯರ ಎತ್ತರ ಜಿಗಿತ (ಹೈಜಂಪ್) ಸ್ಪರ್ಧೆಯಲ್ಲಿ ಭಾರತದ ಪೂಜಾ 1.93 ಮೀ. ಜಿಗಿತದೊಂದಿಗೆ ಸ್ವರ್ಣ ಪದಕ ಗೆದ್ದಿದ್ದಾರೆ. ಭಾರತದ ಪಾಲಿಗೆ ಇದೊಂದು ಐತಿಹಾಸಿಕ ಜಿಗಿತವಾಗಿದೆ.

ಸಮುದ್ರದ ಅಲೆಯ ನಡುವೆ ರೋಮಾಂಚಕ ಪ್ರದರ್ಶನ

ಮಂಗಳೂರು: ಮಂಗಳೂರಿನ ತಣ್ಣೀರ್‌ಭಾವಿ ಬ್ಲೂ ಬೇ ಇಕೋ ಬೀಚ್‌ನಲ್ಲಿ ಶುಕ್ರವಾರ ಏಳನೇ ಆವೃತ್ತಿಯ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಆರಂಭಗೊಂಡಿದ್ದು, ಸರ್ಫರ್‌ಗಳು ಸಮುದ್ರದ ಅಲೆಗಳ ನಡುವೆ ಅದ್ಭುತ ಪ್ರದರ್ಶನ ನೀಡುವ ಮೂಲಕ ಅಲ್ಲಿ ಸೇರಿದ್ದವರನ್ನು ಚಕಿತರನ್ನಾಗಿಸಿದರು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಸರ್ಫರ್‌ಗಳು ಸಮುದ್ರ ಅಲೆಗಳ ಮಧ್ಯೆ ತಮ್ಮ ಕೌಶಲ್ಯ ಪ್ರದರ್ಶಿಸಿ ಪ್ರೇಕ್ಷಕರ ಮನಗೆದ್ದರು.

ಮೊದಲ ದಿನ ಭಾರತದ ಶ್ರೇಷ್ಠ ಸರ್ಫರ್‌ಗಳು ತಮ್ಮ ಸಾಮರ್ಥ್ಯವನ್ನು ತೋರಿದರು. ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವ ಅಭಯಚಂದ್ರ ಜೈನ್, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ದಿಲೀಪ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಪ್ರದೀಪ್ ಡಿಸೋಜ, ಸರ್ಫಿಂಗ್ ಫೆಡರೇಷನ್ ಆಫ್ ಇಂಡಿಯಾದ ಉಪಾಧ್ಯಕ್ಷ ರಾಮ್ ಮೋಹನ್ ಪರಾಂಜಪೆ, ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್‌ನ ಉಪಾಧ್ಯಕ್ಷ ದೀಕ್ಷಿತ್ ಸುವರ್ಣ, ಕಾರ್ಯದರ್ಶಿ ಶಮಂತ್ ಕುಮಾರ್, ಸರ್ಫಿಂಗ್ ಸ್ವಾಮಿ ಫೌಂಡೇಶನ್‌ನ ಅಧ್ಯಕ್ಷ ಧನಂಜಯ್ ಶೆಟ್ಟಿ ಮತ್ತು ಭಾರತೀಯ ಕ್ರೀಡಾ ಪ್ರಾಕಾರದ ಅಥ್ಲೀಟ್ ರಿಲೇಷನ್ಸ್ ಮ್ಯಾನೇಜರ್ ಸೌರಭ್ ವರ್ಮಾ ಉಪಸ್ಥಿತರಿದ್ದರು.



ಇಂಡಿಯನ್ ಓಪನ್ ಆಫ್ ಸರ್ಫಿಂಗ್ 2026, ಭಾರತದ ಸರ್ಫರ್‌ಗಳ ಉತ್ತಮ ಸಾಧನೆ


ಸರ್ಫಿಂಗ್ ಮೊದಲ ದಿನದ ಫಲಿತಾಂಶ: ರಾಷ್ಟ್ರೀಯ ಸರ್ಫಿಂಗ್‌ನ ಮೊದಲ ದಿನದ ಸ್ಪರ್ಧೆಗಳು ಪುರುಷರ ಮತ್ತು ಮಹಿಳೆಯರ ಮುಕ್ತ ವಿಭಾಗ ಹಾಗೂ 18 ವರ್ಷದೊಳಗಿನ ಬಾಲಕರು ಮತ್ತು 14 ವರ್ಷದೊಳಗಿನ ಬಾಲಕರ ವಿಭಾಗಗಳಲ್ಲಿ ನಡೆದವು.

ಮಹಿಳೆಯರ ಓಪನ್ ವಿಭಾಗದಲ್ಲಿ ಕಮಾಲಿ ಮೂರ್ತಿ, ಶುಗರ್ ಶಾಂತಿ ಬನಾಸ್ಸೆ, ಇಶಿತಾ ಮಾಳವೀಯ, ದೇವಿ ರಾಮನಾಥನ್, ಸಾನ್ವಿ ಹೆಗ್ಡೆ ಮತ್ತು ಸೃಷ್ಟಿ ಸೆಲ್ವಂ ಸೆಮಿಫೈನಲ್ ತಲುಪಿದ್ದು, ಈ ಪಂದ್ಯಗಳು ಚಾಂಪಿಯನ್‌ಶಿಪ್‌ನ ಅಂತಿಮ ದಿನದಂದು ನಡೆಯಲಿವೆ. ಪುರುಷರ ಓಪನ್ ವಿಭಾಗದಲ್ಲಿ 12 ಹೀಟ್ಸ್‌ಗಳ ಮೊದಲ ಸುತ್ತು ಪೂರ್ಣಗೊಂಡರೆ, ಮಹಿಳೆಯರ ಓಪನ್ ವಿಭಾಗವು ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿತು. ಜೂನಿಯರ್ ವಿಭಾಗಗಳಲ್ಲೂ ತೀವ್ರ ಪೈಪೋಟಿ ಕಂಡುಬಂದಿದ್ದು, 18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಮೊದಲ ಸುತ್ತಿನ ಹೀಟ್ಸ್‌ಗಳು ನಡೆದವು ಹಾಗೂ ಹೊಸದಾಗಿ ಪರಿಚಯಿಸಲಾದ 14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆದವು.

ಪ್ರಮುಖ ಪ್ರದರ್ಶನ: ಕಿಶೋರ್ ಕುಮಾರ್ (12.90 ಅಂಕ), ರಮೇಶ್ ಬೂದಿಹಾಳ್ (12.57), ತಯಿನ್ ಅರುಣ್ (12.10), ಸಂಜಯ್ ಕುಮಾರ್ ಎಸ್ (11.84), ಅಜೀಶ್ ಅಲಿ (11.74), ಅಖಿಲನ್ ಎಸ್ (11.66), ಶಿವರಾಜ್ ಬಾಬು (11.33), ಸಂಜಯ್ ಸೆಲ್ವಮಣಿ (11.33), ಹರೀಶ್ ಎಮ್ (10.27), ಶ್ರೀಕಾಂತ್ ಡಿ (9.33), ರುಬೆನ್ ವಿ (7.93) ಮತ್ತು ಸೋಮ ಶೇಠಿ (7.30) ಅಂಕಗಳನ್ನು ಪಡೆದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5999

5998 ಉತ್ತರ

ಎಡದಿಂದ ಬಲಕ್ಕೆ:
3.ಜಾಜ್ವಲ್ಯಮಾನ
5.ಹಡಗು 6.ಲಕ್ಷ್ಮಣ
8.ಅಂಕಣ 9.ವಾಕ್ಯ
10.ಘೋರ 13.ಜ್ಯಾಮಿತಿ
15.ಪದವಿ 17.ಚಾದರ
18.ದಿನಬಳಕೆ
ಮೇಲಿನಿಂದ ಕೆಳಕ್ಕೆ :
1.ತಹತಹಿಸು 2.ಅಂಗುಲ
4.ಮಾಲಿಕ 7.ಗಣ
8.ಅಂಜೂರ 9.ವಾಕ್ಪತಿ
11.ತಲೆಹರಟೆ 12.ಪಾಪ
14.ಮಿಥುನ 16.ವಿಚಾರ

ಎಡದಿಂದ ಬಲಕ್ಕೆ
2.ತನ್ನಲ್ಲಿ ತಾನು ಸಂತೋಷಗೊಳ್ಳುವದು (4)
4.ಬೀಸುತ್ತಿರುವ ವಾಯು (2)
5.ತೀವ್ರವಾದ ಆಸೆಯಿಲ್ಲಿ ತಿರುಗಿದೆ (3)
6.ಕಣ್ಣಿನಲ್ಲಿ ಬೆಂಕಿಯುಳ್ಳವನು-ಶಿವ (5)
9.ಭಾರತೀಯ ನಾಟ್ಯಶಾಸ್ತ್ರದ ಒಂಬತ್ತು ಭಾವಗಳು (4)
10.ಸೇರುವಿಕೆ-ಕೂಡುವಿಕೆಯಿದು (4)
13.ಸಂಪತ್ತಿನ ಅಧಿದೇವತೆ-ಲಕ್ಷ್ಮಿ (5)
15.ಮನೆಯ ಮೇಲಿನ ಅಂತಸ್ತು (3)
17.ಕೊಡದೇ ಉಳಿಸಿಕೊಂಡದ್ದು (2)
18. ಸಂಗೀತದಲ್ಲಿನ ಕಾಲಗಣನೆ (4)
ಮೇಲಿನಿಂದ ಕೆಳಕ್ಕೆ
1.ಬೀಳುವುದು-ಪತನ ಎಂಬರ್ಥದ ಶಬ್ದ (2)
2.ಗಡಿಬಿಡಿಯಿಂದ ಕೆಲಸ ಮಾಡುವವನು (5)
3.ಶಾಲೆಗೆ ಬಿಡುವು ಇರುವ ದಿವಸ (4)
4.ಮಂತ್ರವಿದ್ಯೆ-ಮಾಯಾಜಾಲವಿದು (3)
7.ಕೃಷ್ಣನ ಸಾಕುತಾಯಿಯ ಹೆಸರು (4)
8.ಹೆಚ್ಚು ತಿಳಿದುಕೊಳ್ಳಬೇಕೆಂಬ ಅಪೇಕ್ಷೆ (4)
11.ಮರ್ಯಾದೆ-ಅವಮರ್ಯಾದೆ ಕೂಡಿ ಕಾಣುತ್ತಿವೆ (5)
12. ಬಲಿಷ್ಠವಾದ ಎಂಬರ್ಥದ ಶಬ್ದ (4)
14. ಬೆಳಕಿನ ರಶ್ಮಿ ತಲೆಕೆಳಗಾಗಿದೆ (3)
16. ಕಂದಮೂಲದ ಸಮಾನಪದ (2)

ಕಿರುಸುದ್ದಿ

ಮಾಸಿಕ ಶಿವಾನುಭವ ಇಂದಿನಿಂದ

◆**ಮುಂಡರಗಿ:** ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಶ್ರೀ ಜ.ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ ಸಾನ್ನಿಧ್ಯದಲ್ಲಿ ಮೇ 30ರಂದು ಸಂಜೆ 5.30ಕ್ಕೆ 1847ನೇ ಮಾಸಿಕ ಶಿವಾನುಭವ ಮತ್ತು ಶ್ರೀ ವೀರಮಹೇಶ್ವರ ಜಂಗಾಭಿವೃದ್ಧಿ ಸಂಘದಿಂದ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನೇತೃತ್ವವನ್ನು ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ವಹಿಸುವರು. ಸಮ್ಮುಖವನ್ನು ಡಾ.ವಿರೇಂದ್ರ ಶಿವಾಚಾರ್ಯ ಸ್ವಾಮೀಜಿ ಹಿರೇಮಠ ಇವರು ವಹಿಸುವರು. ಈ ವೇಳೆ ಡಾ.ಸದಾಶಿವ ಸ್ವಾಮೀಜಿಯನ್ನು ಗೌರವಿಸಲಾಗುವುದು. ಉಪನ್ಯಾಸವನ್ನು ಡಾ.ವಿರೇಶ ಹಿತ್ತಲಮನಿ ನೀಡುವರು. ಡಾ.ರಾಜೇಶ ಟಿ.ಎಸ್, ಎಸ್.ಸಿ.ಚಕ್ಕಡಿಮಠ, ಎಸ್.ಬಿ.ಗಿಂಡಿಮಠ, ಎಸ್.ಎಸ್.ಮಠದ, ನಾಗಭೂಷಣ ಹಿರೇಮಠ, ವಿನಯಕುಮಾರ ಗಂಧದ ಇವರನ್ನು ಸನ್ಮಾನಿಸಲಾಗುವುದು. ಸಂಗೀತ ಸೇವೆಯನ್ನು ಆರ್.ಎಸ್. ಮರಿದೇವರಮಠ ಮಾಡುವರು.

ಜೂ.2ರಂದು ಸಭೆ

◆**ಮುಂಡರಗಿ:** ಕ.ರಾ.ಬೆಲ್ಲದ ಮಹಾವಿದ್ಯಾಲಯದಲ್ಲಿ ಜೂ.2ರಂದು ಸಂಜೆ 4 ಗಂಟೆಗೆ ತಾಲೂಕು ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆಯ ಚಟುವಟಿಕೆ ಕುರಿತು ಚರ್ಚಿಸುವುದಕ್ಕೆ ಪ್ರಸ್ತುತ ವರ್ಷದ ಕಾರ್ಯಕಾರಣಿ ಮಂಡಳಿ ಸದಸ್ಯರ ಹಾಗೂ ಸರ್ವ ಆಜೀವ ಸದಸ್ಯರ ಸಭೆ ಕರೆಯಲಾಗಿದೆ. ಸಭೆಗೆ ಸರ್ವರು ಆಗಮಿಸಿ ತಮ್ಮ ಸಲಹೆ, ಸೂಚನೆ ನೀಡಬೇಕು ಎಂದು ಶಸಾಪ ತಾಲೂಕಾಧ್ಯಕ್ಷ ಡಾ.ಸಂತೋಷ ಹಿರೇಮಠ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ



◆**ಗದಗ:** ನಗರದ ಮುಳಗುಂದ ನಾಕಾ ಬಳಿಯ ಶ್ರೀ ಕುಮಾರೇಶ್ವರ ಧಾರ್ಮಿಕ ಪಾಠಶಾಲೆಯಲ್ಲಿ ಅಖಿಲ ಭಾರತ ಜಂಗಮ ಸೇವಾ ಸಮಿತಿ ಹಾಗೂ ನರಸಾಪೂರದ ಪಂಚವಟಿ ಧಾರ್ಮಿಕ ಗುರುಕುಲ ಜನಕಲ್ಯಾಣ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಜಂಗಮ ಸಮಾಜದ 60 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಅಧಿಕ ಮಾಸದ ಅಂಗವಾಗಿ ಜಂಗಮ ಸಮಾಜದ 33 ಮಹಿಳೆಯರಿಗೆ ಉಡಿ ತುಂಬುವ ಸಮಾರಂಭ ಜರುಗಿತು.

ಗಜೇಂದ್ರಗಡದ ಕಾಲಜ್ಞಾನ ಸ್ವಾಮೀಜಿ ಮಾತನಾಡಿದರು. ಕದಾಂಪೂರ ಹಿರೇಮಠದ ಡಾ.ವೀರಭದ್ರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಅಖಿಲ ಭಾರತ ಜಂಗಮ ಸೇವಾ ಸಮಿತಿಯ ಅಧ್ಯಕ್ಷ ಪ್ರಭಯ್ಯ ದಂಡಾವತಿಮಠ ಅಧ್ಯಕ್ಷತೆ ವಹಿಸಿದ್ದರು. ವೆಂಕಟಾಪೂರ, ಜಿಗೇರಿಯ ಗುರು ಸಿದ್ದೇಶ್ವರ ಶಿವಾಚಾರ್ಯರು, ಅಡ್ನೂರು-ರಾಜೂರು ಬೃಹನ್ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಮಲ್ಲಸಮುದ್ರ ಓಂಕಾರೇಶ್ವರ ಮಠದ ಫಕೀರೇಶ್ವರ ಸ್ವಾಮೀಜಿ, ಕುಮಾರೇಶ್ವರ ಧಾರ್ಮಿಕ ಪಾಠಶಾಲೆಯ ಶಿವಕುಮಾರ ದೇವರು, ನರಸಾಪೂರ ವೀರೇಶ್ವರ ಶರಣರ ಮಠದ ಶಿವಕುಮಾರ ಶರಣರು, ಮಹೇಶ್ವರಯ್ಯ ಸ್ವಾಮೀಜಿ ಹೊಸಳ್ಳಿಮಠ ಸಮ್ಮುಖ ವಹಿಸಿದ್ದರು.

ನಿಧನ ಸುದ್ದಿ

ರುದ್ರಮುನಿಸ್ವಾಮಿ ಹಿರೇಮಠ

◆**ನರೇಗಲ್ಲ:** ಸಮೀಪದ ಹಾಲಕೆರೆ ಗ್ರಾಮದ ರುದ್ರಮುನಿಸ್ವಾಮಿ ಸಂಗಯ್ಯ ಹಿರೇಮಠ (91) ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4050-7759
ಅಜವಾನ	10112-10112
ಅಲಸಂದಿ	2621-5612
ಕಡಲೆ	2277-6051
ಉದ್ದು	4412-5414
ಹೆಸರು	1012-9012
ಶೇಂಗಾ	4049-7759
ಹುರಳಿ	4205-4258
ಜೋಳ	1824-5021
ಗೋವಿನಜೋಳ	1613-1613
ಕುಸಬಿ	4676-5322
ಸೂರ್ಯಕಾಂತಿ	7282-7282
ತೊಗರಿ	6044-6044
ಗೋಧಿ	1077-4277



ಮುಂಡರಗಿ: ಪಟ್ಟಣದ ಎಸ್ಎಸ್ ಪಾಟೀಲ್ ನಗರದಲ್ಲಿ ಮಸ್ಜಿದ ಎ ಖುಬಾ ಕಮಿಟಿಗೆ ಅಲ್ಪಸಂಖ್ಯಾತರ ಇಲಾಖೆಯಿಂದ 5 ಲಕ್ಷ ರೂ.ಗಳು ಅನುದಾನ ಬರುವಂತೆ ಮಾಡಿದ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಜನಾಬ ಎಸ್.ಡಿ ಮಕಾಂದಾರ ಅವರಿಗೆ ಮಜೀದ್ ಕಮಿಟಿ ಸನ್ಮಾನಿಸಿತು. ಈ ಸಂದರ್ಭದಲ್ಲಿ ಕಮಿಟಿ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ಓಣಿಯ ಗುರುಹಿರಿಯರು ಇದ್ದರು.

ಗೋಹತ್ಯೆ ತಡೆ ಅವಶ್ಯ: ಆರ್.ಸಿ. ಪಾಟೀಲ

◆**ನರಗುಂದ:** ದೇಶದಲ್ಲಿ ಗೋಹತ್ಯೆ ನಿಷೇದ ಕಾನೂನು ಜಾರಿಯಲ್ಲಿದ್ದರೂ ರಾಜ್ಯದಲ್ಲಿ ಅನುಷ್ಠಾನಕ್ಕೆ ಬರುತ್ತಿಲ್ಲ, ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಗಳು ಗೋಹತ್ಯೆ ಆಗದಂತೆ ತಡೆಯಬೇಕಾಗಿದೆ ಎಂದು ವಕೀಲ ಆರ್.ಸಿ. ಪಾಟೀಲ ಹೇಳಿದರು.

ತಾಲೂಕು ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳ ವತಿಯಿಂದ ತಹಶೀಲ್ದಾರ್ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು.

ಭಾರತೀಯ ಕಿಸಾನ ಸಂಘದ ತಾಲೂಕು ಅಧ್ಯಕ್ಷ ನಾಗೇಶ ಅಪ್ಪೋಜಿ ಮಾತನಾಡಿ, ಭಾರತ ಗೋ ಆಧಾರಿತ ಕೃಷಿಯ ನಾಡು. ಇಂತಹ ದೇಶದಲ್ಲಿ ಗೋಹತ್ಯೆ ನಡೆಯುವುದು ಅಕ್ಷಮ್ಯ ಅಪರಾದವಾಗಿದೆ. ಗೋಹತ್ಯೆ ಕಂಡುಬಂದಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ಶ್ರೀಶೈಲ ತಳವಾರ ಅವರು, ಗೋ ಸಂರಕ್ಷಣೆ ನೆಪದಲ್ಲಿ ಯಾರೂ ಕಾನೂನು ಕೈಗೆ ತೆಗೆದುಕೊಳ್ಳಬಾರದು. ಇಂತಹ ವಿಷಯದಲ್ಲಿ ಯುವಕರು ಉದ್ರೇಕಗೊಳ್ಳದೇ ಸಾಮಾಜಿಕ ಶಾಂತಿ ನೆಲೆಸಲು ಪ್ರಥಮ ಆದ್ಯತೆ ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ನಂದೀಶ ಮಠದ, ಸಂಗಪ್ಪ ಪೂಜಾರ ಮಾತನಾಡಿದರು. ಕೃಷ್ಣ ಮಹಾಲಿನಮನಿ, ಸಂಗಪ್ಪ ಪೂಜಾರ, ಮಹಾಂತೇಶ ಹಂಪಣ್ಣವರ, ನಿರಂಜನ ಮಡಿವಾಳರ, ಶ್ರೀನಿವಾಸಪ್ರಸಾದ ಗುಜಮಾಗಡಿ, ಸಚಿನ್ ಸಾಬಳೆ, ಎಚ್.ಪಿ. ಮುದ್ದನಗೌಡ್ರ, ಮಂಜು ಪವಾರ, ಮುತ್ತು ಯಲಿಗಾರ, ಅಭಿಷೇಕ ನವಲಗುಂದ, ಮಂಜುನಾಥ ಮೆಣಸಗಿ, ಚಂದ್ರಗೌಡ ಪಾಟೀಲ, ಗಿರೀಶ ಯಾದವ, ಕಿಸಾನ ಸಂಘದ ತಾಲೂಕಾಧ್ಯಕ್ಷ ನಾಗೇಶ ಅಪ್ಪೋಜಿ, ಅಣ್ಣಪ್ಪ ಮಾನೆ, ರಾಜು ಕಲ್ಲಾಪೂರ, ರಾಜೇಶ ಕೊಣ್ಣೂರ ಇತರರಿದ್ದರು.



ನರಗುಂದ: ತಾಲೂಕು ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳ ವತಿಯಿಂದ ತಹಶೀಲ್ದಾರ್ ಅವರಿಗೆ ಮನವಿ ಅರ್ಪಿಸಲಾಯಿತು.

ಡೀಸೆಲ್ ದರ ಏರಿಕೆ | ಯಾಂತ್ರಿಕ ಕೃಷಿ ಬಿಟ್ಟ ಗಜೇಂದ್ರಗಡ ರೈತರು

ನೇಗಿಲ ಹಿಡಿದ ಅನ್ನದಾತರು

▶ಸೀತಲ ಓಲೇಕಾರ

◆ **ಗಜೇಂದ್ರಗಡ:** ತಾಲೂಕಿನಲ್ಲಿ ಮುಂಗಾರು ಮಳೆಯ ಆರಂಭದ ಬೆನ್ನಲ್ಲೇ ಬಿತ್ತನೆ ಕಾರ್ಯ ಚುರುಕುಗೊಂಡಿದೆ. ಆದರೆ ಈ ಬಾರಿ ರೈತರು ಎಂದಿನಂತೆ ಟ್ರ್ಯಾಕ್ಟರ್‌ಗಳ ಮೊರೆ ಹೋಗದೆ ಸಾಂಪ್ರದಾಯಿಕ ನೇಗಿಲು ಮತ್ತು ಎತ್ತುಗಳ ಸಹಾಯದಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವ ಡೀಸೆಲ್ ಬೆಲೆ ಏರಿಕೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ. ಟ್ರ್ಯಾಕ್ಟರ್ ಬಿತ್ತನೆ ವೆಚ್ಚ ಭರಿಸಲಾಗದೆ ತಾಲೂಕಿನ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಅನಿವಾರ್ಯವಾಗಿ ಮರಳಿ ನೇಗಿಲು ಹಿಡಿಯುತ್ತಿದ್ದಾರೆ.

ಗಗನಕ್ಕೇರಿದ ಬಾಡಿಗೆ ವೆಚ್ಚ ಕಳೆದ ಕೆಲವು ವರ್ಷಗಳಲ್ಲಿ ಗಜೇಂದ್ರಗಡ ತಾಲೂಕಿನ ಗ್ರಾಮೀಣ ಭಾಗದಲ್ಲಿ ಯಾಂತ್ರೀಕೃತ ಕೃಷಿ ಹೆಚ್ಚಾಗಿತ್ತು. ಆದರೆ ಪ್ರಸ್ತುತ ಡೀಸೆಲ್ ದರ ದಾಖಲೆ ಮಟ್ಟ ತಲುಪಿರುವುದರಿಂದ, ಟ್ರ್ಯಾಕ್ಟರ್ ಮಾಲೀಕರು ಪ್ರತಿ ಎಕರೆ ಉಳುಮೆ ಮತ್ತು ಬಿತ್ತನೆಯ ಬಾಡಿಗೆಯನ್ನು ಶೇ.40ಕ್ಕಿಂತ ಹೆಚ್ಚು ಹೆಚ್ಚಿಸಿದ್ದಾರೆ. ಇದರಿಂದಾಗಿ ಹೆಸರು, ಶೇಂಗಾ, ಮೆಕ್ಕೆಜೋಳ ಬಿತ್ತನೆ ಮಾಡುವ ಮುನ್ನವೇ ಇಂಧನ ವೆಚ್ಚವೇ ರೈತರ ಜೇಬಿಗೆ ಕತ್ತರಿ ಹಾಕುತ್ತಿದೆ. ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುತ್ತಿಲ್ಲ. ಇದರ ನಡುವೆ ಟ್ರ್ಯಾಕ್ಟರ್‌ಗೆ ಸಾವಿರಾರು ರೂಪಾಯಿ ಬಾಡಿಗೆ ನೀಡಿದರೆ ನಮ್ಮ ಕೈಯಲ್ಲಿ ಏನೂ ಉಳಿಯುವುದಿಲ್ಲ. ಅದಕ್ಕಾಗಿಯೇ ನಾವು ಮತ್ತೆ ಕೊಟ್ಟಿಗೆಯ ಎತ್ತುಗಳನ್ನು ನಂಬಿ ಹೊಲಕ್ಕೆ ಇಳಿದಿದ್ದೇವೆ ಎನ್ನುತ್ತಾರೆ ಗಜೇಂದ್ರಗಡದ ರೈತ ಮಲ್ಲಪ್ಪ. ತಾಲೂಕಿನ ನೂರಾರು ಹಳ್ಳಿಗಳಲ್ಲಿ ಈಗ ಮುಂಜಾನೆ ಟ್ರ್ಯಾಕ್ಟರ್‌ಗಳ ಕರ್ಕಶ ಸದ್ದಿನ ಬದಲು ಎತ್ತುಗಳ ಗಂಟೆಯ ಸದ್ದು ಮತ್ತು ರೈತರ ಲಯಬದ್ಧ ಗಾಯನ ಕೇಳಿಬರುತ್ತಿದೆ.



ದಿಗಂತ ವಿಶೇಷ

ಟ್ರ್ಯಾಕ್ಟರ್ ಬಾಡಿಗೆಗೆ ರೈತರು ಕಂಗಾಲು!

ಡೀಸೆಲ್ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವುದರಿಂದ ಟ್ರ್ಯಾಕ್ಟರ್ ಬಾಡಿಗೆ ಕಟ್ಟುವುದು ಅಸಾಧ್ಯವಾಗಿದೆ. ಒಂದು ಎಕರೆ ಬಿತ್ತನೆಗೆ ಟ್ರ್ಯಾಕ್ಟರ್‌ನವರು ಕೇಳುವ ಬಾಡಿಗೆ ಕೇಳಿದರೆ ಎದೆ ನಡುಗುತ್ತದೆ. ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಗ್ಯಾರಂಟಿ ಬೆಲೆ ಸಿಗದ ಈ ದಿನಗಳಲ್ಲಿ ಇಷ್ಟೊಂದು ಇಂಧನ ವೆಚ್ಚ ಭರಿಸಿದರೆ ರೈತಾಪಿ ವರ್ಗ ಸಾಲದ ಸುಳಿಗೆ ಸಿಲುಕುವುದು ಗ್ಯಾರಂಟಿ. ಅದಕ್ಕಾಗಿಯೇ ನಮ್ಮ ಕೊಟ್ಟಿಗೆಯ ಎತ್ತುಗಳನ್ನೇ ನಂಬಿ ಈ ಬಾರಿ ಬಿತ್ತನೆ ಮಾಡಿದ್ದೇವೆ. ಇದರಿಂದ ಹಣವೂ ಉಳಿಯುತ್ತದೆ, ನಮ್ಮ ಮಣ್ಣಿನ ಗುಣವೂ ಹಾಳಾಗುವುದಿಲ್ಲ ಎನ್ನುತ್ತಾರೆ ಗಜೇಂದ್ರಗಡ ರೈತ ನಾಗರಾಜ ಭಾವಣಿ.

- ಎತ್ತುಗಳ ಬಳಕೆಯಿಂದ ರೈತರಿಗೆ ಇಂಧನ ವೆಚ್ಚ ಸಂಪೂರ್ಣ ಉಳಿತಾಯ
- ಟ್ರ್ಯಾಕ್ಟರ್‌ಗಳ ಭಾರೀ ತೂಕದಿಂದ ಗಟ್ಟಿಯಾಗುವ ಭೂಮಿಯ ಮಣ್ಣು
- ಸಾಂಪ್ರದಾಯಿಕ ನೇಗಿಲು ಉಳುಮೆಯಿಂದ ಮಣ್ಣು ಮೃದುವಾಗಿ ಉಳಿದು ತೇವಾಂಶವನ್ನು ಹೆಚ್ಚು ಹಿಡಿದಿಟ್ಟುಕೊಳ್ಳುತ್ತದೆ
- ಎತ್ತುಗಳ ಸಗಣಿ ನೈಸರ್ಗಿಕ ಗೊಬ್ಬರವಾಗಿಯೂ ಭೂಮಿ ಫಲವತ್ತತೆ ಹೆಚ್ಚಳ

ಡೀಸೆಲ್ ದರ ಏರಿಕೆಯಿಂದ ರೈತರು ಮತ್ತೆ ಸಾಂಪ್ರದಾಯಿಕ ಕೃಷಿ ಪದ್ಧತಿಯತ್ತ ಮುಖ ಮಾಡುತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ. ಎತ್ತುಗಳ ಮೂಲಕ ಮಾಡುವ ಉಳುಮೆಯಿಂದ ಮಣ್ಣಿನ ಸ್ವಾಭಾವಿಕ ರಚನೆ ಕಾಪಾಡಿಕೊಳ್ಳಲು ಸಹಾಯವಾಗುತ್ತದೆ. ಜೊತೆಗೆ ಇಂಧನ ವೆಚ್ಚವೂ ಕಡಿಮೆಯಾಗುತ್ತದೆ. ಆದರೆ ಆಧುನಿಕ ಯಾಂತ್ರೀಕರಣ ಮತ್ತು ಸಾಂಪ್ರದಾಯಿಕ ಪದ್ಧತಿಗಳ ನಡುವೆ ಸಮತೋಲನ ಸಾಧಿಸುವುದು ಅಗತ್ಯವಾಗಿದೆ.

■ **ಎಸ್.ಎಫ್. ತಹಶೀಲ್ದಾರ್, ಕೃಷಿ ಅಧಿಕಾರಿ, ರೋಣ**

ಸಬ್ಸಿಡಿ ನೀಡಿ

ಡೀಸೆಲ್ ಬೆಲೆ ಏರಿಕೆಯ ಬಿಸಿ ಗಜೇಂದ್ರಗಡ ತಾಲೂಕಿನ ರೈತರಿಗೆ ಕೃಷಿಯಲ್ಲಿ ಇಂಧನ ಅವಲಂಬನೆಯನ್ನು ತಗ್ಗಿಸಿ, ಸ್ವಾವಲಂಬನೆಯ ದಾರಿ ತೋರಿಸಿದೆ. ಸರ್ಕಾರಗಳು ಇಂಧನ ದರ ನಿಯಂತ್ರಿಸದಿದ್ದರೆ ಅಥವಾ ಸಬ್ಸಿಡಿ ನೀಡದಿದ್ದರೆ ಮುಂಬರುವ ದಿನಗಳಲ್ಲಿ ಇಡೀ ಕೃಷಿ ವಲಯವೇ ಮರಳಿ ಹಳೆ ಪದ್ಧತಿಗೆ ಜಾರುವುದು ನಿಶ್ಚಿತ ಎನ್ನುತ್ತಾರೆ ಕೃಷಿ ತಜ್ಞರು.

ಜಾನಪದ ಎಲ್ಲ ಸಾಹಿತ್ಯಗಳ ಮೂಲ

◆**ಮುಂಡರಗಿ:** ಆಧುನಿಕ ಜೀವನ ಶೈಲಿ ಹಾಗೂ ಶಿಕ್ಷಣ ಪದ್ಧತಿಗಳಿಂದ ನಮ್ಮ ಮಕ್ಕಳು ಸಂಸ್ಕಾರ ಹೀನರಾಗುತ್ತಿದ್ದಾರೆ. ಜಾನಪದವು ನಮ್ಮೆಲ್ಲರಿಗೆ ಉತ್ತಮ ಸಂಸ್ಕಾರ ಕಲಿಸುತ್ತಿದ್ದು, ನಾವೆಲ್ಲ ಅದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕು ಎಂದು ಜಾನಪದ ಕಲಾವಿದ ಡಾ. ರಾಮು ಮೂಲಗಿ ಹೇಳಿದರು.

ಇಲ್ಲಿಯ ಕ.ರಾ.ಬೆಲ್ಲದ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಮುಕ್ತಾಯ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಅನ್ನದಾನೀಶ್ವರ ಮಹಾಶಿವಯೋಗಿಗಳು ಆಶೀರ್ವಚನ ನೀಡಿ, ಜಾನಪದವು ನಮ್ಮ ಬದುಕಿನ ಚಿತ್ರಣವನ್ನು ಯಥಾವತ್ತಾಗಿ ಚಿತ್ರಿಸುತ್ತದೆ. ಹೀಗಾಗಿ ಜಾನಪದವನ್ನು ಎಲ್ಲ ಸಾಹಿತ್ಯಗಳ ಮೂಲ ಎಂದು ಪರಿಗಣಿಸಲಾಗಿದೆ. ಜಾನಪದವನ್ನು ನಾವೆಲ್ಲ ಉಳಿಸಿ, ಬೆಳೆಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಮೇಲ್ವಿಚಾರಣಾ ಸಮಿತಿ ಅಧ್ಯಕ್ಷ ಪ್ರೊ. ಆರ್.ಎಲ್. ಪೋಲೀಸಪಾಟೀಲ ಮಾತನಾಡಿ, ಈ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಅನ್ನದಾನೀಶ್ವರ ಸ್ವಾಮೀಜಿ ಅವರು ಇಲ್ಲಿ ಕಾಲೇಜು ನಿರ್ಮಿಸಿದ್ದಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ತಮ್ಮ ಕಾಲೇಜನ್ನು ಮರೆಯಬಾರದು ಎಂದರು.

ಕಾಲೇಜು ಮೇಲ್ವಿಚಾರಣಾ ಸಮಿತಿ ಉಪಾಧ್ಯಕ್ಷ ವಿ.ಎಫ್.ಗುಡದಪ್ಪನವರ ಸಮಾರಂಭವನ್ನು ಉದ್ಘಾಟಿಸಿದರು. ಕಸಾಪ ತಾಲೂಕು ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ, ಡಾ.ವನಜಾಕ್ಷಿ ಭರಮಗೌಡರ, ಡಾ.ಸಚಿನ ಉಪ್ಪಾರ, ಡಾ.ಮನೋಜ್ ಕೋರ್ಪಡೆ, ಸಂಗೀತಾ ಮಳಲಿ, ಪ್ರೊ.ಲತಾ ಕಡ್ಡಿ ಉಪಸ್ಥಿತರಿದ್ದರು.

ಉಪನ್ಯಾಸಕ ಆರ್.ಎಚ್. ಜಂಗಣವಾರಿ ಸ್ವಾಗತಿಸಿದರು. ಪ್ರಾಚಾರ್ಯ ಡಾ.ಸಂತೋಷ ಹಿರೇಮಠ ಪ್ರಾಸ್ತಾವಿಸಿದರು. ಕುಮಾರ ಜಿ. ನಿರೂಪಿಸಿದರು. ಈರಮ್ಮ ಬಂಡಿವಡ್ಡರ ವಂದಿಸಿದರು.



ಮಾಂಸ ಮಾರಾಟ ಅಂಗಡಿ ಸ್ಥಳಾಂತರಕ್ಕೆ ಆಗ್ರಹ

◆**ಲಕ್ಷ್ಮೇಶ್ವರ:** ಸೋಮೇಶ್ವರ ದೇವಸ್ಥಾನ ಹಿಂಭಾಗದಲ್ಲಿರುವ ಮಾಂಸದ ಚಿಕನ್, ಮೀನು, ಕುರಿ, ಮಾಂಸ ಅಂಗಡಿಗಳನ್ನು ಸ್ಥಳಾಂತರಿಸಬೇಕು ಹಾಗೂ ಹಾಗೂ ಅಕ್ರಮವಾಗಿ ಪುರಸಭೆ ಜಾಗದಲ್ಲಿ ಕಸಾಯಿ ಖಾನೆಗಳ ನಡೆಸುತ್ತಿದ್ದವರ ಮೇಲೆ ಕಾನೂನು ಕ್ರಮಗೊಳ್ಳಲು ಶ್ರೀರಾಮ ಸೇನಾ ಹಾಗೂ ಹಿಂದೂ ಕಾರ್ಯಕರ್ತರಿಂದ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ಗುಡಾರದ ಅವರಿಗೆ ಮನವಿ ಸಲ್ಲಿಸಲಾಯಿತು.

ಶ್ರೀರಾಮ ಸೇನಾ ತಾಲೂಕು ಅಧ್ಯಕ್ಷ ಈರಣ್ಣ ಪೂಜಾರ ಹಾಗೂ ಹಿಂದೂ ಯುವ ಮುಖಂಡರಾದ ಗಂಗಾಧರ ಮೆಣಸಿನಕಾಯಿ, ಸೋಮೇಶ ಉಪನಾಳ, ಮಂಜುನಾಥ ಹೊಗೆಸೊಪ್ಪಿನ ಮಾತನಾಡಿ, ದೇವಸ್ಥಾನದ ಹಿಂಭಾಗದಲ್ಲಿ ದಶಕಗಳಿಂದ ಮಾಂಸ ಮಾರಾಟ ಅಂಗಡಿಗಳು, ಅಕ್ರಮ ಕಸಾಯಿಖಾನೆಗಳು ನಡೆಯುತ್ತಿದ್ದೂ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ ದೇವಸ್ಥಾನ ಹತ್ತಿರ ಇರುವುದರಿಂದ ದೇವಸ್ಥಾನ ಒಳಗಡೆಯಿಂದ ತೆಗೆದುಕೊಂಡು ಸಾಗುತ್ತಾರೆ. ಹಲವಾರು ವರ್ಷಗಳಿಂದ ವಿವಿಧ ಸಂಘಟನೆಗಳು ಸಾರ್ವಜನಿಕರು ಮನವಿ ಸಲ್ಲಿಸಿದರೂ ಕ್ಯಾರೇ ಅನ್ನದ ಅಧಿಕಾರಿಗಳು ಮಾಂಸ ಮಾರಾಟ ವ್ಯಾಪಾರಸ್ಥರಿಗೆ ಪುರಸಭೆಯವರು ಭಯ ಪಡುತ್ತಿದ್ದಾರಾ? ಅಕ್ರಮವಾಗಿ ಕಸಾಯಿಖಾನೆಗಳನ್ನು ನಡೆಸುತ್ತಿದ್ದರೂ ಅಧಿಕಾರಿಗಳಿಂದ ಕ್ರಮವಿಲ್ಲ ಯಾಕೆ? ಕಳೆದ ನಾಲ್ಕು ವರ್ಷಗಳ ಹಿಂದೆ ಅಂದಿನ ಜಿಲ್ಲಾಧಿಕಾರಿಗಳು ತೆರವುಗೊಳಿಸಲು ಆದೇಶ ಕೊಟ್ಟಿದ್ದರೂ ತೆರವುಗೊಳಿಸುವ ಕಾರ್ಯ ಸಾಧ್ಯವಾಗಿಲ್ಲ. ಇದರಿಂದ ಅಧಿಕಾರಿಗಳ ಮೇಲೆ ಅನುಮಾನ ಮೂಡಿದೆ. ಇನ್ನು ಒಂದು ತಿಂಗಳದೊಳಗೆ ತೆರವುಗೊಳಿಸಲಿಲ್ಲ ಎಂದರೆ ಪುರಸಭೆ ಎದುರು ಸಮಸ್ತ ಹಿಂದೂ ಸಂಘಟನೆಗಳಿಂದ ತೆರವುಗೊಳಿಸುವವರೆಗೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ಬಜಾರ ವ್ಯಾಪಾರಸ್ಥರ ಸಂಘ ಅಧ್ಯಕ್ಷ ಬಸವೇಶ ಮಹಾಂತಶೆಟ್ಟರ, ವರ್ತಕರಾದ ಚಂಬಣ್ಣ ಬಾಳಿಕಾಯಿ, ವಿಜಯ ಹತ್ತಿಕಾಳ ಮಾತನಾಡಿದರು. ಸೋಮೇಶ್ವರ ದೇವಸ್ಥಾನ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ್ ಕುಲಕರ್ಣಿ, ದುಂಡೇಶ ಕೋಟಗಿ, ಥಾವರಪ್ಪ ಲಮಾಣಿ, ರಾಜು ಅಂದಲಗಿ, ಬಸವರಾಜ ಚಕ್ರಸಾಲಿ,ಶಿವಣ್ಣ ಲಮಾಣಿ, ಮಂಡಲೀಕ ಲಮಾಣಿ, ಪ್ರವೀಣ ಬೋಮಲೆ, ವಿಜಯ ಕುಂಬಾರ,ಗಿರೀಶ ಚೌರಡ್ಡಿ ಮಲ್ಲಿಕಾರ್ಜುನ ನೀರಾಲೋಟ, ಶಕ್ತಿ ಕತ್ತಿ,ವಿಶಾಲ ಬಟಗುರ್ಕಿ, ಅಮಿತ ಗುಡಗೇರಿ, ಮಹಾಂತೇಶ ರಗಟಿ, ಮಹಾದೇವಪ್ಪ ಅಣ್ಣಿಗೇರಿ, ಹನುಮಂತ ರಾಮಗೇರಿ, ಮಂಜುನಾಥ ಮುಳಗುಂದ, ಬಸವರಾಜ ಕಲ್ಲೂರ, ಸಂತೋಷ ಜಾವೂರ, ಸಂತೋಷ ಬೋಮಲೆ, ಸುಮಂಗಲಾ ಕುಂಬಾರ, ಗೀತಾ ಬಡಿಗೇರ, ಶೋಭಾ ಇಟಗಿ, ಶ್ರೀರಾಮ ಸೇನಾ ಹಿಂದೂ ಕಾರ್ಯಕರ್ತರು ಇದ್ದರು.



ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಿ

◆**ರೋಣ:** ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಈ ಬಾರಿ ಸಚಿವ ಸ್ಥಾನ ನೀಡದಿದ್ದರೆ ಪ್ರಾಣ ತ್ಯಾಗಕ್ಕೂ ಸಿದ್ಧ ಎಂದು ದಲಿತ ಮುಖಂಡ ಮೌನೇಶ ಹಾದಿಮನಿ ಎಚ್ಚರಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟನೆ ನೀಡಿರುವ ಅವರು, ಶಾಸಕ ಜಿ.ಎಸ್.ಪಾಟೀಲರು ನಾಲ್ಕು ಬಾರಿ ಶಾಸಕರಾಗಿ, ಗದಗ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದಾರೆ. ಪಕ್ಷ ವಹಿಸಿದ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ಹೀಗಿರುವಾಗ ಅವರಿಗೆ ಸಚಿವ ಸ್ಥಾನ ನೀಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಾದ ಬೆಳವಣಿಗೆಯಲ್ಲ. ಇದರಿಂದ ಜಿಲ್ಲೆಯಲ್ಲಿ ಪಕ್ಷಕ್ಕೆ ಹೊಡೆತ ಬಿಳಲಿದೆ ಎಂದಿದ್ದಾರೆ. ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಪ್ರತಿ ಬಾರಿಯೂ ಹೋರಾಟ ಮಾಡುತ್ತಾ ಬಂದಿದ್ದೇವೆ. ಪಕ್ಷದ ವರಿಷ್ಠರು ನಮ್ಮ ತಾಳ್ಮೆಯ ಹೋರಾಟಕ್ಕೆ ಕಣ್ಣು ತೆರೆಯುತ್ತಿಲ್ಲ, ಪಕ್ಷದ ಪ್ರಾಮಾಣಿಕ ಕಾರ್ಯಕರ್ತರ ಕೂಗಿಗೆ ಪಕ್ಷದ ವರಿಷ್ಠರು ಸ್ಪಂದಿಸುವ ಕೆಲಸವನ್ನು ಮಾಡಬೇಕು. ಇಲ್ಲದಿದ್ದರೆ ಈ ಬಾರಿ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದ್ದಾರೆ.

ರೋಣ ಶಾಸಕರಿಗೆ ಸಚಿವ ಸ್ಥಾನ ನೀಡಿ

◆**ಮುಂಡರಗಿ:** ರೋಣ ಮತಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮುಂಡರಗಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಹಾಗೂ ಮುಂಡರಗಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಡಿ.ಮೋರನಾಳ ಅವರು ಕಾಂಗ್ರೆಸ್ ಹೈಕಮಾಂಡ್‌ನ್ನು ಒತ್ತಾಯಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಜಿ.ಎಸ್.ಪಾಟೀಲರು ರೋಣ ಮತಕ್ಷೇತ್ರದಲ್ಲಿ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಜಿಲ್ಲೆಯ ಕಾಂಗ್ರೆಸ್ ಶಾಸಕರ ಪೈಕಿ ಹಿರಿಯ ಹಾಗೂ ಅನುಭವಿ ನಾಯಕರಾಗಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದು, ಕ್ಷೇತ್ರವನ್ನು ಕಾಂಗ್ರೆಸ್‌ನ ಭದ್ರಕೋಟೆಯಾಗಿ ರೂಪಿಸಿದ್ದಾರೆ. ರೈತರು, ಕಾರ್ಮಿಕರು, ಬಡವರು ಹಾಗೂ ಹಿಂದುಳಿದ ವರ್ಗಗಳ ಪರ ಸದಾ ಸ್ಪಂದಿಸುವ ಜನನಾಯಕರಾಗಿ ಜಿ.ಎಸ್.ಪಾಟೀಲರು ಗುರುತಿಸಿಕೊಂಡಿದ್ದಾರೆ ಎಂದರು. ಸಿದ್ದರಾಮಯ್ಯರ ಅವಧಿಯಲ್ಲಿಯೇ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡುವ ಕುರಿತು ಚರ್ಚೆ ನಡೆದಿತ್ತು. ಆಗ ಹೈಕಮಾಂಡ್ ಮುಂದಿನ ಸಂಪುಟ ಪುನರ್ ರಚನೆಯಲ್ಲಿ ಅವಕಾಶ ನೀಡುವುದಾಗಿ ಭರವಸೆ ನೀಡಿ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿತ್ತು. ಈಗ ಸೂಕ್ತ ಸಮಯ ಬಂದಿರುವುದರಿಂದ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದಿದ್ದಾರೆ.

ಪುಟ್ಟರಂಗಶೆಟ್ಟಿಗೆ ಮಂತ್ರಿ ಮಂಡಲದಲ್ಲಿ ಸ್ಥಾನ ನೀಡಲು ಸ್ವಾಮೀಜಿ ಆಗ್ರಹ

◆**ಗದಗ:** ಉಪ್ಪಾರ ಸಮಾಜ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಸಮಾಜವಾಗಿದೆ. ಇಂತಹ ಸಮಾಜದಿಂದ ರಾಜ್ಯದಲ್ಲೇ ಏಕೈಕ ಶಾಸಕರಾಗಿ ಚಾಮರಾಜನಗರ ಸಾಮಾನ್ಯ ಕ್ಷೇತ್ರದಿಂದ ಪುಟ್ಟರಂಗಶೆಟ್ಟಿ ಆಯ್ಕೆ ಆಗಿದ್ದು ಅವರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ನೀಡಬೇಕು ಎಂದು ಭಗೀರಥ ಗುರುಪೀಠ ಬ್ರಹ್ಮ ವಿಧ್ಯಾನಗರ ಮಧುರೆ, ಹೊಸದುರ್ಗದ ಜ.ಡಾ.ಪುರುಷೋತ್ತಮನಾಂದಪುರಿ ಸ್ವಾಮೀಜಿ ಆಗ್ರಹಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪುಟ್ಟರಂಗಶೆಟ್ಟಿ ಸತತ ನಾಲ್ಕು ಬಾರಿ ಶಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪುಟ್ಟರಂಗಶೆಟ್ಟಿ ಅವರಿಗೆ ಈ ಹಿಂದೆ ಸಚಿವ ಸ್ಥಾನ ನೀಡುತ್ತೇವೆಂದು ಸಿದ್ದರಾಮಯ್ಯ ಭರವಸೆ ನೀಡಿದ್ದರು. ಆದರೆ ಭರವಸೆ ಈಡೇರಲಿಲ್ಲ. ಈಗ ಮತ್ತೆ ಮಂತ್ರಿ ಮಂಡಲ ಪುನರ್ ರಚನೆ ಆಗಲಿದ್ದು ಈ ಬಾರಿಯಾದರೂ ನೀಡಲಿ ಎಂದು ಆಗ್ರಹಿಸಿದರು.

ಉಪ್ಪಾರ ಸಮಾಜದ ಮೀಸಲಾತಿ ವರದಿಯನ್ನು ಪ್ರಸ್ತುತ ಅಧಿಕಾರದಲ್ಲಿರುವ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಮೀಸಲಾತಿ ಹೊರ ಬಂದರೆ ಉಪ್ಪಾರ ಸಮಾಜ ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ. ಆ ಮೂಲಕ ಸಮಾಜ ನಿಮಗೆ ಋಣಿಯಾಗಿರುತ್ತದೆ ಎಂದರು.



ಉಪ್ಪಾರ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ ಮಾತನಾಡಿ, ಉಪ್ಪಾರ ಸಮಾಜದ ಪುಟ್ಟರಂಗಶೆಟ್ಟಿ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆ ಆಗಿದ್ದಾರೆ. ರಾಜ್ಯದಲ್ಲಿ ಉಪ್ಪಾರ ಸಮಾಜದಿಂದ ಆಯ್ಕೆ ಆದ ಏಕೈಕ ಶಾಸಕರಾಗಿದ್ದಾರೆ. ಸಮಾಜವನ್ನು ಸಂಘಟಿಸುವಲ್ಲಿ ಅವರು ಸಾಕಷ್ಟು ಪರಿಶ್ರಮ ಹಾಕಿದ್ದಾರೆ. ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಶಮಾನಂದ ಪೂಜಾರ, ವೀರೂಪಾಕ್ಷಪ್ಪ ಉಪ್ಪಾರ, ಈರಣ್ಣ ಗಡಾದ, ಅಶೋಕ ಇಳಕಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹೊಸ ಡಂಬಳ ಗ್ರಾಮದಲ್ಲಿ ಹಿರಿಯ ನಾಗರಿಕರಿಂದ ನರೇಗಾ ಕೆಲಸಕ್ಕೆ ಬಲ



◆**ಮುಂಡರಗಿ:** ತಾಲೂಕಿನ ಡಂಬಳ ಗ್ರಾಪಂ ವ್ಯಾಪ್ತಿಯ ಹೊಸ ಡಂಬಳ ಗ್ರಾಮದ 2026-27ನೇ ಆರ್ಥಿಕ ಸಾಲಿನ ನರೇಗಾ ಸಮುದಾಯ ಬಾಂದಾರ ಹೂಳೆತ್ತುವ ಕಾಮಗಾರಿಯಲ್ಲಿ 12ಕ್ಕೂ ಹೆಚ್ಚು ಜನ 62 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಸಕ್ರೀಯವಾಗಿ ಕೂಲಿಕಾರರಾಗಿ ಭಾಗವಹಿಸುವ ಮೂಲಕ ಮಾದರಿಯಾಗಿ ದುಡಿಮೆಯೇ ದುಡ್ಡಿನ ತಾಯಿ ಎಂಬ ಮಾತಿಗೆ ಸಾಕ್ಷಿಯಾಗಿದ್ದಾರೆ.

ಕೆಲವರು ಕಳೆದ 10 ವರ್ಷಗಳಿಂದ ನರೇಗಾ ಯೋಜನೆಯಲ್ಲಿ ಭಾಗವಹಿಸುತ್ತಾ ಬಂದಿದ್ದು ಬೇಸಿಗೆಯಲ್ಲಿ ಇವರಿಗೆ ನರೇಗಾ ಯೋಜನೆಯೇ ದುಡಿಮೆಯ ಮೂಲವಾಗಿದೆ. ಅಲ್ಲದೇ ನರೇಗಾ ಯೋಜನೆಯಲ್ಲಿರುವ ಹಿರಿಯ ನಾಗರಿಕರಿಗೆ ಅರ್ಧ ಕೆಲಸ ಪೂರ್ಣ ಕೂಲಿ ನಿಯಮವನ್ನು ಕೂಲಿಕಾರರಾದ ಒಂಟೆಲಪ್ಪ ತಳವಾರ (77), ಯಲ್ಲಪ್ಪ ಕವಲೂರು (68), ಮಹದೇವಪ್ಪ ತಳವಾರ (70), ನಿಂಗವ್ವ ತಳವಾರ (68), ಶಾರದಾ ಕವಲೂರು (64), ಕಮಲವ್ವ ಡೊಳ್ಳಿನ (63),ದೇವಕ್ಕ ತಳವಾರ (62), ಲಕ್ಷ್ಮವ್ವ ಪೂಜಾರ (62), ಹಾಲವ್ವ ಬೇವಿನಮರದ (65), ಸಂಗವ್ವ ಕಾತರಕಿ (64), ರೇಣಮ್ಮ ಪೂಜಾರ (64), ಯಮುನಾಬಿ ನದಾಫ (65) ಸದುಪಯೋಗ ಪಡಿಸಿಕೊಂಡು ಯೋಜನೆಯ ಮಹತ್ವವನ್ನು ಇಳಿವಯಸ್ಸಿನಲ್ಲೂ ಪೂರ್ಣ ಕೆಲಸದೊಂದಿಗೆ ದುಡಿಮೆಯ ಮೂಲಕ ಸಾರಿದ್ದಾರೆ. ಮೂರು ಪ್ರತ್ಯೇಕ ಜಾಗಗಳಲ್ಲಿ ಕೃಷಿ ಇಲಾಖೆ ಹಾಗೂ ಗ್ರಾಪಂ ಮೂಲಕ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಈ ಹಿರಿಯ ನಾಗರಿಕರು ಭಾಗವಹಿಸಿದ್ದಾರೆ.

ನರೇಗಾ ವರದಾನ

ಕೆಲವರಿಗೆ ಅಲ್ಪ ಸ್ವಲ್ಪ ಕೃಷಿ ಜಮೀನಿದ್ದರೆ, ಕೆಲವರು ಕೃಷಿಭೂಮಿ ಇಲ್ಲದ ಗ್ರಾಮೀಣ ನಿವಾಸಿಗಳು. ಹಾಗಾಗಿ ಜಮೀನಿಲ್ಲದವರು ನರೇಗಾ ಕೆಲಸ ಇಲ್ಲದಿದ್ದಾಗ ಬೇರೆಯವರ ಜಮೀನು ಸೇರಿದಂತೆ ಇತರೆಡೆ ಕಾರ್ಮಿಕರಾಗಿ ದುಡಿಯುತ್ತಾರೆ. ಬೇಸಿಗೆಯಲ್ಲಿ ಕೆಲಸದ ಕೊರತೆ ಸಹಜ. ಕೃಷಿ ಜಮೀನಿರುವ ರೈತರು ಹೊಟ್ಟೆಪಾಡಿಗೆ ಬೇರೆ ದುಡಿಮೆ ಅವಲಂಬಿಸಬೇಕಾಗುತ್ತದೆ. ಇಂತಹ ಸಮಯದಲ್ಲಿ ನರೇಗಾ ಕೂಲಿ ಕೆಲಸವೇ ನಮಗೆ ವರದಾನ. ನರೇಗಾ ಯೋಜನೆಯಿಂದ 370 ರೂಪಾಯಿಯ ದುಡಿಮೆ ಸಿಗುತ್ತಿರುವುದು ಹೊಟ್ಟೆಪಾಡಿಗೆ ಆಧಾರ ಎನ್ನುವುದು ಹಿರಿಯ ಕೂಲಿಕಾರ ಒಂಟೆಲಪ್ಪ ತಳವಾರ ಅವರ ಮಾತು.

ಮಹತ್ವಕ್ಕೆ ಸಾಕ್ಷಿ

ಸಭೆ ಮೂಲಕ ಹಾಗೂ ಗ್ರಾಪಂ ಮಟ್ಟದಲ್ಲಿ ಐಇಸಿ ಚಟುವಟಿಕೆಯಡಿ ಪ್ರಚಾರದ ಮೂಲಕ ವಿಶಿಷ್ಟಚೇತನರು, ಹಿರಿಯ ನಾಗರಿಕರು, ಲಿಂಗತ್ವ ಅಲ್ಪಸಂಖ್ಯಾತರಿಗೆ ನರೇಗಾ ಯೋಜನೆಯಡಿ ಕೆಲಸ ನೀಡಲು ಮುತುವರ್ಜಿಯಿಂದ ಸೂಚಿಸಲಾಗಿತ್ತು. ಅದರಂತೆ ಹೊಸಡಂಬಳ ಗ್ರಾಮದ ನರೇಗಾ ಸಮುದಾಯ ಕಾಮಗಾರಿಯಲ್ಲಿ 12ಕ್ಕೂ ಹೆಚ್ಚು ಜನ ಹಿರಿಯ ನಾಗರಿಕರು ಏಕಕಾಲಕ್ಕೆ ಭಾಗವಹಿಸಿರುವುದು ಗ್ರಾಮೀಣ ಭಾಗದಲ್ಲಿ ಯೋಜನೆಯ ಮಹತ್ವಕ್ಕೆ ಸಾಕ್ಷಿಯಾಗಿದೆ ಎಂದು ಮುಂಡರಗಿ ತಾ.ಪಂ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ ವಿಜಯಕುಮಾರ ಬೆಣ್ಣೆ ತಿಳಿಸಿದ್ದಾರೆ.

ಬಿತ್ತನೆ ಸಂದರ್ಭದಲ್ಲಿ ಬೀಜೋಪಚಾರ ಅವಶ್ಯ: ಐ.ಎಸ್.ಪಾಟೀಲ

◆**ರೋಣ:** ಬಿತ್ತನೆಯ ಸಂದರ್ಭದಲ್ಲಿ ಬೀಜೋಪಚಾರ ಅವಶ್ಯಕ ಎನ್ನುವುದನ್ನು ರೈತರು ಮರೆಯಬಾರದು. ಬೀಜೋಪಚಾರ ಮಾಡುವುದರಿಂದ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದು ಧಾರವಾಡ ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್.ಪಾಟೀಲ ಹೇಳಿದರು.

ಅವರು ಪಟ್ಟಣದ ಬಸ್ ನಿಲ್ದಾಣದ ಬಳಿಯಿರುವ ರೈತ ಸಂಪರ್ಕ ಕೇಂದ್ರದಲ್ಲಿ ಜರುಗಿದ ರಿಯಾತಿ ದರದಲ್ಲಿ ಮುಂಗಾರು ಬಿತ್ತನೆ ಬೀಜಗಳ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಬಾರಿ ಮುಂಗಾರು ಪೂರ್ವ ಮಳೆಗಳು ಉತ್ತಮ ರೀತಿಯಲ್ಲಿ ಸುರಿದಿದ್ದು, ರೈತರಲ್ಲಿ ಹರ್ಷ ಮೂಡಿಸಿದೆ. ಮುಖ್ಯವಾಗಿ ರೈತರು ಮುಂಗಾರು ಬಿತ್ತನೆಗಾಗಿ ತಮ್ಮ ಜಮೀನುಗಳನ್ನು ಹದಗೊಳಿಸಿ ರೋಹಿಣಿ ಮಳೆಗಾಗಿ ಕಾಯುತ್ತಿದ್ದು,ಕಾರಣ ತಾಲೂಕಿನ ರೈತರು ರೋಹಿಣಿ ಮಳೆಯ ಸಂದರ್ಭದಲ್ಲಿ ಬಿತ್ತನೆ ಮಾಡುವುದು ವಾಡಿಕೆ. ಹೀಗಾಗಿ ಕೃಷಿ ಇಲಾಖೆ ಬಿತ್ತನೆ ಬೀಜಗಳ ವಿತರಣೆಗೆ ಸಜ್ಜಾಗಿದೆ ಎಂದರು.



ಬೀಜೋಪಚಾರ ಮಾಡುವುದರಿಂದ ಬೆಳೆಗಳಿಗೆ ರೋಗಗಳು ಅಂಟಿಕೊಳ್ಳುವುದು ಕಡಿಮೆಯಾಗುತ್ತದೆ. ಅಲ್ಲದೇ ಫಸಲು ಕೂಡ ಉತ್ತಮವಾಗಿರುತ್ತದೆ. ರೈತರು ಕೂಡಾ ಸಾವಯವ ಗೊಬ್ಬರದತ್ತ ತಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಸಾವಯವ ಗೊಬ್ಬರವನ್ನು ಬಳಕೆ ಮಾಡುವುದರಿಂದ ಜಮೀನುಗಳು ಫಲವತ್ತತೆಯಿಂದ ಕೂಡಿರಲು ಸಾಧ್ಯವಾಗುತ್ತದೆ. ಜೊತೆಗೆ ಬೆಳೆದ ಬೆಳೆಗಳು ಕೂಡಾ ಗುಣಮಟ್ಟದಿಂದ ಕೂಡಿರುತ್ತದೆ ಎಂದ ಅವರು, ಬಿತ್ತನೆ ಬೀಜಗಳ ಕೊರತೆ ಉಂಟಾಗದಂತೆ ಅಧಿಕಾರಿಗಳು ನಿಗಾವಹಿಸಬೇಕು ಎಂದರು.

ಉಪ ನಿರ್ದೇಶಕ ಬಿ.ಆರ್.ಪಾಲಾಕ್ಷಗೌಡ ಮಾತನಾಡಿ, ತಾಲೂಕಿನಲ್ಲಿ ಮುಂಗಾರು ಬೆಳೆಗಳ ಬಿತ್ತನೆ ಪ್ರಮಾಣ 35 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಆಗಬಹುದು ಎಂಬ ನಿರೀಕ್ಷೆಯನ್ನು ಹೊಂದಲಾಗಿದ್ದು, ಈ ದಿಶೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಣೆ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ. ಈ ಬಾರಿ ತಾಲೂಕಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಸುರಿದಿದ್ದು, ಜಮೀನುಗಳ ತಂಪನ್ನು ಕಾಯ್ದುಕೊಳ್ಳುವಲ್ಲಿ ಸಹಾಯಕವಾಗಿದೆ. ರೈತರು ಬಿತ್ತನೆ ಬೀಜಗಳನ್ನು ಸಮರ್ಪಕ ರೀತಿಯಲ್ಲಿ ಪಡೆದುಕೊಳ್ಳಬೇಕು ಗದ್ದಲವನ್ನು ಸೃಷ್ಟಿಸಬಾರದು ಎಂದರು. ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್.ಪಾಟೀಲ ಮುಂಗಾರು ಬಿತ್ತನೆ ಬೀಜಗಳನ್ನು ಸಾಂಕೇತಿಕವಾಗಿ ರೈತರಿಗೆ ವಿತರಿಸಿದರು.

ಈ ಸಂದರ್ಭದಲ್ಲಿ ಯಚ್ಚರಗೌಡ ಗೋವಿಂದಗೌಡ್ರ, ಬಸವರಾಜ ನವಲಗುಂದ, ಶಿವಪ್ಪ ಅರಹುಣಸಿ, ಸಂಜಯ ದೊಡ್ಡಮನಿ, ಎಸ್.ಎಫ್. ತಹಶೀಲ್ದಾರ ಸೇರಿದಂತೆ ರೈತರು ಹಾಗೂ ಕೃಷಿ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಸಹಸ್ರಾರು ಕಾರ್ಯಕರ್ತರು ಭಾಗಿ | ಕೃತ್ಯದ ವಿರುದ್ಧ ಜನಾಕ್ರೋಶ

ಮೂರಿನಕಟ್ಟೆ ಧ್ವಂಸ ಖಂಡಿಸಿ ಬಿಜೆಪಿ ಪ್ರತಿಭಟನೆ





ಭಟ್ಕಳ: ಹಿಂದುಗಳ ಶ್ರದ್ಧಾಕೇಂದ್ರವಾದ ಮೂರಿನಕಟ್ಟೆ ಧ್ವಂಸ ಖಂಡಿಸಿ ಶುಕ್ರವಾರ ಇಲ್ಲಿನ ಬಿಜೆಪಿ ಮತ್ತು ಹಿಂದೂ ಸಂಘಟನೆಗಳ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಯಿತು.

ರಾಜ್ಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತಿತರ ಬಿಜೆಪಿ ನಾಯಕರು, ವಿವಿಧ ಹಿಂದೂ ಪರ ಸಂಘಟನೆಯ ಪ್ರಮುಖರ ನೇತೃತ್ವದಲ್ಲಿ ಸಾವಿರಾರು ಜನ ಈ ಕೃತ್ಯ ವಿರೋಧಿಸಿ ಪ್ರತಿಭಟನೆ ನಡೆಸಿದರಲ್ಲದೇ ನಂತರ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ಅವರಿಗೆ ಮನವಿ ಸಲ್ಲಿಸಿದರು. ಧ್ವಂಸ ಕೃತ್ಯ ಎಸಗಿದವರು ಮತ್ತು ಇದಕ್ಕೆ ಕುಮ್ಮಕ್ಕು ನೀಡಿದವರನ್ನು ಕಾನೂನು ಕ್ರಮಕ್ಕೆ ಒಳಪಡಿಸುವಂತೆ ಒತ್ತಾಯಿಸಲಾಯಿತು.

ಗಡಿಪಾರು ಮಾಡಿ: ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಮಾತನಾಡಿ, ಮೂರಿನಕಟ್ಟೆ ಪ್ರದೇಶ ಹಿಂದೂಗಳ ಶ್ರದ್ಧಾ ಭಕ್ತಿಯ ಸ್ಥಳವಾಗಿದೆ. ಈ ಪ್ರದೇಶದಲ್ಲಿ ನಿರ್ಮಿಸಿದ್ದ ಕಟ್ಟೆಯನ್ನು ಧ್ವಂಸ ಮಾಡಿದವರನ್ನು ಗೂಂಡಾ ಕಾಯ್ದೆ ಹಾಕಿ ಗಡಿಪಾರು ಮಾಡಬೇಕು. ಕಟ್ಟೆ ಧ್ವಂಸ ಮಾಡಿದವರು ದೇಶದ್ರೋಹಿಗಳು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾನೇ ಬಂದು ಕಟ್ಟೆ ಕಟ್ಟುತ್ತೇನೆ: ಕಟ್ಟೆಯನ್ನು ಇದ್ದ ಸ್ಥಳದಲ್ಲೇ ನಿರ್ಮಿಸಿಕೊಡಬೇಕು. ಸರ್ಕಾರ ಕಟ್ಟೆ ನಿರ್ಮಿಸಿಕೊಡದೇ ಇದ್ದಲ್ಲಿ ನಾನೇ ಬಂದು ಕಟ್ಟೆಕಟ್ಟುತ್ತೇನೆ.ಮೂರಿನಕಟ್ಟೆಯನ್ನುಮತ್ತೊಂದು ದತ್ತಪೀಠ ತರ ವಿವಾದಿತ ಪ್ರದೇಶವನ್ನಾಗಿ ಮಾಡಬೇಡಿ ಎಂದು ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು.

ಶಾಂತಿ ಶಾಂತಿ ಎಂದು ವಾಂತಿ ಮಾಡಿಸಬೇಡಿ: ಮೂರಿನಕಟ್ಟೆಗೆ ನೂರಾರು ವರ್ಷದ ಇತಿಹಾಸ ಇದೆ. ಆದರೆ, ಸುತ್ತಮುತ್ತಲಿನಲ್ಲಿ ಮನೆ ಕಟ್ಟಿಕೊಂಡವರು ಯಾವಾಗನಿಂದ ಇದ್ದಾರೆ. ಹೀಗಾಗಿ ಮೂರಿನಕಟ್ಟೆ ಸಕ್ರಮ, ಅದರ ಪಕ್ಕಕ್ಕೆ ಇದ್ದವರು ಅಕ್ರಮ ಎಂದ ಅವರು, ಶಾಂತಿ ಶಾಂತಿ ಎಂದು ನಮಗೆ ವಾಂತಿ ಮಾಡಿಸಬೇಡಿ. ಇಂದು ಮೂರಿನಕಟ್ಟೆ ಧ್ವಂಸ ಮಾಡಿದವರು, ನಾಳೆಗೆ ಮನೆಯ ತುಳಸಿಕಟ್ಟೆಯ ವರೆಗೂ ಬರಬಹುದು. ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ, ನಾವು ನ್ಯಾಯ, ಧರ್ಮಕ್ಕಾಗಿ ಹೋರಾಟ ಮಾಡುತ್ತಿದ್ದೇವೆ ಎಂದರು.

ಕುಮ್ಮಕ್ಕು ನೀಡಿವದರ ಮೇಲೂ ಕೇಸು ದಾಖಲಿಸಿ: ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಇದ್ದ ಸ್ಥಳದಲ್ಲೇ ಕಟ್ಟೆ ಕಟ್ಟುತ್ತೇವೆ. ಮುಸ್ಲಿಮರಿಗೆ ಮೂರಿನಕಟ್ಟೆ ಸಂಬಂಧ ಇಲ್ಲದಿದ್ದರೂ ಧ್ವಂಸ ಮಾಡುವುದರ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಿದ್ದಾರೆ. ಕಟ್ಟೆ ಧ್ವಂಸಕ್ಕೆ ಕುಮ್ಮಕ್ಕು ನೀಡಿದ ಮುಖಂಡರ ಮೇಲೂ ಕೇಸು ದಾಖಲಿಸಿ ಬಂಧಿಸಬೇಕು. ನ್ಯಾಯ ಕೇಳಲು ಹೋದ ಹಿಂದೂಗಳ ಮೇಲಿನ ಕೇಸು ವಾಪಾಸ್ ಪಡೆಯಬೇಕು ಎಂದ ಅವರು, ಹಿಂದೂಗಳುಒಗ್ಗಟ್ಟಾಗಬೇಕು. ನಮ್ಮಲ್ಲಿ ಒಡಕು ಮೂಡಿಸುವ ಕೆಲಸ ಕೆಲವು ಮಾಡುತ್ತಿದ್ದು, ಇದಕ್ಕೆಲ್ಲಾ ಆಸ್ಪದ ಕೊಡಬಾರದು ಎಂದು ಹೇಳಿದರು.

> ನಾವು ನಮ್ಮ ದೇಶ, ಭಾರತ ಮಾತೆ ಪ್ರೀತಿಸುವವರನ್ನು ನಂಬುತ್ತೇವೆ. ಆದರೆ, ಪಾಕಿಸ್ತಾನದ ಎಜೆಂಟರಾಗಿ ಕೆಲಸ ಮಾಡುತ್ತಿರುವ ದೇಶದ್ರೋಹಿಗಳನ್ನು ಎಂದಿಗೂ ನಂಬುವುದಿಲ್ಲ. ಇವರನ್ನು ಗಡಿಪಾರು ಮಾಡಬೇಕು. ಬಿಹಾರ, ಪಶ್ಚಿಮ ಬಂಗಾಳದಲ್ಲಿನ ಅಕ್ರಮ ಬಾಂಗ್ಲಾದೇಶಿಗರನ್ನು ಗಡಿಪಾರು ಮಾಡುತ್ತಿದ್ದೇವೆ. ಕರ್ನಾಟಕದಲ್ಲೂ 10 ಲಕ್ಷ ಬಾಂಗ್ಲಾಗಳು ಇದ್ದು, ಭಟ್ಕಳದಲ್ಲೂ ಇದ್ದಾರೆ. ಅಂತವರನ್ನು ಗಡಿಪಾರು ಮಾಡಬೇಕಿದೆ.
>
> ■ ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಹಿಂದೂಗಳ ತಾಳ್ಮೆ ಕೆದಕಬೇಡಿ: ಮಾಜಿ ಶಾಸಕ ಸುನೀಲ ನಾಯ್ಕ ಮಾತನಾಡಿ, ಹಿಂದೂಗಳ ತಾಳ್ಮೆ ಕೆದಕಬೇಡಿ. ಕಟ್ಟೆ ಕಟ್ಟುತ್ತೇವೆ. ನಮ್ಮ ಮೇಲೆ ದಬ್ಬಾಳಿಕೆ, ಕೇಸು ದಾಖಲಿಸುವುದಕ್ಕೆ ನಾವು ಹೆದರುವುದಿಲ್ಲ ಎಂದರು.

ಮುಖಂಡ ಗೋವಿಂದ ನಾಯ್ಕ ಮಾತನಾಡಿ, ಕಟ್ಟೆ ಧ್ವಂಸಕ್ಕೆ ತಂಝೀಂ ಕಾರಣ. ತಂಝೀಂ ಕುಮ್ಮಕ್ಕಿನಿಂದಲೇ ಕಟ್ಟೆ ಧ್ವಂಸ ಮಾಡಲಾಗಿದೆ. ತಂಜೀಂಗೆ ತಮ್ಮ ಸಮುದಾಯದ ಯುವಕರ ನಿಯಂತ್ರಿಸುವ ತಾಕತ್ತು ಇಲ್ಲ ಎಂದರು.

ಪ್ರತಿಭಟನೆಯಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ್ ಹೆಗಡೆ, ಬಿಜೆಪಿ ವಕ್ತಾರ ಹರಿಪ್ರಕಾಶ ಕೋಣೆಮನೆ, ಬಿಜೆಪಿ ಹಿಂದುಳಿದ ಮೋರ್ಚಾ ಅಧ್ಯಕ್ಷ ರಾಜೇಂದ್ರ ನಾಯ್ಕ, ಮಾಜಿ ಜಿಲ್ಲಾಧ್ಯಕ್ಷ ಕೆ.ಜಿ. ನಾಯ್ಕ, ಪ್ರಮುಖ ಪ್ರಸಾದ ಹೆಗಡೆ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಮಾಜಿ ಎಮ್ಮೆಲ್ಸಿ ಸಿದ್ದರಾಮಣ್ಣ ಸೇರಿದಂತೆ ಸಾವಿರಾರು ಜನರು ಪಾಲ್ಗೊಂಡಿದ್ದರು. ಪಟ್ಟಣದ ಆಟೋ ರಿಕ್ಷಾ ಗಣೇಶೋತ್ಸವ ಮೈದಾನದಿಂದ ಪ್ರತಿಭಟನೆ ರ‍್ಯಾಲಿ ನಡೆಯಿತು.

ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪ

ಕಾಂಗ್ರೆಸ್ಸಿಗರು ನಿಜವಾದ ಕೋಮುವಾದಿಗಳು

> ಕಾಂಗ್ರೆಸ್ ನಂಬಿ ಬಿಜೆಪಿ ರಾಜಕಾರಣ ಮಾಡುವುದಿಲ್ಲ. ಹಿಂದೂ ವಿರೋಧಿ ಧೋರಣೆ ಹೊಂದಿದ್ದ ನಾಲ್ವರು ಮುಖ್ಯಮಂತ್ರಿಗಳು ಒಂದೇ ತಿಂಗಳಲ್ಲಿ ಅಧಿಕಾರ ಕಳೆದುಕೊಂಡಿದ್ದಾರೆ. ರಾಜ್ಯದಲ್ಲಿನ ಪ್ರಸ್ತುತ ಆಡಳಿತ ಅಂತ್ಯವಾಗಬೇಕೆಂದು ರಾಜ್ಯದ ಜನರು ನಿರೀಕ್ಷಿಸುತ್ತಿದ್ದು, ಈ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿ ಬಿಜೆಪಿಗೆ ಅಧಿಕಾರಕ್ಕೆ ತರಲು ಸಜ್ಜಾಗಿದ್ದಾರೆ.
>
> ■ ಛಲವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ



ಕಲಬುರಗಿ: ರಾಜೀನಾಮೆ ಕೊಡುವ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಾನು ರಾಜಕೀಯ ನಿವೃತ್ತಿ ಹೊಂದುವುದಿಲ್ಲ. ರಾಜ್ಯದ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಮಾಡುವುದಾಗಿ ಹೇಳಿದ್ದಾರೆ. ಆದರೆ, ನಿಜವಾದ ಕೋಮುವಾದಿಗಳು ಯಾರು ಎಂಬುದನ್ನು ಜನರು ಅರಿತಿದ್ದಾರೆ ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಶುಕ್ರವಾರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಕಾಂತಾರಾಜ ವರದಿಯಲ್ಲಿ ದಲಿತರು ಮೊದಲ ಸ್ಥಾನದಲ್ಲಿದ್ದರು. ಆದರೆ, ಪ್ರಸ್ತುತ ವರದಿಯಲ್ಲಿ ಮುಸ್ಲಿಂ ಸಮುದಾಯ ಮೊದಲ ಸ್ಥಾನದಲ್ಲಿದೆ ಎಂದು ಹೇಳಲಾಗುತ್ತಿದೆ. ಜಾತಿ-ಜಾತಿಗಳ ನಡುವೆ ಸಂಘರ್ಷ ಉಂಟುಮಾಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದ್ದು, ನಿಜವಾದ ಕೋಮುವಾದಿ ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ಎಂದು ಆರೋಪಿಸಿದರು.

ಒಂದೇ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಮುಂದಾಗಿದೆ. ರಾಜ್ಯದಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಧಿಕಾರ ಉಳಿಸಿಕೊಳ್ಳುವುದೇ ಸರ್ಕಾರದ ಮುಖ್ಯ ಗುರಿಯಾಗಿದೆ. ಮುಂದಿನ ದಿನಗಳಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ವ್ಯಕ್ತಿ ಬದಲಾದರೂ, ವ್ಯವಸ್ಥೆ ಮಾತ್ರ ಬದಲಾಗುವುದಿಲ್ಲ ಎಂದು ಹೇಳಿದರು.

ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಕದ್ದು ಮುಚ್ಚಿ ಭ್ರಷ್ಟಾಚಾರ ನಡೆಸುತ್ತಿತ್ತು. ಇದೀಗ ನೇರವಾಗಿ ಭ್ರಷ್ಟಾಚಾರ ಮಾಡುತ್ತಿದೆ. ಬೆಂಗಳೂರಿನಲ್ಲಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳಲ್ಲಿಯೇ ಭಾರೀ ಅವ್ಯವಹಾರ ನಡೆದಿದೆ. ಒಂದು ಗುಂಡಿ ಮುಚ್ಚಲು 4,400 ವೆಚ್ಚವಾಗಿದೆ. ಚಾಮರಾಜಪೇಟೆಯಲ್ಲಿ ಒಂದು ಗುಂಡಿ ಮುಚ್ಚಲು 1 ಲಕ್ಷ ಖರ್ಚಾಗಿದೆ ಅಂತೆ. ಗುಂಡಿಯನ್ನು ಚಿನ್ನದಿಂದ ಮುಚ್ಚಲಾಗಿದೆಯಾ? ಎಂದು ಪ್ರಶ್ನಿಸಿದರು.

ದೇಶದ ಪ್ರಧಾನಿ ಕುರಿತು ತುಚ್ಛವಾಗಿ ಮಾತನಾಡುವುದು ಸರಿಯಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಾಮರಸ್ಯ ಉಳಿಸಿಕೊಳ್ಳುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಇಂಧನ ಬೆಲೆ ಏರಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ತೈಲ ಬೆಲೆ ಏರಿಕೆಯನ್ನು ಕಂಪನಿಗಳೇ ನಿರ್ಧರಿಸುತ್ತವೆ. ನಷ್ಟ ತಪ್ಪಿಸಿಕೊಳ್ಳಲು ಆಯಿಲ್ ಕಂಪನಿಗಳು ಬೆಲೆ ಹೆಚ್ಚಿಸಿವೆ. ಇದಕ್ಕೂ ಸರ್ಕಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂದ ಅವರು, ಕಳೆದ 80 ವರ್ಷದಿಂದ ಕಾಂಗ್ರೆಸ್ ಪಕ್ಷದಲ್ಲಿ ದಲಿತ ನಾಯಕರಿಗೆ ಅನ್ಯಾಯವಾಗಿದೆ. ದಲಿತರಿಗೆ ನ್ಯಾಯ ಕೊಡಿಸುವ ಕೆಲಸ ಇವರಿಂದ ಸಾಧ್ಯವಿಲ್ಲ ಎಂದು ಹೇಳಿದರು.

ಮಾಜಿ ಸಂಸದ ಡಾ.ಉಮೇಶ್ ಜಾಧವ್, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಎಂಎಲ್ಸಿ ಬಿಜಿ ಪಾಟೀಲ್, ಶಶೀಲ್ ನಮೋಶಿ, ಮಾಜಿ ಶಾಸಕ ರಾಜಕುಮಾರ್ ಪಾಟೀಲ್, ದತ್ತಾತ್ರೇಯ ಪಾಟೀಲ್, ಶಿವರಾಜ್ ಪಾಟೀಲ್ ರದ್ದೇವಾಡಗಿ, ಬಾಬುರಾವ್ ಹಾಗರಗುಂಡಗಿ ಇದ್ದರು.

ಜೂನ್ 1ಕ್ಕೆ ರಾಜ್ಯಮಟ್ಟದ ಪ್ರತಿಭಟನೆ

ಜಿಲ್ಲೆಯ ಆಳಂದ ಪಟ್ಟಣದ ವಿವಾದಿತ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶಿವಲಿಂಗ ಪೂಜೆ ವೇಳೆ ಕಲ್ಲು ತೂರಾಟ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಗಲಭೆಕೋರರ ಮೇಲಿನ ಕೇಸ್ ವಾಪಸ್ ಪಡೆದಿದ್ದನ್ನು ಖಂಡಿಸಿ ಬಿಜೆಪಿ ವತಿಯಿಂದ ಜೂನ್ 1 ಸೋಮವಾರ ಬೆಳಗ್ಗೆ 10-30ಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ರಾಜ್ಯಮಟ್ಟದ ಬೃಹತ್ ಪ್ರತಿಭಟನೆ ಕಲಬುರಗಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಂಎಲ್ಸಿ ಶಶೀಲ್ ನಮೋಶಿ ತಿಳಿಸಿದರು. ರಾಜ್ಯಾಧ್ಯಕ್ಷರಾದಿಯಾಗಿ ರಾಜ್ಯ ಮಟ್ಟದ ಹಲವು ನಾಯಕರು, ಜಿಲ್ಲೆಯ ಮುಖಂಡರು ಹಾಗೂ ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಿಂದಲೂ ಹಲವು ಮುಖಂಡರು, ಕಾರ್ಯಕರ್ತರು ಭಾಗಿಯಾಗಲಿದ್ದಾರೆ ಎಂದರು.

ಒಲ್ಲದ ಮನಸ್ಸಿನಿಂದ ಸಿಎಂ ಕುರ್ಚಿ ಬಿಟ್ಟ ಸಿದ್ದರಾಮಯ್ಯ: ಅಶೋಕ



ಭಟ್ಕಳ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಲ್ಲದ ಮನಸ್ಸಿನಿಂದ ಅನಿವಾರ್ಯವಾಗಿ ತಮ್ಮ ಹುದ್ದೆ ಬಿಟ್ಟು ಕೊಟ್ಟಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಒತ್ತಾಯದಿಂದಮುಖ್ಯಮಂತ್ರಿಹುದ್ದೆಗಿಟ್ಟಿಸಿಕೊಂಡಿದ್ದಾರೆ ಎಂದು ರಾಜ್ಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಲೇವಡಿ ಮಾಡಿದರು.

ಭಟ್ಕಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಖುರ್ಚಿ ಉಳಿಸಿಕೊಳ್ಳಲು ಹೈಕಮಾಂಡ್ ಜತೆ ಕಾಲವಕಾಶ ಕೇಳಿದ್ದರು. ಆದರೆ, ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯನವರಿಗೆ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲು ಕಾಲವಕಾಶ ಕೊಟ್ಟಿಲ್ಲ. ದೆಹಲಿಯಲ್ಲಿ ಛೀಮಾರಿ ಹಾಕಿ ಕಳುಹಿಸಿದ್ದಾರೆ. ದೆಹಲಿಯಿಂದ ರಾಜ್ಯಕ್ಕೆ ಬಂದ ಸಿದ್ದರಾಮಯ್ಯ ಪೆಚ್ಚು ಮೋರೆ ಮಾಡಿಕೊಂಡು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ ಅವರು ವಿಧಾನಸಭೆಯಲ್ಲಿ ತಾನು ಹಿಂದೆ ಸಚಿವ ಗಿರಿಯನ್ನು ಒದ್ದು ಗಿಟ್ಟಿಸಿಕೊಂಡಿದ್ದೇ ಎಂದು ಹೇಳಿದ್ದರು. ಈಗ ಮುಖ್ಯಮಂತ್ರಿ ಹುದ್ದೆಯನ್ನೂ ಸಹ ಅವರು ಒದ್ದು ಗಿಟ್ಟಿಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಖುರ್ಚಿ ಕಚ್ಚಾಟದ ಬಗ್ಗೆ ಲೇವಡಿ ಮಾಡಿದ ಅವರು ಬಿಜೆಪಿಗೆ ಸಿದ್ದರಾಮಯ್ಯನವರೂ, ಡಿ.ಕೆ .ಶಿವಕುಮಾರ ಅವರೂ ಒಂದೇ ಆಗಿದ್ದಾರೆ. ಇಬ್ಬರೂ ಹಿಂದೂ ವಿರೋಧಿಗಳಾಗಿದ್ದಾರೆ. ಇಬ್ಬರೂ ಭ್ರಷ್ಟಾಚಾರ ಮಾಡುವವರೇ ಆಗಿದ್ದಾರೆ. ಸಿದ್ದರಾಮಯ್ಯ ಕಾಲದಲ್ಲಿ ರಾಜ್ಯದ್ದು 7 ಲಕ್ಷ ಕೋಟಿ ಸಾಲವಾದರೆ, ಡಿ.ಕೆ.ಶಿವಕುಮಾರ ಕಾಲದಲ್ಲಿ 10 ಲಕ್ಷ ಕೋಟಿ ಸಾಲ ಆಗಲಿದೆ.

ಕಾಂಗ್ರೆಸ್ ಹೈಕಮಾಂಡ್ ಡಿ.ಕೆ.ಶಿವಕುಮಾರ ಅವರನ್ನು ಕರ್ನಾಟಕದ ಎಟಿಎಂ ಚೇರಮೆನ್ ಮಾಡಿಕೊಂಡಿದೆ. ಕಾಂಗ್ರೆಸ್ಸಿನ ಹೈಕಮಾಂಡಿಗೆ ಕರ್ನಾಟಕ ಎಟಿಎಂ ಆಗಿದೆ ಎಂದ ಅವರು ಸರ್ಕಾರವನ್ನು ಐಸಿಯುನಲ್ಲಿಟ್ಟಿದ್ದಾರೆ. ಇದೊಂದು ಲೂಟಿ ಸರ್ಕಾರವಾಗಿದೆ. ಗ್ಯಾರಂಟಿಯೂ ಕೊಡುತ್ತಿಲ್ಲ, ಅಭಿವೃದ್ಧಿಯೂ ಮಾಡುತ್ತಿಲ್ಲ. ಸಿದ್ದರಾಮಯ್ಯ ಖುರ್ಚಿಯಿಂದ ಕೆಳಗಿಳಿದು ಡಿ.ಕೆ.ಶಿವಕುಮಾರ ಮುಖ್ಯಮಂತ್ರಿ ಆದರೂ ರಾಜ್ಯದ ಪರಿಸ್ಥಿತಿ ಬದಲಾಯಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಸರ್ಕಾರ ಮುಸ್ಲಿಂ ಓಲೈಕೆ ರಾಜಕಾರಣ ಮಾಡುತ್ತಿದೆ. ಮುಸ್ಲಿಮರ ಅಭಿವೃದ್ಧಿಗೆ 200 ಕೋಟಿ ಕೊಟ್ಟರೆ ಹಿಂದೂಗಳಿಗೇ ಏನೂ ಕೊಟ್ಟಿಲ್ಲ. ಕಾಂಗ್ರೆಸ್ ಹಿಂದೂಗಳ ವಿರೋಧಿಯಾಗಿದೆ. ಈ ಪಕ್ಷದ್ದು ಕಳ್ಳ ಕೈ ಆಗಿದೆ ಎಂದು ಆರೋಪಿಸಿದರು.

ಕಿರುಸುದ್ದಿ

25 ಸಾವಿರ ರೂ. ದಂಡ

ಬೆಳಗಾವಿ: ನಗರದಲ್ಲಿ ಅಪ್ರಾಪ್ತರು ಬಾಲಕರು ರಾಜಾರೋಷವಾಗಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಬೆನ್ನಲ್ಲೇ ನಗರ ಪೊಲೀಸರು ಭರ್ಜರಿ ಆಕ್ಷನ್ ತಗೊಂಡಿದ್ದಾರೆ. ನಿಯಮ ಉಲ್ಲಂಘಿಸಿದ ವಾಹನ ಸವಾರರ ಪೋಷಕರನ್ನು ಪತ್ತೆ ಹಚ್ಚಿ ಬರೋಬ್ಬರಿ 25 ಸಾವಿರ ರೂಪಾಯಿ ದಂಡ ವಿಧಿಸಿ, ವಾಹನವನ್ನು ಜಪ್ತಿ ಮಾಡಲಾಗಿದೆ. ಈ ಕುರಿತು ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ಮಾಹಿತಿ ನೀಡಿ, ಸೋಷಿಯಲ್ ಮೀಡಿಯಾ ಹ್ಯಾಂಡಲ್ ಮೂಲಕ ಪ್ರಜ್ಞಾವಂತ ನಾಗರಿಕರೊಬ್ಬರು ಚಿಕ್ಕ ಮಕ್ಕಳು ಸ್ಕೂಟಿ ಚಲಾಯಿಸಿದ ಫೋಟೋವನ್ನು ಪೊಲೀಸ್ ಇಲಾಖೆಗೆ ಶೇರ್ ಮಾಡಿದ್ದರು. ಈ ಹಿನ್ನೆಲೆ ಪೊಲೀಸರು ವಾಹನದಾರಕರನ್ನು ಪತ್ತೆ ಹಚ್ಚಿ ಪೋಷಕರಿಗೆ ನೋಟಿಸ್ ನೀಡಿದ್ದು, ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿ 25 ಸಾವಿರ ರೂಪಾಯಿ ದಂಡ ವಿಧಿಸಲಾಗಿದೆ. ದಂಡದ ಮೊತ್ತ ಭರಿಸಿದ ಬಳಿಕ ನ್ಯಾಯಾಲಯದ ಮೂಲಕವೇ ದ್ವಿಚಕ್ರ ವಾಹನವನ್ನು ಬಿಡುಗಡೆಗೊಳಿಸಲಾಗುತ್ತದೆ. ಪೋಷಕರು ಅಪ್ರಾಪ್ತರಿಗೆ ವಾಹನಗಳನ್ನು ನೀಡುವುದು ಸ್ವಂತಕ್ಕೂ ಮತ್ತು ಜನರಿಗೂ ಒಳ್ಳೆಯದಲ್ಲ. ಪಾಲಕರು ಅಪ್ರಾಪ್ತರಿಗೆ ವಾಹನಗಳನ್ನು ನೀಡಿದರೇ, ಕಾನೂನು ಕ್ರಮಕ್ಕೆ ಗೊಳ್ಳಲಾಗುವುದೆಂದು ನಗರ ಪೊಲೀಸ್ ಆಯುಕ್ತರಾದ ಭೂಷಣ್ ಬೋರಸೆ ಅವರು ಬೆಳಗಾವಿ ನಗರದ ಜನತೆಗೆ ಎಚ್ಚರಿಸಿದ್ದಾರೆ.

ಅಪ್ರಾಪ್ತರಿಂದ ಸ್ಕೂಟಿ ಚಾಲನೆಯ ಫೋಟೋ ವೈರಲ್

ಕೇಂದ್ರದ ಹೊಸ ಆದಾಯ ತೆರಿಗೆ ಕಾಯ್ದೆಯಿಂದ ಪಾರದರ್ಶಕ ಆಡಳಿತ

ವಿಶ್ವದಲ್ಲೇ ಭಾರತ ಪ್ರಥಮ: ಜೋಶಿ



ಹುಬ್ಬಳ್ಳಿ: ಕೇಂದ್ರ ಸರ್ಕಾರ ಹೊಸ ಆದಾಯ ತೆರಿಗೆ ಕಾಯ್ದೆ-2025 ಜಾರಿಗೊಳಿಸುವ ಮೂಲಕ ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ ತರಲು ಸರ್ಕಾರ ಮಹತ್ವದ ಪ್ರಯತ್ನ ಮಾಡಿದೆ. ಸದ್ಯ ಆರ್ಥಿಕ ವ್ಯವಸ್ಥೆ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದ್ದು, ಭಾರತ ವಿಶ್ವದಲ್ಲಿ ಮೊದಲ ಸ್ಥಾನದಲ್ಲಿ ಇದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ಶುಕ್ರವಾರ ಇಲ್ಲಿಯ ಕೇಶ್ವಾಪುರದ ಲೆಕ್ಕಪರಿಶೋಧಕರ ಸಂಸ್ಥೆ ವತಿಯಿಂದ ಐಸಿಎಐ ಭವನದಲ್ಲಿ ಏರ್ಪಡಿಸಿದ್ದ ಹೊಸ ಆದಾಯ ತೆರಿಗೆ ಕಾಯ್ದೆ -2025 ಕುರಿತು ಎರಡು ದಿನದ ಸೆಮಿನಾರ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಆಡಳಿತ ಕ್ರಮವು ವಿಶ್ವಾಸ ಆಧಾರಿತ ಆಡಳಿತಕ್ಕೆ ಆದ್ಯತೆ ನೀಡುತ್ತಿದೆ. ಆದಾಯ ತೆರಿಗೆ ಕಾಯ್ದೆಯಡಿ ತೆರಿಗೆದಾರರ ಮೇಲಿನ ಅನುಸರಣೆ ಭಾರವನ್ನು ಕಡಿಮೆ ಮಾಡುವುದು, ನ್ಯಾಯಾಂಗ ವ್ಯಾಜ್ಯಗಳನ್ನು ತಗ್ಗಿಸುವುದು ಹಾಗೂ ವಿವಿಧ ತೊಡಕಾಗಿರುವ ಕಾನೂನು ಸರಳಗೊಳಿಸುವುದಕ್ಕೆ ಗಮನ ಹರಿಸಿದೆ ಎಂದರು.

ಉದ್ಯಮ ಸುಲಭತೆಗೆ ವೇದಿಕೆ ಕಲ್ಪಿಸುವುದು ಸರ್ಕಾರ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಅನಾವಶ್ಯಕ ನಿಯಮಗಳನ್ನು ತೆಗೆದು ಹಾಕಿದೆ. ವಿವಿಧ ಕಾನೂನುಗಳ ಅಡಿಯಲ್ಲಿ ಅನೇಕ ತಪ್ಪುಗಳನ್ನು ಈ ಸುಧಾರಿತ ನಿಯಮಗಳಿಂದ ಹೊರಗಿಟ್ಟಿದೆ ಎಂದು ತಿಳಿಸಿದರು.

ತೆರಿಗೆ ಸುಧಾರಣೆಗಳನ್ನು ಉಲ್ಲೇಖಿಸಿದ ಅವರು, ಹಳೆಯ ಆದಾಯ ತೆರಿಗೆ ಕಾಯ್ದೆ 1961ರಲ್ಲಿ ಜಾರಿಗೆ ಬಂದಿದ್ದು, 65 ವರ್ಷಗಳಲ್ಲಿ ಸುಮಾರು 4 ಸಾವಿರ ತಿದ್ದುಪಡಿಗಳು ಹಾಗೂ 19 ತೆರಿಗೆ ಕಾನೂನು ತಿದ್ದುಪಡಿಯಾಗಿವೆ ಎಂದು ತಿಳಿಸಿದರು.

ಜನಪರ ಆಡಳಿತ ವ್ಯವಸ್ಥೆಯನ್ನು ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ. ಕಳೆದ 12 ವರ್ಷಗಳಲ್ಲಿ ತಂತ್ರಜ್ಞಾನ ಆಧಾರಿತ ಆಡಳಿತಕ್ಕೆ ಹೆಚ್ಚಿನ ಆದ್ಯತೆ ನೀಡಿ ದೇಶಾದ್ಯಂತ ವೇಗವಾಗಿ ಜಾರಿಗೊಳಿಸಲಾಗಿದೆ. ಹೊಸ ಆದಾಯ ತೆರಿಗೆ ಕಾಯ್ದೆ 2025ರ ಅಡಿಯಲ್ಲಿ ಸೆಕ್ಷನ್‌ಗಳ ಸಂಖ್ಯೆಯನ್ನು 536ಕ್ಕೆ ಇಳಿಸಲಾಗಿದ್ದು, ಇದರಿಂದ ಕಾನೂನು ಬಹಳ ಸರಳಗೊಂಡಿದೆ ಎಂದರು.

ಈ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಚಾರ್ಟರ್ಡ್ ಅಕೌಂಟೆಂಟ್ಸ್, ಆದಾಯ ತೆರಿಗೆ ತಜ್ಞರು, ಲೆಕ್ಕಪತ್ರ ವೃತ್ತಿಪರರು, ವಿವಿಧ ವೃತ್ತಿಪರ ಸಂಸ್ಥೆಗಳ ಸದಸ್ಯರು, ವಿದ್ಯಾರ್ಥಿಗಳು ಹಾಗೂ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ, ಸಿರಸಿ ಮತ್ತು ಶಾಖೆಯ ವ್ಯಾಪ್ತಿಯ ಸುತ್ತಮುತ್ತಲಿನ ಪ್ರದೇಶಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಹುಬ್ಬಳ್ಳಿ ಶಾಖೆಯ ಅಧ್ಯಕ್ಷ ರಿಷಭ್ ಉಪಾಧ್ಯಾಯ, ಕಾರ್ಯದರ್ಶಿ ಅನಂತ್ ನ್ಯಾಮಣ್ಣವರ, ವಿರೂಪಾಕ್ಷ ಹಿಪ್ಪರಗಿ, ಆದರ್ಶ ಹಿರೇಮಠ, ಸಂತೋಷಕುಮಾರ್ ಪಾಟೀಲ್ ಇದ್ದರು.

ಅಂಕೋಲಾದಲ್ಲಿ ಡಿಕೆಶಿಗೆ ಮೊದಲೇ ಶುಭ ಸೂಚನೆ ಸಿಕ್ಕಿತ್ತು!



ಅಂಕೋಲಾ: ರಾಜ್ಯದಲ್ಲಿ ನಡೆದ ಮಹತ್ವಪೂರ್ಣ ರಾಜಕೀಯ ಬೆಳವಣಿಗೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿರುವುದರಿಂದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಮುಂದಿನ ಅವಧಿಗೆ ರಾಜ್ಯದ ಆಡಳಿತವನ್ನು ಮುನ್ನಡೆಸುವುದು ಬಹುತೇಕ ಖಚಿತವಾಗಿದ್ದು, ಐದು ತಿಂಗಳುಗಳ ಹಿಂದೆ ಅಂಕೋಲಾ ತಾಲೂಕಿನ ದೇವಾಲಯವೊಂದರಲ್ಲಿ ಮುಖ್ಯಮಂತ್ರಿಯಾಗುವ ಶುಭ ಸೂಚನೆ ದೊರಕಿತ್ತು ಎನ್ನಲಾಗುತ್ತಿದೆ.

ಡಿ.ಕೆ.ಶಿವಕುಮಾರ ಅವರ ಕುಟುಂಬ ತಾಲೂಕಿನ ಆಂದ್ಲೆಯ ಶ್ರೀ ಜಗದೀಶ್ವರಿ ದೇವಿಯ ಭಕ್ತರಾಗಿದ್ದು ಡಿ.ಕೆ.ಶಿವಕುಮಾರ ಅವರು ಹಲವು ಬಾರಿ ಖಾಸಗಿ ಒಡೆತನದ ಈ ದೇವಾಲಯಕ್ಕೆ ಭೇಟಿ ನೀಡಿ ದೇವಿಗೆ ಪೂಜೆ ಸಲ್ಲಿಸಿದ್ದಾರೆ. ಹಿಂದೆ 2019ರಲ್ಲಿ ಜಗದೀಶ್ವರಿ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿದ ಕೆಲವೇ ದಿನಗಳಲ್ಲಿ ಶಿವಕುಮಾರ ಅವರು ದೇವಿಯ ನುಡಿಯಂತೆ ಜಾರಿ ನಿರ್ದೇಶನಾಲಯದ ತನಿಖೆಯಲ್ಲಿದ್ದ ಗಂಭೀರ ಆರೋಪವೊಂದರಿಂದ ಮುಕ್ತರಾಗಿದ್ದರು.

ನಂತರ ಐದು ತಿಂಗಳುಗಳ ಹಿಂದೆ ಸಹ ಡಿಕೆಶಿ ಆಂದ್ಲೆಯ ಜಗದೀಶ್ವರಿ ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದ್ದರು, ಪೂಜಾ ವಿಧಾನಗಳನ್ನು ಪೂರೈಸಿ ಪ್ರಸನ್ನ ಮುಖಿಯಾಗಿ ಗರ್ಭಗುಡಿಯಿಂದ ಹೊರ ಬಂದ ಡಿ.ಕೆ.ಶಿವಕುಮಾರ ತಾಯಿಯ ಆಶೀರ್ವಾದದಿಂದ ಹಿಂದೆ ಇಷ್ಟಾರ್ಥ ಈಡೇರಿ ಶುಭವಾಗಿದೆ. ಈಗಲೂ ತಾಯಿಯ ಆಶೀರ್ವಾದ ದೊರಕಿದೆ ಮುಂದಿನ ದಿನಗಳಲ್ಲಿ ಶುಭವಾಗುವ ಸೂಚನೆ ದೊರಕಿದೆ ಭಕ್ತ ಮತ್ತು ದೇವರ ನಡುವಿನ ಕೆಲವು ವಿಚಾರಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಲು ಬರುವುದಿಲ್ಲ ಎಂದು ಹೇಳಿದ್ದರು.

ದೇವಾಲಯದ ಆವರಣದಲ್ಲಿದ್ದ ಅಭಿಮಾನಿಗಳಿಂದ ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಜಯವಾಗಲಿ ಎಂಬ ಘೋಷಣೆ ಆ ಸಂಭರ್ದಲ್ಲಿ ಕೇಳಿ ಬಂದಿತ್ತು. ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿದ ಐದು ತಿಂಗಳುಗಳಲ್ಲಿ ದೇವಿಯ ಅಭಯದಂತೆ ಡಿ.ಕೆ. ಶಿವಕುಮಾರ ಅವರಿಗೆ ಶುಭಸುದ್ದಿ ದೊರಕಿದ್ದು ರಾಜ್ಯದ ಮುಖ್ಯಮಂತ್ರಿಯಾಗುವ ಅದೃಷ್ಟ ಒಲಿದು ಬಂದಿದೆ.

ಪ್ರತ್ಯೇಕ ಪಾಲಿಕೆ ಅಧಿಸೂಚನೆಗೆ ಆಗ್ರಹ | ಕೈ ಸರ್ಕಾರದ ವಿರುದ್ಧ ಘೋಷಣೆ

ಬಿಜೆಪಿ ಮಹಿಳಾ ಸದಸ್ಯರಿಂದ ಉಪವಾಸ



ಧಾರವಾಡ: ಸ್ವಾಭಿಮಾನಿ ಹೋರಾಟ ಸಮಿತಿಯು, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಕೈಗೊಂಡ ಸತ್ಯಪ್ರತಿಪಾದನೆ ಸತ್ಯಾಗ್ರಹವು 15ನೇ ದಿನಕ್ಕೆ ಕಾಲಿಟ್ಟಿದ್ದು, ಶುಕ್ರವಾರ ಬಿಜೆಪಿ ಮಹಿಳಾ ಕಾರ್ಯಕರ್ತರು ಸಂಜೆವರೆಗೂ ಉಪವಾಸ ಧರಣಿ ನಡೆಸಿದರು.

ಶುಕ್ರವಾರ ಬಿಜೆಪಿ ಮಹಿಳಾ ಮೋರ್ಚಾದ ವಿವಿಧ ಘಟಕಗಳ ಪದಾಧಿಕಾರಿಗಳಾದ ರೂಪಾ ಚೌಧರಿ, ಮಂಜುಳಾ ಅಕ್ಕೂರ, ಪುಷ್ಪಾ ಮಜ್ಜಗಿ, ಶೋಭಾ ಭುಜಂಗನವರ, ಅಶ್ವಿನಿ ವೀರಾಪುರ, ಮಾಲತಿ ಹುಲಿಕಟ್ಟಿ, ರಾಜೇಶ್ವರಿ ಸಾಲಗಟ್ಟಿ ಉಪವಾಸ ಧರಣಿ ನಡೆಸಿದರು.

ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವನೆಗೆ ರಾಜ್ಯಪಾಲರು ಅಂಕಿತ ಹಾಕಿದರೂ ಕೂಡ, ರಾಜ್ಯ ಸರ್ಕಾರವು ಈವರೆಗೂ ಅಧಿಕೃತ ಅಧಿಸೂಚನೆ ಹೊರಡಿಸದೇ ವಿಳಂಬ ನೀತಿ ಅನುಸರಿಸುವುದು ತೀವ್ರ ಖಂಡಿಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಬಿಜೆಪಿ ಮಹಿಳಾ ಮೋರ್ಚಾ ನಗರಘಟಕದ ಉಪಾಧ್ಯಕ್ಷೆ ಪುಷ್ಪಾ ಮಜ್ಜಗಿ ಮಾತನಾಡಿ, ಧಾರವಾಡದ ಕನಸಿನ ಕೂಸಾದ ಪ್ರತ್ಯೇಕ ಪಾಲಿಕೆ ರಚನೆಗೆ ಕಾನೂನು ಬದ್ಧವಾಗಿ ರಾಜ್ಯಪಾಲರು ಅಂಕಿತ ಹಾಕಿದರೂ, ಸರ್ಕಾರ ನಿರ್ಲಕ್ಷಿಸಿದೆ ಎಂದು ದೂರಿದರು.

ರಾಜ್ಯ ಸರ್ಕಾರದ ದ್ವೇಷ ಹಾಗೂ ನಿರ್ಲಕ್ಷ್ಯದಿಂದಲೇ ಅಧಿಸೂಚನೆ ಬಾಕಿ ಇದೆ. ಇದು ಕಾಂಗ್ರೆಸ್ ಸರ್ಕಾರ ಧಾರವಾಡದ ಜನರಿಗೆ ಮಾಡುತ್ತಿರುವ ಬಹುದೊಡ್ಡ ದ್ರೋಹ. ಅಧಿಸೂಚನೆ ಹೊರ ಬೀಳುವ ತನಕ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಹುಬ್ಬಳ್ಳಿ-ಧಾರವಾಡ ಅವಳಿನಗರಗಳಾದರೂ ಕೂಡ ಅಭಿವೃದ್ಧಿ ಮತ್ತು ಅನುದಾನ ಹಂಚಿಕೆಯಲ್ಲಿ ಧಾರವಾಡಕ್ಕೆ ಅನ್ಯಾಯ ಆಗುತ್ತಿದೆ. ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಸಿಕ್ಕರೆ ಮಾತ್ರ ಅಭಿವೃದ್ಧಿ ಸಾಧ್ಯ. ತಕ್ಷಣವೇ ಸರ್ಕಾರ ಅಧಿಸೂಚನೆ ಹೊರಡಿಸಲು ಆಗ್ರಹಿಸಿದರು.

ಸತ್ಯಾಗ್ರಹದಲ್ಲಿ ವೆಂಕಟೇಶ ಮಾಚಕನೂರ, ಮಹಾದೇವ ಹೊರಟ್ಟಿ, ಶಿವಾನಂದ ಕವಳಿ, ವಿಠ್ಠಲ ಕಮ್ಮಾರ, ಮೋಹನ ರಾಮದುರ್ಗ, ಮಲ್ಲಿಕಾರ್ಜುನ ಹಡಪದ, ಆನಂದ ಹೂಗಾರ, ಅರುಣ ಅರಕೇರಿ, ಶಿವಯ್ಯ ಹಿರೇಮಠ, ವೀರೇಶ ಮದ್ದೂರ, ಇದ್ದರು.

ಸಂಘಟನೆಗಳ ಬೆಂಬಲ

ಧಾರವಾಡ ಪ್ರತ್ಯೇಕ ಪಾಲಿಕೆಯ ಸತ್ಯಾಗ್ರಹಕ್ಕೆ ಶುಕ್ರವಾರ ಜಿಲ್ಲಾ ಹಡಪದ ಅಪ್ಪಣ್ಣ ಸಮಾಜ, ಉಳವಿ ಚನ್ನಬಸವೇಶ್ವರ ನಿವಾಸಿಗಳ ಸಂಘ, ಎಸ್ ಯುಸಿಐ ಸಂಘಟನೆ, ನವಲೂರು ನಿವಾಸಿಗಳು, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಸೇರಿ ಅನೇಕ ಸಂಘ-ಸಂಸ್ಥೆಗಳು ಬೆಂಬಲಿಸಿವೆ.

ಅಕ್ರಮವಾಗಿ ಜಾನುವಾರು ಸಂಗ್ರಹ, ಹತ್ಯೆ

ಆರು ಜನರ ವಿರುದ್ಧ ಪ್ರಕರಣ ದಾಖಲು



ಚನ್ನಮ್ಮನ ಕಿತ್ತೂರು: ಜಾನುವಾರುಗಳನ್ನು ಹತ್ಯೆ ಮಾಡಲು ಅಕ್ರಮವಾಗಿ ಸಂಗ್ರಹಿಸಿ ಮತ್ತು ಹತ್ಯೆ ಮಾಡಿದ್ದರಿಂದ 6 ಜನರ ಮೇಲೆ ಕಿತ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿತ್ತೂರು ಪಟ್ಟಣದ ಕಸಾಯಿ ಗಲ್ಲಿಯಲ್ಲಿ ಶುಕ್ರವಾರ ನಡೆದ ಘಟನೆ ಇದಾಗಿದ್ದು, ಕೆಲವರು ನೀಡಿದ ದೂರಿನ ಮೇರೆಗೆ ಪೊಲೀಸರು ಪಾರುಕ್ ಇಸ್ಮಾಯಿಲ್ ಬೇಪಾರಿ, ದಾದಾಪೀರ್ ಮಹಮ್ಮದಶರೀಫ್ ಬೇಪಾರಿ, ಅಮಾನ್ ಮಹಮ್ಮದಲಿ ಬೇಪಾರಿ, ಮುಜಮಿಲ್ ನೂರಹ್ಮದ ಬೇಪಾರಿ, ಮೊಹಮ್ಮದ ಯೂಸೂಫ್ ಮೊಹಮ್ಮದುಸ್ಮಾನ್ ಬೇಪಾರಿ, ಖಲೀಲ್ ಹ್ಮದ ಜಮೀಲ್ ಅಹ್ಮದ ಪಠಾಣ ಮುಂತಾದ ಆರೋಪಿಗಳ ಮೇಲೆ (ಕರ್ನಾಟಕ ಗೋಹತ್ಯೆ ತಡೆ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆ 2020) ಇದರಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕಸಾಯಿ ಗಲ್ಲಿಯಲ್ಲಿ ಎರಡು ಆಕಳನ್ನು ಕಡಿದಿರುವುದು, ಜಾನುವಾರು ಚರ್ಮವನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿರುವುದು, ಓಣಿಯ ಖುಲ್ಲಾ ಜಾಗಗಳಲ್ಲಿ ವಿವಿಧ ಜಾನುವಾರುಗಳಾದ ಎತ್ತು, ಹೋರಿ, ಆಕಳು, ಕರುಗಳನ್ನು ಕಡಿಯುವ ಉದ್ದೇಶದಿಂದ ಕ್ರೂರವಾಗಿ ಹಿಂಸಿಸಿ ಕಟ್ಟಿ ಹಾಕಲಾಗಿತ್ತು ಮತ್ತು ಜಾನುವರುಗಳ ಹತ್ಯೆ, ಮಾಂಸ ಸಾಗಾಟ, ಚರ್ಮ ಸಂಗ್ರಹಣೆ ಮಾಡಿದ್ದಾರೆಂಬ ದೂರಿನನ್ವಯ ಪೋಲಿಸರು ಪರೀಶಿಲಿಸಿ ಪ್ರಕರಣ ದಾಖಲಿಸಿ ಸಂಗ್ರಹಿಸಿದ್ದ ಹಲವಾರು ಜಾನುವಾರಗಳ ರಕ್ಷಣೆಗೆ ಗೋ ಶಾಲೆಗೆ ರವಾನಿಸಿದ್ದಾರೆ.

ಸ್ಥಳಕ್ಕೆ ಬೈಲಹೊಂಗಲ ಡಿವೈಎಸ್‌ಪಿ ಡಾ.ವೀರಯ್ಯ ಹಿರೇಮಠ ನೇತೃತ್ವದಲ್ಲಿ ಸಿಪಿಐ ಶಿವಾನಂದ ಗುಡಗಟ್ಟಿ, ಪಿಎಸ್‌ಐ ಭರತ್ ಎಸ್. ಸೇರಿದಂತೆ ಹಲವಾರು ಸಿಬ್ಬಂದಿಗಳು ಸೇರಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಹೆಸ್ಕಾಂ, ಕುಮಟಾ ಉಪವಿಭಾಗದ ಗ್ರಾಮೀಣ ಶಾಖೆಯ 11ಕೆ.ವಿ ಬಾಡಾ ಹಾಗೂ 11ಕೆ.ವಿ ಮಾಸುರ ಮಾರ್ಗದಲ್ಲಿ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಹಾಗೂ 11ಕೆ.ವಿ ಮಿರ್ಜಾನ್ ಹೊಸ ಮಾರ್ಗದ ರಚನೆ ಕಾಮಗಾರಿ ಇರುವುದರಿಂದ 11ಕೆ.ವಿ ಮಿರ್ಜಾನ್ ಮತ್ತು 11ಕೆ.ವಿ ಕತಗಾಲ ಮಾರ್ಗದಲ್ಲಿ ಮೇ 30ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ವಿದ್ಯುತ್ ವ್ಯತ್ಯಯ

ಮುಂಡಗೋಡ: ಹಾನಗಲ್ಲ 10/33/11 ಕೆ.ವಿ.ಎ ವಿ.ವಿ. ಕೇಂದ್ರದಿಂದ ವಿದ್ಯುತ್ ಪ್ರಸರಣವಾಗುವ 33 ಕೆ.ವಿ.ಪಾಳಾ ವಿದ್ಯುತ್ ವಿತರಣಾ ಉಪಕೇಂದ್ರದ ಪರಿವರ್ತಕದಲ್ಲಿ ತೈಲ ಸೋರಿಕೆಯಾಗುತ್ತಿದೆ. ತೈಲ ಶೋಧನೆ) ಹಾಗೂ ಗ್ಯಾಸ್ಕೆಟ್ ಬದಲಾವಣೆ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಪಾಳಾ ಉಪಕೇಂದ್ರದಲ್ಲಿ ಇರುವ 5 ಒಗಿಂ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ದುರಸ್ತಿ ಪಡಿಸಿ, ಇನ್ನೊಂದು ವಿದ್ಯುತ್ ಪರಿವರ್ತಕದ ಮೂಲಕ ಮಾತ್ರ ಉಳಿದ ಎಲ್ಲಾ 11 ಏಗಿ ವಿದ್ಯುತ್ ಮಾರ್ಗಗಳನ್ನು ಚಾಲನೆಗೊಳಿಸಲಾಗುತ್ತಿರುವ ಕಾರಣ ಮೇ 30ರಿಂದ ಜೂ. 2ರವರೆಗೆ ಬೆಳಗ್ಗೆ 9ಗಂಟೆಯಿಂದ ಸಂಜೆ 6 ಘಂಟೆವರೆಗೆ ನವೋದಯ, ಮಳಗಿ, ಬೆಡಸಗಾಂವ, ಪಾಳಾ, ಚಿಪಗೇರಿ ಮತ್ತು ಕಾತೂರ ಪ್ರದೇಶ, ಮಾರ್ಗಗಳಲ್ಲಿ ಅನಿಯಮಿತ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಹೆಸ್ಕಾಂನೊಂದಿಗೆ ಸಹಕರಿಸಲು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಸಂತ ಶಿಶುನಾಳ ಶರೀಫರ ಜಾತ್ರಾ ಮಹೋತ್ಸವ



ಮುಂಡಗೋಡ: ಪಟ್ಟಣದ ನ್ಯಾಸರ್ಗಿ ರಸ್ತೆಯಲ್ಲಿರುವ ಗುರು ಗೋವಿಂದ ಭಟ್ಟರು ಮತ್ತು ಸಂತ ಶಿಶುನಾಳ ಶರೀಫರ 17ನೇ ವರ್ಷದ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು.

ಬೆಳಗ್ಗೆ ಶ್ರೀ ಮಾರಿಕಾಂಬಾ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಸಕಲ ವಾದ್ಯ, ಕುಂಭಮೇಳದೊಂದಿಗೆ ಹೊರಟ ಮೆರವಣಿಗೆ ಶ್ರೀ ಗುರು ಗೋವಿಂದ ಭಟ್ಟರು ಮತ್ತು ಸಂತ ಶಿಶುನಾಳರ ದೇವಸ್ಥಾನ ತಲುಪಿತು. ನಂತರ ನಡೆದ ಸಭಾ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಹಿರೇಮಠದ ವೇ. ಮೂ.ರುದ್ರಮುನಿ ಶ್ರೀಗಳು ಆಶೀರ್ವಚನ ನೀಡಿದರು.

ದೇವಸ್ಥಾನದ ಟ್ರಸ್ಟ್ ಕಮಿಟಿ ಅಧ್ಯಕ್ಷ ಚಿದಾನಂದ ಹರಿಜನ, ಖಜಾಂಚಿ ಹನುಮಂತಪ್ಪ ಆರೆಗೊಪ್ಪ, ಡಿಎಸ್ಎಸ್ ಮುಖಂಡ ಹನುಮಂತ ಭಜಂತ್ರಿ, ಎಸ್.ಎಸ್.ಪಾಟೀಲ್, ಅರ್ಜುನ ಗುಡಿಯಾಳ, ಶಿವಪುತ್ರಪ್ಪ ಮಡ್ಲಿ, ಶಿವರಾಜಪ್ಪ ಕುಡ್ಡಿಕೇರಿ, ಪ್ರಕಾಶ ಕುರುಬರ, ಬಸವರಾಜ ವಾಲ್ಮೀಕಿ, ಪ್ರಶಾಂತ ಕರಿಗಾರ, ಶಿವಪ್ಪ ಭಜಂತ್ರಿ, ಗಣಪತಿ ಹಳೂರ ಮತ್ತು ಭಕ್ತಾದಿಗಳು ಪಾಲ್ಗೊಂಡಿದ್ದರು. ಅಮರೇಶ ಹರಿಜನ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60299	72199
ಬಿಳಿಗೋಟು	25009	35180
ಕೆಂಪುಗೋಟು	28388	34599
ಬೆಟ್ಟೆ	40001	48299
ರಾಶಿ	49290	53690
ಚಾಲಿ	44199	47311
ಬಿ.ಕಾಳುಮೆಣಸು	70399	90399

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	49925	55569
ಬೆಟ್ಟೆ	36906	49119
ಕೆಂಪುಗೋಟು	16612	36815
ಬಿಳಿಗೋಟು	15181	36399
ಚಾಲಿ	37009	46799
ಕೋಕಾ	14899	32202
ಕಾಳುಮೆಣಸು	48509	68200



ಮುಂಡಗೋಡ: ತಾಲೂಕಿನ ಸನವಳ್ಳಿ ಗ್ರಾಮದ ಬಸಪ್ಪ ಕಳಸಗೇರಿ ಅವರ ಹೊಲದಲ್ಲಿ ಗೋವಿನ ಜೋಳದ ರವದಿಯಲ್ಲಿ ಅಡಗಿ ಕುಳಿತಿದ್ದ ಬೃಹತ್ ಗಾತ್ರದ ಸುಮಾರು 10 ಅಡಿ ಉದ್ದದ ಹೆಬ್ಬಾವನ್ನು ಗಸ್ತು ಅರಣ್ಯ ಪಾಲಕ ಮುತ್ತುರಾಜ ಹಳ್ಳಿ ಸುರಕ್ಷಿತವಾಗಿ ಹಿಡಿದು ಕಾಡಿಗೆ ಬಿಟ್ಟರು. ಗ್ರಾಮದ ಪರಿಸರ ಪ್ರೇಮಿ ನಾಗರಾಜ ಗುಬ್ಬಕ್ಕನವರ, ಮಂಜು ಕೋಣನಕೇರಿ, ಮಾರುತಿ ಕಳಸಗೇರಿ, ಮಾರುತಿ ಕೋಣನಕೇರಿ, ನಿಶಿಮೇಶ್ವರ ಯಳವಟ್ಟಿ, ಕೃಷ್ಣ ದೊಡ್ಡಮನಿ ಇದ್ದರು.

ಜುಲೈ 31ರವರೆಗೆ ಯಾಂತ್ರೀಕೃತ ಮೀನುಗಾರಿಕೆ ನಿಷೇಧ

ಕಾರವಾರ: ಉತ್ತರ ಕನ್ನಡ ಜಿಲ್ಲೆಯೂ ಸೇರಿದಂತೆ ಕರ್ನಾಟಕದ ಕರಾವಳಿಯಲ್ಲಿ ಯಾಂತ್ರೀಕೃತ ದೋಣಿಗಳಲ್ಲಿ ಮತ್ತು 10 ಹೆಚ್.ಪಿ. ಅಶ್ವಶಕ್ತಿಗಿಂತ ಅಧಿಕ ಸಾಮರ್ಥ್ಯದ ಇನ್ ಬೋರ್ಡ್ ಅಥವಾ ಔಟ್‌ಬೋರ್ಡ್ ಯಂತ್ರ ಅಳವಡಿಸಿರುವ ಮೀನುಗಾರಿಕೆ ದೋಣಿಗಳಲ್ಲಿ ಯಾವುದೇ ಬಲೆಗಳನ್ನು, ಸಾಧನಗಳನ್ನು ಉಪಯೋಗಿಸಿ ಕೈಗೊಳ್ಳುವ ಮೀನುಗಾರಿಕೆ ಚಟುವಟಿಕೆಗಳಿಗೆ ಜೂನ್ 1 ರಿಂದ ಜುಲೈ 31 ರವರೆಗೆ ಒಟ್ಟು 61 ದಿನಗಳ ನಿಷೇಧವನ್ನು ಹೇರಿ ಆದೇಶ ಹೊರಡಿಸಲಾಗಿದೆ ಹಾಗೂ ಈ ನಿಷೇಧಿತ ಅವಧಿಯಲ್ಲಿ ದೋಣಿಗಳನ್ನು ಸಾಗಿಸುವ ಉದ್ದೇಶಕ್ಕಾಗಿ 10 ಹೆಚ್.ಪಿ. ಅಶ್ವಶಕ್ತಿಯವರೆಗಿನ ಸಾಮರ್ಥ್ಯದ ಮೋಟಾರೀಕೃತ ದೋಣಿ ಮತ್ತು ಸಾಂಪ್ರದಾಯಿಕ ನಾಡದೋಣಿಗಳು ಸುರಕ್ಷತಾ ಕ್ರಮಗಳೊಂದಿಗೆ ಮೀನುಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ.

ಅದರಂತೆಯೇ ಈ ಆದೇಶದಲ್ಲಿ ನೀಡಲಾಗಿರುವ ಸೂಚನೆಗಳನ್ನು ಎಲ್ಲಾ ಯಾಂತ್ರೀಕೃತ ದೋಣಿಗಳ ಮಾಲೀಕರು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಈ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂಥವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸರ್ಕಾರದಿಂದ ನೀಡುವ ಮಾರಾಟ ಕರರಹಿತ ಡೀಸೆಲ್ ಹಾಗೂ ಯಾವುದೇ ಸಹಾಯ ಸೌಲಭ್ಯಗಳನ್ನು ರದ್ದುಗೊಳಿಸಲಾಗುವುದು. ಕರಾವಳಿ ಪ್ರದೇಶದ ಎಲ್ಲಾ ಮೀನುಗಾರರ ಹಿತದೃಷ್ಟಿಯಿಂದ ಹೊರಡಿಸಲಾದ ಈ ಆದೇಶವನ್ನು ಎಲ್ಲಾ ಮೀನುಗಾರರು ಪಾಲಿಸಿ ಸಹಕರಿಸುವಂತೆ ಮೀನುಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿದ್ದಾಪುರ: ತಾಲೂಕಿನ ಇಟಗಿಯ ಸಾಂಸ್ಕೃತಿಕ ಸಂಘಟನೆ ಕಲಾಭಾಸ್ಕರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ 2025-26ರ ಧನಸಹಾಯ ಯೋಜನೆಯಡಿಯಲ್ಲಿ ಹಮ್ಮಿಕೊಂಡ ನವರಸ ಯಕ್ಷೋತ್ಸವದಲ್ಲಿ ಗಾನಸಾರಥ್ಯದಲ್ಲಿ ಕವಿ ಮಾಲೆಕೊಡ್ಲು ಶಂಭು ಭಟ್ಟ ವಿರಚಿತ 'ಚಂದ್ರಹಾಸ ಚರಿತ್ರೆ'ಯಕ್ಷಗಾನ ಪ್ರದರ್ಶನಗೊಂಡಿತು.

ಕಂಬಗಳು ನೆಲಕ್ಕುರುಳುವ ಸಾಧ್ಯತೆ | ಸಾರ್ವಜನಿಕರಲ್ಲಿ ಭೀತಿ

ತುಕ್ಕು ಹಿಡಿದ ಬೀದಿ ದೀಪದ ಕಂಬಗಳು

ನಾಗರಾಜ ಶೆಟ್ಟಿ

ಅಂಕೋಲಾ: ಪಟ್ಟಣದ ಕಿತ್ತೂರು ಚೆನ್ನಮ್ಮ ರಸ್ತೆಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಯ ಭಾಗವಾಗಿ ಕೆಲವು ವರ್ಷಗಳ ಹಿಂದೆ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಹಾಕಲಾದ ಆಕರ್ಷಕ ವಿನ್ಯಾಸದ ಬೀದಿ ದೀಪದ ಕಂಬಗಳಿಗೆ ತಳಭಾಗದಲ್ಲಿ ತುಕ್ಕು ಹಿಡಿಯತೊಡಗಿದ್ದು ಗಣಪತಿ ದೇವಸ್ಥಾನದ ಪಕ್ಕದಲ್ಲಿರುವ ಕಂಬವೊಂದು ತುಂಡಾಗಿ ಬಿದ್ದಿದ್ದು ಇನ್ನಷ್ಟು ಕಂಬಗಳು ನೆಲಕ್ಕುರುಳುವ ಸಾಧ್ಯತೆ ಕಂಡುಬರುತ್ತಿದೆ.

ದಿಗಂತ ವಿಶೇಷ

ಪಟ್ಟಣದ ಬಸ್ ನಿಲ್ದಾಣದ ಎದುರಿನಿಂದ ಆರಂಭಗೊಂಡು ರೆಹಮಾನಿಯಾ ಮಸೀದಿ ಎದುರು ಅಂತ್ಯಗೊಳ್ಳುವ ಕಿತ್ತೂರು ಚೆನ್ನಮ್ಮ ರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯ ಜೊತೆಯಲ್ಲಿ ಹೊಸ ಮಾದರಿಯ ಬೀದಿ ದೀಪದ ಕಂಬಗಳನ್ನು ಹಾಕುವ ಮೂಲಕ ಅಭಿವೃದ್ಧಿಯ ಜೊತೆಗೆ ಪಟ್ಟಣದ ಶೋಭೆ ಹೆಚ್ಚಿಸುವ ಕಾರ್ಯಕ್ಕೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಹತ್ವ ನೀಡಲಾದ ಕಾರಣ ವಿಶೇಷ ಅನುದಾನದಡಿ ಲೋಕೋಪಯೋಗಿ ಇಲಾಖೆಯ ಕಾಮಗಾರಿ ನಡೆಸಲಾಗಿತ್ತು ಮತ್ತು ಸುಮಾರು 20 ಕ್ಕೂ ಹೆಚ್ಚಿನ ಬೀದಿ ದೀಪದ ಕಂಬಗಳನ್ನು ಅಳವಡಿಸಲಾಗಿತ್ತು.

ಆದರೆ ಕಾಮಗಾರಿ ಪೂರ್ಣಗೊಂಡು ವರ್ಷಗಳೇ ಕಳೆದರೂ ಈ ಬೀದಿ ದೀಪದ ಕಂಬಗಳು ಬೆಳಕು ನೀಡದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿತ್ತು, ಸರ್ಕಾರ ಬದಲಾದ ನಂತರವೂ ಯಥಾಸ್ಥಿತಿ ಮುಂದುವರಿದಿರುವುದು ಶಾಸಕ ಸತೀಶ ಸೈಲ್ ಅವರ ಗಮನಕ್ಕೆ ಬಂದು ತಾಪಂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದರು.



ಪರಿಶೀಲನೆ ನಡೆಸಲಿ

ಇಂದಿರಾ ಕ್ಯಾಂಟೀನ್, ಎಸ್.ಬಿ.ಐ, ರಿಲಯನ್ಸ್ ಆಫೀಸ್,ಗಣೇಶ ಸೆಂಟರ್‌ಗಳ ಎದುರು ಇರುವ ಬೀದಿ ದೀಪದ ಕಂಬಗಳು ಸೇರಿದಂತೇ ಕೆಲವು ಕಂಬಗಳ ತಳಭಾಗದಲ್ಲಿ ತುಕ್ಕು ಹಿಡಿದಿರುವುದು ಕಂಡು ಬಂದಿದ್ದು, ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಆ ಕಂಬಗಳ ಸಾಮರ್ಥ್ಯದ ಕುರಿತಂತೆ ಪರಿಶೀಲನೆ ನಡೆಯಬೇಕಿದೆ.

ಈ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರಿಗೆ ಬಿಲ್ ಹಣ ಮಂಜೂರಿಯಾಗಿ ಪಾವತಿಸಲಾಗಿದ್ದು ಪಟ್ಟಣದಲ್ಲಿ ಬೀದಿದೀಪಗಳ ನಿರ್ವಹಣೆ ನೋಡಿಕೊಳ್ಳುವ ಪುರಸಭೆಗೆ ಲೋಕೋಪಯೋಗಿ ಇಲಾಖೆಯಿಂದ ಹಸ್ತಾಂತರ ಪ್ರಕ್ರಿಯೆ ಮಾತ್ರ ನಡೆದಿಲ್ಲ ಎನ್ನುವ ವಿಷಯ ಸಭೆಯಲ್ಲಿ ಗಮನಕ್ಕೆ ಬಂದಿತ್ತು.

ಕೆಲವು ತಿಂಗಳುಗಳ ಹಿಂದೆ ಮಂಜಗುಣಿ ಬಳಿ ಗಂಗಾವಳಿ ಸೇತುವೆಯ ಉದ್ಘಾಟನೆಯಾದ ನಂತರ ಬೆಂಗಳೂರು ಕಡೆ ಗೋಕರ್ಣ ಮೂಲಕ ಸಾಗುವ ಹಲವು ಖಾಸಗಿ ಬಸ್‌ಗಳು ಸೇರಿದಂತೆ ಪ್ರತಿದಿನ ನೂರಾರು ವಾಹನಗಳು ರಾತ್ರಿ ಸಮಯದಲ್ಲಿ ಇದೇ ರಸ್ತೆಯ ಮೂಲಕ ಸಂಚರಿಸುತ್ತಿರುವುದರಿಂದ ಬೀದಿ ದೀಪಗಳ ಅಗತ್ಯತೆಯ ಗಂಭೀರತೆಯನ್ನು ಪುರಸಭೆಯ ಮುಖ್ಯಾಧಿಕಾರಿಗಳ ಗಮನಕ್ಕೆ ತಂದ ಕಾರಣ ಅವರು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಕಂಬಗಳ ತಾಂತ್ರಿಕ ದೋಷ ಸರಿಪಡಿಸುವ ಕೆಲಸ ಮಾಡಿದ್ದರಿಂದ ಇತ್ತೀಚಿನ ಕೆಲವು ದಿನಗಳಿಂದ ಕಂಬಗಳಲ್ಲಿ ದೀಪ ಉರಿದು ರಸ್ತೆಗೆ ಬೆಳಕು ಚೆಲ್ಲುವಂತಾಗಿತ್ತಾದರೂ ಅವುಗಳಲ್ಲಿ ಕೆಲವು ಕಂಬಗಳ ದೀಪಗಳು ಬೆಳಗುವಂತೆ ಕಂಡರೂ ಬೆಳಕು ಮಾತ್ರ ಭೂಮಿಗೆ ತಲುಪದಂತಾಗಿದೆ.

ನಾಲ್ಕೈದು ದಿನಗಳ ಹಿಂದೆ ಗಣಪತಿ ದೇವಾಲಯದ ಪಕ್ಕದಲ್ಲಿರುವ ಕಂಬವೊಂದು ಜನ ಸಂಚಾರ ಇರುವುಗಾಲೇ ಬುಡದಲ್ಲಿ ತುಂಡಾಗಿ ನೆಲಕ್ಕುರುಳಿ ಬೀಳುವ ಮೂಲಕ ಜನರಲ್ಲಿ ಭಯ ಹುಟ್ಟಿಸಿದ್ದು ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

ಕಂಬದ ಕೆಳಭಾಗದಲ್ಲಿ ತುಕ್ಕು ಹಿಡಿದಿರುವುದೇ ಕಂಬ ತುಂಡಾಗಿ ಬೀಳಲು ಕಾರಣ ಎನ್ನಲಾಗುತ್ತಿದ್ದು, ಇದೇ ರಸ್ತೆಯಲ್ಲಿರುವ ಇನ್ನೂ ಕೆಲವು ಬೀದಿ ದೀಪದ ಕಂಬಗಳ ಕೆಳಭಾಗದಲ್ಲಿ ತುಕ್ಕು ಹಿಡಿದಂತೆ ಕಂಡು ಬರುತ್ತಿರುವುದು ಜನತೆಯ ಆತಂಕಕ್ಕೆ ಕಾರಣವಾಗಿದೆ.ಮುಂದಿನ ದಿನಗಳಲ್ಲಿ ಗಾಳಿ ಮಳೆ ಆರಂಭವಾಗಲಿದ್ದು ಈ ಕಂಬಗಳ ಗುಣಮಟ್ಟದ ಕುರಿತಂತೆ ಸಂಬಂಧಿಸಿದ ಇಲಾಖೆಗಳು ಪರಿಶೀಲನೆ ನಡೆಸಬೇಕಿದೆ.ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿಗಳು, ದೇವಾಲಯ ಸೇರಿದಂತೆ ಜನನಿಬಿಡ ಪ್ರದೇಶವಾಗಿರುವ ಈ ರಸ್ತೆಯಲ್ಲಿ ಜನರ ಮತ್ತು ವಾಹನಗಳ ಓಡಾಟ ಹೆಚ್ಚುತ್ತಿರುವುದರಿಂದ ಉಳಿದ ಕಂಬಗಳ ಬಾಳಿಕೆ ಕುರಿತಂತೆ ಪರಿಶೀಲಿಸುವ ಮೂಲಕ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಿದೆ.

ಅಂಗನವಾಡಿಗಳಲ್ಲಿ ಎಲ್‌ಕೆಜಿ ಆರಂಭಕ್ಕೆ ಒತ್ತಾಯ

ಕುಮಟಾ: ಅಂಗನವಾಡಿ ಕೇಂದ್ರಗಳ ಅಸ್ತಿತ್ವಕ್ಕೇ ಧಕ್ಕೆಯುಂಟಾಗುವ ಭೀತಿ ಎದುರಾಗಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಪ್ರಾಥಮಿಕಶಾಲೆಗಳಲ್ಲಿ ಎಲ್‌ಕೆಜಿ ಆರಂಭಿಸುವ ಸರ್ಕಾರದ ನಿರ್ಧಾರಕ್ಕೆ ಕುಮಟಾ ತಾಲೂಕಿನಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಅಂಗನವಾಡಿ ಉಳಿಸಿ ಚಳುವಳಿ'ಎಂಬ ಧ್ಯೇಯ ವಾಕ್ಯದೊಂದಿಗೆ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ ತರಗತಿಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿ ಕುಮಟಾ ತಾಲೂಕಿನ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು ಹಾಗೂ ಸರ್ಕಾರಿ ಅಂಗನವಾಡಿ ಕಾರ್ಯಕರ್ತೆಯರ ಒಕ್ಕೂಟ ಶುಕ್ರವಾರ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಹಾಗೂ ಬಿಇಒ ಅವರಿಗೆ ಮನವಿ ಸಲ್ಲಿಸಿ ಸರ್ಕಾರವನ್ನು ಆಗ್ರಹಿಸಿದರು.

ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಸವಿತಾ ತನ್ನಡಗಿ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕಿಯರಿಗೆ ಸೂಕ್ತ ತರಬೇತಿ ಹಾಗೂ ಮೂಲಭೂತ ಸೌಕರ್ಯ ಒದಗಿಸಿದರೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ. ಸರ್ಕಾರ ತನ್ನ ಯೋಜನೆಯನ್ನು ಪರಿಷ್ಕರಿಸಿ ಎಲ್‌ಕೆಜಿ ತರಗತಿಗಳನ್ನು ಅಂಗನವಾಡಿಗಳಲ್ಲಿಯೇ ಕಡ್ಡಾಯವಾಗಿ ಆರಂಭಿಸಬೇಕು ಎಂದು ಆಗ್ರಹಿಸಿದರು.ಸಾಮಾಜಿಕ ಹೋರಾಟಗಾರ ಧೀರೂ ಶಾನಭಾಗ, ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ರಾಜು ಮಾಸ್ತಿಹಳ್ಳ, ದೇವಗಿರಿ ಗ್ರಾಪಂ ಮಾಜಿ ಉಪಾಧ್ಯಕ್ಷ ಎಸ್.ಟಿ. ನಾಯ್ಕ, ಮಾಜಿ ಸದಸ್ಯರಾದ ಶಾಂತಾರಾಮ ನಾಯ್ಕ ಹಾಗೂ ಗಣೇಶ ಅಂಬಿಗ ಮಾತನಾಡಿದರು.

ಸರ್ಕಾರ ಈಗಾಗಲೇ ಅನುದಾನ ಬಳಸಿ ಹೈಟೆಕ್ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಿದ್ದು, ಎಲ್‌ಕೆಜಿ ಶಾಲೆಗಳಲ್ಲಿ ಆರಂಭಿಸಿದರೆ ಅಂಗನವಾಡಿಗಳಲ್ಲಿ ಮಕ್ಕಳೇ ಇಲ್ಲದಂತಾಗುವ ಪರಿಸ್ಥಿತಿ ಎದುರಾಗಬಹುದು. ಹೀಗಾಗಿ ಸರ್ಕಾರ ಈ ಆದೇಶವನ್ನು ಹಿಂಪಡೆದು ಅಂಗನವಾಡಿ ಕಾರ್ಯಕರ್ತೆಯರಿಗೆ ನ್ಯಾಯ ಒದಗಿಸಬೇಕು. ಇಲ್ಲವಾದಲ್ಲಿ ಅಂಗನವಾಡಿ ಸೇವೆಗಳನ್ನು ಸ್ಥಗಿತಗೊಳಿಸಿ ರಾಜ್ಯಾದ್ಯಂತ ಎಲ್ಲ ಸಂಘಟನೆಗಳ ಸಹಭಾಗಿತ್ವದಲ್ಲಿ ಹೋರಾಟ ಹಮ್ಮಿಕೊಳ್ಳುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಕೆ ನೀಡಿದರು.ಮನವಿ ಸಲ್ಲಿಕೆ ವೇಳೆ ರಾಜೇಶ್ವರಿ ನಾಯ್ಕ, ಮಹಾಲಕ್ಷ್ಮಿ ಪಟಗಾರ, ಭಾರತಿ ಪಟಗಾರ, ನಾಗವೇಣಿ ಗೌಡ, ಮಂಗಲಾ ಗಾವಡಿ, ದೇವಕಿ, ಶಾರದಾ ಭಂಡಾರಿ, ಯಶೋಧಾ ನಾಯ್ಕ, ಭಾರತಿ ನಾಯ್ಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಗ್ರೇಡ್-2 ತಹಶೀಲ್ದಾರ್ ಸತೀಶ ಗೌಡ ಹಾಗೂ ಬಿಇಒ ಉದಯ ನಾಯ್ಕ ಮನವಿಯನ್ನು ಸ್ವೀಕರಿಸಿ, ಮೇಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.



ಸಮಸ್ಯೆಗೆ ಪರಿಹಾರ ಒದಗಿಸಲು ಒತ್ತಾಯ


ಮುಂಡಗೋಡ: ಪಟ್ಟಣದ ಪೆಟ್ರೋಲ್ ಬಂಕ್‌ನ ಮಾಲೀಕರು ರೈತರಿಗೆ ಕ್ಯಾನುಗಳಲ್ಲಿ ಡೀಸೆಲ್ ಕೊಡದಿರುವುದು, ಅಡುಗೆ ಅನಿಲ್ (ಸಿಲೆಂಡರ್)ಕೊರತೆ ಕುರಿತು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದವರು ಇಲ್ಲಿನ ತಹಶೀಲ್ದಾರರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದಲ್ಲಿ ರೈತರು ಮುಂಗಾರು ಬಿತ್ತನೆಗೆ ಟ್ರಾಕ್ಟರ್‌ಗಳ ಮೂಲಕ ಹೊಲಗಳನ್ನು ಹದಗೊಳಿಸುತ್ತಿದ್ದಾರೆ. ಟ್ರಾಕ್ಟರ್‌ಗಳಲ್ಲಿ ಡೀಸೆಲ್ ಖಾಲಿಯಾದಾಗ ಕ್ಯಾನ್‌ಗಳ ಮೂಲಕ ಬಂಕ್‌ಗೆ ಹೋದರೆ ಬಂಕ್‌ನ ಮಾಲೀಕರು ಕ್ಯಾನುಗಳಿಗೆ ಡೀಸೆಲ್ ಹಾಕುವುದಿಲ್ಲ, ಟ್ರಾಕ್ಟರ್‌ಗಳನ್ನೇ ಬಂಕ್‌ಗೆ ತೆಗೆದುಕೊಂಡು ಬಂದರೆ ಡೀಸೆಲ್ ಹಾಕುತ್ತೇವೆ. ಇಲ್ಲವಾದರೆ ಹಾಕುವುದಿಲ್ಲ ನಮಗೆ ಮೇಲಿನಿಂದ ನಿರ್ಬಂಧವಿದೆ ಎನ್ನುತ್ತಾರೆ. ಬಂಕ್‌ನ ಮಾಲೀಕರಿಗೆ ಕ್ಯಾನುಗಳಲ್ಲಿ ಡೀಸೆಲ್ ಹಾಕಿ ಕೊಡಲು ಅನುಮತಿ ನೀಡಬೇಕು.

ಇನ್ನು ವಾಣಿಜ್ಯ ಸಿಲೆಂಡರ್ ಸಿಗದೆ ಹೋಟೆಲ್‌ಗಳು ಮುಚ್ಚುವ ಪರಿಸ್ಥಿತಿ ಬಂದಿದೆ. ಗ್ಯಾಸ್ ಏಜೆನ್ಸಿಯವರು ನೋ ಸ್ಟಾಕ್ ಅಂತ ಹೇಳಿ ಕಳುಸುತ್ತಿದ್ದಾರೆ. ಸರಿಯಾಗಿ ಸಿಲೆಂಡರ್‌ಗಳು ದೊರಕದೇ ಇರುವ ಕಾರಣ ಹೋಟೆಲ್ ಮಾಲೀಕರು ಅಂಗಡಿಗಳನ್ನು ಬಂದ್ ಮಾಡುವ ಪರಿಸ್ಥಿತಿ ಎದುರಾಗುತ್ತಿದೆ. ಗ್ಯಾಸ್ ಏಜೆನ್ಸಿಯವರನ್ನು ಕರೆಯಿಸಿ ಕಮರ್ಷಿಯಲ್ ಸಿಲೆಂಡರ್‌ಗಳನ್ನು ಸರಿಯಾಗಿ ಸಮಯಕ್ಕೆ ಕೊಡುವಂತೆ ಸೂಚನೆ ನೀಡಬೇಕು.

ತಾಲೂಕಿನ ರೈತರಿಗೆ 2025ರ ಮುಂಗಾರಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಗೋವಿನ ಜೋಳದ ಬೆಳೆ ಸಂಪೂರ್ಣ ಹಾಳಾಗಿದೆ. ಗೋವಿನ ಜೋಳ ನಷ್ಟವಾದ ಕಾರಣ ಸರ್ಕಾರ ಪರಿಹಾರ ಘೋಷಿಸಿದ್ದು ಈ ಘೋಷಣೆ ಘೋಷಣೆಯಾಗೆ ಉಳಿದಿದ್ದು, ಇದುವರೆಗೂ ಬೆಳೆ ಪರಿಹಾರ ರೈತರಿಗೆ ಸಿಕ್ಕಿಲ್ಲ, ಕೂಡಲೆ ಬೆಳೆಪರಿಹಾರವನ್ನು ಬಿಡುಗಡೆ ಮಾಡಿ ರೈತರನ್ನು ಸಾಲಬಾಧೆಯಿಂದ ಮುಕ್ತ ಮಾಡಬೇಕು. 2025ರ ಬೆಳೆ ವಿಮೆ ಇನ್ನೂ ಪಾವತಿಯಾಗಿಲ್ಲ, ಬೆಳೆ ವಿಮೆ ಪಾವತಿಸಲು ವಿಮಾ ಕಂಪನಿಗಳಿಗೆ ಆದೇಶ ನೀಡಬೇಕು. ಮುಂಗಾರು ಪ್ರಾರಂಭವಾಗಿದ್ದು ರೈತರು ಬಿತ್ತನೆ ಕಾರ್ಯ ಮಾಡುತ್ತಿದ್ದಾರೆ. ಬಿತ್ತನೆ ಕಾರ್ಯಕ್ಕೆ ರಸಗೊಬ್ಬರದ ಅವಶ್ಯಕತೆ ಇದೆ. ರಸಗೊಬ್ಬರದ ಅಂಗಡಿ ಮಾಲೀಕರು ರಸಗೊಬ್ಬರಕ್ಕಾಗಿ ಅಂಗಡಿಗೆ ಹೋದಾಗ ದಾಖಲಾತಿ ಪರಿಶೀಲನೆಗೆ ಸರ್ವರ್ ಬಿಜಿ ಎಂದು ರೈತರನ್ನು ದಿನವಿಡೀ ಕಾಯಿಸುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಿ ಕೊಡಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ವೇಳೆ ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಶಿರಹಟ್ಟಿ, ಪೀರಜ್ಜ ಸಾಗರ, ನವೀನಕುಮಾರ ಕರ್ಜಗಿ, ವಸಂತ ಭೋವಿವಡ್ಡರ, ಪರಶುರಾಮ ಧುಮಾಳೆ, ಅಮ್ಜದ್ ಖಾನ್, ರಾಮಸ್ವಾಮಿ ಭೋವಿವಡ್ಡರ, ಗೋಪಾಲ ಗೋಂದಲೆ, ಫಕ್ಕೀರೇಶ ಮಳಲಿ, ಚಂದ್ರಶೇಖರ ಕಿಂದ್ರಿ, ಭರತಕುಮಾರ ಇದ್ದರು.



ಜೂ.1ರಂದು ಶಾಲಾ ಪ್ರಾರಂಭೋತ್ಸವ

ಮುಂಡಗೋಡ: ಜೂನ್ 1ರಿಂದ ಶಾಲೆಗಳು ಆರಂಭವಾಗುತ್ತಿದ್ದು ಅಂದಿನಿಂದಲೇ ಪಾಠ ಪ್ರವಚನಗಳು ಕೂಡ ಪ್ರಾರಂಭವಾಗುವ ಕಾರಣ ಎಲ್ಲ ಪಾಲಕರು ತಮ್ಮ ಮಕ್ಕಳನ್ನು ಅಂದಿನ ದಿವಸವೇ ಕಳುಹಿಸಿ ಕೊಡಬೇಕು ಎಂದು ಬಿಇಒ ಸುಮಾ ಜಿ. ಹೇಳಿದರು.

ಶಾಲಾ ಪ್ರಾರಂಭೋತ್ಸವದ ಕುರಿತು ಮಾಹಿತಿ ನೀಡಿದ ಅವರು ಈಗಾಗಲೇ ಎಲ್ಲ ಶಾಲೆಗಳಿಗೂ ಪಠ್ಯಪುಸ್ತಕಗಳು ತಲುಪಿವೆ. ಇಂದು ಅಥವಾ ನಾಳೆ ಸಮವಸ್ತ್ರ ಬರಲಿವೆ. ಪ್ರತಿಯೊಂದೂ ಶಾಲೆಯಲ್ಲಿ ಮಕ್ಕಳಿಗೆ ಹೂ ನೀಡುವ ಮೂಲಕ ಸ್ವಾಗತ ಕೋರಲಾಗುವುದು. ಪೋಷಕರ ಸಭೆ ಅಂದೇ ನಡೆಯಲಿದೆ.

ಶಿಕ್ಷಣ ಮಂತ್ರಿ ಹಾಗೂ ಮುಖ್ಯಮಂತ್ರಿಗಳು ಕೂಡ ಶಾಲಾ ಪ್ರಾರಂಭೋತ್ಸವದಲ್ಲಿ ಪಾಲ್ಗೊಳ್ಳುವ ಸಮಯದಲ್ಲೇ ನಾವೂ ಪ್ರಾರಂಭೋತ್ಸವ ಆಚರಿಸುತ್ತೇವೆ. ತಾಲೂಕಿನಲ್ಲಿ 16 ಜೀರೋ ಶಿಕ್ಷಕರ ಶಾಲೆಗಳಿದ್ದು ಅಂತಹ ಶಾಲೆ ಮತ್ತು ಉಳಿದ ಶಾಲೆಗಳಿಗೆ ಒಬ್ಬೊಬ್ಬ ಶಿಕ್ಷಕರನ್ನು ಸ್ವಚ್ಛತೆಗಾಗಿ ನಿಯೋಜನೆ ಮಾಡಿದ್ದೇನೆ.

ನಮ್ಮ ತಾಲೂಕಿನ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಶೌಚಾಲಯ, ಕುಡಿಯುವ ನೀರಿನ ಟ್ಯಾಂಕ್, ಶಾಲಾ ಆವರಣ, ಕಾಂಪೌಂಡ್, ಕೊಠಡಿಗಳನ್ನು, ಅಡುಗೆ ಮನೆ ಮತ್ತು ರೇಶನ್ ಕೂಡ ಸ್ವಚ್ಛಗೊಳಿಸಲಾಗಿದ್ದು ಅಂದು ಮಕ್ಕಳಿಗೆ ಊಟದ ವ್ಯವಸ್ಥೆ ಕೂಡ ಮಾಡಲಾಗಿದೆ. ಮೊದಲ 2 ಅವಧಿ ಮಕ್ಕಳಿಗೆ ಮತ್ತು ಪಾಲಕರಿಗೆ ಸ್ವಾಗತ ಕೋರುವುದು ಮತ್ತು 3 ನೇ ಅವಧಿಗೆ ತರಗತಿಗಳು ಆರಂಭವಾಗಲಿದ್ದು, ಬಂದಿರುವ ಪಠ್ಯಪುಸ್ತಕಗಳನ್ನು ಎಲ್ಲ ಶಾಲೆಗಳಿಗೆ ಮುಟ್ಟಿಸಲಾಗಿದೆ.



ಪಾಲಕರು ತಮ್ಮ ಮಕ್ಕಳಿಗೆ ಬೇಕಾದ ಮೂಲ ಸೌಕರ್ಯ ಒದಗಿಸಿ ಬೇರೆ ಊರಿಗೆ ಹೋಗಿದ್ದರೆ ಕರೆಯಿಸಿ ಅಂದೇ ಶಾಲೆಗೆ ಬರುವಂತೆ ಪ್ರೇರೇಪಣೆ ಮಾಡಬೇಕು. ತಾಲೂಕಿನ ಎಲ್ಲ ಶಾಲೆಯ ಶಿಕ್ಷಕರು ಶಾಲಾ ಪ್ರಾರಂಭೋತ್ಸವಕ್ಕೆ ಸನ್ನದ್ಧರಾಗಿದ್ದಾರೆ ಎಂದು ಅವರು ಹೇಳಿದರು.

ಕಲಿಕೆ ಸವಾಲಾದರೆ ಯಶಸ್ಸು ಸಾಧ್ಯ

ಅಂಕೋಲಾ: ತಾಲೂಕಿನ ಪೂಜಗೇರಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಮಂಜೇಶ್ವರ ನಾಯಕ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕಲಿಕೆಯನ್ನು ಸವಾಲಾಗಿ ಸ್ವೀಕರಿಸಿದಾಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ, ಕಾಲೇಜು ಹಲವು ಸೌಲಭ್ಯಗಳೊಂದಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು ಕಾಲೇಜಿನ ಅಭಿವೃದ್ಧಿಗೆ ಸಮಿತಿಯ ಸಹಕಾರ ಸದಾ ಇದೆ ಎಂದರು.

ವಿಶ್ರಾಂತ ಪ್ರಾಚಾರ್ಯ ಎನ್.ಡಿ.ಅಂಕೋಲೇಕರ್ ಮಾತನಾಡಿ, ಶಿಕ್ಷಣ ಎಂದರೆ ಸಂಸ್ಕಾರವಾಗಿದ್ದು ವಿದ್ಯಾರ್ಥಿಗಳು ವಿನಯ ಮತ್ತು ವಿಧೇಯತೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಿಕ್ಷಣ ಪಡೆದಿರುವುದು ಸಾರ್ಥಕವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯೆ ವಿಜಯಾ ಪಾಟೀಲ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡುತ್ತಿದ್ದು ಕಾಲೇಜಿನ ಅಭಿವೃದ್ಧಿಗೆ ಸರ್ವರ ಸಹಕಾರ ಅಗತ್ಯ ಎಂದರು.



ಪ್ರಾಧ್ಯಾಪಕರುಗಳಾದ ಸುಮಯ್ಯ ಸೈಯದ್, ಶ್ರೀಧರ ನಾಯ್ಕ, ವೆಂಕಟೇಶ ಗಾಂವಕರ ವಿದ್ಯಾರ್ಥಿ ಪ್ರತಿನಿಧಿ ಆದಿತ್ಯ ನಾಯ್ಕ, ಶಿವಪ್ರಸಾದ ನಾಯಕ, ಸಂಜನಾ ಬಾನಾವಳಿಕರ ಉಪಸ್ಥಿತರಿದ್ದರು. ಸಾಂಸ್ಕೃತಿಕ ಸಂಯೋಜಕಿ ಜಾನಕಿ ಮರಾಠಿ ಸ್ವಾಗತಿಸಿದರು, ಉಪನ್ಯಾಸಕಿ ಜ್ಯೋತಿ ನಾಯಕ, ಮಹೇಶ. ಕೆ ವರದಿ ವಾಚಿಸಿದರು. ವೈಷ್ಣವಿ ಭಟ್ ಕಾರ್ಯಕ್ರಮ ನಿರ್ವಹಿಸಿದರು. ನಾರಾಯಣ ಸ್ವಾಮಿ ವಂದಿಸಿದರು.

ಇಂದು ಪ್ರಣವಾನಂದ ಶ್ರೀ ಭೇಟಿ

ಅಂಕೋಲಾ: ಇತ್ತೀಚೆಗೆ ಭಟ್ಕಳ ತಾಲೂಕಿನ ಶಿರಾಲಿಯ ತಟ್ಟಿಹಕ್ಕಲದ ಹೊಳೆಯಲ್ಲಿ ಚಿಪ್ಪೆಕಲ್ಲು ಆಯಲು ಹೋಗಿ ಮೃತಪಟ್ಟ 11 ಜನ ದುರ್ದೈವಿಗಳ ಅವಲಂಬಿತರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಲಕ್ಷ ಮತ್ತು ಮೀನುಗಾರಿಕೆ ಇಲಾಖೆಯ ಪರಿಹಾರವಾಗಿ 10 ಲಕ್ಷ ಸೇರಿದಂತೆ ತಲಾ 15 ಲಕ್ಷ ಪರಿಹಾರದ ಚೆಕ್ಕುಗಳನ್ನು ನೀಡಿ ಸಹಾಯ ಮಾಡಿರುವ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮತ್ತು ಉತ್ತರ ಕನ್ನಡ ಜಿಲ್ಲಾಡಳಿತಕ್ಕೆ ಧನ್ಯವಾದವಾದಗಳನ್ನು ಸಲ್ಲಿಸುವುದಾಗಿ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ರಾಷ್ಟ್ರೀಯ ಅಧ್ಯಕ್ಷ, ಶ್ರೀನಾರಾಯಣಗುರು ಶಕ್ತಿಪೀಠದ ಪ್ರಣವಾನಂದ ಸ್ವಾಮಿಗಳು ತಿಳಿಸಿದ್ದಾರೆ.



ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡುವಂತೆ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾ ಘಟಕ ಮತ್ತು ವಿವಿಧ ತಾಲೂಕು ಘಟಕಗಳಿಂದ ಸರ್ಕಾರಕ್ಕೆ ಆಗ್ರಹಿಸಲಾಗಿತ್ತು ದುರ್ಘಟನೆ ನಡೆದ ದಿನದಂದೇ ಮುಖ್ಯಮಂತ್ರಿಗಳು ಸರ್ಕಾರದ 5 ಲಕ್ಷ ಪರಿಹಾರ ಘೋಷಣೆ ಮಾಡಿದ್ದರು ನಂತರ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಮೀನುಗಾರಿಕೆ ಸಚಿವರೂ ಆಗಿರುವ ಮಂಕಾಳ ವೈದ್ಯ ಅವರು ಮೀನುಗಾರರಿಗೆ ಇಲಾಖೆಯಿಂದ ನೀಡುವ ಪರಿಹಾರದಂತೆ ಮೃತಪಟ್ಟವರ ಕುಟುಂಬಗಳಿಗೆ 10 ಲಕ್ಷ ಪರಿಹಾರ ಘೋಷಣೆ ಮಾಡಿರುವುದು ಅಭಿನಂದನೀಯ ಎಂದು ಸ್ವಾಮಿ ಪ್ರಣವಾನಂದರು ತಿಳಿಸಿದ್ದಾರೆ.

ಮೇ 30ರಂದು ಬೆಳಗ್ಗೆ 10 ಗಂಟೆಗೆ ಪ್ರಣವಾನಂದ ಸ್ವಾಮಿಗಳು ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಭೇಟಿ ನೀಡಲಿದ್ದು ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾ ಮತ್ತು ವಿವಿಧ ತಾಲೂಕು ಘಟಕಗಳ ಪದಾಧಿಕಾರಿಗಳು,ಈಡಿಗ ನಾಮಧಾರಿ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಶಾಲೆ ಪೂರಕ

ಹೊನ್ನಾವರ: ಶಾಲೆ ಎಂದರೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಇರುವ ಕಲಿಕಾ ಚಟುವಟಿಕೆಯ ಕೇಂದ್ರ ಅಷ್ಟೇ ಅಲ್ಲ, ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಬಹಳ ಮಹತ್ವದ ಕೇಂದ್ರವಾದ ಶಾಲೆಯು ಊರಿನ ಶಕ್ತಿಯ, ಸಮೃದ್ಧಿಯ ಸಂಕೇತವೂ ಹೌದು. ಶಾಲೆಯೊಂದು ಉಳಿಯಬೇಕು ಎಂತಾದರೆ ಅಲ್ಲಿ ಶಿಕ್ಷಕರು, ಆಡಳಿತ ವರ್ಗದ ಜೊತೆಗೆ ಪಾಲಕರ, ಪೋಷಕರ, ಸ್ಥಳೀಯರ ಭಾವನಾತ್ಮಕ ಸಂಬಂಧ ಶಾಲೆಯೊಟ್ಟಿಗೆ ಇಟ್ಟುಕೊಂಡರೆ ಆ ಊರಿನ ಶಾಲೆಗೆ ದೊಡ್ಡ ಭವಿಷ್ಯ ಇದೆ ಎಂದು ಉಜಿರೆಯ ಎಸ್.ಡಿ.ಎಂ.ಕಾಲೇಜಿನ ನಿವೃತ್ತ ಮುಖ್ಯ ಪ್ರಾಧ್ಯಾಪಕ ಭಾಸ್ಕರ ಹೆಗಡೆ ಹೇಳಿದರು.

ಅವರು ತಾಲೂಕಿನ ಮಾಳ್ಕೋಡ ಮಂಕಿಮನೆಯಲ್ಲಿ ನಡೆದ ಮಾಳ್ಕೋಡ-ಕೆಳಗಿನ ಇಡಗುಂಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪೂರ್ವವಿದ್ಯಾರ್ಥಿಗಳ ಸಂಪರ್ಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಮಾಳ್ಕೋಡ ಶಾಲೆ ಒಂದು ಮೈಯುಲುಗಲ್ಲನ್ನು ದಾಟಿದೆ ಎಂತಾದರೆ, ಶತಮಾನವನ್ನು ದಾಟಿದೆ ಅಂದರೆ ಈ ಊರಿನ ಮಟ್ಟಿಗೆ ತುಂಬಾ ಹೆಮ್ಮೆಯ ಸಂಗತಿ. ಎಲ್ಲರೂ ಸೇರಿ ಕೈಜೋಡಿಸಿ ನಮ್ಮ ಶಾಲೆ, ನಮ್ಮ ಹೆಮ್ಮೆ ಎನ್ನುವ ಅಭಿಮಾನದೊಂದಿಗೆ ಆಚರಿಸೋಣ ಎಂದರು.



ಶತಮಾನೋತ್ಸವ ಸಮಿತಿಯ ಅಧ್ಯಕ್ಷ ನಾಗರಾಜ ನಾಯ್ಕ ಮಾಳ್ಕೋಡ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಗೌರವಾಧ್ಯಕ್ಷ ಬಾಲಚಂದ್ರ ಎಂ.ನಾಯ್ಕ ಎಸ್.ಡಿ.ಎಂ.ಸಿ ಅಧ್ಯಕ್ಷ ರಾಜೇಶ ಎಂ.ಶೆಟ್ಟಿ,ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರಶಾಂತ ಎಚ್.ನಾಯ್ಕ,ಊರಿನ ಹಿರಿಯರಾದ ಮಹಾಬಲ ಶಂಭು ಹೆಗಡೆ ಮಾತನಾಡಿದರು.

ಮಂಜುಳಾ ಹೆಗಡೆ ಪ್ರಾರ್ಥಿಸಿದರು. ಸಮಿತಿಯ ಉಪಾಧ್ಯಕ್ಷ ಜಿ.ಕೆ.ಹೆಗಡೆ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಸುರೇಶ ಜಿ.ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯದರ್ಶಿ ಲಕ್ಷ್ಮಿ ಎನ್. ಭಟ್ ಕಾರ್ಯಕ್ರಮ ನಿರ್ವಹಿಸಿದರು. ಸಂಘಟನಾ ಕಾರ್ಯದರ್ಶಿ ಮೂರ್ತಿ ಎಂ.ಆಚಾರಿ ವಂದಿಸಿದರು.

ಜೆಜೆಎಂ ಯೋಜನೆ : ವಿಶೇಷ ಗ್ರಾಮ ಸಭೆ

ಹಳಿಯಾಳ: ತಾಲೂಕಿನ ಬಿಕೆಹಳ್ಳಿ ಗ್ರಾಮದಲ್ಲಿ ಶುಕ್ರವಾರ ಗ್ರಾಪಂ ವತಿಯಿಂದ ಕರೆದಿದ್ದ ವಿಶೇಷ ಗ್ರಾಮ ಸಭೆಯಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಯ ಕುರಿತು ಚರ್ಚೆ ನಡೆದವು.

ಈ ಹಿಂದೆ ಹೊಸ ದಿಗಂತ ದಿನಪತ್ರಿಕೆಯಲ್ಲಿ ಮೇ 3ರಂದು ಪ್ರಕಟಿಸಿದ ವಿಶೇಷ ವರದಿಗೆ ಎಚ್ಚೆತ್ತುಗೊಂಡ ಕಾಮಗಾರಿಗೆ ಸಂಬಂಧಿಸಿದವರು ತ್ವರಿತವಾಗಿ ಕಾಮಗಾರಿಯಲ್ಲಿಯ ಲೋಪದೋಷಗಳನ್ನು ಸರಿ ಪಡಿಸಲು ಸಾಕಷ್ಟು ಹರಸಾಹಸ ಪಟ್ಟಿದ್ದರು.

ಅಲ್ಲದೇ ವರದಿಯ ಫಲಶ್ರುತಿಯಾಗಿಯೇ ಗ್ರಾಮಸ್ಥರು ಹಠ ಹಿಡಿದು ವಿಶೇಷ ಗ್ರಾಮ ಸಭೆ ಕರೆಯಲು ಒತ್ತಾಯಿಸಿದ್ದರಿಂದ ಇಂದು ವಿಶೇಷ ಗ್ರಾಮ ಸಭೆ ಕರೆಯಲಾಗಿತ್ತು.

ಆದರೆ ಸಭೆಗೆ ಆಗಮಿಸ ಬೇಕಿದ್ದ ಕಾಮಗಾರಿಗೆ ಸಂಬಂಧಿಸಿದ ಯಾವುದೇ ಅಧಿಕಾರಿಗಳು ಬಾರದೇ ಇರುವುದು ಮತ್ತು ಹಿರಿಯ ಅಧಿಕಾರಿಗಳು ನಡೆದಿರುವ ಅವ್ಯವಹಾರವನ್ನು ಉದಾಸೀನ ಮಾಡಿ ಸಭೆಗೆ ಗೈರಾಗಿರುವವರನ್ನು ಸಾರ್ವಜನಿಕರು ತರಾಟೆಗೆ ತೆಗೆದುಕೊಂಡರು.

ಡಿಪಿಆರ್ ನ ಪ್ರತಿ ತೋರಿಸಿ ಪ್ರಶ್ನೆಗಿಳಿದ ಗ್ರಾಮಸ್ಥ ಹಾಗೂ ಜೆಜೆಎಮ್ ಕಾಂಡದ ಹೋರಾಟಗಾರ ಸಂಜು ಗೌಡ ಮತ್ತಿತರರರು ಒಂದೊಂದೆ ಅಂಶಗಳನ್ನು ಪ್ರಶ್ನಿಸ ತೊಡಗಿದಾಗ ಯಾವುದೇ ಪ್ರಶ್ನೆಗೆ ಉತ್ತರಿಸದೆ ಬಹಿರಂಗವಾಗಿ ಪರೋಕ್ಷವಾಗಿ ನಡೆದಿರುವ ಕಳಪೆ ಕಾಮಗಾರಿ ಹಾಗೂ ಸಾರ್ವಜನಿಕ ತೆರಿಗೆ ಹಣ ಪೋಲು ಮಾಡಿರುವುದು ನಿಜ ಎಂದು ಒಪ್ಪಿಕೊಂಡರು.



ಜೆಜೆಎಮ್ ಕಾಮಗಾರಿಯು ಸಂಪೂರ್ಣವಾಗಿ ಕಳಪೆಯಿಂದ ಕೂಡಿದ್ದು ಎಂತಹ ಅಜ್ಞಾನಿಗೂ ಎದ್ದು ಕಾಣುವಂತಿದ್ದರೂ ಜನಪ್ರತಿನಿಧಿಗಳ ಜಾಣ ಮೌನ ಏನನ್ನು ಸೂಚಿಸ ಬಲ್ಲದೆಂದು ತಿಳಿಯಲಾರದಷ್ಟು ಗ್ರಾಮಸ್ಥರಿಲ್ಲ ಎನ್ನುವುದನ್ನು ಅರಿತರೆ ಒಳ್ಳೆಯದು ಎಂದು ಜೆಜೆಎಮ್ ಕಾಮಗಾರಿಯ ಹೋರಾಟಗಾರ ಶಾಂತಾರಾಮ ನಾಕಾಡಿ ಹೇಳಿದರು. ಇಂದಿನ ಗ್ರಾಮ ಸಭೆಯು ಕೇವಲ ಗ್ರಾಮಸ್ಥರ ಕಣ್ಣೊರಿಸುವ ಕಾರ್ಯವಾಗಿದ್ದು ಯಾವುದೇ ರೀತಿಯಿಂದಲೂ ಫಲಪ್ರದವಾಗಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು. ಗ್ರಾಪಂ ಆಡಳಿತಾಧಿಕಾರಿ ವೀರೇಶ, ಕುಡಿಯುವ ನೀರಿನ ಯೋಜನೆಯ ಇಂಜಿನಿಯರ್, ಪಿಡಿಒ ಸಂಜೀವ ಬೊಂಗಾಳೆ, ಗುತ್ತಿಗೆದಾರರ ಪ್ರತಿನಿಧಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕಿರುಸುದ್ದಿ

ನಾಳೆ ಮೃತ್ಯುಂಜಯ ಹೋಮ, ಪ್ರತಿಭಾ ಪುರಸ್ಕಾರ

ಹಾವೇರಿ: ನಗರದ ಕೃಷ್ಣ ದೇವಸ್ಥಾನದ ಲಕ್ಷ್ಮೀವೆಂಕಟೇಶ್ವರ ಸಭಾಭವನದಲ್ಲಿ ಮೇ 31ರಂದು ಬೆಳಗ್ಗೆ 10 ಗಂಟೆಗೆ ಲೋಕ ಕಲ್ಯಾಣಾರ್ಥಕ್ಕಾಗಿ ಮೃತ್ಯುಂಜಯ ಹೋಮ ನಡೆಯಲಿದೆ. ಹಾವೇರಿ ತಾಲೂಕಾ ಬ್ರಾಹ್ಮಣ ಸಮಾಜದ ವತಿಯಿಂದ ಅಂದು ಬೆಳಗ್ಗೆ ಮೃತ್ಯುಂಜಯ ಹೋಮ ಹಾಗೂ ಎಸ್ಎಸ್ಎಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಬ್ರಾಹ್ಮಣ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಗುವುದು. ಮೃತ್ಯುಂಜಯ ಹೋಮದಲ್ಲಿ ಪಾಲ್ಗೊಳ್ಳುವ ಭಕ್ತರು ಸಾಮೂಹಿಕ ಸಂಕಲ್ಪ ಮಾಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾವು ಕಡಿದು ಮಹಿಳೆ ಸಾವು

ಹಾವೇರಿ: ಅಡಕೆ ತೋಟದಲ್ಲಿ ಅಳಡಿಸಿದ್ದ ಡ್ರಿಪ್ ಪೈಪ್‌ಗಳನ್ನು ತೆಗೆಯುವಾಗ ಹಾವು ಕಡಿದು ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ರಟ್ಟಿಹಳ್ಳಿ ತಾಲೂಕು ಚಿಕ್ಕ ಕಬ್ಬಾರ ಗ್ರಾಮದಲ್ಲಿ ನಡೆದಿದೆ. ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕು ಕೂಲಂಬಿ ಗ್ರಾಮದ ಮಮತಾ ಚಂದ್ರಶೇಖರಪ್ಪ ರಡ್ಡೇರ (35) ಮೃತ ದುರ್ದೈವಿ. ಇವರು ತನ್ನ ತಾಯಿಯೊಂದಿಗೆ ಚಿಕ್ಕಕಬ್ಬಾರ ಗ್ರಾಮದ ಮನೆ ಹತ್ತಿರವಿರುವ ಅಡಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಘಟನೆ ಸಂಭವಿಸಿದೆ. ಅಡಕೆ ತೋಟದಲ್ಲಿ ಅಳವಡಿಸಿದ್ದ ಡ್ರಿಪ್ ಪೈಪ್‌ಗಳನ್ನು ತೆಗೆಯುವಾಗ, ಪೈಪ್‌ನಲ್ಲಿದ್ದ ವಿಷಕಾರಕ ಹಾವು ಮೃತಳ ಕಾಲಿಗೆ ಕಚ್ಚಿದೆ. ಕೂಡಲೇ ಸಮೀಪದ ಹಳ್ಳೂರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ಖಚಿತ ಪಡಿಸಿದ್ದಾರೆಂದು ಮೃತಳ ಸಂಬಂಧ ಮಂಜುನಾಥ ಕೋಟಿಹಾಳ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್- ಕಾರು ಡಿಕ್ಕಿ: ಗಾಯ

ಹಾವೇರಿ: ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಅಜ್ಜ, ಮೊಮ್ಮಗಳು ಗಾಯಗೊಂಡಿರುವ ಘಟನೆ ಹಂಸಭಾವಿ ರಸ್ತೆಯಲ್ಲಿರುವ ಸುತ್ತಕೋಟಿ ಕ್ರಾಸ್‌ನಲ್ಲಿ ನಡೆದಿದೆ. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಮುಚುಡಿ ಗ್ರಾಮದ ಬೈಕ್ ಸವಾರ ರಾಮನಗೌಡಪ್ಪ ಮುಚಡೇರ, ಹಿಂಬದಿ ಸವಾರಳಾದ ಭೂಮಿಕಾ ಪರಮೇಶಪ್ಪ ಮುಚಡೇರ ಗಾಯಗೊಂಡವರು. ಗಾಯಾಳು ರಾಮನಗೌಡಪ್ಪ ತನ್ನ ಮೊಮ್ಮಗಳನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಅಗ್ರಹಾರ ಮುಚುಡಿಯಿಂದ ಬೈಕ್ ಚಲಾಯಿಸಿಕೊಂಡು ಸುತ್ತಕೋಟಿ ಗ್ರಾಮದ ಕಡೆಗೆ ಹೋಗುವಾಗ, ಅದೇ ರಸ್ತೆಯಲ್ಲಿ ಕೋಡ ಕಡೆಯಿಂದ ಹಂಸಭಾವಿ ಕಡೆಗೆ ಬರುತ್ತಿದ್ದ ಕಾರು ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಕಾರಿನ ಚಾಲಕನ ಹೆಸರು ವಿಳಾಸ ಪತ್ತೆಯಾಗಿಲ್ಲ, ಅಪಘಾತದ ಪರಿಣಾಮ ಬೈಕ್‌ನಲ್ಲಿದ್ದರಿಗೆ ಗಂಭೀರ ಗಾಯಗಳಾಗಿವೆ ಎಂದು ಶಿಲ್ಪಾ ಮುಚಡೇರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಡಿಕ್ಕಿ : ಸಾವು

ಹಾವೇರಿ: ರಸ್ತೆ ದಾಟಿಕೊಂಡು ಹೋಗುತ್ತಿದ್ದ ಟಾಟಾಏಸ್ ವಾಹನದ ಚಾಲಕರೊಬ್ಬರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ, ಗಂಭೀರ ಗಾಯಗೊಂಡಿದ್ದ ಟಾಟಾಏಸ್ ಚಾಲಕ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ. ಯಳ್ಳೂರಿನ ಮಹದೇವಗೌಡ ಕರಬಸಗೌಡ ಪಾಟೀಲ ಎಂಬುವವರೇ ಸಾವನ್ನಪ್ಪಿದ ಟಾಟಾಏಸ್ ವಾಹನದ ಚಾಲಕರಾಗಿದ್ದಾರೆ. ಹಾನಗಲ್ ನವನಗರದ ಬೈಕ್ ಸವಾರ ಸೈಯದ್‌ಬೇಗ್ ಗಫಾರ್‌ಬೇಗ್ ಸವಣೂರ (23) ಎಂಬಾತನ ವಿರುದ್ಧ ದೂರು ದಾಖಲಿಸಲಾಗಿದೆ. ಮೃತ ಮಹದೇವಗೌಡ ಅಕ್ಕಿಆಲೂರಿನಲ್ಲಿ ಬೀಜಗೊಬ್ಬರ ತೆಗೆದುಕೊಂಡು ಹಾನಗಲ್ ಮಾರ್ಗವಾಗಿ ಯಳ್ಳೂರಿಗೆ ಹೋಗುವಾಗ ಈ ಘಟನೆ ನಡೆದಿದೆ. ಮಹದೇವಗೌಡ ತಡಸ-ಗೊಂದಿ ರಸ್ತೆ ಬಳಿ ಇದ್ದ ಚಹಾದ ಅಂಗಡಿಯಲ್ಲಿ ಚಹಾ ಕುಡಿದು ವಾಪಾಸ್ ರಸ್ತೆ ದಾಟಿಕೊಂಡು ಹೋಗುತ್ತಿದ್ದಾಗ ಹಾನಗಲ್ ಕಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಚಾಲಕನನ್ನು ಹಾನಗಲ್ ಹಾಗೂ ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಸಂಬಂಧ ನೀಲಕಂಠಗೌಡ ಪಾಟೀಲ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾನಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿಗ್ಗಾವಿ: ತಾಲೂಕಿನ ಮುಗಳಿ ಗ್ರಾಮಸ್ಥರು ಸರ್ಕಾರಿ ಪ್ರೌಢಶಾಲೆ ನಿರ್ಮಾಣದ ಜಾಗೆಗೆ ನಿರಾಕ್ಷೇಪಣ ಪತ್ರ ನೀಡಲು ಸೂಚಿಸಬೇಕೆಂದು ಒತ್ತಾಯಿಸಿ ಶಿರಸ್ತೇದಾರ್ ವಿಶ್ವನಾಥ ತಿತ್ತಿ ಅವರಿಗೆ ಮನವಿ ಸಲ್ಲಿಸಿದರು.

ಪ್ರೌಢಶಾಲೆ ನಿರ್ಮಾಣಕ್ಕೆ ನಿರಾಕ್ಷೇಪಣ ಪತ್ರ ನೀಡಲು ಗ್ರಾಮಸ್ಥರ ಒತ್ತಾಯ

ಶಿಗ್ಗಾವಿ : ಸರ್ಕಾರಿ ಪ್ರೌಢಶಾಲೆ ನಿರ್ಮಾಣದ ಜಾಗೆಗೆ ನಿರಾಕ್ಷೇಪಣ ಪತ್ರ ನೀಡಲು ಬನ್ನೂರ ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ಸೂಚಿಸಬೇಕೆಂದು ಒತ್ತಾಯಿಸಿ ಮುಗಳಿ ಗ್ರಾಮಸ್ಥರು ತಹಶೀಲ್ದಾರ್ ಪರವಾಗಿ ಶಿರಸ್ತೇದಾರ್ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮದಲ್ಲಿ 2022-23ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿದೆ.

ಸದರಿ ಪ್ರೌಢಶಾಲೆಯ ತರಗತಿಗಳು ಪ್ರಾಥಮಿಕ ಶಾಲೆಯ ಕೊಠಡಿಗಳಲ್ಲಿ ಜರುಗುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರೌಢಶಾಲೆಗೆ ಪ್ರತ್ಯೇಕ ಕೊಠಡಿಗಳ ನಿರ್ಮಾಣ ಅಗತ್ಯವಿದೆ. ಅದಕ್ಕಾಗಿ ಗ್ರಾಮದ ಸರ್ವೇ ನಂಬರ್ 95ರಲ್ಲಿ ಸಾಮಾಜಿಕ ಅರಣ್ಯ ಇಲಾಖೆಗೆ ಒಳಪಡುವ ಖಾಲಿ ಜಾಗವಿದೆ. ಈ ಜಾಗೆಯ ಎರಡೂವರೆ ಎಕರೆ ವಿಸ್ತೀರ್ಣದಷ್ಟು ಖುಲ್ಲಾ ಜಾಗೆಯನ್ನು ಪ್ರೌಢಶಾಲೆಗೆ ಒದಗಿಸಲು ಅರಣ್ಯ ಇಲಾಖೆಯ ಅಧಿಕಾರಿಗಳು ಮೌಖಿಕವಾಗಿ ಒಪ್ಪಿರುವರು. ತಾವು ಬನ್ನೂರ ಗ್ರಾಮ ಪಂಚಾಯತ್ ವ್ಯಾಪ್ತಿಯ ಈ ಅರಣ್ಯ ಜಾಗೆಗೆ ಗ್ರಾಮ ಪಂಚಾಯತಿಯ ಆಡಳಿತಾಧಿಕಾರಿಗಳಿಗೆ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನಿರಾಕ್ಷೇಪಣ ಪತ್ರ ನೀಡುವಂತೆ ಸೂಚಿಸಬೇಕೆಂದು ಆಗ್ರಹಿಸಿದರು. ಗ್ರಾಮದ ಬಸಪ್ಪ ಭದ್ರಶೆಟ್ಟಿ, ಯಲ್ಲಪ್ಪ ಆರಳಿಕಟ್ಟಿ, ಮಹಾದೇವಪ್ಪ ಕಾಮನಹಳ್ಳಿ, ಬಸನಗೌಡ ಪಾಟೀಲ ಹಾಗೂ ನಿಂಗಪ್ಪ ಸಕ್ರಿ ಇದ್ದರು.



ಅಳ್ನಾವರ: ಬೇಸಿಗೆ ರಜೆ ಮುಗಿದು ಶಾಲೆಗಳು ಪುನರಾರಂಭಗೊಂಡಿರುವ ಶುಕ್ರವಾರ ಮಕ್ಕಳು ಉತ್ಸಾಹದಿಂದ ಶಾಲೆಗಳಿಗೆ ತೆರಳುತ್ತಿರುವದು ಅಳ್ನಾವರದಲ್ಲಿ ಕಂಡು ಬಂದಿತು. ಇಲಾಖೆಯ ನಿರ್ದೇಶನದಂತೆ ಜೂನ್ ಒಂದರಂದು ಶಾಲಾ ಪ್ರಾರಂಭೋತ್ಸವವನ್ನು ವಿಜೃಂಭಣೆಯಿಂದ ನಡೆಸಲು ಪೂರ್ವ ಸಿದ್ಧತೆಯನ್ನು ಶಿಕ್ಷಕರು ಮಾಡಿಕೊಳ್ಳುತ್ತಿದ್ದು ಅಂದೇ ಪುಸ್ತಕ ವಿತರಣೆಯೂ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ಜಿಲ್ಲಾ ಪಂಚಾಯತ್ ಸಿಇಒ ದಲ್ಜೀತ್ ಕುಮಾರ ಹೇಳಿಕೆ

ಕುಡಿಯುವ ನೀರು, ಶಿಕ್ಷಣ, ಆರೋಗ್ಯಕ್ಕೆ ಒತ್ತು

ಹಾವೇರಿ: ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಕುಡಿವ ನೀರು, ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡಲಿದ್ದೇವೆ ಎಂದು ನೂತನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್ಜೀತ್ ಕುಮಾರ ಹೇಳಿದರು.

ಶುಕ್ರವಾರ ಜಿಲ್ಲಾ ಪಂಚಾಯಿತಿಯ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಈಗಾಗಲೇ ಸಭೆ ನಡೆಸಿದ್ದು, 65 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡುಬಂದ ಹಿನ್ನೆಲೆಯಲ್ಲಿ 77 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದುಕೊಂಡು ನೀರು ಪೂರೈಕೆ ಮಾಡಲಾಗುತ್ತಿದೆ. ಪ್ರಸ್ತುತ ಜಿಲ್ಲೆಯ ಯಾವುದೇ ಭಾಗದಲ್ಲೂ ಕುಡಿಯುವ ನೀರಿನ ತೀವ್ರ ಸಮಸ್ಯೆ ಇಲ್ಲ ಎಂದರು.

ತಡಸ ಹಾಗೂ ಆಣೂರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಫೇಸ್ -1 ಮತ್ತು ಫೇಸ್-2 ಕಾಮಗಾರಿಗಳನ್ನು ಕ್ರಮವಾಗಿ ಜೂನ್ ಮೊದಲ ವಾರ ಹಾಗೂ ಜುಲೈ ಮೊದಲ ವಾರದಲ್ಲಿ ಆರಂಭಿಸಲಾಗುವುದು. ಎರಡೂ ಪ್ರದೇಶಗಳಿಗೆ ಭೇಟಿ ನೀಡಿ ಈಗಾಗಲೇ ಪರಿಶೀಲನೆ ನಡೆಸಿದ್ದೇನೆ ಎಂದು ಹೇಳಿದರು.

ಜಿಲ್ಲೆಯಾದ್ಯಂತ ಸುಮಾರು 600 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಈ ಪೈಕಿ 163 ಘಟಕಗಳನ್ನು ದುರಸ್ತಿ ಮಾಡಲಾಗಿದೆ.



ಅಧಿಕಾರಿಗಳೊಂದಿಗೆ ಶೀಘ್ರ ಚರ್ಚೆ

ತಡಸ ಮತ್ತು ಆಣೂರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಸ್ಥಳೀಯ ಮಟ್ಟದಲ್ಲಿ ರಸ್ತೆ, ಖಾಸಗಿ ಜಾಗ ಹಾಗೂ ಪೈಪ್‌ಲೈನ್ ಅಳವಡಿಕೆ ಸಂಬಂಧಿತ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಹಂಸಭಾವಿ ಭಾಗದ ಯೋಜನೆಗೆ ಅರಣ್ಯ ಭೂಮಿ ಸಂಬಂಧಿತ ಸಮಸ್ಯೆ ಇತ್ತು, ಈ ಕುರಿತು ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ, ಕೆಲವೇ ದಿನಗಳಲ್ಲಿ ಅದಕ್ಕೆ ಇರುವ ಸಮಸ್ಯೆ ನಿವಾರಣೆಗೊಂಡು ಕೆಲಸ ಆರಂಭವಾಗಲಿದೆ ಎಂದು ಹೇಳಿದರು.

106 ಘಟಕಗಳು ಇನ್ನೂ ರಿಪೇರಿ ಆಗಬೇಕಿದೆ. ಸಣ್ಣ ಪುಟ್ಟ ರಿಪೇರಿ ಇದ್ದಲ್ಲಿ ಮಾಡುತ್ತೇವೆ. ಕೆಲವು ಘಟಕಗಳು ಈಗಾಗಲೇ 8-10 ವರ್ಷಗಳಷ್ಟು ಹಳೆಯದಾಗಿದ್ದು, ಅವುಗಳ ದುರಸ್ತಿಗೆ ಅನುದಾನದ ಕೊರತೆ ಇದೆ. ಕೆಲವನ್ನು ತೆಗೆದುಹಾಕಿ ಹೊಸದನ್ನು ಅನುಷ್ಠಾನ ಮಾಡಬೇಕಿದೆ. ಈ ಕುರಿತು ಅನುದಾನದ ಲಭ್ಯತೆ ಆದರಿಸಿ ಕ್ರಮಕ್ಕೆ ಮುಂದಾಗಲಿದ್ದೇವೆ ಎಂದು ಹೇಳಿದರು.

ನರೇಗಾ ಯೋಜನೆಯಡಿ ಕಾರ್ಮಿಕರ ಬಾಕಿ ಇರುವ ಸುಮಾರು 6ಕೋಟಿ ರೂ. ವೇತನವನ್ನು ಬಿಡುಗಡೆ ಮಾಡಲಾಗಿದೆ. ಆದರೆ 78 ಕೋಟಿ ರೂ. ಮೌಲ್ಯದ ಸಾಮಗ್ರಿಗಳ ಬಿಲ್‌ಗಳು ಇನ್ನೂ ಬಾಕಿ ಇವೆ. ಜುಲೈ 1ರಿಂದ ವಿಬಿಜಿ ಮತ್ತು ರಾಮ್‌ಜಿ ಯೋಜನೆಗಳನ್ನು ಆರಂಭಿಸಲಾಗುವುದು. ಇನ್ನು ಇತ್ತೀಚೆಗೆ ನಡೆದ ಪಿಡಿಒ ಆತ್ಮಹತ್ಯೆ ಪ್ರಕರಣ ದುರದೃಷ್ಟಕರ ಸಂಗತಿಯಾಗಿದೆ ಎಂದು ಪ್ರತಿಕ್ರಿಯಿಸಿದರು.

ಈಗಾಗಲೇ ಪಿಡಿಒಗಳು ಗ್ರಾಮಸ್ಥರ ಸಮಸ್ಯೆ ಆಲಿಕೆಗೆ ಕಚೇರಿಯಲ್ಲಿ ಇರಬೇಕು, ಪ್ರತಿ ತಿಂಗಳಿಗೆ ಒಮ್ಮೆಯಾದರೂ ಗ್ರಾಮಸಭೆ ನಡೆಸಬೇಕು. ಇನ್ನು ಗ್ರಾಮಸ್ಥರು ಸಲ್ಲಿಸಿದ ಸಮಸ್ಯೆಗಳ ಮನವಿಗಳ ಕುರಿತು ದಾಖಲಾತಿ ನಿರ್ವಹಿಸಿ, ಅವುಗಳನ್ನು ತುರ್ತಾಗಿ ವಿಲೇ ಮಾಡುವ ನಿಟ್ಟಿನಲ್ಲಿ ನಿರ್ದೇಶನ ನೀಡಲಾಗಿದೆ.

ಇನ್ನು ಮಳೆಗಾಲ ಆರಂಭಗೊಂಡ ಬೆನ್ನಲ್ಲೇ ಜಿಲ್ಲೆಯ ಕೆಲವೆಡೆ ಶಾಲಾ ಮೇಲ್ಛಾವಣಿಗಳು ಹಾರಿಹೋದ ಕುರಿತು ಮಾಹಿತಿ ಬಂದಿದೆ. ಶಾಲಾ ಸುರಕ್ಷತೆ, ಸರ್ಕಾರಿ ಕಟ್ಟಡಗಳ ನಿರ್ವಹಣೆಗೆ ಎನ್‌ಡಿಆರ್‌ಎಫ್ ಅಡಿ ಅನುದಾನ ಕೋರಿಕೆ ಕುರಿತು ಜಿಲಾಧಿಕಾರಿಗಳ ಜತೆ ಚರ್ಚಿಸಿ ನಿರ್ಧರಿಸಲಾಗುವುದು ಎಂದರು.

ಈ ವೇಳೆ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಡಾ.ಪುನಿತ್ ಇದ್ದರು.

ವಿದ್ಯುತ್ ವಿತರಣಾ ವ್ಯವಸ್ಥೆ ಖಾಸಗೀಕರಣವಾಗದಿರಲಿ

ರಟ್ಟಿಹಳ್ಳಿ: ಹಾವೇರಿ ಜಿಲ್ಲೆಯಲ್ಲಿ ಮುಂಗಾರು ಬಿತ್ತನೆಗೆ ಉತ್ತಮ ಮಳೆ ಆಗಿರುವುದರಿಂದ ಬಿತ್ತನೆ ಕಾರ್ಯ ಚುರುಕುಗೊಂಡಿದೆ. ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ, ಭೂಮಿ ಉಳುವ ಟ್ರ್ಯಾಕ್ಟರ್‌ಗಳಿಗೆ ಡೀಸೆಲ್ ಕೊರತೆಯಿಂದ ಜಿಲ್ಲೆಯ ವಿವಿಧ ಬಂಕಗಳಿಂದ ಡೀಸೆಲ್ ಸಿಗದೆ ರೈತರು ಪರದಾಡುವಂತಾಗಿದೆ.

ಬಿತ್ತನೆ ಬೀಜ, ರಸಗೊಬ್ಬರ, ಮತ್ತು ಡೀಸೆಲ್ ಸಮರ್ಪಕವಾಗಿ ಪೂರೈಕೆಯಾಗುವಂತೆ ಮಾಡಬೇಕು ಎಂದು ಅಖಿಲ ಕರ್ನಾಟಕ ರೈತಸಂಘದ ರಾಜ್ಯಾಧ್ಯಕ್ಷ ಹನುಮಂತಪ್ಪ ಭ.ದೀವಗಿಹಳ್ಳಿ ಹೇಳಿದರು.

ಪಟ್ಟಣದ ಮಹಾಲಕ್ಷ್ಮಿ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿ ರಟ್ಟೀಹಳ್ಳಿ ತಾಲೂಕು ತಹಶೀಲ್ದಾರರು ಹಾಗೂ ದಂಡಾಧಿಕಾರಿಗಳುಇವರ ಮುಖಾಂತರ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದರು.

ರೈತರಿಗೆ ರಸಗೊಬ್ಬರ ದಾಸ್ತಾನುದಿಂದ ರೂಡಿ. ಎ.ಪಿ. ಯೂರಿಯಾದ ರಸಗೊಬ್ಬರ ಸಿಗುತ್ತಿಲ್ಲ, ಯುದ್ಧದ ನೆಪದಿಂದ ಸಮಯಕ್ಕೆ ರಸಗೊಬ್ಬರ ಸಿಗುತ್ತಿಲ್ಲ. ಬಿತ್ತನೆ ಪ್ರಾರಂಭದಲ್ಲಿಯೇ ಸಕಾಲಕ್ಕೆ ಬೀಜ ರಸಗೊಬ್ಬರ ಡೀಸೆಲ್ ಪೂರೈಕೆ ಮಾಡಬೇಕು. ಕಳೆದ ವರ್ಷ ಮೆಕ್ಕೆಜೋಳ ಹೆಚ್ಚು ಬೆಳೆದು ಅತಿಯಾದ ಮಳೆಯಿಂದ ಮತ್ತು ಕಳೆಯಿಂದ ಸರಿಯಾದ ಬೆಳೆ ಬರದೆ ಮತ್ತು ಸರಿಯಾದ ಮಾರುಕಟ್ಟೆ ದರ ಸಿಗದೆ ರೈತರು ಈ ವರ್ಷ ಮೆಕ್ಕೆಜೋಳ ಕಡಿಮೆ ಮಾಡಿ ಈ ಬಾರಿ ಅತಿ ಹೆಚ್ಚು ಸೋಯಾಬೀನ್ ಬೀಜ ಖರೀದಿಗೆ ಮುಂದಾಗಿದ್ದಾರೆ. ರೈತರ ಬೇಡಿಕೆಗೆ ಅನುಗುಣವಾಗಿ ಸೋಯಾಬೀನ್ ಬೀಜ ವಿತರಣೆ ಮಾಡಬೇಕು ಎಂದರು.

ರಾಜ್ಯದಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗೀಕರಣ ಮಾಡುತ್ತಿರುವು ಖಂಡನೀಯವಾಗಿದೆ ಇದರಿಂದ ರೈತರ ಕೃಷಿಪಂಪಸೆಟ್, ಗೃಹಜ್ಯೋತಿ ಯೋಜನೆಗೆ, ನೇಮಕಾತಿ ಮಾಡುವಾಗ ಮೀಸಲಾತಿಯಲ್ಲಿ, ಗ್ರಾಮಗಳ ಕಡೆಗಣನೆ, ಕೇವಲ ಲಾಭದ ಚಿಂತೆ, ಸಾರ್ವಜನಿಕರ ಹಿತಚಿಂತನೆಯಿಂದ ಮತ್ತು ವಿದ್ಯುತ್ ಸ್ವಾತಂತ್ರ್ಯವನ್ನು ರಕ್ಷಿಸಲು ಖಾಸಗಿ ಕಂಪನಿಯವರಿಗೆ ಪರವಾನಿಗೆಯನ್ನು ನೀಡಬಾರದು ಎಂದು ಆಗ್ರಹಿಸಿದ್ದರು.

ಬಿ.ಡಿ.ಪಾಟೀಲ, ಅಶೋಕ ಶಿಡಗನಾಳ, ಶಿವಪ್ಪ ಚನ್ನಬಸಪ್ಪಜವನರ, ಬಸವರಾಜ ಕೆಳಗಿನಮನಿ, ರವಿ ಮಾಳಗೇರ, ಮಜಾ ಮ್ಯಾಚರ್, ಚನ್ನಮ್ಮ ಸಾತೇನಹಳ್ಳಿ, ಹಲಪ್ಪಚಾಡರ, ರವಿಚಮದ್ರ ಕೋಟಿಹಾಳ, ಹರೀಶ ದೀವಿಗೀಹಳ್ಳಿ ಇದ್ದರು.



ಕುಡಿಯುವ ನೀರು ಪೂರೈಕೆಗೆ ಗ್ರಾಮಸ್ಥರ ಆಗ್ರಹ

ರಾಣೇಬೆನ್ನೂರ: ಸಮರ್ಪಕ ಕುಡಿಯುವ ನೀರು ಪೂರೈಸುವಂತೆ ಸೋಮಲಾಪುರ ಗ್ರಾಪಂ ಗೆ ತಾಲೂಕಿನ ಉದಗಟ್ಟಿ ಪ್ಲಾಟ್ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕಳೆದ ಎರಡು ದಿನಗಳಿಂದ ಬೋರ್ ವೆಲ್ ಮೋಟಾರ್ ಕೆಟ್ಟಿದ್ದು, ಅದನ್ನು ಸರಿಪಡಿಸಿ, ನೀರು ಪೂರೈಸುವ ಗೋಜಿಗೆ ಹೋಗುತ್ತಿಲ್ಲ ಗ್ರಾಪಂ ಅಧಿಕಾರಿಗಳು ಇದರಿಂದ ಗ್ರಾಮದಲ್ಲಿ ನೀರಿನ ಸಮಸ್ಯೆ ಉಲ್ಬಣಗೊಂಡಿದೆ.

ಕಳೆದ ತಿಂಗಳು ಮೋಟಾರ್ ಕೆಟ್ಟಿತ್ತು, ಅದನ್ನು ಸರಿಪಡಿಸಿ ನಾಲ್ಕೈದು ದಿನಗಳ ನಂತರ ನೀರು ಬಿಡಲಾಗಿತ್ತು. ಪ್ರತಿ ಬಾರಿಯೂ ಮೋಟಾರ್ ಕೆಟ್ಟರೆ, ನಾಲ್ಕೈದು ದಿನಗಳ ಕಾಲ ಗ್ರಾಮಕ್ಕೆ ನೀರು ಬಿಡುವುದಿಲ್ಲ, ಜನ-ಜಾನುವಾರಗಳು ನೀರಿಲ್ಲದೆ ಪರಿತಪಿಸಬೇಕಾಗುತ್ತದೆ.

ಕುಡಿಯಲು ಯೋಗ್ಯವಿಲ್ಲದ ಹೊಲ, ಗದ್ದೆಗಳಿಗೆ ತೆರಳಿ ಅಲ್ಲಿಯ ಬೋರ್ ವೆಲ್‌ಗಳಲ್ಲಿ ದೊರೆಯುವ ಕಲುಷಿತ ನೀರು ತಂದು ಕುಡಿಯುವ ಪರಿಸ್ಥಿತಿ ಇದೆ.

ಮೋಟಾರ್ ಸರಿಪಡಿಸಿ ನೀರು ಬಿಡಿ ಅಂತ ಅಧಿಕಾರಿಗಳಿಗೆ ಕೇಳಿದರೆ, ಮೋಟಾರ್ ರಿಪೇರಿ ಮಾಡುವವರು ಇಲ್ಲ, ಅವರನ್ನು ಕರೆಸಿ, ಮೋಟಾರ್ ದುರಸ್ತಿಪಡಿಸಿದ ನಂತರ ನೀರು ಬಿಡುತ್ತೇವೆ. ಅಲ್ಲಿ ತನಕ ಕಾಯಬೇಕು. ಇಲ್ಲವೆ ನದಿಗೆ ಹೋಗಿ ನೀರು ತಂದು ಕುಡಿಯಿರಿ ಎಂದು ಗ್ರಾಪಂ ಅಧಿಕಾರಿಗಳು ಹೇಳುತ್ತಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದಲ್ಲಿ ಸ್ವಚ್ಛತೆ ಮರಿಚಿಕೆಯಾಗಿದೆ. ಚರಂಡಿಗಳು ದುರ್ವಾಸನೆ ಇಟ್ಟಿವೆ. ಖಾಲಿ ನಿವೇಶನಗಳು ಜಾಸ್ತಿ ಇದ್ದು, ಗಿಡಗಂಟೆ ಬೆಳೆದಿದ್ದು, ಸೊಳ್ಳೆ, ವಿಷಜಂತುಗಳ ಕಾಟ ಜಾಸ್ತಿಯಾಗಿದೆ. ಈ ಸಮಸ್ಯೆಗಳ ಕುರಿತು ಅಧಿಕಾರಿಗಳ ಗಮನಕ್ಕೂ ತಂದರೂ, ಕ್ಯಾರೆ ಎನ್ನುತ್ತಿಲ್ಲ.

ಜನವಸತಿ ಪ್ರದೇಶದಲ್ಲಿ ಕುರಿ ಶೆಡ್ ನಿರ್ಮಾಣ ಮಾಡಿ ಕುರಿ ಸಾಕಾಣಿಕೆ ಮಾಡಕೂಡದು ಎಂಬ ನಿಯಮ ಇದ್ದರೂ, ಕೂಡಾ ಗ್ರಾಮದಲ್ಲಿ ಕೆಲವರಿಗೆ ಕುರಿ ಶೆಡ್ ನಿರ್ಮಾಣಕ್ಕೆ ಅವಕಾಶ ನೀಡಿದ್ದಾರೆ.

ಕೂಡಲೇ ಬೋರ್ ವೆಲ್ ಮೋಟಾರ್ ಸರಿಪಡಿಸಿ, ನೀರು ಬಿಡಬೇಕು. ಗ್ರಾಮದಲ್ಲಿ ಸ್ವಚ್ಛತೆಗೆ ಆದ್ಯತೆ ಕೊಡಬೇಕು ಹಾಗೂ ಅನಧಿಕೃತ ವಾಗಿ ನಿರ್ಮಾಣ ಮಾಡಿದ ಕುರಿ ಶೆಡ್‌ಗಳನ್ನು ತೆರವುಗೊಳಿಸಬೇಕು. ಇಲ್ಲವೆಂದರೆ ಗ್ರಾಪಂ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಗ್ರಾಮಸ್ಥರು ಎಚ್ಚರಿಸಿದ್ದಾರೆ.



ವಿವಿಧ ಕಾಮಗಾರಿಗೆ ಚಾಲನೆ



ಹಾನಗಲ್ಲ: ತಾಲೂಕಿನ ಶೀಗಿಹಳ್ಳಿ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 20 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಿದರೆ ವ್ಯಾಪಾರ, ವಹಿವಾಟು ಸೇರಿದಂತೆಆರ್ಥಿಕಚಟುವಟಿಕೆಗಳಿಗೆ ಅನುಕೂಲವಾಗಲಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಸಾಕಷ್ಟು ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಅವಕಾಶ ಇತ್ತು. ಆದರೆ ಯೋಜನೆಯ ಸ್ವರೂಪ ಬದಲಿಸಿದ್ದರಿಂದ ಅನಾನುಕೂಲ ಉಂಟಾಗಲಿದೆ. ಅಭಿವೃದ್ಧಿ ಕಾರ್ಯ ಹಾಗೂ ದುಡಿಯುವ ಕೈಗಳಿಗೆ ಉದ್ಯೋಗಾವಕಾಶ ಇನ್ನು ಮುಂದೆ ಕಷ್ಟಸಾಧ್ಯವಾಗಲಿದೆ ಎಂದು ಶಾಸಕ ಮಾನೆ ತಿಳಿಸಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಮಲ್ಲಪ್ಪ ಕೋರಿ, ಭರಮಣ್ಣ ಶಿವೂರ, ಅನಿತಾ ಶಿವೂರ, ಈರಣ್ಣ ಬೈಲವಾಳ, ಪ್ರಕಾಶ ನಂದಿಹಳ್ಳಿ, ಪ್ರಕಾಶ ಕೋರಿ, ಶಿವಯೋಗಿ ನರೇಗಲ್, ನಿಂಗಪ್ಪ ನರೇಗಲ್, ಬಸಣ್ಣ ಕಳಸೂರ, ರಾಜೂ ಅಜಗುಂಡಿ, ಬಸವರಾಜ ಬಂಕಾಪೂರ ಸೇರಿದಂತೆ ಇನ್ನೂ ಹಲವರು ಇದ್ದರು.

ಧಾರ್ಮಿಕ ಸಂಸ್ಕಾರ ವ್ಯಕ್ತಿತ್ವವನ್ನು ರೂಪಿಸುತ್ತದೆ

ಹಾವೇರಿ: ಒಂದು ಉತ್ತಮ ಭವಿಷ್ಯದ ಭರವಸೆಯನ್ನು ಇಂದಿನ ಆಧುನಿಕ ಶಿಕ್ಷಣ ನೀಡುವುದಿಲ್ಲ, ಲೌಕಿಕ ವಿದ್ಯೆಯೊಂದಿಗೆ ಶಾಸ್ತ್ರಗಳ ಜ್ಞಾನ ಹಾಗೂ ಧಾರ್ಮಿಕ ಸಂಸ್ಕಾರ ವ್ಯಕ್ತಿತ್ವಕ್ಕೆ ಪರಿಪೂರ್ಣತೆ ನೀಡುತ್ತದೆ ಎಂದು ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥರು ತಿಳಿಸಿದರು.

ಶುಕ್ರವಾರ ಕರಜಗಿ ಗ್ರಾಮದಲ್ಲಿ ಆರಂಭಿಸಲಾಗಿರುವ ವಿಶ್ವೇಶತೀರ್ಥ ಗುರುಕುಲದ ಪ್ರಥಮ ವರ್ಷದ ಪಠ್ಯಕ್ರಮಕ್ಕೆ ಚಾಲನೆ ನೀಡಿದ ಅವರು ಸಂಕಲ್ಪ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಗುರುಕುಲಕ್ಕೆ ಸೇರುವ ಮಕ್ಕಳ ಭವಿಷ್ಯದ ಬಗ್ಗೆ ಚಿಂತೆ ಬೇಡ. ಸಕಾರಾತ್ಮಕ ಚಿಂತನೆ ಹಾಗೂ ಆತ್ಮವಿಶ್ವಾಸ ಮೂಡಿಸುವ ಗುರುಕುಲ ಶಿಕ್ಷಣ ಮಕ್ಕಳ ಸರ್ವತೋಮುಖ ಉನ್ನತಿಯನ್ನು ಕಲ್ಪಿಸುತ್ತದೆ ಎಂದರು.

ಗುರುಕುಲ ಶಿಕ್ಷಣ ನಗರಗಳಿಗೆ ಮಾತ್ರ ಸೀಮಿತವಾಗದೆ, ಗ್ರಾಮೀಣ ಭಾಗಕ್ಕೂ ವಿಸ್ತರಿಸಬೇಕು. ನಮ್ಮ ಆಧ್ಯಾತ್ಮಿಕ ಸಾಧನೆಗೆ ನಾವೇ ಮುಂದಾಗಬೇಕು. ಸಮಾಜದಲ್ಲಿ ಧರ್ಮ ಜಾಗೃತಿ ಹಾಗೂ ಧಾರ್ಮಿಕ ಸ್ಥಳಗಳ ರಕ್ಷಣೆಗಾಗಿ ಗುರುಕುಲ ಶಿಕ್ಷಣ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಅನ್ವಯ ಗುರುಕುಲದ ನೂತನ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಿ ಅನುಗ್ರಹಿಸಿದರು.

ಕರ್ಜಗಿ ಗ್ರಾಮದ ಶ್ರೀ ಪೇಜಾವರ ಮಠದ ಅಂಗ ಸಂಸ್ಥೆಯಾದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಂಸ್ಥಾನ ಪೂಜೆಯನ್ನು ಶ್ರೀಗಳು ನೆರವೇರಿಸಿದರು. ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ತೀರ್ಥಪ್ರಸಾದ ವಿತರಣೆ ಕೈಗೊಳ್ಳಲಾಯಿತು. ವ್ಯವಸ್ಥಾಪಕರಾದ ಅಕ್ಷಯ ಮನ್ನಾರಿ ಹಾಗೂ ಧೀರೇಂದ್ರ ಲಕ್ಷ್ಮೇಶ್ವರ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು. ವೆಂಕಟೇಶ್ ಆಚಾರ್ ಹತ್ತಿಮತ್ತೂರು, ವಸಂತಮೋಕ್ತಾಲಿ, ರವಿ ಮುಧೋಳ್, ಉದಯ್ ಕುಲಕರ್ಣಿ, ಮುರಳಿಧರ್ ಮಠದ, ರಾಮಚಂದ್ರ ರಾಯರು, ಪರಶುರಾಮ್, ಪದ್ಮರಾಜ, ಗೋಪಾಲ್, ರಾಜೇಶ ಮುಂಡಗೋಡ ಸೇರಿದಂತೆ

ಶ್ರೀ ಹರಿ ವಿಠ್ಠಲಾಶ್ರಮದ ಪ್ರಮುಖರು, ಗ್ರಾಮಸ್ಥರು ಪಾಲ್ಗೊಂಡಿದ್ದರು.



ವೈಜ್ಞಾನಿಕ ಅಭಿವೃದ್ಧಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದು

ಹಾವೇರಿ: ವೈಜ್ಞಾನಿಕ ನವೋದ್ಯಮ, ಅಂತರಶಾಸ್ತ್ರೀಯ ಸಂಶೋಧನೆ ಹಾಗೂ ಮುಂದಿನ ತಲೆಮಾರಿನ ವೈಜ್ಞಾನಿಕ ಅಭಿವೃದ್ಧಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರಮಹತ್ವದ್ದಾಗಿದೆ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕ ಡಾ.ರಮೇಶ್ ರಟಗೇರಿ ಹೇಳಿದರು.

ನಗರದ ಗುದ್ಲೆಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ, ಸಸ್ಯಶಾಸ್ತ್ರ ವಿಭಾಗದ ವತಿಯಿಂದ ಜಾಗತಿಕ ಬದಲಾವಣೆಗೆ ನವೋದ್ಯಮಗಳ ಚಾಲನೆ ಎಂಬ ವಿಷಯದ ಮೇಲೆ ಹಮ್ಮಿಕೊಂಡಿದ್ದ ಏಕದಿನ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಯುವ ಸಂಶೋಧಕರು ಹಾಗೂ ವಿದ್ಯಾರ್ಥಿಗಳು ನವೀನ ಸಂಶೋಧನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಾಜ ಹಾಗೂ ಜಾಗತಿಕ ಅಭಿವೃದ್ಧಿಗೆ ಕೊಡುಗೆ ನೀಡಬೇಕೆಂದು ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ, ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ದೇವರಾಜನ್ ತಂಗದುರೈ ಮುಖ್ಯ ಉಪನ್ಯಾಸ ನೀಡಿ, ಜೀವ ವಿಜ್ಞಾನ, ಜೈವ ತಂತ್ರಜ್ಞಾನ, ಸುಸ್ಥಿರ ಜೈವಿಕ ಸಂಶೋಧನೆ ಹಾಗೂ ನವೋದ್ಯಮ ಆಧಾರಿತ ವೈಜ್ಞಾನಿಕ ಪ್ರಗತಿಯ ಇತ್ತೀಚಿನ ಬೆಳವಣಿಗೆಗಳನ್ನು ವಿವರಿಸಿದರು. ಪರಿಸರ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ವೈಜ್ಞಾನಿಕ ಸಂಶೋಧನೆಯ ಮೂಲಕ ಪ್ರಾಯೋಗಿಕ ಪರಿಹಾರಗಳನ್ನು ಕಂಡುಹಿಡಿಯಲು ಪ್ರೇರೆಪಿಸಿದರು.

ಸಮ್ಮೇಳನದಲ್ಲಿ ಆಹ್ವಾನಿತ ತಜ್ಞರ ಉಪನ್ಯಾಸಗಳೂ ನಡೆದವು. ಪುಣೆಯ ಬೋಟಾನಿಕಲ್ ಸರ್ವೇ ಆಫ್ ಇಂಡಿಯಾದ ಸಂಶೋಧನಾ ಸಹಾಯಕ ಡಾ.ಜಗದೀಶ ದಲವಿ, ಮಾತನಾಡಿ ಜೀವ ವೈವಿಧ್ಯ ಸಂರಕ್ಷಣೆ ಹಾಗೂ ಆಧುನಿಕ ಸಸ್ಯಶಾಸ್ತ್ರೀಯ ಸಂಶೋಧನೆ ಕುರಿತು ಉಪಯುಕ್ತ ಮಾಹಿತಿಯನ್ನು ಹಂಚಿಕೊಂಡರು. ಚಿತ್ತೂರಿನ ದಿ ಅಪೋಲೋ ವಿಶ್ವವಿದ್ಯಾಲಯದ ಸಹಾಯಕ ನಿರ್ದೇಶಕ ಡಾ.ಪ್ರವೀಣ್ ಹೂಗಾರ ಮಾತನಾಡಿ, ಜೀವ ವಿಜ್ಞಾನ ಕ್ಷೇತ್ರದಲ್ಲಿನ ಅಂತರಶಾಸ್ತ್ರೀಯ ಸಂಶೋಧನೆ ಹಾಗೂ ಉದಯೋನ್ಮುಖ ಅವಕಾಶಗಳ ಕುರಿತು ಮಾಹಿತಿ ನೀಡಿದರು.



ಅಧ್ಯಕ್ಷತೆಯನ್ನು ಜಿ.ಎಚ್. ಕಾಲೇಜಿನ ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಸ್.ಎಲ್. ಬಾಳೆಹೊಸೂರು ವಹಿಸಿದ್ದರು. ಈ ಸಮ್ಮೇಳನದಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ಗೋವಾ, ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಂದ ಸುಮಾರು 150ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಶೈಕ್ಷಣಿಕ ಅಧಿವೇಶನಗಳಲ್ಲಿ 32 ಸಂಶೋಧನಾ ಪ್ರಬಂಧಗಳನ್ನು ಮೌಖಿಕ ಹಾಗೂ ಪೋಸ್ಟರ್ ಪ್ರಸ್ತುತಿಗಳ ಮೂಲಕ ಮಂಡಿಸಲಾಗಿದ್ದು, 11 ಸಂಶೋಧನಾ ಪ್ರಬಂಧಗಳನ್ನು ಆನ್‌ಲೈನ್ ಮೂಲಕ ಮಂಡಿಸಲಾಯಿತು. ಪ್ರಾಂಶುಪಾಲ ಎಂ.ಎಂ. ಹೊಳ್ಳಿಯವರ ಮಾರ್ಗದರ್ಶನದಲ್ಲಿ, ಡಾ.ಶಿವಾನಂದ ಪಾಯಮಲ್ಲೆ, ಡಾ.ಇ.ಬಿ. ಸೇಡಂಕರ್ ಹಾಗೂ ಐಕ್ಯೂಎಸಿ ಸಂಯೋಜಕಿ ರೂಪಾ ಕೋರೆ ಪಾಲ್ಗೊಂಡಿದ್ದರು.

ಹೊಸ ಡಂಬಳ ಗ್ರಾಮದಲ್ಲಿ ಹಿರಿಯ ನಾಗರಿಕರಿಂದ ನರೇಗಾ ಕೆಲಸಕ್ಕೆ ಬಲ



ಮುಂಡರಗಿ: ತಾಲೂಕಿನ ಡಂಬಳ ಗ್ರಾಪಂ ವ್ಯಾಪ್ತಿಯ ಹೊಸ ಡಂಬಳ ಗ್ರಾಮದ 2026-27ನೇ ಆರ್ಥಿಕ ಸಾಲಿನ ನರೇಗಾ ಸಮುದಾಯ ಬಾಂದಾರ ಹೂಳೆತ್ತುವ ಕಾಮಗಾರಿಯಲ್ಲಿ 12ಕ್ಕೂ ಹೆಚ್ಚು ಜನ 62 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಸಕ್ರೀಯವಾಗಿ ಕೂಲಿಕಾರರಾಗಿ ಭಾಗವಹಿಸುವ ಮೂಲಕ ಮಾದರಿಯಾಗಿ ದುಡಿಮೆಯೇ ದುಡ್ಡಿನ ತಾಯಿ ಎಂಬ ಮಾತಿಗೆ ಸಾಕ್ಷಿಯಾಗಿದ್ದಾರೆ.

ಕೆಲವರು ಕಳೆದ 10 ವರ್ಷಗಳಿಂದ ನರೇಗಾ ಯೋಜನೆಯಲ್ಲಿ ಭಾಗವಹಿಸುತ್ತಾ ಬಂದಿದ್ದು ಬೇಸಿಗೆಯಲ್ಲಿ ಇವರಿಗೆ ನರೇಗಾ ಯೋಜನೆಯೇ ದುಡಿಮೆಯ ಮೂಲವಾಗಿದೆ. ಅಲ್ಲದೇ ನರೇಗಾ ಯೋಜನೆಯಲ್ಲಿರುವ ಹಿರಿಯ ನಾಗರಿಕರಿಗೆ ಅರ್ಧ ಕೆಲಸ ಪೂರ್ಣ ಕೂಲಿನಿಯಮವನ್ನು ಕೂಲಿಕಾರರಾದ ಒಂಟೆಲಪ್ಪ ತಳವಾರ (77), ಯಲ್ಲಪ್ಪ ಕವಲೂರು (68), ಮಹದೇವಪ್ಪ ತಳವಾರ (70), ನಿಂಗವ್ವ ತಳವಾರ (68), ಶಾರದಾ ಕವಲೂರು (64), ಕಮಲವ್ವ ಡೊಳ್ಳಿನ (63), ದೇವಕ್ಕ ತಳವಾರ (62), ಲಕ್ಷ್ಮವ್ವ ಪೂಜಾರ (62), ಹಾಲವ್ವ ಬೇವಿನಮರದ (65), ಸಂಗವ್ವ ಕಾತರಕಿ (64), ರೇಣಮ್ಮ ಪೂಜಾರ (64), ಯಮುನಾಬಿ ನದಾಫ (65) ಸದುಪಯೋಗ ಪಡಿಸಿಕೊಂಡು ಯೋಜನೆಯ ಮಹತ್ವವನ್ನು ಇಳಿವಯಸ್ಸಿನಲ್ಲೂ ಪೂರ್ಣ ಕೆಲಸದೊಂದಿಗೆ ದುಡಿಮೆಯ ಮೂಲಕ ಸಾರಿದ್ದಾರೆ. ಮೂರು ಪ್ರತ್ಯೇಕ ಜಾಗಗಳಲ್ಲಿ ಕೃಷಿ ಇಲಾಖೆ ಹಾಗೂ ಗ್ರಾಪಂ ಮೂಲಕ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಈ ಹಿರಿಯ ನಾಗರಿಕರು ಭಾಗವಹಿಸಿದ್ದಾರೆ.

ನರೇಗಾ ವರದಾನ

ಕೆಲವರಿಗೆ ಅಲ್ಪ ಸ್ವಲ್ಪ ಕೃಷಿ ಜಮೀನಿದ್ದರೆ, ಕೆಲವರು ಕೃಷಿಭೂಮಿ ಇಲ್ಲದ ಗ್ರಾಮೀಣ ನಿವಾಸಿಗಳು. ಹಾಗಾಗಿ ಜಮೀನಿಲ್ಲದವರು ನರೇಗಾ ಕೆಲಸ ಇಲ್ಲದಿದ್ದಾಗ ಬೇರೆಯವರ ಜಮೀನು ಸೇರಿದಂತೆ ಇತರೆಡೆ ಕಾರ್ಮಿಕರಾಗಿ ದುಡಿಯುತ್ತಾರೆ. ಬೇಸಿಗೆಯಲ್ಲಿ ಕೆಲಸದ ಕೊರತೆ ಸಹಜ. ಕೃಷಿ ಜಮೀನಿರುವ ರೈತರು ಹೊಟ್ಟೆಪಾಡಿಗೆ ಬೇರೆ ದುಡಿಮೆ ಅವಲಂಬಿಸಬೇಕಾಗುತ್ತದೆ. ಇಂತಹ ಸಮಯದಲ್ಲಿ ನರೇಗಾ ಕೂಲಿ ಕೆಲಸವೇ ನಮಗೆ ವರದಾನ. ನರೇಗಾ ಯೋಜನೆಯಿಂದ 370 ರೂಪಾಯಿಯ ದುಡಿಮೆ ಸಿಗುತ್ತಿರುವುದು ಹೊಟ್ಟೆಪಾಡಿಗೆ ಆಧಾರ ಎನ್ನುವುದು ಹಿರಿಯ ಕೂಲಿಕಾರ ಒಂಟೆಲಪ್ಪ ತಳವಾರ ಅವರ ಮಾತು.

ಮಹತ್ವಕ್ಕೆ ಸಾಕ್ಷಿ

ಸಭೆ ಮೂಲಕ ಹಾಗೂ ಗ್ರಾಪಂ ಮಟ್ಟದಲ್ಲಿ ಐಇಸಿ ಚಟುವಟಿಕೆಯಡಿ ಪ್ರಚಾರದ ಮೂಲಕ ವಿಶಿಷ್ಟಚೇತನರು, ಹಿರಿಯ ನಾಗರಿಕರು, ಲಿಂಗತ್ವ ಅಲ್ಪಸಂಖ್ಯಾತರಿಗೆ ನರೇಗಾ ಯೋಜನೆಯಡಿ ಕೆಲಸ ನೀಡಲು ಮುತುವರ್ಜಿಯಿಂದ ಸೂಚಿಸಲಾಗಿತ್ತು. ಅದರಂತೆ ಹೊಸಡಂಬಳ ಗ್ರಾಮದ ನರೇಗಾ ಸಮುದಾಯ ಕಾಮಗಾರಿಯಲ್ಲಿ 12ಕ್ಕೂ ಹೆಚ್ಚು ಜನ ಹಿರಿಯ ನಾಗರಿಕರು ಏಕಕಾಲಕ್ಕೆ ಭಾಗವಹಿಸಿರುವುದು ಗ್ರಾಮೀಣ ಭಾಗದಲ್ಲಿ ಯೋಜನೆಯ ಮಹತ್ವಕ್ಕೆ ಸಾಕ್ಷಿಯಾಗಿದೆ ಎಂದು ಮುಂಡರಗಿ ತಾ.ಪಂ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ ವಿಜಯಕುಮಾರ ಬೆಣ್ಣಿ ತಿಳಿಸಿದ್ದಾರೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
09
ಬೆಳಗಾವಿ
ಗರಿಷ್ಠ 29° ಕನಿಷ್ಠ 24°
ಶನಿವಾರ
30 ಮೇ 2026
ಹುಬ್ಬಳ್ಳಿ

ಕಿರು ಸುದ್ದಿ

ತಹಶೀಲ್ದಾರ್ ಸದಾಶಿವ ಮಕ್ಕೋಜಿ ಅಧಿಕಾರ ಸ್ವೀಕಾರ



ಬೈಲಹೊಂಗಲ: ತಾಲೂಕಿನ ನೂತನ ತಹಶೀಲ್ದಾರರಾಗಿ ಸದಾಶಿವ ಮಕ್ಕೋಜಿ ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದರು. ಅಧಿಕಾರ ಸ್ವೀಕಾರದ ಬಳಿಕ ನಗರದ ಸ್ವಾತಂತ್ರ್ಯ ಹೋರಾಟದ ಮಹನೀಯರಾದ ವೀರರಾಣಿ ಕಿತ್ತೂರು ಚನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ ಅವರ ಪ್ರತಿಮೆಗಳಿಗೆ ಪುಷ್ಪ ನಮನ ಸಲ್ಲಿಸಿ ಗೌರವ ಅರ್ಪಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ಹಾಗೂ ರೈತರ ಸಂಕಷ್ಟಗಳಿಗೆ ಆದ್ಯತೆ ನೀಡುವುದು ತಮ್ಮ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು. ಸರ್ಕಾರಿ ಕಚೇರಿಗಳಿಗೆ ಬರುವ ಪ್ರತಿಯೊಬ್ಬ ನಾಗರಿಕರ ಕೆಲಸಗಳು ವಿಳಂಬವಾಗದಂತೆ ನೋಡಿಕೊಳ್ಳಲಾಗುವುದು. ಜನಸ್ನೇಹಿ ಆಡಳಿತದ ಮೂಲಕ ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲಾಗುವುದು ಎಂದು ಹೇಳಿದರು.

ತಾಲೂಕಿನ ಅಭಿವೃದ್ಧಿ ಹಾಗೂ ಜನರ ನಿರೀಕ್ಷೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸಲು ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರ ಅಗತ್ಯವಾಗಿದೆ. ಜನರು ಯಾವುದೇ ಸಮಸ್ಯೆಗಳಿದ್ದರೂ ನೇರವಾಗಿ ಕಚೇರಿಗೆ ಬಂದು ತಿಳಿಸಬಹುದು. ಸಮಸ್ಯೆಗಳ ಪರಿಹಾರಕ್ಕೆ ಸದಾ ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಈ ಹಿಂದೆ ಬೈಲಹೊಂಗಲ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಎಚ್.ಎನ್. ಶಿರಹಟ್ಟಿ ಅವರನ್ನು ಬೆಳಗಾವಿಗೆ ವರ್ಗಾವಣೆ ಮಾಡಲಾಗಿದ್ದು, ಅವರ ಸ್ಥಾನಕ್ಕೆ ಸದಾಶಿವ ಮಕ್ಕೋಜಿ ಅವರು ನೇಮಕಗೊಂಡಿದ್ದಾರೆ.

ಸಮಿತಿ ಸಭೆ ಮುಂದೂಡಿಕೆ

ಬೆಳಗಾವಿ: ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರ ಅಧ್ಯಕ್ಷತೆಯಲ್ಲಿ ಮೇ 30ರಂದು ಬೆಳಿಗ್ಗೆ 11 :30 ಗಂಟೆಗೆ ಬೆಳಗಾವಿ ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್ನಲ್ಲಿ ಜರುಗಲಿದ್ದ ಬೆಳಗಾವಿ ಜಿಲ್ಲಾ ಯೋಜನಾ ಸಮಿತಿ, (ಈಕಳ) ಸಭೆಯನ್ನು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ

ಬೆಳಗಾವಿ : ಹುಕ್ಕೇರಿ ತಾಲೂಕಿನ ಅಲದಾಳ (ಪ್ಲಾಟದಲ್ಲಿ) ಗ್ರಾಮದ ನಿವಾಸಿಯಾದ ಪವಾಡಿ ಸಿದ್ದಪ್ಪಾ ನಾಯಿಕ ಎಂಬ 45 ವರ್ಷದ ವ್ಯಕ್ತಿ ಮೇ 18ರ ಬೆಳಿಗ್ಗೆ 7.30 ಗಂಟೆಗೆ ವ್ಯಾಪಾರದ ನಿಮಿತ್ಯ ಸಂತೆಗೆಂದು ಹೋದವರು ಮರಳಿ ಮನೆಗೆ ಬಾರದೆ ಎಲ್ಲಿಯೋ ಹೋಗಿ ಕಾಣೆಯಾಗಿದ್ದು ಯಮಕನಮರಡಿ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ವ್ಯಕ್ತಿಯ ವಿವಿರ : ಹೆಸರು ಪವಾಡಿ ಸಿದ್ದಪ್ಪಾ ನಾಯಿಕ, ವಯಸ್ಸು 45 ವರ್ಷ, ಎತ್ತರ 5.7, ಸದೃಢಮೈಕಟ್ಟು, ಸಾಧಾರಣ ಕಪ್ಪುಮೈಬಣ್ಣ, ದುಂಡು-ಉದ್ದಮುಖ, ಗುಲಾಬಿಬಣ್ಣದ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ, ಕನ್ನಡ ಭಾಷೆ ಮಾತನಾಡುತ್ತಾನೆ. ಈ ವ್ಯಕ್ತಿ ಕಂಡಲ್ಲಿ ಯಮಕನಮರಡಿ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲಾ ಕಂಟ್ರೋಲ್ ರೂಮ್ 0831-2405231 ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ವ್ಯತ್ಯಯ

ಬೆಳಗಾವಿ: ಕ.ವಿ.ಪ್ರ.ನಿ.ನಿ. ವತಿಯಿಂದ 110 ಕೆ.ವ್ಹಿ. ಸುವರ್ಣ ಸೌಧ ಉಪಕೇಂದ್ರದಲ್ಲಿ ಮೊದಲನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮೇ 31 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಸದರಿ ಉಪಕೇಂದ್ರದಿಂದ ವಿತರಣೆಯಾಗುವ ಕೊಂಡಸಕೊಪ್ಪ, ಹಲಗಾ, ಬಸ್ತವಾಡ, ಶಗನಮಟ್ಟಿ, ಮಾಸ್ತಮರಡಿ, ಬಸರಿಕಟ್ಟಿ, ಶಿಂಧೊಳ್ಳಿ, ಮುತಗಾ, ಶ್ರೀರಾಮ ಕಾಲನಿ, ಸಾರಿಗೆ ನಗರ, ಮಹಾಲಕ್ಷ್ಮೀ ಪುರಂ, ಸಾಯಿ ನಗರ, ಭರತೇಶ ಕಾಲೇಜ, ಶಿಂಧೊಳ್ಳಿ ಕ್ರಾಸ್, ನಿಲಜಿ ಕ್ರಾಸ್, ಕಮಕಾರಟ್ಟಿ, ಬಡೆಕೊಳ್ಳಮಠ, ಕೋಳಿಕೊಪ್ಪ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹು.ವಿ.ಸ.ಕಂ.ನಿ ಕಾ ಮತ್ತು ಪಾ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಗ್ಯವ್ವ ಕೊಪ್ಪದ ನಿಧನ



ಹಿರೆಬಾಗೇವಾಡಿ: ಇಲ್ಲಿಯ ಬಸವನಗರ ನಿವಾಸಿ ತಂಗ್ಯವ್ವ ನಾಗಪ್ಪ ಕೊಪ್ಪದ (84) ಗುರುವಾರ ರಾತ್ರಿ ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ: ಜಲ್ಲೆಯ ಖಾನಾಪುರ ತಾಲೂಕಿನ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಆಗಿ ಹಿರಿಯ ಅರಣ್ಯಾಧಿಕಾರಿ ಬಸವರಾಜ ವಾಳದ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ: 2026-27ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಬಾಳೆ, ದ್ರಾಕ್ಷಿ, ದಾಳಿಂಬೆ, ಮಾವು, ಪಪ್ಪಾಯ, ಚಿಕ್ಕು, ಡ್ರಾಗನ್ ಹಣ್ಣು, ಗೇರು, ಪೇರಲ, ಬೆಣ್ಣೆ ಹಣ್ಣು, ಹೈಬ್ರಿಡ್ ತರಕಾರಿ ಹಾಗೂ ವಿವಿಧ ಹೂವು ಬೆಳೆಗಳನ್ನು ಬೆಳೆಯಲು ಬೆಳೆಗಳ ಅನುಗುಣವಾಗಿ ಕನಿಷ್ಠ 1/2 ಎಕರೆಯಿಂದ ಗರಿಷ್ಠ 2 ಹೆ. ರವರೆಗೆ ಶೇ. 40 ರಂತೆ ಸಹಾಯ ಧನವನ್ನು ಹಾಗೂ ನೀರಾವರಿ ವ್ಯವಸ್ಥೆಗಾಗಿ, ನೀರು ಸಂಗ್ರಹಣೆ ಮಾಡಲು 2250 ಘ.ಮೀ ಸಾಮರ್ಥ್ಯದ ವೈಯಕ್ತಿಕ ಕೃಷಿ ಹೊಂಡಕ್ಕೆ ರೂ. 90,000 ಗಳ ಸಹಾಯಧನ ನೀಡಲಾಗುವುದು.

ಸಂರಕ್ಷಿತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಲು ಪಾಲಿಮನೆ ನಿರ್ಮಿಸಿಕೊಳ್ಳಲು, ಪ್ಲಾಸ್ಟೀಕ ಹೊದಿಕೆಗಾಗಿ, ಕಳೆ ಚಾಪೆ, ಪಕ್ಷಿ, ಕೀಟ ನಿರೋಧಕ ಬಲೆ ಅಳವಡಿಸಿಸಲು ಶೇ. 50 ರಂತೆ ಸಹಾಯಧನವನ್ನು ನೀಡಲಾಗುವುದು. ತೋಟಗಾರಿಕೆಯಲ್ಲಿ ಯಾಂತ್ರಿಕರಣಕ್ಕಾಗಿ ಟ್ರ್ಯಾಕ್ಟರ್, ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬ ಖರೀದಿಸಲು 40% ಸಹಾಯಧನ ನೀಡಲಾಗುವುದು. ಪರಿಶಿಷ್ಟ ಜಾತಿ -ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಬೌದ್ಧ, ಪಾರ್ಸಿ) ರೈತರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಆಸಕ್ತ ಎಲ್ಲ ವರ್ಗದ ರೈತರು ತಮ್ಮ ತಾಲೂಕಿನ ತೋಟಗಾರಿಕೆ ಇಲಾಖೆಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿ ಪಡೆದುಕೊಂಡು ಅರ್ಜಿ ಸಲ್ಲಿಸಲು ಬೆಳಗಾವಿ ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿದ್ದಾಪುರ: ತಾಲೂಕಿನ ಇಟಗಿಯ ಸಾಂಸ್ಕೃತಿಕ ಸಂಘಟನೆ ಕಲಾಭಾಸ್ಕರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ 2025-26ರ ಧನಸಹಾಯ ಯೋಜನೆಯಡಿಯಲ್ಲಿ ಹಮ್ಮಿಕೊಂಡ ನವರಸ ಯಕ್ಷೋತ್ಸವದಲ್ಲಿ ಗಾನಸಾರಥ್ಯದಲ್ಲಿ ಕವಿ ಮಾಲೆಕೊಡ್ಲು ಶಂಭು ಭಟ್ಟ ವಿರಚಿತ 'ಚಂದ್ರಹಾಸ ಚರಿತ್ರೆ'ಯಕ್ಷಗಾನ ಪ್ರದರ್ಶನಗೊಂಡಿತು.

ಘನ ತ್ಯಾಜ್ಯ ವಿಲೇವಾರಿ ಪರಿಶೀಲನೆ

ಸ್ವಚ್ಛತಾ ಕಾರ್ಯಕ್ಕೆ ಸಹಕರಿಸಿ

ಬೆಳಗಾವಿ: ಚಿಕ್ಕೋಡಿ ತಾಲೂಕಿನ ಹಿರೇಕೋಡಿ, ಕರೋಶಿ ಹಾಗೂ ಕಾಡಾಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಘನ ತ್ಯಾಜ್ಯ ವಿಲೇವಾರಿ ಕಾರ್ಯಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಗಳಾದ ಬಸವರಾಜ್ ಹೆಗ್ಗನಾಯಕ್ ಅವರು ಪರಿಶೀಲಿಸಿದರು.

ತಾಲೂಕಿನ ಗ್ರಾಮಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಮನೆಮನೆಗೆ ಶೌಚಾಲಯಗಳನ್ನು ನಿರ್ಮಿಸಿಕೊಂಡು ಕಡ್ಡಾಯವಾಗಿ ಬಳಸಬೇಕು. ಪರಿಸರ ಸ್ವಚ್ಛತೆಗಾಗಿ ಸಾರ್ವಜನಿಕರು ತಮ್ಮ ಮನೆಯ ಕಸವನ್ನು ನಾಲ್ಕು ಪ್ರಕಾರಗಳಾಗಿ ವಿಂಗಡಿಸಿ, ಗ್ರಾಮ ಪಂಚಾಯಿತಿಯ ಕಸ ಸಂಗ್ರಹಣಾ ವಾಹನಕ್ಕೆ ನೀಡುವ ಮೂಲಕ ಸ್ವಚ್ಛತಾ ಕಾರ್ಯಕ್ಕೆ ಸಹಕರಿಸಬೇಕು ಎಂದು ತಿಳಿಸಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪೂರಕ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಡಿಜಿಟಲ್ ಗ್ರಂಥಾಲಯಗಳ ಸಮರ್ಪಕ ನಿರ್ವಹಣೆಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಸಾರ್ವಜನಿಕರು ಹಾಗೂ ಮುಖ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಗತ್ಯ ಪುಸ್ತಕಗಳು ಮತ್ತು ಆಧುನಿಕ ಕಂಪ್ಯೂಟರ್ ಸೌಲಭ್ಯಗಳನ್ನು ಖರೀದಿಸಿ ಒದಗಿಸಬೇಕು.

ತಾಲೂಕು ಪಂಚಾಯಿತಿಯ ಆಡಳಿತ ವ್ಯವಸ್ಥೆಯನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ, ಎಲ್ಲ ಅಧಿಕಾರಿಗಳು ಮತ್ತು ನೌಕರರು ಕಚೇರಿಯ ಕಡತಗಳನ್ನು ನಿಯಮಿತವಾಗಿ ಹಾಗೂ ವ್ಯವಸ್ಥಿತವಾಗಿ ವಿಲೇವಾರಿ ಮಾಡಬೇಕು. ಯಾವುದೇ ಕಾರಣಕ್ಕೂ



> ವಸತಿ ನಿಲಯಗಳು, ಶಾಲೆಗಳು, ಅಂಗನವಾಡಿಗಳು ಸೇರಿದಂತೆ ಸಾರ್ವಜನಿಕ ಕೇಂದ್ರಗಳಾಗಿರುವ ಇತರೆ ಸರ್ಕಾರಿ ಕಟ್ಟಡಗಳಿಗೆ ಮಳೆಯಿಂದ ಯಾವುದೇ ಹಾನಿಯಾಗದಂತೆ ಮುಂಚಿತವಾಗಿಯೇ ಗುರುತಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಿ.
> ■ **ಬಸವರಾಜ್ ಹೆಗ್ಗನಾಯಕ್**, ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ

- ಗ್ರಾಮಗಳ ಸಮಗ್ರ ಅಭಿವೃದ್ಧಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳಿಗೆ
- ಜಿ.ಪಂ. ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಸೂಚನೆ

ಕೆಲಸಗಳನ್ನು ವಿಳಂಬ ಮಾಡದೇ ಸಕಾಲದಲ್ಲಿ ಮುಗಿಸುವ ಮೂಲಕ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

ಪ್ರಸಕ್ತ ಬೇಸಿಗೆ ಕಾಲದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ರೀತಿಯ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಇದರೊಂದಿಗೆ, ಮುಂಬರುವ ಮುಂಗಾರು ಮಳೆಯನ್ನು ಗಮನದಲ್ಲಿಟ್ಟುಕೊಂಡು ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಕಟ್ಟಡಗಳ ಬಗ್ಗೆ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವುದು ಆಡಳಿತದ ಮುಖ್ಯ ಕರ್ತವ್ಯ ಎಂದ ಅವರು, ಸಿಬ್ಬಂದಿಗಳಾಗಲಿ ಅಥವಾ ಸಾರ್ವಜನಿಕರಾಗಲಿ ತಮ್ಮ ಅಹವಾಲು ಮತ್ತು ಮನವಿಗಳನ್ನು ತಂದಾಗ ಅಧಿಕಾರಿಗಳು ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ತಳಮಟ್ಟದಲ್ಲಿ ಜನಸಾಮಾನ್ಯರ ಕೆಲಸಗಳು ಸುಲಭವಾಗಿ ಆಗುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಅಧಿಕಾರಿಯ ಆದ್ಯ ಕರ್ತವ್ಯವಾಗಿದೆ ಎಂದು ಜಿ.ಪಂ. ಉಪ ಕಾರ್ಯದರ್ಶಿ ಬಸವರಾಜ್ ಹೆಗ್ಗನಾಯಕ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಟಿ.ಆರ್. ಮಲ್ನಾಡ್, ಎಡಿಎಸ್ಎಸ್ ಮಠದ, ಇಓ, ಹಾಗೂ ಪಿಡಿಓಗಳು ಉಪಸ್ಥಿತರಿದ್ದರು.

ಸುಳ್ಳು ಆರೋಪ ಖಂಡಿಸಿ ಪಾಲಿಕೆ ಆಯುಕ್ತರಿಗೆ ಮನವಿ

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಯ ಕಂದಾಯ ಶಾಖೆಯ ಅಧಿಕಾರಿ -ಸಿಬ್ಬಂದಿಗಳ ಮೇಲೆ ಕೆಲ ಪ್ರಭಾವಿ ವ್ಯಕ್ತಿಗಳು, ಹಾಗೂ ಕೆಲವು ಜನತೆಯು ನಮ್ಮ ಮೇಲೆ ಇಲ್ಲ ಸಲ್ಲದ ಸುಳ್ಳು ಆರೋಪವನ್ನು ಮಾಡಿ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸುವ ಕೆಲಸವನ್ನು ಮಾಡುತ್ತಿದ್ದಾರೆಂದು ಆರೋಪಿಸಿ ಶುಕ್ರವಾರ ಮಹಾನಗರ ಪಾಲಿಕೆಯ ಕಂದಾಯ ಶಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಾಲಿಕೆಯಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿನಿತ್ಯ ನಾವುಗಳು ವಸೂಲಾತಿ ಕಾರ್ಯದೊಂದಿಗೆ ಚುನಾವಣಾ ಸಂಬಂಧಿತ ಕಾರ್ಯ, ಜನಗಣತಿಗೆ ಸಂಬಂಧಿಸಿದ ಕಾರ್ಯ, ಅನಧಿಕೃತ ಬ್ಯಾನರ್ ತೆರವುಗೊಳಿಸುವ ಕಾರ್ಯ, ಮಳೆಗಾಲದ ವಿಪತ್ತು ಕಾರ್ಯಗಳನ್ನು ನಿರ್ವಹಣೆ ಕಾರ್ಯ ಹಾಗೂ ಮೇಲಾಧಿಕಾರಿಗಳು ಕಾಲಕಾಲಕ್ಕೆ ಸೂಚಿಸುವ ಎಲ್ಲ ನಿರ್ವಹಿಸುತ್ತಿರುತ್ತೇವೆ. ಆದರೆ, ಕೆಲವು ಪ್ರಭಾವಿ ವ್ಯಕ್ತಿಗಳು ಸಿಬ್ಬಂದಿಗಳು ಸರಿ ಯಾದ ಸಮಯದಲ್ಲಿ ಕಚೇರಿಯಲ್ಲಿ ಲಭ್ಯವಿರುವುದಿಲ್ಲ, ಸರಿಯಾಗಿ ಸಾರ್ವಜನಿಕರ ಕಾರ್ಯಗಳನ್ನು ನಿರ್ವಹಿಸುವುದಿಲ್ಲ ಎಂದು ಅಧಿಕಾರಿ -ಸಿಬ್ಬಂದಿಗಳ ಮೇಲೆ ಇಲ್ಲ ಸಲ್ಲದ ಸುಳ್ಳು ಆರೋಪಗಳನ್ನು ಮಾಡುತ್ತಿರುವುದರಿಂದ ಮಾನಸಿಕ ಹಿಂಸೆಯಾಗುತ್ತಿದೆ ಎಂದು ಆರೋಪಿಸಿದರು.

ಕಂದಾಯ ನಿರೀಕ್ಷಕರು ಯಲ್ಲೇಶ್ ಬಚ್ಚಲಪುರಿ ಮಾತನಾಡಿ, ಕಂದಾಯ ಶಾಖೆಯ ಸಿಬ್ಬಂದಿಗಳು ಬಿಸಿಲು, ಮಳೆ, ಚಳಿ ಅಂತಾ ಲೆಕ್ಕಿಸದೇ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿದ್ದೇವೆ ಆದರು ನಮ್ಮ ಮೇಲೆ ಅಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆಂದು ಮಹಾನಗರ ಪಾಲಿಕೆಯ ಆಯುಕ್ತ ಕಾರ್ತೀಕ್ ಎಂ. ಅವರಿಗೆ ಮನವಿ ಮಾಡಿಕೊಂಡರು.

ನಮ್ಮ ಮೇಲೆ ಸುಳ್ಳು ಆರೋಪ ಮಾಡುತ್ತಿರುವುದನ್ನು ಇಲ್ಲಿಗೆ ನಿಲ್ಲಬೇಕು, ಸುಳ್ಳು ಆರೋಪಿಸುತ್ತಿರುವವರನ್ನು ಪತ್ತೆ ಹಚ್ಚಿ ಹಂತವರ ವಿರುದ್ಧ ಕೂಡಲೇ ಕಾನೂನಿನ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಯಲ್ಲೇಶ್ ಬಚ್ಚಲಪುರಿ, ಎಬಿ ಕಾಂಬ್ಳೆ, ಎಸ್ ಬಿ ಓಸಿ, ಐಸಿ ಕಲ್ಲಪತ್ರಿ, ಎಂಬಿ ದೊಡ್ಡಮಣಿ, ವಿವೇಕ್ ಪಾಟೀಲ, ಎಸ್.ಎಂ. ಕಾಂಬ್ಳೆ, ಎಸ್.ಎಸ್. ತಲಕೇರಿ ಸೇರಿದಂತೆ ಪಾಲಿಕೆಯ ಹಲವು ಕಂದಾಯ ಕರ ವಸೂಲಾತಿ ಸಿಬ್ಬಂದಿ ಇದ್ದರು.



ಸವದಿಯವರಿಗೆ ಸಚಿವ ಸ್ಥಾನ ನೀಡಲು ಆಗ್ರಹ



ಅಡಹಳ್ಳಿ: ಕರ್ನಾಟಕ ರಾಜ್ಯದಲ್ಲಿ 2ನೇ ಬಾರಿಗೆ ನೂತನವಾಗಿ ರಚನೆಯಾಗಲಿರುವ ಸಚಿವಸಂಪುಟದಲ್ಲಿ ಅಥಣಿಕ್ಷೇತ್ರದ ಶಾಸಕರಾದ ಲಕ್ಷ್ಮಣ ಸವದಿಯವರಿಗೆ ಸಚಿವ ಸ್ಥಾನ ನೀಡಬೇಕೆಂದು ದಲಿತ ಸಂಘರ್ಷ ಸಮಿತಿ ಕರ್ನಾಟಕ ರಾಜ್ಯ ಸಂಘಟನಾ ಸಂಚಾಲಕ ಶ್ರೀಕಾಂತ ಆಲಗೂರ ಆಗ್ರಹಿಸಿದ್ದಾರೆ.

ಈ ಕುರಿತು ಶುಕ್ರವಾರ ಸಮೀಪದ ಕೋಹಳ್ಳಿ ಗ್ರಾಮದಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಅವರು, ಲಕ್ಷ್ಮಣ ಸವದಿಯವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಾಗಿ ಸೇವೆ ಸಲ್ಲಿಸುತ್ತಿದ್ದು, ಪಕ್ಷ ಸಂಘಟನೆಯ ಬಲಪಡಿಸುವಲ್ಲಿ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಮುಂಚುಣಿಯಲ್ಲಿದ್ದು, ಜಿಲ್ಲೆಯ ಅಭಿವೃದ್ಧಿ, ರೈತರ ಸಮಸ್ಯೆಗಳು ಮುಂತಾದ ಕೆಲಸಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಲಕ್ಷ್ಮಣ ಸವದಿಯವರಿಂದ ಉತ್ತರ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇಂತಹ ನಾಯಕರಿಗೆ ಸಚಿವ ಸ್ಥಾನ ನೀಡುವುದ್ದರಿಂದ ಪಕ್ಷ ಇನಷ್ಟು ಬಲಿಷ್ಟಗೊಳ್ಳಲಿದೆ ಆದ್ದರಿಂದ ಈ ಬಾರಿ ರಚನೆಯಾಗಲಿರುವ ರಾಜ್ಯ ಸಚಿವ ಸಂಪುಟದಲ್ಲಿ ಅವರನ್ನು ಕ್ಯಾಬಿನೇಟ್ ದರ್ಜೆಯ ಸಚಿವರನ್ನಾಗಿ ಮಾಡಬೇಕೆಂದು ಆಗ್ರಹಿದ್ದರು. ಈ ವೇಳೆ ಹಲವು ಕಾರ್ಯಕರ್ತರು ಇದ್ದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳ ಜ್ಞಾನಾರ್ಜನೆಗೆ ಆದ್ಯತೆ ನೀಡಿ



ಬೆಳಗಾವಿ: ಇಲ್ಲಿನ ಸದಾಶಿವ ನಗರದ ಶದಾಶಿವ ಮಂದಿರದಲ್ಲಿ ಗೌರಿ ಮಹಿಳಾ ಮಂಡಳದ ವತಿಯಿಂದ ಪ್ರತಿಭಾ ಪುರಸ್ಕಾರ ಸಮಾರಂಭ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಖ್ಯಾತ ಶಿಕ್ಷಣ ತಜ್ಞರು ಭಾಗವಹಿಸಿ ವಿದ್ಯಾರ್ಥಿಗಳ ಮುಂದಿನ ಸುಂದರ ಭವಿಷ್ಯಕ್ಕೆ ಅಗತ್ಯವಿರುವ ಮಾಹಿತಿಯ ಬಗ್ಗೆ ಮಾರ್ಗದರ್ಶನ ನೀಡಿದರು.

ಈ ಸಮಾರಂಭದಲ್ಲಿ ಬೆಳಗಾವಿಯ ಬಿ.ವಿ. ಬೆಲ್ಲದ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಹಾಗೂ ಗುಜರಾತ್ ನ್ಯಾಷನಲ್ ಲಾ ಯೂನಿವರ್ಸಿಟಿಯ ನಿವೃತ್ತ ಪ್ರಾಂಶುಪಾಲರಾದ ಡಾ. ಶೋಭಲತಾ ಉದಪುಡಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಬಳಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ಕೇವಲ ಅಂಕಗಳಿಗೆ ಸೀಮಿತವಾಗದೆ ಜ್ಞಾನಾರ್ಜನೆಗೆ ಆದ್ಯತೆ ನೀಡಬೇಕು ಮತ್ತು ಪಾಲಕರು ಅವರ ಆಸಕ್ತಿಗೆ ತಕ್ಕಂತೆ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದರು.

ಇದೇ ವೇಳೆ ಗೌರಿ ಮಹಿಳಾ ಮಂಡಳದ ಉಪಾಧ್ಯಕ್ಷ ಶಶಿಕಲಾ ಜಗಜಂಪಿ, ಕಾರ್ಯದರ್ಶಿ ಸುಜಾತ ಗೋಕಾಕ, ಕಮಿಟಿಯ ಪದಾಧಿಕಾರಿಗಳು, ಎಲ್ಲ ಗೌರವಾನ್ವಿತ ಸದಸ್ಯರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ವರ್ಣ ಶಿಲ್ಪಿ ಕೆ. ವೆಂಕಟಪ್ಪ ರಾಷ್ಟ್ರೀಯ ಪ್ರಶಸ್ತಿಗೆ ಕಲಾವಿದ ರಾಜು ಬಡಿಗೇರ ಆಯ್ಕೆ



ಬೈಲಹೊಂಗಲ: ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘದ ಆಶ್ರಯದಲ್ಲಿ ದಿ.30ರಂದು ನಡೆಯಲಿರುವ ಪ್ರಥಮ ರಾಷ್ಟ್ರೀಯ ಚಿತ್ರಕಲಾ ಸಮ್ಮೇಳನ-2026, ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ, ಪುಸ್ತಕ ಅನಾವರಣ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಬೈಲಹೊಂಗಲ ನಗರದ ಖ್ಯಾತ ಕಲಾವಿದ ರಾಜು ಬಡಿಗೇರ ಅವರಿಗೆ ವರ್ಣ ಶಿಲ್ಪಿ ಕೆ. ವೆಂಕಟಪ್ಪ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಸುಮಾರು 40 ವರ್ಷಗಳಿಂದ ಚಿತ್ರಕಲೆ ಹಾಗೂ ಕಲಾ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸಿರುವ ರಾಜು ಬಡಿಗೇರ ಅವರ ಕಲಾಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬೆಳಗಾವಿ ಜಿಲ್ಲೆಯಿಂದ ಆಯ್ಕೆಯಾದ ಅಪರೂಪದ ಕಲಾವಿದರಲ್ಲೊಬ್ಬರಾಗಿರುವ ಅವರು ಅನೇಕ ಚಿತ್ರಕಲಾ ಪ್ರದರ್ಶನಗಳ ಮೂಲಕ ಕಲಾಭಿಮಾನಿಗಳ ಮೆಚ್ಚುಗೆ ಪಡೆದಿದ್ದಾರೆ. ರಾಜು ಬಡಿಗೇರ ಅವರಿಗೆ ರಾಷ್ಟ್ರೀಯ ಮಟ್ಟದ ಈ ಗೌರವ ಲಭಿಸಿರುವ ಹಿನ್ನೆಲೆಯಲ್ಲಿ ಬೈಲಹೊಂಗಲ ಭಾಗದ ಕಲಾವಿದರು, ಸ್ನೇಹಿತರು ಹಾಗೂ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ಜೂ.1ರಂದು ಕಾರಂಜಿಮಠದಲ್ಲಿ 300ನೇ ವಿಶೇಷ ಶಿವಾನುಭವ ಕಾರ್ಯಕ್ರಮ



ಬೆಳಗಾವಿ: ಇಲ್ಲಿನ ಶಿವಬಸವ ನಗರದ ಕಾರಂಜಿಮಠದ ಶಿವಾನುಭವ ಮಂಟಪದಲ್ಲಿ ಕಳೆದ 26 ವರ್ಷಗಳಿಂದ ಮಾಸಿಕವಾಗಿ ನಡೆಯುತ್ತಿರುವ ಶಿವಾನುಭವ ಕಾರ್ಯಕ್ರಮದ 300ನೇ ವಿಶೇಷ ಕಾರ್ಯಕ್ರಮ ಜೂ.1ರಂದು ಸಂಜೆ 6 ಗಂಟೆಗೆ ನಡೆಯಲಿದೆ.

ಸಾನ್ನಿಧ್ಯವನ್ನು ನಿಡಸೋಸಿ ದುರದುಂಡೀಶ್ವರ ಸಿದ್ಧಸಂಸ್ಥಾನಮಠದ ಜಗದ್ಗುರು ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ವಹಿಸಲಿದ್ದಾರೆ.

ಸಭೆಯ ಅಧ್ಯಕ್ಷತೆಯನ್ನು ಖಡಕಲಾಟ ಕುಮಾರೇಶ್ವರ ವಿರಕ್ತಮಠದ ಶಿವಬಸವ ಸ್ವಾಮೀಜಿ ವಹಿಸುವರು. ಕಾರಂಜಿಮಠದ ಗುರುಸಿದ್ದ ಸ್ವಾಮೀಜಿ ನೇತೃತ್ವದಲ್ಲಿ ಕಾರ್ಯಕ್ರಮ ಜರುಗುವುದು. ತಾಳಿಕೋಟಿ ಖಾಸತೇಶ್ವರಮಠದ ಉತ್ತರಾಧಿಕಾರಿ ಸಿದ್ಧಲಿಂಗ ದೇವರು ವಿಶೇಷ ಉಪನ್ಯಾಸ ನೀಡುವರು. ಶ್ರೀ ಕಾರಂಜಿಮಠದ ಕುಮಾರೇಶ್ವರ ಸಂಗೀತ ಪಾಠಶಾಲೆಯ ಮಕ್ಕಳಿಂದ ಪ್ರಾರ್ಥನೆ ಜರುಗುವುದು ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಮದ್ಯ, ಗಾಂಜಾ ಮಾರಾಟ ಇಬ್ಬರು ಆರೋಪಿಗಳ ಬಂಧನ

ಬೆಳಗಾವಿ: ಜಿಲ್ಲಾದ್ಯಂತ ಕಾನೂನು ಬಾಹಿರ ಚುಟುವಟಿಕೆಗಳಿಗೆ ಬೆಳಗಾವಿ ಪೊಲೀಸರು ಕಡಿವಾಣ ಹಾಕುವುದಕ್ಕೆ ಮುಂದಾಗಿದ್ದಾರೆ. ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಮತ್ತು ತಿಳಕವಾಡಿ ಪೊಲೀಸರ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮದ್ಯ ಹಾಗೂ ಗಾಂಜಾ ಮಾರಾಟ ಮಾಡುತ್ತಿದ್ದ ವೇಳೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ್ದಾರೆ. ಬಸವರಾಜ ಚಂದ್ರಶೇಖರ ಧೂಳಪ್ಪನವರ (50) ಎಂಬಾತನನ್ನು ಪಿಎಸ್ಐ ಬಸವರಾಜ ಮಿಟಗಾರ ಹಾಗೂ ಸಿಬ್ಬಂದಿ ದಾಳಿ ನಡೆಸಿ ಬಂಧಿಸಿದ್ದಾರೆ. ಬಂಧಿತನಿಂದ ಸುಮಾರು 3,580 ರೂಪಾಯಿ ಮೌಲ್ಯದ ವಿವಿಧ ಬ್ರಾಂಡ್‌ಗಳ ವಿಸ್ಕಿ ಪ್ಯಾಕೆಟ್‌ಗಳು ಹಾಗೂ ನಗದನ್ನು ವಶಪಡಿಸಿಕೊಳ್ಳಲಾಗಿದ್ದು, ಕರ್ನಾಟಕ ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಮತ್ತೊಂದೆಡೆ, ತಿಲಕವಾಡಿ ಠಾಣೆಯ ಪಿಐ ಪರಶುರಾಮ ಪೂಜೇರಿ ನೇತೃತ್ವದ ತಂಡವು ನಗರದ ಆರ್ಪಿಡಿ ಹಾಗೂ ಜೈನ್ ಕಾಲೇಜುಗಳ ಬಳಿ ಸಾರ್ವಜನಿಕರಿಗೆ ತೊಂದರೆ ನೀಡುವಂತೆ ಅಸಹಜವಾಗಿ ವರ್ತಿಸುತ್ತಿದ್ದ ಆಕಾಶ್ ಬಸೂರ್ (25) ಮತ್ತು ಅಭಿಷೇಕ್ ಹರಿಜನ್ (25) ಎಂಬ ಯುವಕರನ್ನು ವಶಕ್ಕೆ ಪಡೆದಿದ್ದಾರೆ.

ನಿವೃತ್ತ ರೈಲ್ವೆ ನೌಕರನಿಗೆ ಸತ್ಕಾರ



ನೇಸರಗಿ: 24 ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿ, ನಂತರ 12 ವರ್ಷಗಳ ಕಾಲ ಭಾರತೀಯ ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದು ಸ್ಮರಣೀಯ ಎಂದು ಲೋಂಡಾ ರೈಲು ಇಲಾಖೆಯ ನಿವೃತ್ತ ಟ್ರ್ಯಾಕ್ ಮೆಂಟೇನನ್ಸ್ ಎಂಜಿನಿಯರ್ ಪ್ರಭು ತುಮ್ಮರಗುದ್ದಿ ಹೇಳಿದರು.

ಅವರು ಸಮೀಪದ ಬಾಳೆಕುಂದ್ರಿ ಕೆ.ಎಚ್. ಗ್ರಾಮದ ಸದಾಶಿವ ಕಾಲನಿಯಲ್ಲಿ ಏರ್ಪಡಿಸಲಾಗಿದ್ದ ಅವರ ಸೇವಾ ನಿವೃತ್ತಿ, ಸತ್ಕಾರ ಸಮಾರಂಭದಲ್ಲಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಎಂಜಿನಿಯರ ವಿಜಯ ದೇಸಿಂಗೆ, ಸಂಗಪ್ಪ ಗುಜನಟ್ಟಿ, ಶಂಬಪ್ಪ ಕುರಣಿ, ಶ್ರೀಮತಿ ಲಕ್ಷ್ಮಿ ತುಮ್ಮರಗುದ್ದಿ, ಈರಯ್ಯ ಹಿರೇಮಠ ಶ್ರೀಗಳು, ಶಶಿಕಾಂತ ಪಾಟೀಲ, ನಿಜಗುಣಿ ತುಮ್ಮರಗುದ್ದಿ, ಮುಕ್ತಾ ನೇರಲಿ, ಯಲ್ಲಪ್ಪ ಗುಜನಟ್ಟಿ ನಿವೃತ್ತ ಸೈನಿಕರು, ತುಮ್ಮರಗುದ್ದಿ ಪರಿವಾರದವರು, ಸದಾಶಿವ ಕಾಲನಿ ನಿವಾಸಿಗಳು ಭಾಗವಹಿಸಿದ್ದರು.

ಕಾನೂನು ಮಹಾವಿದ್ಯಾಲದಲ್ಲಿ ಕನ್ನಡ ನುಡಿ ವೈಭವ

ಬೆಳಗಾವಿ: ನಗರದಲ್ಲಿರುವ ರಾಜಾ ಲಖಮಗೌಡ ಕಾನೂನು ಕಾಲೇಜಿನ ಕನ್ನಡ ಬಳಗದ ವತಿಯಿಂದ ಕನ್ನಡ ನುಡಿ ವೈಭವ ಎಂಬ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು.

ಶುಕ್ರವಾರ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಎತ್ತಿ ತೋರಿಸಿತು. ಗಣ್ಯರು ಸಭೆಯನ್ನುದ್ದೇಶಿಸಿ ಮಾತನಾಡಿದರು ಮತ್ತು ಕನ್ನಡವನ್ನು ಉಳಿಸುವ ಮತ್ತು ಉತ್ತೇಜಿಸುವ ಮಹತ್ವವನ್ನು ಒತ್ತಿ ಹೇಳಿದರು.

ಡಾ. ಶಶಿಧರ ನರೇಂದ್ರ ಮಾತನಾಡಿ, ಸಿರಿಗನ್ನಡಂ ಗೆಲ್ಗೆ, ಸಿರಿ ಗನ್ನಡಂ ಬಾಳ್ಗೆ ಎಂಬ ಪ್ರಸಿದ್ಧ ಘೋಷಣೆಯ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಮಾತನಾಡಿದರು. ಈ ಘೋಷಣೆಯನ್ನು ಧಾರವಾಡದ ಮೂಲದ ರಾ.ಹಾ. ದೇಶಪಾಂಡೆ ಅವರು ರಚಿಸಿದ್ದಾರೆ ಎಂದು ಅವರು ಹೇಳಿದರು. ಅವರು 1885 ರಲ್ಲಿ ಎಂ.ಎ. ಪದವಿಯನ್ನು ಪೂರ್ಣಗೊಳಿಸಿದ ಈ ಪ್ರದೇಶದ ಮೊದಲ ವ್ಯಕ್ತಿ. ಅವರ ಸಾಧನೆಯನ್ನು ಗೌರವಿಸಲು, ಆನೆಯ ಮೇಲೆ ಭವ್ಯ ಮೆರವಣಿಗೆ ನಡೆಸಲಾಯಿತು ಎಂದು ಹೇಳಿದರು.



1890 ರಲ್ಲಿ ಧಾರವಾಡದಲ್ಲಿ ರಾ.ಹಾ. ದೇಶಪಾಂಡೆ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು ಎಂದು ತಿಳಿಸಿದರು. ಕನ್ನಡಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿದ ಅವರು, ದೇಶಪಾಂಡೆ ಅವರು 20 ವರ್ಷಗಳ ಕಾಲ ಪ್ರಾದೇಶಿಕ ಶಿಕ್ಷಣ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಕನ್ನಡದ ಉದ್ದೇಶಗಳಿಗೆ ಅವರ ಅಚಲ ಸಮರ್ಪಣೆಯಿಂದಾಗಿ 22 ಬಾರಿ ವರ್ಗಾವಣೆಗೊಂಡರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಕೀಲ ಮತ್ತು ಆಡಳಿತ ಮಂಡಳಿಯ ಅಧ್ಯಕ್ಷ ಆರ್. ಎಸ್. ಮುತಾಲಿಕ್ ಅವರು 1939 ರಲ್ಲಿ ಕರ್ನಾಟಕ ಕಾನೂನು ಸಂಘ (ಕೆಎಲ್ಎಸ್) ಮತ್ತು ರಾಜಾ ಲಖಮಗೌಡ ಕಾನೂನು ಕಾಲೇಜಿನ ಸ್ಥಾಪನೆಯ ಬಗ್ಗೆ ವಿವರಿಸಿದರು.

1973 ರಲ್ಲಿ ಮೈಸೂರು ರಾಜ್ಯವನ್ನು ಅಧಿಕೃತವಾಗಿ ಕರ್ನಾಟಕ ಎಂದು ಮರುನಾಮಕರಣ ಮಾಡುವ ದಶಕಗಳ ಮೊದಲು ಕೆಎಲ್ಎಸ್ ನ ಏಳು ಸ್ಥಾಪಕ ಸದಸ್ಯರ ದೂರದೃಷ್ಟಿಯನ್ನು ಅವರು ವಿವರಿಸಿದರು.

ಕನ್ನಡ ನುಡಿ ವೈಭವ ವಿಭಾಗದ ಸಂಯೋಜಕ ಪ್ರೊ. ಚೇತನ್ಕುಮಾರ್ ಟಿ.ಎಂ. ಸ್ವಾಗತಿಸಿದರು. ಪ್ರಾಚಾರ್ಯ ಡಾ. ಎ.ಎಚ್. ಹವಾಲ್ದಾರ್, ಕನ್ನಡ ಬಳಗ ಸ್ವಯಂಸೇವಕರು ಮತ್ತು ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ಅಪಘಾತ ಮರಣೋತ್ತರ ಪರಿಹಾರ ನಿಧಿ ವಿತರಣೆ

ಕೋಳಿಗುಡ್ಡ: ಸಮೀಪದ ಪರಮಾನಂದವಾಡಿ ಗ್ರಾಮದ ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಲಿ.ಯಕ್ಸಂಬಾ (ಮಲ್ಟಿ-ಸ್ಟೇಟ್) ಸಂಸ್ಥೆ ಪರಮಾನಂದವಾಡಿ ಶಾಖೆಯಲ್ಲಿ ಸದಸ್ಯತ್ವ ಹೊಂದಿದ್ದ ದಿ. ಕೇದಾರಿ ರಾಯಪ್ಪ ನಿಂಗನೂರೆ ಅವರು ರಸ್ತೆ ಅಪಘಾತದಲ್ಲಿ ಮರಣ ಹೊಂದಿರುವ ಹಿನ್ನೆಲೆಯಲ್ಲಿ ಅಪಘಾತ ಪರಿಹಾರ ನಿಧಿಯ 50000 ಮೊತ್ತದ ಮಂಜೂರಾತಿ ಪತ್ರವನ್ನು ಅವರ ವಾರಸಾದಾರರಾದ ಭಾರತಿ ಕೇದಾರಿ ನಿಂಗನೂರೆ ಅವರಿಗೆ ವಿತರಿಸಲಾಯಿತು.

ಶಾಖೆಯ ಅಧ್ಯಕ್ಷರಾದ ಅನಿಲ್ ಹೂನ್ನಪ್ಪಾ ಅಕ್ಕೋಳೆ ಹಾಗೂ ಇನ್ನೂಳಿದ ಶಾಖಾ ಸಂಚಾಲಕರಾದ ಸಿದ್ಧಾರೂಡ ಶರದ್ ಕೌಲಗುಡ್ಡ, ಬಸವರಾಜ್ ಬಾಬು ನವನ್ಯಾಳ, ಧರೆಪ್ಪ ದುಂಡಪ್ಪ ಸಂಕೋನಟ್ಟಿ, ವಿರುಪಾಕ್ಷ ಗಿರಿಮಲ್ಲ ಕುಂಚನೂರ,

ಕುಮಾರ್ ಶ್ರೀಮಂತ ಕಾನಡೆ, ರಾವಸಾಬ ಅಣ್ಣಾಸಾಬ ನಾಂದ್ರೆ, ಮಲಗೌಡ ಪರ ಗೌಡ ಪಾಟೀಲ ಸಮ್ಮುಖದಲ್ಲಿ ಹಾಗೂ ಶಾಖಾ ವ್ಯವಸ್ಥಾಪಕರು ಹಾಗೂ ಎಲ್ಲಾ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ವಿತರಿಸಲಾಯಿತು.





ಹುಬ್ಬಳ್ಳಿ: ನಗರಕ್ಕೆ ಮೂಲ ಸೌಕರ್ಯ ಒದಗಿಸಬೇಕು ಎಂದು ಆಗ್ರಹಿಸಿ ಕನ್ನಡ ಹೋರಾಟಗಾರರ ಸಮಿತಿಯಿಂದ ಮಹಾನಗರ ಪಾಲಿಕೆ ಎದುರು ಬಾಯಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಲಾಯಿತು.

ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ

ಚಿಕ್ಕೋಡಿ: ರಸ್ತೆ, ಚರಂಡಿ, ಸಮುದಾಯ ಭವನ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳು ಕರ್ನಾಟಕ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹಾಗೂ ಶಾಸಕ ಗಣೇಶ ಹುಕ್ಕೇರಿ ಅವರ ಪ್ರಯತ್ನದಿಂದ ಲಭಿಸಿವೆ ಎಂದು ನೇಜ ಗ್ರಾಮದ ಗ್ರಾಮೀಣ ಸಹಕಾರಿ ಸಂಘದ ಅಧ್ಯಕ್ಷ ಬಸಗೌಡ ರಾಜು ಪಾಟೀಲ ಹೆಮ್ಮೆ ವ್ಯಕ್ತಪಡಿಸಿದರು. ತಾಲೂಕಿನ ನೇಜ ಗ್ರಾಮದಲ್ಲಿ 1 ಕೋಟಿ ರೂ. ಮೊತ್ತದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ 3-4 ದಶಕಗಳಿಂದ ಪ್ರಕಾಶ ಹುಕ್ಕೇರಿ ಹಾಗೂ ಗಣೇಶ ಹುಕ್ಕೇರಿ ಅವರ ಪರಿಶ್ರಮದಿಂದ ನೀರಾವರಿ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಕ್ಷೇತ್ರ ಅಭಿವೃದ್ಧಿ ಕಂಡಿದೆ. ಇನ್ನು ಮುಂದೆಯೂ ಕೂಡ ಇವರ ಸೇವೆಯು ಹೀಗೆಯೇ ಮುಂದುವರೆಯಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಗ್ರಾಮದ ಮುಖಂಡ ಅಣ್ಣಾಸಾಹೇಬ ಮಗದುಮ್ಮ ಮಾತನಾಡಿ, ಕಳೆದ ಕೆಲವು ದಿನಗಳಿಂದ ಗ್ರಾಮದ ಹೊರವಲಯದಲ್ಲಿರುವ ಕೆರೆ ತೋಟದವರೆಗಿನ ರಸ್ತೆಯು ಸಂಪೂರ್ಣ ಹಾಳಾಗಿ ಹೋಗಿತ್ತು, ಇದರಿಂದ ಜನರಿಗೆ ಅನಾನುಕೂಲವಾಗಿತ್ತು. ಇದೀಗ ಕಾಮಗಾರಿಗೆ ಚಾಲನೆ ನೀಡಿ ರಸ್ತೆ ಸುಧಾರಣೆ ಮಾಡಿದ್ದು ಹೆಮ್ಮೆಯ ಸಂಗತಿಯಾಗಿದೆಎಂದು ಹೇಳಿದರು. ಈ ಸಂದರ್ಭದಲ್ಲಿ ಅಜಯಸಿಂಗ ಶಿತೋಳೆ, ಅಪ್ಪಾಸಾಹೇಬ ಸುಟ್ಟಟ್ಟಿ, ರಾಜು ನಾಗೂರೆ, ಕುಂದನ ಕಾಂಬಳೆ, ಶಕೀಲ ಬೇಗ್, ರಮೇಶ ಪಾಟೀಲ, ಅರವಿಂದ ನರುಮಾಳಿ, ಸಂತೋಷ ಶೇಡಬಾಳೆ, ಶಕೀಲ ಜಮಾದಾರ, ಭೀಮಾ ಚಿಂಚಣೆ, ಬಾಳಾಸಾಹೇಬ ಕುಂಬಾರ, ಸುನೀಲ ಚಿಂಚಣೆ, ಸದಾನಂದ ಸ್ವಾಮಿ ಮುಂತಾದವರು ಇದ್ದರು.



ಚಿಕ್ಕೋಡಿ: ತಾಲೂಕಿನ ನೇಜ ಗ್ರಾಮದಲ್ಲಿ 1 ಕೋಟಿ ರೂ. ಮೊತ್ತದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಶುಕ್ರವಾರ ನೇಜ ಗ್ರಾಮದ ಗ್ರಾಮೀಣ ಸಹಕಾರಿ ಸಂಘದ ಅಧ್ಯಕ್ಷ ಬಸಗೌಡ ರಾಜು ಪಾಟೀಲ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಅಜಯಸಿಂಗ ಶಿತೋಳೆ, ಅಪ್ಪಾಸಾಹೇಬ ಸುಟ್ಟಟ್ಟಿ, ರಾಜು ನಾಗೂರೆ, ಕುಂದನ ಕಾಂಬಳೆ, ಶಕೀಲ ಬೇಗ್, ರಮೇಶ ಪಾಟೀಲ, ಅರವಿಂದ ನರುಮಾಳಿ, ಸಂತೋಷ ಶೇಡಬಾಳೆ, ಶಕೀಲ ಜಮಾದಾರ, ಭೀಮಾ ಚಿಂಚಣೆ ಇದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಬಸ್ ಪಾಸ್: ಅರ್ಜಿ ಸಲ್ಲಿಸಿ

ಬೆಳಗಾವಿ : 2026-27 ನೇ ಶೈಕ್ಷಣಿಕ ಸಾಲಿನ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಜೂನ್ 1 ರಿಂದ ರಿಯಾಯಿತಿ ದರದ ಬಸ್ ಪಾಸ್ ಪಡೆಯಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಆನ್ಲೈನ್ ಸೇವಾ ಸಿಂಧು ಪೋರ್ಟಲ್ ಐಡಿ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯು ಒದಗಿಸಿರುವ ಸಂಖ್ಯೆಯನ್ನು ಹೊಂದಿರುವ ವಿದ್ಯಾರ್ಥಿಯು ಸಲ್ಲಿಸುವ ಅರ್ಜಿಯಲ್ಲಿ ಅಗತ್ಯವಿರುವ ಮಾಹಿತಿಯನ್ನು ಸ್ವಯಂಚಾಲಿತವಾಗಿ ತೆಗೆದುಕೊಳ್ಳಲಿದ್ದು, ಪ್ರಯಾಣದ ಮಾರ್ಗ ಮತ್ತು ಪಾಸ್ ವಿತರಣೆಯ ಕಚೇರಿ ಆಯ್ಕೆ ಮಾಡಿ ಮಾಹಿತಿಯನ್ನು ಭರ್ತಿ ಮಾಡಿ ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ನೆರೆ ರಾಜ್ಯದಲ್ಲಿ ವಾಸವಿದ್ದು ಕರ್ನಾಟಕ ರಾಜ್ಯದ ಶಾಲೆ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ವಾಸವಿದ್ದು ನೆರೆ ರಾಜ್ಯದ ಶಾಲೆ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗಡಿಭಾಗದ ಮಾರ್ಗಗಳಲ್ಲಿನ ವಿದ್ಯಾರ್ಥಿನಿಯರು, ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ಪಡೆಯುವ ಅಗತ್ಯವಿದೆ ಎಂದು ವಾಕರಸಾ-ಸಂಸ್ಥೆ ಬೆಳಗಾವಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 31 ರಂದು ವಿದ್ಯುತ್ ವ್ಯತ್ಯಯ

ಬೆಳಗಾವಿ : ಕ.ವಿ.ಪ್ರ.ನಿ.ನಿ. ವತಿಯಿಂದ 110 ಕೆ.ವ್ಹಿ. ನೆಹರು ನಗರ ಉಪಕೇಂದ್ರದಲ್ಲಿ ಮೊದಲನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮೇ. 31 ರಂದು ಬೆಳಿಗ್ಗೆ 9 ಘಂಟೆಯಿಂದ ಸಾಯಂಕಾಲ 4 ಘಂಟೆಯವರೆಗೆ 33 ಕೆ.ವ್ಹಿ. ಸದಾಶಿವ ನಗರ ಉಪಕೇಂದ್ರದಿಂದ ವಿತರಣೆಯಾಗುವ ಹಿಂಡಲಗಾ, ಕಂಗ್ರಾಳಿ ಕೆ.ಎಚ್, ಅಲತಗಾ, ಅಂಬೇವಾಡಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹು.ವಿ.ಸ.ಕಂ.ನಿ ಕಾ ಮತ್ತು ಪಾ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾಂತ್ರೀಕೃತ ಮೀನುಗಾರಿಕೆ ನಿಷೇಧ

ಕಾರವಾರ: ಉತ್ತರ ಕನ್ನಡ ಜಿಲ್ಲೆಯೂ ಸೇರಿದಂತೆ ಕರ್ನಾಟಕದ ಕರಾವಳಿಯಲ್ಲಿ ಯಾಂತ್ರೀಕೃತ ದೋಣಿಗಳಲ್ಲಿ ಮತ್ತು 10 ಹೆಚ್.ಪಿ. ಅಶ್ವಶಕ್ತಿಗಿಂತ ಅಧಿಕ ಸಾಮರ್ಥ್ಯದ ಇನ್‌ಬೋರ್ಡ್ ಅಥವಾ ಔಟ್‌ಬೋರ್ಟ್ ಯಂತ್ರ, ಅಳವಡಿಸಿರುವ ಮೀನುಗಾರಿಕೆ ದೋಣಿಗಳಲ್ಲಿ ಯಾವುದೇ ಬಲೆಗಳನ್ನು, ಸಾಧನಗಳನ್ನು ಉಪಯೋಗಿಸಿ ಕೈಗೊಳ್ಳುವ ಮೀನುಗಾರಿಕೆ ಚಟುವಟಿಕೆಗಳಿಗೆ ಜೂನ್ 1 ರಿಂದ ಜುಲೈ 31 ರವರೆಗೆ ಒಟ್ಟು 61 ದಿನಗಳ ನಿಷೇಧವನ್ನು ಹೇರಿ ಆದೇಶ ಹೊರಡಿಸಲಾಗಿದೆ ಹಾಗೂ ಈ ನಿಷೇಧಿತ ಅವಧಿಯಲ್ಲಿ ದೋಣಿಗಳನ್ನು ಸಾಗಿಸುವ ಉದ್ದೇಶಕ್ಕಾಗಿ 10 ಹೆಚ್.ಪಿ. ಅಶ್ವಶಕ್ತಿಯವರೆಗಿನ ಸಾಮರ್ಥ್ಯದ ಮೋಟಾರೀಕೃತ ದೋಣಿ ಮತ್ತು ಸಾಂಪ್ರದಾಯಿಕ ನಾಡದೋಣಿಗಳು ಸುರಕ್ಷತಾ ಕ್ರಮಗಳೊಂದಿಗೆ ಮೀನುಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ. ಆದರಂತೆಯೇ ಈ ಆದೇಶದಲ್ಲಿ ನೀಡಲಾಗಿರುವ ಸೂಚನೆಗಳನ್ನು ಎಲ್ಲಾ ಯಾಂತ್ರೀಕೃತ ದೋಣಿಗಳ ಮಾಲೀಕರು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಈ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂಥವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸರ್ಕಾರದಿಂದ ನೀಡುವ ಮಾರಾಟ ಕರರಹಿತ ಡೀಸೆಲ್ ಹಾಗೂ ಯಾವುದೇ ಸಹಾಯ ಸೌಲಭ್ಯಗಳನ್ನು ರದ್ದುಗೊಳಿಸಲಾಗುವುದು. ಕರಾವಳಿ ಪ್ರದೇಶದ ಎಲ್ಲಾ ಮೀನುಗಾರರ ಹಿತದೃಷ್ಟಿಯಿಂದ ಹೊರಡಿಸಲಾದ ಈ ಆದೇಶವನ್ನು ಎಲ್ಲಾ ಮೀನುಗಾರರು ಪಾಲಿಸಿ ಸಹಕರಿಸುವಂತೆ ಮೀನುಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ ನಾಳೆ

ಹುಬ್ಬಳ್ಳಿ: ವೀರಶೈವ ಲಿಂಗಾಯತ ಸೇವಾ ಸಮಿತಿ ವತಿಯಿಂದ ವೀರಶೈವ ಲಿಂಗಾಯತ ಒಳ ಪಂಗಡ ಸಮಾಜದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ ಹಾಗೂ ಗೌರವ ಸನ್ಮಾನ ಸಮಾರಂಭ ಮೇ 31ರಂದು ಸಂಜೆ 5 ಗಂಟೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಮಲ್ಲಿಕಾರ್ಜುನ ಸಾಹುಕಾರ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾನಿಧ್ಯ ಮೂರುಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ, ರುದ್ರಾಕ್ಷಿ ಮಠದ ಬಸವಲಿಂಗ ಸ್ವಾಮೀಜಿ ಸಾನಿಧ್ಯ ವಹಿಸುವರು. ಸಂಸದ ಜಗದೀಶ ಶೆಟ್ಟರ, ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಭಾಗವಹಿಸಲಿದ್ದಾರೆ.

ವಿದ್ಯಾರ್ಥಿಗಳ ಸತ್ಕೀರ್ತಿಯೇ ಗುರುಗಳಿಗೆ ಗುರದಕ್ಷಿಣೆ

ಮೂಡಲಗಿ : ವರ್ಷಗಳು ಉರುಳಿದರೂ ಶಿಕ್ಷಕರ ಮೇಲಿನ ಗೌರವವನ್ನು ಹಾಗೇ ಉಳಿಸಿಕೊಂಡು ಬಂದು, ಇವತ್ತು ಗುರುವಂದನೆ ಸಲ್ಲಿಸಿರುವುದು ಶ್ಲಾಘನೀಯ ಕಾರ್ಯ. ವಿದ್ಯಾರ್ಥಿಗಳ ಯಶಸ್ಸು ಮತ್ತು ಸಮಾಜದಲ್ಲಿ ಅವರು ಗಳಿಸುವ ಸತ್ಕೀರ್ತಿಯೇ ಶಿಕ್ಷಕರಿಗೆ ಸಿಗುವ ಅತಿ ದೊಡ್ಡ ಗುರುದಕ್ಷಿಣೆ ಎಂದು ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಹೇಳಿದರು.

ಕಲ್ಲೋಳಿ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯ 2006-07ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಹಾಗೂ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕ ಆರ್.ಪಿ. ಬಾಗೋಜಿ ಮಾತನಾಡಿ, ನಮ್ಮನ್ನು ನೆನಪಿಟ್ಟುಕೊಂಡು ಈ ರೀತಿ ಸತ್ಕರಿಸಿದ ನಿಮ್ಮೆಲ್ಲರ ಪ್ರೀತಿ ಮನಸ್ಸಿಗೆ ತುಂಬ ಖುಷಿ ನೀಡಿದೆ. ನಿಮ್ಮೆಲ್ಲರ ಮುಂದಿನ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು. ಶಿಕ್ಷಕಿ ಎಂ.ಎ. ಹೂಗಾರ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಎಸ್.ಆರ್.ಇ.ಸಂಸ್ಥೆಯ ಚೇರಮನ್ ಬಸಗೌಡ ಶಿ. ಪಾಟೀಲ ಅವರು ಮಾತನಾಡಿದರು.



- 2006-07ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಳೆಯ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ
- ವಿದ್ಯೆ-ಸಂಸ್ಕಾರ ಕಲಿಸಿದ ಗುರುಗಳಿಗೆ ಭಕ್ತಿಪೂರ್ವಕ ಗೌರವ ಸತ್ಕಾರ. ಸುಮಾರು ಎರಡು ದಶಕಗಳ ಬಳಿಕ ಒಂದೆಡೆ ಸೇರಿ ನೆನಪು ಮೆಲುಕು ಹಾಕಿದ ಸಹಪಾಠಿಗಳು.

ಸುಮಾರು ಎರಡು ದಶಕಗಳ ಬಳಿಕ ಒಂದೆಡೆ ಸೇರಿದ ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ನೆನಪುಗಳನ್ನು ಮೆಲುಕು ಹಾಕಿದರು ಮತ್ತು ತಮಗೆ ವಿದ್ಯೆ ಕಲಿಸಿದ ಗುರುಗಳಿಗೆ ಗೌರವಪೂರ್ವಕವಾಗಿ ನಮಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಅಂದಿನ ಹಾಗೂ ಇಂದಿನ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಾದ ಆರ್.ಪಿ. ಬಾಗೋಜಿ, ಎ. ಬಿ. ಉಪ್ಪಿನ, ಎಂ. ಎ. ಹೂಗಾರ, ಎಂ. ಎಂ. ಮಡಿವಾಳರ, ಆರ್. ಪಿ. ಕಂಬಾರ, ದೈಹಿಕ ಶಿಕ್ಷಕ ಬಿ. ಎಂ. ಡಬ್ಬನವರ ಮತ್ತು ಸಿಪಾಯಿ ಎಚ್. ಎಸ್. ನಿರ್ಲಿ ಅವರನ್ನು ಹಳೆಯ ವಿದ್ಯಾರ್ಥಿ ವೃಂದದವರು ಪ್ರೀತಿಪೂರ್ವಕವಾಗಿ ಸತ್ಕರಿಸಿ, ಆಶೀರ್ವಾದ ಪಡೆದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎ.ಆರ್. ಪಾಟೀಲ, ಹಳೆ ವಿದ್ಯಾರ್ಥಿಗಳಾದ ಶಿವಾನಂದ ಕಮತಿ, ಶ್ರೀಧರ ಪಾಲಬಾಂವಿ, ವಿಠ್ಠಲ ಹುದ್ದಾರ, ಮಂಜುನಾಥ ಗೊರಗುದ್ದಿ, ರುಕ್ಮಿಣಿ ಅಮ್ಮಣಗಿ, ಉಮಾ ಪೂಜಾರಿ, ಮಂಜುಳಾ ಅರಬಾಂವಿ ಮುಂತಾದವರು ಉಪಸ್ಥಿತರಿದ್ದರು. ಸಾವಿತ್ರಿ ಕೋಳಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ರಮೇಶ ಹೆಬ್ಬಾಳ ಸ್ವಾಗತಿಸಿದರು. ಶಿವಾನಂದ ಕಡಲಗಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಡಿ.ಎಸ್. ಹುಗ್ಗಿ ನಿರೂಪಿಸಿದರು. ಮಾರುತಿ ಮರಡಿ ವಂದಿಸಿದರು.

ಕೆಲಸದೊಂದಿಗೆ ಆರೋಗ್ಯದ ಕಡೆ ಗಮನವಿರಲಿ

ಬೆಳಗಾವಿ: ಕೂಲಿಕಾರ್ಮಿಕರು ಕೆಲಸದ ಜೊತೆಗೆ ತಮ್ಮ ಆರೋಗ್ಯದ ಕಡೆಗೆ ಗಮನಹರಿಸಬೇಕೆಂದು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಗೋಪಾಲ ನಾಯಕ ಹೇಳಿದರು.

ತಾಲೂಕು ಪಂಚಾಯತ ಬೆಳಗಾವಿ ಹಾಗೂ ಕಂಗ್ರಾಳಿ ಕೆ.ಎಚ್ ಗ್ರಾಮ ಪಂಚಾಯತಿ ವತಿಯಿಂದ ಕಂಗ್ರಾಳಿ ಕೆ.ಎಚ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹೊಸ ಕೆರೆ ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ನರೇಗಾ ಕಾರ್ಮಿಕರಿಗೆ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿ, ಕಾರ್ಮಿಕರಿಗೆ ಕುಟುಂಬದ ಜವಾಬ್ದಾರಿ ಮತ್ತು ಆರ್ಥಿಕ ತೊಂದರೆ ಇರುವುದರಿಂದ ಆರೋಗ್ಯದ ಕಡೆ ಗಮನಹರಿಸುವುದಿಲ್ಲ ಇದರಿಂದಾಗಿ ತಮ್ಮ ಆರೋಗ್ಯಕ್ಕೆ ತೊಂದರೆಯಾಗಿ ದುಡಿಮೆ ಇಲ್ಲದಂತಾಗಿ ಮತ್ತಷ್ಟು ತೊಂದರೆಗೆ ಒಳಗಾಗುವ ಸಂಭವ ಇರುತ್ತದೆ. ಸಮಯಕ್ಕೆ ಸರಿಯಾಗಿ ಊಟೋಪಚಾರ ಮಾಡಿಕೊಂಡು ಉತ್ತಮ ಆರೋಗ್ಯವಂತರಾಗಿ ಬಾಳಬೇಕು. ಕಾಮಗಾರಿ ಸ್ಥಳದಲ್ಲಿ ಬಿಸಿಲು ಹೆಚ್ಚಿಗೆ ಇರುವದರಿಂದ ಹೆಚ್ಚು ಹೆಚ್ಚು ನೀರು ಕುಡಿಯಬೇಕು ಜೊತೆ ಹಣ್ಣು ತರಕಾರಿಗಳನ್ನು ಹೆಚ್ಚು ಸೇವಿಸಬೇಕು ಎಂದು ತಿಳಿಸಿದರು.

ಕೂಲಿಕಾರರು ತಮ್ಮ ಜಮೀನಿನಲ್ಲಿ ಕೃಷಿಹೊಂಡ ಕಾಮಗಾರಿ ಅನುಷ್ಠಾನ ಮಾಡಿಕೊಳ್ಳಬಹುದು. ಜಾನುವಾರು, ಮೇಕೆಗಳು ಇದ್ದರೆ ದನದ ದೊಡ್ಡಿ, ಕುರಿದೊಡ್ಡಿ ಸಹ ನಿರ್ಮಿಸಿಕೊಳ್ಳಲು ಈ ಯೋಜನೆಯಲ್ಲಿ ಅವಕಾಶವಿದೆ. ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿ ವೈಯಕ್ತಿಕ ಕಾಮಗಾರಿಗಳ ಸದುಪಯೋಗ ಪಡೆದುಕೊಳ್ಳಬಹುದು. ಕೂಲಿಕಾರರು ವೈಯಕ್ತಿಕ ಬ್ಯಾಂಕ್ ಖಾತೆ ಹೊಂದಿದ್ದರೆ ಮಾತ್ರ ಸಕಾಲದಲ್ಲಿ ಕೆಲಸ ನೀಡಲು ಮತ್ತು ಕೂಲಿ ಪಾವತಿಸಲು ಸಾಧ್ಯ. ಉದ್ಯೋಗ ಚೀಟಿಯಲ್ಲಿರುವ ಕೂಲಿಕಾರರು ತಮ್ಮ ವೈಯಕ್ತಿಕ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಜೋಡಣೆ ಮಾಡಿಸಬೇಕು ಎಂದರು.

ಈ ವೇಳೆ ನರೇಗಾ ಕೂಲಿಕಾರ್ಮಿಕರಿಗೆ ಆರೋಗ್ಯ ಇಲಾಖೆಯಿಂದ ವಿವಿಧ ತಪಾಸಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಐಇಸಿ ಸಂಯೋಜಕ ರಮೇಶ ಮಾದರ, ಗ್ರಾಮ ಪಂಚಾಯತಿ ಸಿಬ್ಬಂದಿ ಡಿಇಒ ಪ್ರಶಾಂತ ಎಸ್. ಹೋಸಮನಿ, ಬಿಎಫ್‌ಟಿ ಕೃಷ್ಣಾ ಪಾಟೀಲ್, ವೈದ್ಯಕೀಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು.



ಜಲ ಸಂಗ್ರಹಾಲಯ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ಶಾಸಕ ವೈದ್ಯ

ಯರಗಟ್ಟಿ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಳಗಾವಿ (ಉಪ ವಿಭಾಗ ಸವದತ್ತಿ) ಆಶ್ರಯದಲ್ಲಿ 2025-26ನೇ ಸಾಲಿನ ಯೋಜನೆಯಡಿ ಸಮೀಪದ ಸತ್ತಿಗೇರಿ ಗ್ರಾಮದ ಕೊಡ್ಲಿವಾಡ ಪ್ಲಾಟ್ ಹತ್ತಿರ ನೂತನವಾಗಿ ನಿರ್ಮಾಣವಾಗಲಿರುವ ಮೇಲ್ಮಟ್ಟದ ಜಲ ಸಂಗ್ರಹಾಲಯದ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗ್ರಾಮೀಣ ಭಾಗದ ಪ್ರತಿಯೊಂದು ಮನೆಗೂ ಸುಸಜ್ಜಿತ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ. ಸುಮಾರು 30.00 ಲಕ್ಷ ಅಂದಾಜು ಮೊತ್ತದ ಈ ಯೋಜನೆಯಿಂದ ಸತ್ತಿಗೇರಿ ಗ್ರಾಮದ ಸಾರ್ವಜನಿಕರ ಕುಡಿಯುವನೀರಿನ ಅಗತ್ಯತೆ ಸಂಪೂರ್ಣವಾಗಿ ಈಡೇರಲಿದ್ದು, ಕಾಮಗಾರಿಯನ್ನು ಅತ್ಯಂತ ಗುಣಮಟ್ಟದೊಂದಿಗೆ ಶೀಘ್ರವಾಗಿ ಪೂರ್ಣಗೊಳಿಸಲು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನ್ನವರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪ್ರಕಾಶ ವಾಲಿ, ಮಲಿಕಸಾಬ ಬಾಗವಾನ, ಬಂಗಾರೆಪ್ಪ ಹರಳಿ, ಸುರೇಶ ಭಜಂತ್ರಿ, ಬಸವರಾಜ ಸತ್ತೂರಿ, ಯಂಕಣ್ಣಾ ಕಳ್ಳಿಗುದ್ದಿ, ಸತ್ತಿಗೇರಿ ಗ್ರಾ. ಪಂ. ಪಿಡಿಓ ಎ. ಬಿ ಬಂಗಾರಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಗೋಪಾಲ ದಳವಾಯಿ, ಉಮೇಶ ಮಾಗುಂಡನ್ನವರ, ಸಿದ್ದಪ್ಪ ರಂಗರಣ್ಣವರ, ಬನಪ್ಪಗೌಡ ಪಾಟೀಲ, ಮುಗಬಶೀರ ಭಾಗವಾನ, ಜಯವಂತ ಹಾದಿಮನಿ, ರುದ್ರಪ್ಪ ತುಮಂದಿ, ನಾಗಪ್ಪ ತುರಮಂದಿ, ಶಿವಪ್ಪ ದೇಸಾಯಿ, ಆರ್ ಡಬ್ಲ್ಯೂಎಸ್ ಇಲಾಖೆಯ ಅಧಿಕಾರಿಗಳು ಬಸವರಾಜ ಅಯ್ಯನಗೌಡ್ರ, ಪ್ರೇಮ ರಾಠೋಡ, ಗ್ರಾಮದ ಹಿರಿಯರು, ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.



ಅಂಗಾಂಶ ಕೃಷಿ ಬಾಳೆ ಬೇಸಾಯಕ್ಕೆ ರೈತರು ಮುಂದಾಗಿ

ಬೆಳಗಾವಿ : ಬಾಳೆಹಣ್ಣು ದೇಶದ ಅತ್ಯಂತ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಇದರ ಉತ್ಪಾದಕತೆಯನ್ನು ಹೆಚ್ಚಿಸಲು ಸಾಂಪ್ರದಾಯಿಕ ಬಾಳೆ ಕಂದುಗಳ ಬದಲಿಗೆ ವೈಜ್ಞಾನಿಕ ತಂತ್ರಜ್ಞಾನದ ಅಂಗಾಂಶ ಕೃಷಿ ಬಾಳೆ ಸಸಿಗಳನ್ನು ಬಳಸುವಂತೆ ತೋಟಗಾರಿಕೆ ಇಲಾಖೆ ರೈತರಲ್ಲಿ ವಿನಂತಿಸಿದೆ.

ಭಾರತದಲ್ಲಿ ವಾರ್ಷಿಕವಾಗಿ 9.00 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 383.00 ಲಕ್ಷ ಮೆಟ್ರಿಕ್ ಟನ್ ಬಾಳೆ ಉತ್ಪಾದನೆಯಾಗುತ್ತಿದ್ದು, ಪ್ರತಿ ಹೆಕ್ಟೇರ್ಗೆ 42.00 ಮೆಟ್ರಿಕ್ ಟನ್ ಉತ್ಪಾದಕತೆ ಇದೆ. ಆದರೆ, ಕರ್ನಾಟಕದಲ್ಲಿ 46.00 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕೇವಲ 12.00 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತಿದ್ದು, ಪ್ರತಿ ಹೆಕ್ಟೇರ್ಗೆ ಉತ್ಪಾದಕತೆ ಕೇವಲ 26.00 ಮೆಟ್ರಿಕ್ ಟನ್ಗಳಷ್ಟಿದೆ. ಇದು ರಾಷ್ಟ್ರೀಯ ಸರಾಸರಿಗಿಂತ ಗಣನೀಯವಾಗಿ ಕಡಿಮೆಯಾಗಿದೆ. ರೈತರಲ್ಲಿ ಸಮರ್ಪಕ ಮಾಹಿತಿಯ ಕೊರತೆಯಿಂದಾಗಿ ಇಂದಿಗೂ ಹಳೆಯ ಹಾಗೂ ಸಾಂಪ್ರದಾಯಿಕ ಬಾಳೆ ಕಂದುಗಳನ್ನು ನಾಟಿ ಮಾಡುತ್ತಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ.

ರಾಜ್ಯದಲ್ಲಿ ಬಾಳೆ ಇಳುವರಿಯನ್ನು ಹೆಚ್ಚಿಸಲು ತೋಟಗಾರಿಕೆ ಇಲಾಖೆಯು ರೈತರಿಗೆ ಸುಧಾರಿತ ತಂತ್ರಜ್ಞಾನದ ಅಂಗಾಂಶ ಕೃಷಿ (ಟಿಶ್ಯೂ ಕಲ್ಚರ್) ಬಾಳೆ ಸಸಿಗಳನ್ನು ಬಳಸುವಂತೆ ಪ್ರೋತ್ಸಾಹಿಸುತ್ತಿದೆ. ರೈತರು ಸಾಮಾನ್ಯವಾಗಿ ಬಳಸುವ ಸಾಂಪ್ರದಾಯಿಕ ಬಾಳೆ ಕಂದುಗಳಿಗೂ ಮತ್ತು ವೈಜ್ಞಾನಿಕವಾಗಿ ಪ್ರಯೋಗಾಲಯದಲ್ಲಿ ಸಿದ್ಧಪಡಿಸಲಾಗುವ ಅಂಗಾಂಶ ಕೃಷಿ ಸಸಿಗಳಿಗೂ ಇರುವ ಪ್ರಮುಖ ಹದಿಮೂರು (13) ವ್ಯತ್ಯಾಸಗಳನ್ನು ಇಲಾಖೆಯು ರೈತರ ಮಾಹಿತಿಗಾಗಿ ಬಿಡುಗಡೆ ಮಾಡಿದೆ.

ಬೇಸಾಯದ ವೆಚ್ಚ ಮತ್ತು ಒಟ್ಟು ಲಾಭ : ಆರಂಭಿಕ ವೆಚ್ಚವನ್ನು ಗಮನಿಸಿದರೆ, ಸಾಂಪ್ರದಾಯಿಕ ಬಾಳೆ ಕಂದುಗಳ ಖರೀದಿ ವೆಚ್ಚ ಕಡಿಮೆಯಿರುತ್ತದೆ ಮತ್ತು ಅಂಗಾಂಶ ಕೃಷಿ ಸಸಿಗಳ ಆರಂಭಿಕ ವೆಚ್ಚ ಕೊಂಚ ಹೆಚ್ಚಿರುತ್ತದೆ. ಆದರೆ, ದೀರ್ಘಕಾಲಿಕ ಸುಸ್ಥಿರ ಕೃಷಿಯ ದೃಷ್ಟಿಯಿಂದ ನೋಡಿದಾಗ ಸಾಂಪ್ರದಾಯಿಕ ಪದ್ಧತಿಯಲ್ಲಿ ಮಣ್ಣಿನಲ್ಲಿ ರೋಗ ಸಂಗ್ರಹವಾಗುವ ಸಾಧ್ಯತೆ ಹೆಚ್ಚಿರುತ್ತದೆ ಮತ್ತು ಕಾರ್ಮಿಕ ನಿರ್ವಹಣಾ ವೆಚ್ಚ ಹೆಚ್ಚಾಗಿ ಲಾಭ ಅಸ್ಥಿರವಾಗಿರುತ್ತದೆ. ಆದರೆ ಅಂಗಾಂಶ ಕೃಷಿಯಲ್ಲಿ ಸುಲಭ ನಿರ್ವಹಣೆಯಿಂದಾಗಿ ಕಾರ್ಮಿಕ ವೆಚ್ಚ ಕಡಿಮೆಯಾಗುವುದಲ್ಲದೆ, ಮಾರುಕಟ್ಟೆಯಲ್ಲಿ ಹಣ್ಣುಗಳಿಗೆ ಉತ್ತಮ ಬೆಲೆ ಸಿಗುವುದರಿಂದ ದೀರ್ಘಾವಧಿಯಲ್ಲಿ ರೈತರಿಗೆ ಅತ್ಯಧಿಕ ಲಾಭ ದೊರೆಯುತ್ತದೆ. ವಿವಿಧ ಹಂತದ ಬಾಳೆ ಸಸಿಗಳ ದರ ಇಂತಿದೆ : ಎಕ್ಸ್ ಅಗಾರ್ ಹಂತದ ಸಸಿ: ಪ್ರತಿ ಸಸಿಗೆ ಕೇವಲ ರೂ. 6/- 98 ಕ್ಯಾವಿಟಿವುಳ್ಳ ಪ್ರೋರಿಟ್ರೇ ಸಸಿ: ಪ್ರತಿ ಸಸಿಗೆ ಕೇವಲ ರೂ. 7/- 46 ಪಾಲಿಬ್ಯಾಗ್ ಸಸಿ: ಪ್ರತಿ ಸಸಿಗೆ ಕೇವಲ ರೂ. 12/- ರೈತರು ಯಾವುದೇ ಖಾಸಗಿ ವ್ಯಕ್ತಿಗಳಿಂದ ವಂಚನೆಗೊಳಗಾಗದೆ, ಇಲಾಖೆಯ ಅಧಿಕೃತ ಹಾಗೂ ವಿಶ್ವಾಸಾರ್ಹ ಮೂಲದಿಂದಲೇ ಸಸಿಗಳನ್ನು ಖರೀದಿಸಿ ಆರ್ಥಿಕ ಪ್ರಗತಿ ಹೊಂದಬಹುದಾಗಿದೆ. ಉತ್ತಮ ಗುಣಮಟ್ಟದ ರೋಗರಹಿತ ಅಂಗಾಂಶ ಕೃಷಿ ಬಾಳೆ ಸಸಿಗಳನ್ನು ರಾಯಲ್ ಮೀನಾಕ್ಷಿ ಮಾಲ್ ಎದುರಿಗಿರುವ ಬೆಂಗಳೂರಿನ ಜೈವಿಕ ಕೇಂದ್ರ, ಹುಳಿಮಾವು ಇಲ್ಲಿಂದ ರೈತರು ನ್ಯಾಯೋಚಿತ ದರದಲ್ಲಿ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಅಧಿಕಾರಿಗಳನ್ನು 7975736459 ಅಥವಾ 9880234281 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಭಟ್ಕಳಕ್ಕೆ ಶ್ರೀಗಳ ಭೇಟಿ

ಅಂಕೋಲಾ: ಇತ್ತೀಚೆಗೆ ಭಟ್ಕಳ ತಾಲೂಕಿನ ಶಿರಾಲಿಯ ತಟ್ಟಿಹಕ್ಕಲದ ಹೊಳೆಯಲ್ಲಿ ಚಿಪ್ಪೆಕಲ್ಲು ಆಯಲು ಹೋಗಿ ಮೃತಪಟ್ಟ 11 ಜನ ದುರ್ದೈವಿಗಳ ಅವಲಂಬಿತರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಲಕ್ಷ ಮತ್ತು ಮೀನುಗಾರಿಕೆ ಇಲಾಖೆಯ ಪರಿಹಾರವಾಗಿ 10 ಲಕ್ಷ ಸೇರಿದಂತೆ ತಲಾ 15 ಲಕ್ಷ ಪರಿಹಾರದ ಚೆಕ್ಕುಗಳನ್ನು ನೀಡಿ ಸಹಾಯ ಮಾಡಿರುವ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮತ್ತು ಉತ್ತರ ಕನ್ನಡ ಜಿಲ್ಲಾಡಳಿತಕ್ಕೆ ಧನ್ಯವಾದವಾದಗಳನ್ನು ಸಲ್ಲಿಸುವುದಾಗಿ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ರಾಷ್ಟ್ರೀಯ ಅಧ್ಯಕ್ಷ, ಶ್ರೀನಾರಾಯಣಗುರು ಶಕ್ತಿಪೀಠದ ಪ್ರಣಾವಾನಂದ ಸ್ವಾಮಿಗಳು ತಿಳಿಸಿದ್ದಾರೆ. ದುರ್ಘಟನೆ ನಡೆದ ದಿನದಂದೇ ಮುಖ್ಯಮಂತ್ರಿಗಳು ಸರ್ಕಾರದ 5 ಲಕ್ಷ ಪರಿಹಾರ ಘೋಷಣೆ ಮಾಡಿದ್ದರು ನಂತರ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಮೀನುಗಾರಿಕೆ ಸಚಿವರೂ ಆಗಿರುವ ಮಂಕಾಳ ವೈದ್ಯ ಅವರು ಮೀನುಗಾರರಿಗೆ ಇಲಾಖೆಯಿಂದ ನೀಡುವ ಪರಿಹಾರದಂತೆ ಮೃತಪಟ್ಟವರ ಕುಟುಂಬಗಳಿಗೆ 10 ಲಕ್ಷ ಪರಿಹಾರ ಘೋಷಣೆ ಮಾಡಿರುವುದು ಅಭಿನಂದನೀಯ ಎಂದು ಸ್ವಾಮಿ ಪ್ರಣವಾನಂದರು ತಿಳಿಸಿದ್ದಾರೆ. ಮೇ 30ರಂದು ಬೆಳಗ್ಗೆ 10 ಗಂಟೆಗೆ ಪ್ರಣವಾನಂದ ಸ್ವಾಮಿಗಳು ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಭೇಟಿ ನೀಡಲಿದ್ದಾರೆ.

ಗಂಗಾಧರ ಶ್ರೀ ಸಮಾಜದ ದಿಕ್ಕು ತೋರಿದ ಮಹಾನ್ ದಾರ್ಶನಿಕ

ಬೈಲಹೊಂಗಲ: ಲಿಂಗೈಕ್ಯ ಗಂಗಾಧರ ಸ್ವಾಮೀಜಿ ಅವರು ಕೇವಲ ಧಾರ್ಮಿಕ ಗುರುಗಳಲ್ಲ, ಅವರು ಸಮಾಜದ ದಿಕ್ಕು ತೋರಿದ ಮಹಾನ್ ದಾರ್ಶನಿಕರು. ಶಿಕ್ಷಣವೇ ಸಮಾಜದ ಶಕ್ತಿ ಎಂದು ನಂಬಿ, ಬಡತನದಲ್ಲಿದ್ದ ಮಠವನ್ನು ತಮ್ಮ ಪರಿಶ್ರಮ, ದೂರದೃಷ್ಟಿ ಮತ್ತು ಸೇವಾಭಾವದಿಂದ ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಕೇಂದ್ರವಾಗಿ ರೂಪಿಸಿರುವ ಕೀರ್ತಿ ಅವರಿಗೆ ಸಲ್ಲುತ್ತದೆ' ಎಂದು ಪೀಠಾಧಿಪತಿ ಪ್ರಭುನೀಲಕಂಠ ಸ್ವಾಮೀಜಿ ಹೇಳಿದರು.

ನಗರದ ಮೂರುಸಾವಿರಮಠದಲ್ಲಿ ಗುರುವಾರ ಶಿಕ್ಷಣ ಕ್ಷೇತ್ರದ ಹರಿಕಾರ ಲಿಂಗೈಕ್ಯ ಗಂಗಾಧರ ಸ್ವಾಮೀಜಿ ಅವರ 17ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ನಡೆದ ವಿಶೇಷ ಧಾರ್ಮಿಕ ಕಾರ್ಯಕ್ರಮ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಗಂಗಾಧರ ಶ್ರೀಗಳು ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ.



ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಕಾರ್ಯಗಳನ್ನು ನಡೆಸಿ ರಾಜ್ಯಮಟ್ಟದಲ್ಲಿ ಮಠಕ್ಕೆ ಗೌರವ ತಂದುಕೊಟ್ಟಿದ್ದಾರೆ. ಅವರ ಸೇವಾ ಕಾರ್ಯಗಳು ಕೇವಲ ಮಠದ ವಲಯಕ್ಕೆ ಸೀಮಿತವಾಗಿರಲಿಲ್ಲ. ಗ್ರಾಮೀಣ ಭಾಗದ ಜನರಿಗೆ ಶಿಕ್ಷಣದ ಬೆಳಕು ತಲುಪುವಂತೆ ಮಾಡಿ, ಅನೇಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಿರ್ಮಿಸಿದ್ದಾರೆ. ಕೃಷಿ ಕಾಯಕದಿಂದ ಆರಂಭಿಸಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡ ಅವರ ಜೀವನವೇ ಒಂದು ಪ್ರೇರಣಾದಾಯಕ ಅಧ್ಯಾಯವಾಗಿಸಿದ್ದಾರೆ. ಅವರು ಹಾಕಿದ ಅಡಿಪಾಯದ ಮೇಲೆ ಮಠವು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಉತ್ತಮವಾಗಿ ಬೆಳೆಯುತ್ತಿದೆ' ಎಂದರು.

ಮಾದನ ಹಪ್ಪರಗಿ ಅಭಿನವ ಶಿವಲಿಮಗ ಸ್ವಾಮೀಜಿ, ಚಿಕ್ಕಲಪರ್ವಿ ಸದಾಶಿವ ಸ್ವಾಮೀಜಿ, ದೇವರಶೀಗಹಳ್ಳಿ ಉಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಬಳಗಾನೂರ ಸಿದ್ಧಬಸವ ಸ್ವಾಮೀಜಿ, ಯಡ್ರಾವಿಯ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯವಹಿಸಿದ್ದರು.

ಲಿಂಗೈಕ್ಯ ಗಂಗಾಧರಸ್ವಾಮೀಜಿ ಅವರ ಗದ್ದುಗೆಗೆ ಬೆಳಗ್ಗೆ ಮಹಾ ರುದ್ರಾಭಿಷೇಕ ನೆರವೇರಿಸಲಾಯಿತು. ನಂತರ ಮಧ್ಯಾಹ್ನ 12 ಗಂಟೆಗೆ ಭಕ್ತರಿಗಾಗಿ ಮಹಾಪ್ರಸಾದ ನಡೆಯಿತು.

ಇದೇ ವೇಳೆ ಎಸ್.ಎನ್.ವ್ಹಿ.ವ್ಹಿ.ಎಸ್ ಸಂಸ್ಥೆಯ ನಿಯೋಜಿತ ವೃದ್ಧಾಶ್ರಮ ಹಾಗೂ ನೂತನವಾಗಿ ಪ್ರಾರಂಭವಾಗುತ್ತಿರುವ ಪ್ಯಾರಾಮೆಡಿಕಲ್ ಕೋರ್ಸ್ ಉದ್ಘಾಟನೆ ನಡೆಯಿತು.

ಗುರು ಮೆಟಗುಡ್ಡ, ಶಿವಾನಂದ ಬಡ್ಡಿಮನಿ, ಸಂಗಯ್ಯ ಯರಗಂಬಳಿಮಠ, ಡಾ.ಸುಭಾಸ ಬಗಾಡೆ, ಪ್ರಾಚಾರ್ಯ ಎನ್.ಎಸ್. ಚಿಲಮೂರ, ವಿರುಪಾಕ್ಷ ಕೋರಿಮಠ, ವ್ಹಿ.ಕೆ.ಬಡಿಗೇರ, ಬಸವರಾಜ ಗುರನ್ನವರ, ಸಿ.ಎಸ್.ಭಾಂವಿಹಾಳ, ನಂದು ಹರುಕುಣಿ, ಶಂಕರ ತಲ್ಲೂರ ಸೇರಿದಂತೆ ಅನೇಕ ಭಕ್ತರು ಇದ್ದರು.

ಶ್ರೇಷ್ಠ ಪರಂಪರೆ ಹೊಂದಿದ ಭಾರತ: ಮಂಜುನಾಥ ಭಾರತಿ ಶ್ರೀ

ಮಾಂಜರಿ: ಸುಸಂಸ್ಕೃತ ದೇಶವಾದ ಭಾರತವು ಸಂತರು ಮತ್ತು ಋಷಿಮುನಿಗಳ ಶ್ರೇಷ್ಠ ಪರಂಪರೆಯನ್ನು ಹೊಂದಿದೆ. ಸಂತರು ಮತ್ತು ಋಷಿಮುನಿಗಳ ಆಧ್ಯಾತ್ಮಿಕ ಪ್ರವಚನಗಳಿಂದಾಗಿ ಭಾರತೀಯ ಸಂಸ್ಕೃತಿಯನ್ನು ವಿಶ್ವದಲ್ಲೇ ಅತ್ಯುತ್ತಮವೆಂದು ಪರಿಗಣಿಸಲಾಗಿದೆ ಎಂದು ಬೆಂಗಳೂರು ಗೋಸಾವಿ ಮಠದ ಮಠಾಧೀಶ ಮಂಜುನಾಥ ಭಾರತಿ ಸ್ವಾಮೀಜಿ ಹೇಳಿದರು.

ಗ್ರಾಮದ ಸಿದ್ಧಗಿರಿ ಸೇವಾ ಸಂಸ್ಥಾನ ಮಠದ ವತಿಯಿಂದ ನಡೆದ ಮಕ್ಕಳ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿವಿಧ ದೇಶಗಳ ಸಂಸ್ಕೃತಿಗಳು ವಿಭಿನ್ನವಾಗಿದ್ದರೂ, ಭಾರತೀಯ ಸಂಸ್ಕೃತಿಯು ಅತ್ಯಂತ ಶ್ರೇಷ್ಠವಾಗಿದೆ. ಈ ಸಂಸ್ಕೃತಿಯನ್ನು ಸಂರಕ್ಷಿಸುವುದರ ಜೊತೆಗೆ, ಚಿಕ್ಕವಯಸ್ಸಿನಲ್ಲಿಯೇ ಯುವ ಪೀಳಿಗೆಯಲ್ಲಿ ಸರಿಯಾದ ಮೌಲ್ಯಗಳನ್ನು ತುಂಬುವುದು ಅಗತ್ಯವಾಗಿದೆ ಎಂದರು.

ಸರ್ಕಾರದ ಯೋಜನೆಗಳ ಲಾಭ ಪಡೆಯುವ ಮೂಲಕ ಮರಾಠಾ ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಬಲರಾಗಬೇಕೆಂದು ಅವರು ಮನವಿ ಮಾಡಿದರು.



ಅಂಕಲಿಯ ಶ್ರೀಮಂತ ಮಹಾದದಾಜಿರಾಜೆ ಶಿತೋಳೆ ಸರ್ಕಾರ ಅಧ್ಯಕ್ಷತೆ ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಪಿಕೆಪಿಎಸ್ ಅಧ್ಯಕ್ಷರಾದ ಮೋಹನ ಲೋಕರೆ, ಶಾಂತಿ ಸಾಗರ ಶಿಕ್ಷಣ ಪ್ರಸಾರ ಮಂಡಳದ ಅಧ್ಯಕ್ಷರಾದ ಸನತ್ ಕುಮಾರ ಪಾಟೀಲ, ಮಾಜಿ ಜಿ ಪ ಸದಸ್ಯರಾದ ಪಾಂಡುರಂಗ ಮಾನೆ, ಸುಮಿತ್ರಾ ಉಗಲೆ, ಶ್ರೀಪಾದ ಗಿರಿ ಸ್ವಾಮಿ ಉಪಸ್ಥಿತರಿದ್ದರು.

ಅಂಕಲಿಯ ಶ್ರೀಮಂತ ಮಹಾದದಾಜಿರಾಜೆ ಶಿತೋಳೆ, ಸನತ್‌ಕುಮಾರ ಪಾಟೀಲ, ಶ್ರೀಪಾದಗಿರಿ ಮಹಾರಾಜರು ಕೂಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ 3 ದಿನಗಳ ಬಾಲ ಸಂಸ್ಕಾರ ಶಿಬಿರಕ್ಕೆ ಧನ ಸಹಾಯ ಹಾಗೂ ಅನ್ನದಾನ ನೀಡಿದ ನಾಗರಿಕರನ್ನು ಸಿದ್ಧಗಿರಿ ಸಂಸ್ಥಾನ ಮಠದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರದ ದತ್ತ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಅಮರ ಯಾದವ್, ಅಶೋಕ ಕಳವಿರೆ, ರಾಮಚಂದ್ರ ಭೋಸಲೆ, ವಿಶ್ವಾಸ ರಸಾಳೆ, ವೀರಸಿಂಗ್ ಘೋರ್ಪಡೆ, ಅಶೋಕ ಹವಳೆ, ಅರ್ಜುನ್ ವಾಡಕರ, ಸುರೇಶ ರೆಂದಾಳೆ, ಪೋಪಟ್ ಲಾಮಕಾಣೆ, ಡಾ.ಜೆ.ಬಿ.ಮಾನೆ, ಡಾ.ವಿಜಯ ಉಪಾಧ್ಯೆ, ಹಾಗೂ ಇನ್ನುಳಿದ ನಾಗರಿಕರು ಮತ್ತು ಗ್ರಾಮಸ್ಥರು ಹಾಜರಿದ್ದರು ಸತೀಶ್ ದಾಭೋಳೆ ಸ್ವಾಗತಿಸಿ ನಿರೂಪಿಸಿ ವಂದಿಸಿದರು.

ಕಿರುಸುದ್ದಿ

ನಾಳೆ ಪೌರ್ಣಿಮಾ ಧರ್ಮ ಚಿಂತನ ಕಾರ್ಯಕ್ರಮ

ಅಮೀನಗಡ: ಸಮೀಪದ ಕೆಲೂರ ಗ್ರಾಮದ ಗುರು ಮಂಟೇಶ್ವರ ಮಠ ವಿಶ್ವಾರಾಧ್ಯರ ಮಹಾಮಂಟಪದಲ್ಲಿ ಮೇ 31ರಂದು ಭಾನುವಾರ ಅಧಿಕ ಕಾರ ಹುಣ್ಣಿಮೆ ಸಂಜೆ ಬೆಳದಿಂಗಳ ಬೆಳಕಲ್ಲಿ 282ನೇ ಪೌರ್ಣಿಮಾ ಧರ್ಮ ಚಿಂತನ, ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದವರಿಗೆ ಗೌರವ, ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಕೆಲೂರ ಶಿವಗಂಗಾ ಕ್ಷೇತ್ರದ ಪಟ್ಟದ ಡಾ.ಮಲಯ ಶಾಂತಮುನಿ ದೇಶಿ ಕೇಂದ್ರ ಶಿವಾಚಾರ್ಯ ಸ್ವಾಮೀಜಿಗಳವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಪಶು ಇಲಾಖೆ ಪಶು ಪರೀಕ್ಷಕರಾಗಿ ನಿವೃತ್ತಿ ಹೊಂದಿದ ಡಾ.ವೈ.ಎನ್.ತುಂಬದ, ಸಾರಿಗೆ ಇಲಾಖೆ ಚಾಲಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ನಾಗನಗೌಡ ನಾಡಗೌಡ ಅವರಿಗೆ ಶ್ರೀಮಠದಿಂದ ಸನ್ಮಾನ, ಡಾ.ವೈ.ಎನ್.ತುಂಬದ ಕುಟುಂಬದವರಿಂದ ಅನ್ನದಾಸೋಹ ಹತ್ತು ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಮುಖ್ಯ ಸಂಘಟಕರು ತಿಳಿಸಿದ್ದಾರೆ.

ಸಿಂದಗಿಮಠ ಭಾಗಿ



ಗುಳೇದಗುಡ್ಡ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬೆಂಗಳೂರಿನ ಬ್ಯಾಂಡ್ ಸ್ಟಾಂಡ್ ಕಬ್ಬನ್ ಪಾರ್ಕ್ ಉದ್ಯಾನವನದಲ್ಲಿ ಉದಯರಾಗ ಕಾರ್ಯಕ್ರಮದಲ್ಲಿ ಪಟ್ಟಣದ ಸಂಗೀತ ಶಿಕ್ಷಕ ಬಸವರಾಜ ಸಿಂದಗಿಮಠ ಅವರಿಂದ ಹಿಂದುಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಮೇ 31ರಂದು ಭಾನುವಾರ ನಡೆಯಲಿದೆ. ಹಾರ್ಮೋನಿಯಂ ಭೀಮಪ್ಪ ಹಳ್ಳಿಗೋಳ, ತಬಲಾ ಸಂಗೀತ ಶಿಕ್ಷಕ ಶ್ರೀಕಾಂತ ಚಿಮಲ, ಬಸವರಾಜ ಜಿಡಗಿ, ರಿದಮ್‌ಪ್ಯಾಡ್ ಕಿರಣ ಪಾಂಡವಪುರ ಸಾಥ್ ನೀಡಲಿದ್ದಾರೆ.

ನಾಳೆ ಪುಸ್ತಕಾವಲೋಕನ ಕಾರ್ಯಕ್ರಮ

ತೇರದಾಳ: ಪಟ್ಟಣದಲ್ಲಿ ಮೇ 31ರಂದು ಭಾನುವಾರ ಸಂಜೆ 6 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತು ತೇರದಾಳ ತಾಲೂಕು ಘಟಕದ ವತಿಯಿಂದ 3ನೇ ಪುಸ್ತಕಾವಲೋಕನ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾಹಿತ್ಯ ಪ್ರೇಮಿಗಳಾದ ಮಾರುತಿ ಹೂಗಾರ ಅವರ ನಿವಾಸದಲ್ಲಿ ಜರುಗಲಿದೆ. ಹಿರಿಯ ಸಾಹಿತಿ ವಿಜಯಪುರದ ದೊಡ್ಡಣ್ಣ ಭಜಂತ್ರಿಯವರ ಲೇಖನ ಸಂಚಯ 'ಸಂಗತ' ಕೃತಿಯನ್ನು ಕಸಾಪ ರಬಕವಿ-ಬನಹಟ್ಟಿ ತಾಲೂಕಿನ ಅಧ್ಯಕ್ಷ ಮ.ಕೃ.ಮೇಗಾಡಿಯವರು ಅವಲೋಕಿಸುವರು. ತೇರದಾಳದ ಹಿರಿಯ ಸಾಹಿತಿ ಎಸ್.ಆರ್.ರಾವಳ ಅವರ 'ಸಾಹಿತ್ಯ ಸಿಂಚನ' ಎಂಬ ಕೃತಿಯನ್ನು ರಬಕವಿಯ ಹಿರಿಯ ಸಾಹಿತಿ ಶಿವಾನಂದ ದಾಶ್ಯಾಳ ಅವರು ಬಿಡುಗಡೆ ಮಾಡುವರು. ಪ್ರವೀಣ ನಾಡಗೌಡ ಅಧ್ಯಕ್ಷತೆ, ನಿಂಗಪ್ಪ ಮಾಲಗಾಂವಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಕಸಾಪ ತಾಲೂಕು ಘಟಕ ತೇರದಾಳ ಅಧ್ಯಕ್ಷ ಗಂಗಾಧರ ಮೋಪಗಾರ ಹಾಗೂ ಸಾಹಿತ್ಯ ಪ್ರೇಮಿ ಮಾರುತಿ ಹೂಗಾರ ಉಪಸ್ಥಿತರಿರುವರು ಎಂದು ತೇರದಾಳ ತಾಲೂಕು ಕಸಾಪ ಘಟಕವು ತಿಳಿಸಿದೆ.

ಚಿಮ್ಮನಕಟ್ಟಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಬಾದಾಮಿ: ಮತಕ್ಷೇತ್ರದ ಯುವ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಕೆಪಿಸಿಸಿ ಮಾಧ್ಯಮ ವಕ್ತಾರ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಹಾಂತೇಶ ಹಟ್ಟಿ ಆಗ್ರಹಿಸಿದರು. ಶುಕ್ರವಾರ ನಗರದ ಕಾನಿಪ ಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ಅವರು 1978 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ನಂತರ ಸಚಿವರಾಗಿ ಕೆಲಸ ಮಾಡಿ, ಪಕ್ಷಕ್ಕೆ ದುಡಿದಿದ್ದಾರೆ. ಈಗ ಅವರ ಪುತ್ರ ಭೀಮಸೇನ ಚಿಮ್ಮನಕಟ್ಟಿ ಯುವಕರಾಗಿದ್ದು, ಅನೇಕ ಜನಪರ ಕೆಲಸ ಮಾಡುತ್ತಿದ್ದಾರೆ. ಪಕ್ಷದ ಸಂಘಟನೆ, ಭವಿಷ್ಯದಲ್ಲಿ ಬರುವ 2028 ರ ವಿಧಾನಸಭೆ ಚುನಾವಣೆಯಲ್ಲಿ ಪುನಃ ಪಕ್ಷವನ್ನು ಅಧಿಕಾರಕ್ಕೆ ತರಬೇಕಾದರೆ ಉತ್ತರ ಕರ್ನಾಟಕ ಭಾಗದಲ್ಲಿ ಕುರುಬ ಸಮಾಜದವರಿಗೆ ಯುವಕರ ಕೋಟಾದಲ್ಲಿ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡಿದರೆ ಐತಿಹಾಸಿಕ ಪ್ರವಾಸಿ ತಾಣ ಬಾದಾಮಿ ಮತಕ್ಷೇತ್ರದ ಅಭಿವೃದ್ಧಿ ಮಾಡಲು ಸಹಾಯಕವಾಗುತ್ತದೆ ಎಂದು ತಿಳಿಸಿದರು.

ಪ್ರಭು ವರ್ಚಗಲ್ ನಿಧನ



ಲೋಕಾಪುರ: ಸಮೀಪದ ಕಿಲ್ಲಾ ಹೊಸಕೋಟಿ ಗ್ರಾಮದ ದಾದನಟ್ಟಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಪ್ರಭು ಬಸಪ್ಪ ವರ್ಚಗಲ್ (86) ಧನರಾಗಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗ ಇದ್ದಾರೆ.



ಕಲಾದಗಿ: ಗ್ರಾಮದಲ್ಲಿ ಶಾಂತಿ ಮತ್ತು ಬಲಿದಾನದ ಸಂಕೇತವಾದ ಬಕ್ರೀದ ಹಬ್ಬವನ್ನು ಮುಸ್ಲಿಂ ಬಾಂಧವರು ಸಡಗರ ಸಂಭ್ರಮದೊಂದಿಗೆ ಆಚರಿಸಿದರು. ಬೆಳಿಗ್ಗೆ ಗ್ರಾಮದ ಇದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಕಬಡ್ಡಿ ಮ್ಯಾಟ್ ವಿತರಣೆ: ನ್ಯಾಮಗೌಡ

ಜಮಖಂಡಿ: ಸಿದ್ದು ನ್ಯಾಮಗೌಡ ಸೌಹಾರ್ದ ಸಂಸ್ಥೆಯು ಕಳೆದ ಏಳು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಅದರ ಜೊತೆಗೆ ಕ್ರೀಡಾ ಉತ್ತೇಜನಗಾಗಿ ಸಿದ್ದು ನ್ಯಾಮಗೌಡ ಕ್ರೀಡಾ ಸಂಸ್ಥೆಯನ್ನೂ ಸಹ ಪ್ರಾರಂಭ ಮಾಡಿದ್ದೇವೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು. ನಗರದ ಸಿದ್ದು ನ್ಯಾಮಗೌಡ ಸೌಹಾರ್ದ ಸಹಕಾರಿ ಬ್ಯಾಂಕ್ ಸಭಾಭವನದಲ್ಲಿ ದಿ.ಸಿದ್ದು ನ್ಯಾಮಗೌಡ ಅವರ 8ನೇ ಪುಣ್ಯಸ್ಮರಣೆ ಅಂಗವಾಗಿ ಸಿದ್ದು ನ್ಯಾಮಗೌಡ ಕ್ರೀಡಾ ಅಕಾಡೆಮಿಗೆ 5 ಲಕ್ಷ ರೂ. ಮೊತ್ತದ ಕಬಡ್ಡಿ ಮ್ಯಾಟ್ ವಿತರಿಸಿ ಅವರು ಮಾತನಾಡಿದರು. ಕ್ರೀಡಾಪಟುಗಳ ಉಚಿತ ಸೌಕರ್ಯಕ್ಕಾಗಿ ಸಹಕಾರ ಸಂಸ್ಥೆಯಿಂದ 1.25 ಲಕ್ಷ ರೂ.ಗಳನ್ನು ನೀಡಲಾಗುತ್ತಿದೆ. ತಾಲೂಕಿನ ಆಲಗೂರ ಗ್ರಾಮದ ಸ್ಕೇಟಿಂಗ್ ಕ್ರೀಡಾಪಟು ಆಯೇಶಾ ಮೋಮಿನ ಸಾಧನೆ ಗುರುತಿಸಿ 5 ಲಕ್ಷ ರೂ.ಗಳ ಧನ ಸಹಾಯ ಮಾಡಲಾಗಿದೆ. ತಾಲೂಕಿನ ಗಣಿ ಗ್ರಾಮದ ಬಡ ಜೂಡೋ ಕ್ರೀಡಾಪಟು ರಕ್ಷಿತಾ ರವೀಂದ್ರ, ಕೋಮಾರ ಅವರಿಗೆ 1 ಲಕ್ಷ ರೂ.ಧನಸಹಾಯ ಒದಗಿಸಲಾಗಿದೆ ಎಂದು ಹೇಳಿದರು. ಸಹಕಾರಿ ಸಂಸ್ಥೆಯು ರೈತರ ಅನುಕೂಲಕ್ಕಾಗಿ ರಸಗೊಬ್ಬರ, ಬೀಜ ಹಾಗೂ ಕೀಟನಾಶಕ ಮಾರಾಟ ಮಳಿಗೆಯನ್ನು ಸ್ಥಾಪಿಸಿದ್ದು ಯೋಗ್ಯ ದರದಲ್ಲಿ ರೈತರಿಗೆ ಅಗತ್ಯ ವಸ್ತುಗಳನ್ನು ಪೂರೈಸುತ್ತ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಈ ಕ್ರೀಡಾ ಸಂಸ್ಥೆಯಲ್ಲಿ ತರಬೇತಿ ಪಡೆದ ಅನೇಕ ಕ್ರೀಡಾಪಟುಗಳು ಪ್ರೋ ಕಬಡ್ಡಿಯಲ್ಲಿ ಖೇಲೋ ಇಂಡಿಯಾದಲ್ಲಿಯೂ ಕೂಡಾ ಭಾಗವಹಿಸಿದ್ದಾರೆ ಎಂದು ಹೇಳಿದರು. ಬಸವರಾಜ ನ್ಯಾಮಗೌಡ, ನೇಮಿನಾಥ ಜಕನೂರ, ಗುರಪ್ಪ ಗಲಗಲಿ, ಈಶ್ವರ ಚೌದರಿ ಇದ್ದರು.



ನಗರದ ಸಿದ್ದು ನ್ಯಾಮಗೌಡ ಸೌಹಾರ್ದ ಸಹಕಾರಿ ಬ್ಯಾಂಕ್ ಸಭಾಭವನದಲ್ಲಿ ದಿ.ಸಿದ್ದು ನ್ಯಾಮಗೌಡ ಅವರ 8ನೇ ಪುಣ್ಯಸ್ಮರಣೆ ಅಂಗವಾಗಿ ಸಿದ್ದು ನ್ಯಾಮಗೌಡ ಕ್ರೀಡಾ ಅಕಾಡೆಮಿಗೆ 5 ಲಕ್ಷ ರೂ. ಮೊತ್ತದ ಕಬಡ್ಡಿ ಮ್ಯಾಟ್ ಮಾಜಿ ಶಾಸಕ ಆನಂದ ನ್ಯಾಮಗೌಡ ವಿತರಿಸಿದರು.ಭಾಸ್ಕರ ಬಡಿಗೇರ, ಮೂರ್ತಿ ಕಲಾಜಗೋಳ, ನಿಂಗಪ್ಪ ಕಡಪಟ್ಟಿ, ರವಿ ಯಡಹಳ್ಳಿ, ಭೀಮಪ್ಪ ಬೆಳಗಲಿ, ಅನ್ವರ್ ಮೊಮಿನ್ ಇದ್ದರು.

ಸಾರ್ವಜನಿಕರ ಕೆಲಸಕ್ಕೆ ದುಡ್ಡು ಕೇಳಿದರೆ ನೇರವಾಗಿ ಸಂಪರ್ಕಿಸಿ
ಲೋಕಾಯುಕ್ತ ಕಚೇರಿಗೆ ದೂರು ನೀಡಿ

ಬಾಗಲಕೋಟೆ: ಸಾರ್ವಜನಿಕರಿಗೆ ಯಾವುದೇ ಇಲಾಖೆಯಲ್ಲಿ ತಮ್ಮ ಕೆಲಸಕ್ಕೆ ದುಡ್ಡಿನ ಬೇಡಿಕೆ ಇಟ್ಟು ಕೆಲಸ ಮುಂದೂಡುತ್ತಿದ್ದರೆ ಅಂತಹವರ ಬಗ್ಗೆ ನೇರವಾಗಿ ನವನಗರದಲ್ಲಿರುವ ಲೋಕಾಯುಕ್ತ ಕಚೇರಿಗೆ ಬಂದು ದೂರು ನೀಡಿದರೆ ನಾವು ಕ್ರಮ ವಹಿಸಲು ಸಿದ್ಧರಿದ್ದೇವೆ ಎಂದು ಲೋಕಾಯುಕ್ತ ಎಸ್ಪಿ ಮಹಾನಿಂಗ್ ನಂದಗಾಂವಿ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರಿಗಳು ವಿನ: ಕಾರಣ ಸಾರ್ವಜನಿಕರ ಕೆಲಸವನ್ನು ಅಧಿಕ ದಿನಗಳಿಂದ ದೂಡುತ್ತಿದ್ದರೆ ಅಂತಹದ್ದನ್ನು ಕೂಡ ನಮ್ಮ ಕಚೇರಿಗೆ ಬಂದು ಗಮನಕ್ಕೆ ತರಬಹುದು. ನೇರವಾಗಿ ಕೂಡ (ಮೊ: 9364062510) ನನ್ನನ್ನೂ ಸಂಪರ್ಕಿಸಿ ದೂರುಗಳನ್ನು ಹೇಳಿಕೊಳ್ಳಲು ಅವಕಾಶ ಇದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಪ್ರತಿ ತಿಂಗಳು ಎರಡನೇ ಬುಧವಾರ ಒಂದೊಂದು ತಾಲೂಕಿನಲ್ಲಿ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸುವ ಸಭೆ ಆಯೋಜಿಸಲಾಗುತ್ತದೆ. ಸಾರ್ವಜನಿಕರಿಂದ ಬರುವ ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥವಾಗುವುದನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆಗಳನ್ನು ಬಗೆ ಹರಿಸುವ ಕೆಲಸ ಮಾಡಲಾಗುವುದು. ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಇತ್ತೀಚಿಗೆ ಜಿಲ್ಲೆಯಲ್ಲಿ ಅಕ್ರಮ ಮರಗಳು ದಂಧೆ ಹೆಚ್ಚಾಗಿದ್ದರಿಂದ 17ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಕ್ರಮ ಮರಳು ನಡೆಸುವ ಸ್ಥಳಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಅಧಿಕವಾಗಿ ಸಂಗ್ರಹಿಸಿದ್ದ ಮರಳು, 50ಕ್ಕೂ ಹೆಚ್ಚು ಟಿಪ್ಪರ್, ಜೆಸಿಬಿಗಳನ್ನು



ವಶಕ್ಕೆ ಪಡೆದುಕೊಳ್ಳಲಾಗಿದ್ದು ಅಕ್ರಮ ಮರಳು ದಂಧೆ ನಡೆಸಲು ನಿಯಮಗಳನ್ನು ಉಲ್ಲಂಘಿಸಿರುವ ಕುರಿತು ಅರಣ್ಯ, ಪರಿಸರ, ತಹಶೀಲ್ದಾರ್ ಹೀಗೆ ಸಂಬಂಧಿಸಿದ ಇಲಾಖೆಯವರು ತನಿಖೆ ನಡೆಸಿ ವರದಿ ನೀಡಲು ತಿಳಿಸಲಾಗಿದೆ. ಈ ಕೆಲಸ ಕೂಡ ಪ್ರಗತಿಯಲ್ಲಿದೆ ಎಂದು ಹೇಳಿದರು.

ಸರ್ಕಾರಿ ಕಚೇರಿಗಳಲ್ಲಿ ನಡೆಯುವ ಭ್ರಷ್ಟಾಚಾರ, ದುಡ್ಡಿನ ಬೇಡಿಕೆ ಇಡುವ ಅಧಿಕಾರಿಗಳ ಮಾಹಿತಿಯನ್ನು ಲೋಕಾಯುಕ್ತ ಕಚೇರಿಗೆ ದೂರು ನೀಡಿದರೆ ಅಂತಹವರ ಮೇಲೆ ದಾಳಿ ನಡೆಸಿ ಕ್ರಮ ವಹಿಸಲಾಗುವುದು. ದೂರು ನೀಡುವವರು ಹೆಸರನ್ನು ಕೂಡ ಗೌಪ್ಯವಾಗಿ ಇಡಲಾಗುವುದು. ಇನ್ನೂ ಇ-ಸ್ವತ್ತು ಖಾತೆ ನೀಡಲು ವಿಳಂಬ ಮಾಡುವ ಇಲಾಖೆಗಳ ಮೇಲೆಯೂ ದಾಳಿ ನಡೆಸಲಾಗಿದೆ. ಇಂತಹ ಪ್ರಕರಣಗಳು ಇದ್ದರೆ ಸಾರ್ವಜನಿಕರು ಮಾಹಿತಿ ನೀಡಬೇಕು ಎಂದು ಹೇಳಿದರು.

ಲೋಕಾಯುಕ್ತ ಇಲಾಖೆಯಿಂದ ಅಧಿಕಾರಿಗಳ ಮೇಲೆ ನಡೆದ ದಾಳಿಯ ಪ್ರಕರಣಗಳ ಕುರಿತು ತನಿಖೆ ನಡೆಯುತ್ತಿವೆ. ಒಂದು ಪ್ರಕರಣದಲ್ಲಿ ಶಿಕ್ಷೆಯಾದ ಉದಾಹರಣೆ ಕೂಡ ಇದೆ. ಕೆಲವೊಂದು ಪ್ರಕರಣ ತನಿಖೆ ನಡೆಯುತ್ತಿವೆ ಎಂದು ಹೇಳಿದರು.

ಲೋಕಾಯುಕ್ತ ಡಿವೈಎಸ್ಪಿ ಸುರೇಶ ರೆಡ್ಡಿ, ಸಿಪಿಐ ನಾಗರಾಜು, ಮಲ್ಲಿಕಾರ್ಜುನ ಬಿರಾದಾರ ಇದ್ದರು.

ಸಾರ್ವಜನಿಕರ ಕೆಲಸ ಇತ್ಯರ್ಥ

ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಹೀಗೆ ವಿವಿಧ ಇಲಾಖೆಗಳ ಕಚೇರಿಗಳಲ್ಲಿ ತಮ್ಮ ಕೆಲಸವಾಗಲು ಸಾರ್ವಜನಿಕರು ಅರ್ಜಿಗಳನ್ನು ಸಲ್ಲಿಸಿದ್ದರೂ ಹಲವಾರು ದಿನಗಳಿಂದ ಅವುಗಳನ್ನು ಇತ್ಯರ್ಥ ಮಾಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದರೆ ಅಂತಹವುಗಳನ್ನು ಸಹ ನಮ್ಮ ಗಮನಕ್ಕೆ ತಂದರೆ ಅವುಗಳನ್ನು ಕಾಲಹರಣ ಮಾಡದೇ ಇತ್ಯರ್ಥ ಮಾಡಲು ಪ್ರಯತ್ನಿಸಲಾಗುವುದು.

ನವನಗರ ಸ್ವಚ್ಛತೆಗೆ ನಿರ್ಲಕ್ಷ್ಯ ಸಲ್ಲ

ಬಾಗಲಕೋಟೆ: ನವನಗರವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ನವನಗರದ ನಾಗರಿಕರು ಸಹಕಾರ ನೀಡಬೇಕು. ಸ್ವಚ್ಛತೆ ವಿಷಯದಲ್ಲಿ ಯಾರೇ ನಿರ್ಲಕ್ಷ್ಯ ಮಾಡಿದರೂ ಕಠಿಣ ಕ್ರಮಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಸೂಚಿಸಿದರು.

ನವನಗರದ ಸೆಕ್ಟರ್ ನಂ.35ರಲ್ಲಿ ಬಿಟಿಡಿಎದಿಂದ ಶುಕ್ರವಾರ ಆರಂಭಿಸಿದ ಸ್ವಚ್ಛತಾ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಸುತ್ತಮುತ್ತಲಿನ ವಾತಾವರಣ ಸ್ವಚ್ಛವಾಗಿಟ್ಟಾಗ ಮಾತ್ರ, ಸಾಂಕ್ರಾಮಿಕ ರೋಗಗಳಿಂದ ದೂರ ಇರಲು ಸಾಧ್ಯ. ಬಿಟಿಡಿಎದಿಂದ ನವನಗರ ಯೂನಿಟ್-1 ಮತ್ತು 2ರಲ್ಲಿ ಸ್ವಚ್ಛತಾ ಸಪ್ತಾಹ ಆರಂಭಿಸಲಾಗಿದೆ. ನವನಗರದ ಪ್ರತಿಯೊಂದು ಸೆಕ್ಟರ್ ಕೂಡ ಸ್ವಚ್ಛವಾಗಿರಬೇಕು. ಇದಕ್ಕಾಗಿ ಬಿಟಿಡಿಎ ಅಧಿಕಾರಿಗಳು, ಕಸ ಸಂಗ್ರಹದ ಗುತ್ತಿಗೆದಾರರು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಸ್ವಚ್ಛತೆ ಬಗ್ಗೆ ಈ ವರೆಗೆ ಹೆಚ್ಚು ಮುತುವರ್ಜಿ ವಹಿಸಿಲ್ಲ. ನವನಗರದ ರಸ್ತೆ ಪಕ್ಕದಲ್ಲೇ ಕಸ ಬಿದ್ದಿರುತ್ತದೆ. ಈ ರೀತಿಯ ನಿರ್ಲಕ್ಷ್ಯ ಸಹಿಸುವುದಿಲ್ಲ. ಸ್ವಚ್ಛತೆ ನವನಗರಕ್ಕಾಗಿ ಸಪ್ತಾಹ ಹಾಕಿಕೊಳ್ಳಲಾಗಿದೆ. ಸ್ವಚ್ಛತೆ, ಕುಡಿಯುವ ನೀರು ಸಹಿತ ಮೂಲಭೂತ ಸೌಲಭ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ. ಬಿಟಿಡಿಎದಿಂದ ನಡೆಯುವ ಪ್ರತಿಯೊಂದು ಕೆಲಸಕ್ಕೆ ವೇಗ ನೀಡಲು ಪ್ರಯತ್ನ ನಡೆದಿದೆ ಎಂದು ಹೇಳಿದರು.

ಬಿಟಿಡಿಎ ಮುಖ್ಯ ಎಂಜಿನೀಯರ್ ಚಂದ್ರಹಾಸ ಬಂಡಿ, ವಿಭಾಗ-1 ಇಇ ಎಸ್.ಎಸ್.ಕರಿಗಾರ, ವಿಭಾಗ-2ರ ಕಾರ್ಯನಿರ್ವಾಹಕ ಎಂಜಿನೀಯರ್ ವೈ.ಬಿ.ಪಾತ್ರೋಟಿ, ಅಧಿಕಾರಿ ಸುರೇಶ ತೆಗ್ಗಿ, ಸೋಮಲಿಂಗ ನೋಟಗಾರ, ಪ್ರಶಾಂತ ಲೋಕಾಪುರ, ಶ್ರೀಕಾಂತ ಹಿರೇಗೌಡರ, ರವಿ ಅಂತರಗೊಂಡ, ಹಾಲವರ, ಪ್ರಮುಖರಾದ ಶಿವಕುಮಾರ ನಂದಿಕೋಲಮಠ, ಶಂಕರ ತಪಶೆಟ್ಟಿ, ರಾಮು ರಾಕುಂಪಿ, ಲಕ್ಷ್ಮಣ ತಾಳಿಕೋಟಿ ಉಪಸ್ಥಿತರಿದ್ದರು.



> ಸ್ವಚ್ಛತೆ ವಿಷಯದಲ್ಲಿ ಯಾರೇ ನಿರ್ಲಕ್ಷ್ಯ ವಹಿಸುವಂತಿಲ್ಲ. ಗುತ್ತಿಗೆದಾರರು, ಕಡ್ಡಾಯವಾಗಿ ತಮಗೆ ವಹಿಸಿದ ಸೆಕ್ಟರ್‌ಗಳಲ್ಲಿ ನಿರಂತರ ಸ್ವಚ್ಛತೆ ನೋಡಿಕೊಳ್ಳಬೇಕು. ಅಧಿಕಾರಿಗಳು ಸ್ವಚ್ಛತೆಯ ಬಗ್ಗೆ ನಿಗಾ ಇಟ್ಟಿರಬೇಕು. ಅಸಡ್ಡೆ ತೋರುವ ಅಧಿಕಾರಿ-ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ.
>
> ■ ಪ್ರಕಾಶ ತಪಶೆಟ್ಟಿ, ಅಧ್ಯಕ್ಷರು, ಬಿಟಿಡಿಎ, ಬಾಗಲಕೋಟೆ

ಸಹೋದರತ್ವದಿಂದ ಜೀವನ ನಡೆಸೋಣ

ಲೋಕಾಪುರ: ಪಟ್ಟಣದಲ್ಲಿ ಬಕ್ರೀದ್ ಹಬ್ಬದ ನಿಮಿತ್ತ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.ಇದಕ್ಕೂ ಮುನ್ನ ಬೆಳಗ್ಗೆ 8ಕ್ಕೆ ಪಟ್ಟಣದ ಮಧ್ಯಭಾಗದಲ್ಲಿರುವ ಜಾಮಿಯಾ ಮಸ್ಜಿದ್‌ನಿಂದ ಮೇನ ಬಜಾರ ಬಸವೇಶ್ವರ ವೃತ್ತ, ಬಾಗಲಕೋಟೆ ರಸ್ತೆ ಮಾರ್ಗವಾಗಿ ಅಲ್ಲಾಹು ಅಕ್ಬರ, ಅಲ್ಲಾಹು ಅಕ್ಬರ ಎಂಬ ಘೋಷಣೆ ಯೊಂದಿಗೆ ಮುಸ್ಲಿಂ ಭಾಂಧವರು ಬೃಹತ್ ಮೆರವಣಿಗೆಯಿಂದ ಹೊರ ವಲಯದ ಈದ್ಗಾ ಮೈದಾನಕ್ಕೆ ತಲುಪಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು ಮೌಲಾನಾ ಅಬಾಬಿಲನದಾಫ ಪ್ರಾರ್ಥನೆಯ ನೇತೃತ್ವ ವಹಿಸಿದ್ದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠನಗಳ ಸಮಿತಿ ಉಪಾಧ್ಯಕ್ಷ ರಫೀಕ ಬೈರಕದಾರ ಮಾತನಾಡಿ, ಅಲ್ಲಾಹನು ಜಗತ್ತಿನಲ್ಲಿರುವ ಮಾನವ ಕುಲಕ್ಕೆ ಸುಖ, ಶಾಂತಿ, ನೆಮ್ಮದಿ ದಯಪಾಲಿಸಲಿ. ನಾವೆಲ್ಲರೂ ಒಂದೇ ಎಂಬ ಭಾವೈಕ್ಯತೆ, ಸಹೋದರತ್ವದಿಂದ ಸಮಾಜದಲ್ಲಿ ಜೀವನ ನಡೆಸಬೇಕು ಎಂದರು.

ಅಂಜುಮನ್-ಎ-ಇಸ್ಲಾಂ ಕಮೀಟಿ ಅದ್ಯಕ್ಷ ಹಸನಡೊಂಗ್ರಿ, ಮಹಾಲಿಂಗಪುರ ಮಾತನಾಡಿ, ಬಕ್ರೀದ್ ಹಬ್ಬವು ಇಸ್ಲಾಂನ ರೋಚಕ ಇತಿಹಾಸ ಸ್ಮರಿಸುವ ಹಬ್ಬವಾಗಿದೆ. ಅಲ್ಲಾಹನು ಜಗತ್ತಿನಲ್ಲಿ ಸರ್ವರಿಗೂ ಸುಖ, ಶಾಂತಿ, ನೆಮ್ಮದಿ ನೀಡಲಿ, ಮುಸ್ಲಿಂ ಬಾಂಧವರು ಪ್ರತಿ ಹೆಜ್ಜೆಗೂ ಅಲ್ಲಾಹನ ಧ್ಯಾನದಲ್ಲಿ ಜೀವನ ಸಾಗಿಸಬೇಕು ಎಂದು ಹೇಳಿದರು. ಅಂಜುಮನ್ ಕಮೀಟಿ ಕಾರ್ಯದರ್ಶಿ ಸಾಧೀಕಖಾನ ಪಠಾಣ, ಉಪಾಧ್ಯಕ್ಷ ಸೈಯದ ನದಾಫ, ಅಂಜುಮನ್ ಸದಸ್ಯರಾದ ಕುತುಬುದ್ದಿನ ಅತ್ತಾರ, ಸೈಯದ ಚಿತ್ರಭಾನುಕೋಟಿ, ಶಬ್ಬೀರ ಚೌಧರಿ, ಅಬ್ದುಲರೈಮಾನ ತೋರಗಲ್ಲ, ಸೈಯದ ಗುದಗಿ, ನಜೀರ ತೋರಗಲ್ಲ, ರಿಯಾಜ ಮಕಾನದಾರ, ಗುಲಾಬಸಾಬ ಅತ್ತಾರ, ಮೈಬೂಬ ಜೀರಗಾಳ, ಲಾಲಸಾಬ ನಧಾಪ, ಅಬ್ದುಲ್ ಮುಲ್ಲಾ, ಮುಖಂಡರಾದ ಅಲ್ಲಾಸಾಬ ಯಾದವಾಡ, ಸೈಯದ ಜೀರಗಾಳ, ಅಕ್ಬರಸಾಬ ತೋರಗಲ್ಲ, ಕೆ.ಕೆ. ಬಾಗವಾನ, ಎಸ್.ಎಂ. ರಾಮದುರ್ಗ, ಅಲ್ಲಾಬಕ್ಷ ಬಾಗವಾನ, ನಬಿ ಇಂಗಳಗಿ, ಸಲೀಮ್ ಕೊಪ್ಪದ, ಹಾಗೂ ವರ್ಚಗಲ್ಲ, ಚೌಡಾಪುರ, ಚಿತ್ರಭಾನುಕೋಟಿ, ಚಿಕ್ಕೂರ, ಭಂಟನೂರ, ಸುತ್ತಮುತ್ತಲಿನ ಗ್ರಾಮದ ಮುಸ್ಲಿಂ ಬಾಂಧವರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.



ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರ ಭರ್ತಿ ಮಾಡಿ: ನಿರಾಣಿ

ಮುಧೋಳ: ರಾಜ್ಯದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ 40 ಸಾವಿರಕ್ಕೂ ಹೆಚ್ಚು ಶಿಕ್ಷಕರ ಕೊರತೆ ಇದೆ. ಹೊಸ ಶೈಕ್ಷಣಿಕ ವರ್ಷ ಆರಂಭವಾಗಿದೆ. ಶಿಕ್ಷಕರನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಬೇಗನೆ ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಹನುಮಂತ ಆರ್. ನಿರಾಣಿ ಆಗ್ರಹಿಸಿದರು.

ನಗರದ ಸರಕಾರಿ ಪ್ರಥಮ ದರ್ಜೆಯ ಕಾಲೇಜ್ ಪ್ರಾಚಾರ್ಯರಾಗಿ ದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದುತ್ತಿರುವ ಪ್ರೊ.ಎಸ್.ಎಂ ಹಾದಿಮನಿ ಅವರ ಸನ್ಮಾನ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದರು.



ಪ್ರಾಚಾರ್ಯ ಹಾದಿಮನಿಯವರು ತಮ್ಮ ಸಂಬಳದ ಹಣದಲ್ಲಿ ಬಡ ವಿದ್ಯಾರ್ಥಿಗಳ ಫೀ ಕಟ್ಟುತ್ತಿರುವ ವಿಷಯ ತಿಳಿದು ಬಹಳ ಸಂತೋಷವಾಯಿತು. ಕಾಲೇಜು ಪ್ರಾಧ್ಯಾಪಕ ಡಾ.ಎಸ್.ಪಿ.ಕೋಕಟ್ನೂರ ಅಧ್ಯಕ್ಷತೆ ವಹಿಸಿದ್ದರು.

ಡಾ.ರಘು ಅಂಕಮಂಚಿ, ಡಾ.ಅರುಣ ಕುಮಾರ್ ಗಾಳಿ, ಮಲ್ಲಿಕಾರ್ಜುನ ಹೆಗ್ಗಳಗಿ , ಸದಾಶಿವ ತಿಮ್ಮಾಪುರ, ವಿದ್ಯಾರ್ಥಿಗಣೇಶ ಹರಿಜನ, ವಿದ್ಯಾರ್ಥಿನಿ ಎಲ್ಲವ್ವ ಗಸ್ತಿ, ಅಧ್ಯಾಪಕರಾದ ಪ್ರೊ.ಎಸ್.ಪಿ.ಹಳಿಂಗಳಿ, ಡಾ.ರೇಖಾ ಮಣಿ, ರಮೇಶ ಬೀಳೂರು ಡಾ.ಎಸ್.ಆರ್. ಹಂದಿಗುಂದ, ಡಾ.ಪ್ರಕಾಶ ಮಾಲ್ಗಾವಿ ಇದ್ದರು. ಈ ಸಂದರ್ಭದಲ್ಲಿ ಪ್ರಾಚಾರ್ಯ ಹಾದಿಮನಿ ಮತ್ತು ಅವರ ಪತ್ನಿ ಸುಧಾ ಅವರನ್ನು ಜಿಲ್ಲೆಯ ಸರಕಾರಿ ಪದವಿ ಕಾಲೇಜುಗಳ ಪರವಾಗಿ ಮತ್ತು ಕಾಲೇಜ್ ಅಭಿವೃದ್ಧಿ ಮಂಡಲ ಸದಸ್ಯರ ಪರವಾಗಿ ಸನ್ಮಾನಿಸಲಾಯಿತು.

ಲಿಂಗಾನಂದ ಗವಿಮಠಗೆ ಪ್ರಶಸ್ತಿ



ಜಮಖಂಡಿ: ಸ್ಥಳೀಯ ಬಾಕರ ಪಭಾ ಪದವಿ ಪೂರ್ವ ವಿದ್ಯಾಲಯದ ಜೀವಶಾಸ್ತ್ರ ಉಪನ್ಯಾಸಕ ಡಾ. ಲಿಂಗಾನಂದ ಗವಿಮಠ ಅವರಿಗೆ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಹಾಗೂ ಇಂಡೋ-ವಿಯಟ್ನಾಂ ಅಂತಾ ರಾಷ್ಟ್ರೀಯ ವೈಜ್ಞಾನಿಕ ಸಮ್ಮೇಳನದಲ್ಲಿ ಜೀವಮಾನ ಸಾಧನೆಗಾಗಿ ಪ್ರತಿಷ್ಠಿತ ಸೈಂಟಿಫಿಕ್ ಸಮಿತ್ ಫೆಲೋಶಿಫ್-2026 ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ ರಾಜ್ಯಾಧ್ಯಕ್ಷ ಡಾ.ಹುಲಿಕಲ್ ನಟರಾಜ, ವಿಯಟ್ನಾಂ ದೇಶದ ರಾಯಭಾರಿ ಹಾಗೂ ಐಪಿಎಸ್ ಅಧಿಕಾರಿ ಪ್ರದೀಪಕುಮಾರ, ಗುರುಮಿಟಕಲ್ ಮಠದ ಶಾಂತವೀರ ಸ್ವಾಮೀಜಿ, ಭಾಲ್ಕಿಯ ಶಿವಾನಂದ ಸ್ವಾಮೀಜಿ, ಅಜೀಜ್ ಸೇನಾ, ಸುರೇಶ, ಕವಿ ವಿಶ್ವರಾಧ್ಯ ಸತ್ಯಂಪೇಟೆ, ಖ್ಯಾತ ಉದ್ಯಮಿ ದಿನೇಶಕುಮಾರ ಜೈನ್ ಉಪಸ್ಥಿತರಿದ್ದರು. ಕಾಲೇಜಿನ ಸಿಡಿಸಿ ಕಮೀಟಿ ಗೌರವಾಧ್ಯಕ್ಷ, ಶಾಸಕ ಜಗದೀಶ ಗುಡಗುಂಟಿ, ಪ ಪೂ ಉಪನಿರ್ದೇಶಕ ಮಂಡಲೀಕ ಕಾಂಬಳೆ, ಪ್ರಾಚಾರ್ಯ ಸಿ.ಎಸ್.ಜನಗೊಂಡ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸಾವರ್ಕರ್ ಜೀವನ ಪ್ರೇರಣೆಯಾಗಲಿ

ಗಲಗಲಿ: ದೇಶಪ್ರೇಮಿ ವಿನಾಯಕ್ ಸಾವರ್ಕರ್ ರ ಜೀವನದಿಂದ ನಾವೆಲ್ಲ ಪ್ರೇರಣೆಗೊಂಡು ದೇಶಸೇವೆ ಜೊತೆಗೆ ಸಾಮಾಜಿಕ ಕಾರ್ಯಗಳನ್ನು ಮಾಡಬೇಕಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಡಾ.ಅಜಯ್ ಕುಲಕರ್ಣಿ ಹೇಳಿದರು. ಶುಕ್ರವಾರ ಸಂಜೆ ಗಲಗಲಿಯ ವೀರ ಸಾವರ್ಕರ್ ವೃತ್ತದಲ್ಲಿ ಆಯೋಜಿಸಿದ್ದ ಸಾವರ್ಕರ್ ಅವರ 143ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಕ್ರಾಂತಿಕಾರಿಗಳಾಗಿದ್ದ ಸಾವರ್ಕರ್ ಅಪ್ರತಿಮ ದೇಶಭಕ್ತರಾಗಿದ್ದರಲ್ಲದೆ ದೇಶದಲ್ಲಿ ಸ್ವದೇಶಿ ವಸ್ತುಗಳೇ ಬಳಕೆಯಾಗಬೇಕೆಂದು ಪ್ರಯತ್ನಿಸಿದ್ದರು. ದೇಶದ ಜನತೆ ಸಾಮರಸ್ಯದಿಂದ ಬದುಕಲು ಶ್ರಮಿಸಿದರು ಎಂದರು.ಯುವ ಮುಖಂಡ ಆನಂದ ಇಂಗಳಗಾವಿ ಮಾತನಾಡಿದರು. ಶಿವಕುಮಾರ ಶಾಸ್ತ್ರಿ ಸರಗಣಚಾರಿ ಮಠ, ಹೊಳಬಸು ಬಾಳಶೆಟ್ಟಿ, ಅರ್ಜುನ ಶೇಬಾನಿ, ಜಗದೀಶ್ ಶಿರಾಳ ಶೆಟ್ಟಿ, ವೆಂಕಟೇಶ ಬುದ್ನಿ, ಶಿವಬಸವ ಮಲ್ಲನ್ನವರ, ಮೋಹನ್ ಹಬ್ಬು, ಶ್ರವಣ ಗಾಣಿಗೇರ, ಸಮೀರ ಚಟ್ನಿಸ್, ಕುಮಾರ್ ಉಳ್ಳಾಗಡ್ಡಿ, ಪ್ರದೀಪ ಗುತ್ತಿ ಗೌಡರ, ಗುರುಪಾದ ಪಟ್ಟಣಶೆಟ್ಟಿ ಚಿದಾನಂದ ಅಂದವ್ವ ಗೋಳ, ಹರೀಶ ದೇಶಪಾಂಡೆ, ಅರವಿಂದ ಕಟ್ಟಿ ಉಪಸ್ಥಿತರಿದ್ದರು.



ಹೆಚ್ಚಿನ ದಾಖಲಾತಿಗೆ ಬಿಇಒ ಮನವಿ



ಬಾದಾಮಿ: ಗ್ರಾಮೀಣ ಪಟ್ಟಣ ಪ್ರದೇಶದಲ್ಲಿ ಶಾಲೆಯಿಂದ ವಂಚಿತರಾಗಿರುವ ಅರ್ಹ ಹೆಣ್ಣುಮಕ್ಕಳನ್ನು ಕೆಜಿಬಿವಿ ವಸತಿ ಶಾಲೆಗೆ ಸೇರಿಸಲು ಸಮುದಾಯದವರಿಗೆ ಮಾಹಿತಿ ನೀಡಿ ದಾಖಲಾತಿ ಮಾಡಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಮನವಿ ಮಾಡಿದರು.

ತಾಲೂಕಿನ ಯಂಕಂಚಿ ಮಣಿನಾಗರ ಗ್ರಾಮದ ಕಸ್ತೂರಬಾ ಗಾಂಧಿ ಬಾಲಕೀಯರ ವಸತಿ ಶಾಲೆಯಲ್ಲಿ 2026-27ನೇ ಸಾಲಿನ ದಾಖಲಾತಿ ಆಂದೋಲನದ ಪೂರ್ವಭಾವಿ ಸಭೆಯಲ್ಲಿ ಪ್ರಚಾರ ಸಾಮಗ್ರಿ ಹಾಗೂ ಕೆಜಿಬಿವಿ ಸಮೀಕ್ಷಾ ರಥ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು. ಯಾವುದೇ ಸಮಸ್ಯೆಯಿಂದ ಶಾಲೆಗೆ ಹೋಗದ ಮಕ್ಕಳನ್ನು ದಾಖಲಿಸಲು ಅನುಷ್ಠಾಧಿಕಾರಿಗಳು ತಮ್ಮ ಕ್ಷೇತ್ರಮಟ್ಟದಲ್ಲಿ ವ್ಯಾಪಕ ಮಾಹಿತಿ ನೀಡಬೇಕು. ಅರ್ಹ ಹೆಣ್ಣುಮಕ್ಕಳು ಮೇ 26ರಿಂದ ಜೂನ್ 1ರೊಳಗೆ ಆನ್‌ಲೈನ್ ಮೂಲಕ ಅರ್ಹ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಶಿಕ್ಷಕಿ ಬಸಮ್ಮಾ ನರಸಾಪೂರ 9449142409 ಸಂಪರ್ಕಿಸಬೇಕು ಎಂದು ತಿಳಿಸಿದರು.ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನ್ನವರ, ಮುಖ್ಯ ಶಿಕ್ಷಕಿ ಬಸಮ್ಮಾ ನರಸಾಪೂರ ಮಾತನಾಡಿದರು. ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಬಸವರಾಜ ಹಳಗೇರಿ, ಶಿಕ್ಷಣ ಸಂಯೋಜಕ ಎಂ.ಸಿ.ನಾಲತವಾಡ, ವೈ.ಬಿ.ಚಲವಾದಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಜಾವೇದ ಶೇಖ್, ಎಸ್.ಎಸ್.ಯಲಿಗಾರ ಸೇರಿದಂತೆ ತಾಲೂಕಿನ ಎಲ್ಲ ಸಮೂಹ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಕಠಿಣ ಪರಿಶ್ರಮ ಸಾಧನೆಯ ಮೂಲ

ಬಾಗಲಕೋಟೆ: ವಿದ್ಯಾರ್ಥಿಗಳಿಗೆ ಉತ್ತಮ ಗುರಿ ಅಗತ್ಯವಾಗಿದ್ದು, ಕಠಿಣ ಪರಿಶ್ರಮ ಸಾಧನೆಯ ಮೂಲವಾಗಿದೆ ಎಂದು ಶಿಕ್ಷಕ ಅಶೋಕ ಹಂಚಲಿ ಹೇಳಿದರು. ಗದ್ದನಕೇರಿ ಗ್ರಾಮದಲ್ಲಿ ನಡೆದ ಸದ್ಭಾವನ ಸಮಾಜ ಸೇವಾ ನೌಕರರ ಸಂಸ್ಥೆಯ ಪ್ರತಿಭಾ ಪುರಸ್ಕಾರದಲ್ಲಿ ಮಾತನಾಡಿದ ಅವರು, ವಿದ್ಯಾರ್ಜನೆಯಲ್ಲಿ ಕಠಿಣ ಪರಿಶ್ರಮ ಉತ್ತಮ ಸಾಧನೆಗೆ ಮೆರಗು ತರುತ್ತದೆ. ಇದೇ ಸಾಧನೆಗೆ ಮೂಲವಾಗಿದೆ ಎಂದರು. ಸಾನ್ನಿಧ್ಯ ವಹಿಸಿದ್ದ ಮಳಿಯಪ್ಪಯ್ಯ ಸ್ವಾಮೀಜಿ ಮಾತನಾಡಿದರು. ಸುಮಾರು 50 ವಿದ್ಯಾರ್ಥಿಗಳನ್ನು ಅಥವಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಚಿಕ್ಕ ಶೆಲ್ಲಿಕೆರಿಯ ಅಡವೇಶ ಶಾಸ್ತ್ರಿಗಳು, ಹೆಸ್ಕಾಂ ಅಧಿಕಾರಿಗಳಾದ ಮಡಿವಾಳಪ್ಪ ಇಂಡಿ ಉಪನ್ಯಾಸ ನೀಡಿದರು, ಮಸ್ಕಿಯ ಸಿಪಿಐ ರಾಮಣ್ಣ ಜಲಗೇರಿ, ಗದಗಿನ ಪಿಎಸ್ಐ ಅಶೋಕ ಹಡಪದರನ್ನು ಸನ್ಮಾನಿಸಿ ಗೌರವಿಸಲಾಯಿತು. ಗದಿಗೆಪ್ಪ ಛಬ್ಬಿ, ಮಳಿಯಪ್ಪ ಚಿಂಚಲಿ, ಚಂದ್ರಶೇಖರ ಶೆಟ್ಟರ, ಶಿವನಗೌಡ ಪಾಟೀಲ್, ಮಠಪತಿ ಸರ್. ಈರಪ್ಪ ಕುಂಬಾರ, ಹನುಮಂತ ಮನ್ನಿಕೇರಿ, ಮಂಜು ಶೆಟ್ಟೆಪ್ಪನವರ, ಶಿವು ಗುಳೆದ, ಶಂಕರ ಬಿರಾದಾರ, ಹಾರುಣ ನದಾಫ್, ಗೌಡಪ್ಪ ಬೇನ್ನೂರ, ಅಶೋಕ ಮಡಿವಾಳ, ಎಂ.ಎಸ್.ಅಂಗಡಿ, ಗುರು ಅಂಗಡಿ, ಮಳಿಯಪ್ಪ ಕುಂಬಾರ, ಮಲ್ಲು ಗುಳಬಾಳ, ಶಿವು ಯಾವಗಲ್. ಮಳಿಯಪ್ಪ ಚಿಂಚಲಿ, ಸಿದ್ದನಗೌಡ ಪಾಟೀಲ್, ಗೌಡಪ್ಪ ಪಾಟೀಲ್, ಸದಾಶಿವ ಕುಂಬಾರ, ಮಹೇಶ ಕುಂಬಾರ ಇದ್ದರು.



ನಾಲ್ಕು ವಿಧಗಳಲ್ಲಿ ಕಸ ವಿಂಗಡಿಸಿ



ಕೆರೂರ: ಘನತ್ಯಾಜ್ಯಗಳನ್ನು 2026ರ ನಿಯಮಾವಳಿಯಂತೆ ನಾಲ್ಕು ವಿಧಗಳಲ್ಲಿ ವಿಂಗಡಿಸುವುದು ಕಡ್ಡಾಯವಾಗಿದ್ದು, ಕಸವನ್ನು ಮೂಲದಲ್ಲೆ ಬೇರ್ಪಡಿಸಿ ವಾಹನಕ್ಕೆ ಎಸೆಯಬೇಕು ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ರಮೇಶ ಮಾಡಬಾಳ ಹೇಳಿದರು. ಬುಧವಾರ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತು ಪೌರಕಾರ್ಮಿಕ ಸಿಬ್ಬಂದಿಗಳೊಂದಿಗೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದರು. ತ್ಯಾಜ್ಯವನ್ನು ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ, ವಿಶೇಷ ಕಾಳಜಿ ತ್ಯಾಜ್ಯ ಎಂದು ಹೀಗೆ ನಾಲ್ಕು ವಿಧಗಳಲ್ಲಿ ವಿಂಗಡಿಸಲಾಗಿದೆ. ಸಾರ್ವಜನಿಕರಿಗೆ ಕಸವನ್ನು ಮೂಲದಲ್ಲೆ ಬೇರ್ಪಡಿಸಿ ವಾಹನಕ್ಕೆ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸವಂತೆ ಪೌರಕಾರ್ಮಿಕ ಸಿಬ್ಬಂದಿಗಳಿಗೆ ಸೂಚನೆ ನೀಡಿದರು.ಪಟ್ಟಣವನ್ನು ಸುಂದರವಾಗಿಡಲು ತ್ಯಾಜ್ಯ ನಿರ್ವಹಣೆ ಮುಖ್ಯ ಜವಾಬ್ದಾರಿಯಾಗಿದೆ, ಕಸವನ್ನು ರಸ್ತೆ ಬದಿ, ಎಲ್ಲೆಂದರಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಎಸೆದಂತೆ ತಡೆಯಬೇಕು ಎಂದು ತಿಳಿಸಿದರು. ಸಾರ್ವಜನಿಕರು ನಮ್ಮ ತ್ಯಾಜ್ಯ ವಿಲೇವಾರಿ ವಾಹನ ಬಂದಾಗ ತಾಜ್ಯವನ್ನು ನಿಮ್ಮಲ್ಲೆ ಪ್ರತ್ಯೇಕವಾಗಿ ವಿಂಗಡಿಸಿ ವಾಹನಕ್ಕೆ ಎಸೆಯಬೇಕು. ತಾವುಗಳು ಪಟ್ಟಣವನ್ನು ಸ್ವಚ್ಚ ಸುಂದರವನ್ನಾಗಿಡಲು ಇಲಾಖೆಯೊಂದಿಗೆ ಕೈ ಜೋಡಿಸಬೇಕು ಎಂದು ಹೇಳಿದರು.ಸಿಬ್ಬಂದಿಗಳಾದ ರಮೇಶ ಕಡ್ಲಿಮಟ್ಟಿ, ಮಾಂತೇಶ ಅಣ್ಣೆನ್ನವರ, ಅಶ್ವಥ್ ರಂಗನಗೌಡ್ರ, ಸ್ವಚ್ಚತಾ ಮೇಲ್ವಿಚಾರಕರು, ಪೌರಕಾರ್ಮಿಕರು, ಸಿಬ್ಬಂದಿ ಇದ್ದರು.

ನುಡಿದಂತೆ ನಡೆದ ಸಿದ್ದರಾಮಯ್ಯ: ಶೆಟ್ಟರ

ಗುಳೇದಗುಡ್ಡ: ಸಾಮಾಜಿಕ ನ್ಯಾಯದ ಮೂಲಕ ನಾಡಿನ ಎಲ್ಲ ವರ್ಗದ ಜನರಿಗೆ ಸರ್ಕಾರದ ಸೌಲಭ್ಯ ಕಲ್ಪಿಸಿದ ಸಿದ್ದರಾಮಯ್ಯ ಅವರು, ಕರ್ನಾಟಕದ ರಾಜಕೀಯ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿದ ಧೀಮಂತ ನಾಯಕರಾಗಿದ್ದಾರೆ ಎಂದು ಸಿದ್ದರಾಮಯ್ಯ ಅವರ ಆಪ್ತರೂ ಆಗಿರುವ ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಸಿದ್ದರಾಮಯ್ಯ ಅವರ ರಾಜಕೀಯ ಜೀವನ, ಅತ್ಯಂತ ಹತ್ತಿರದಿಂದ ನೋಡಿದ್ದೇವೆ. ಬಾಗಲಕೋಟೆಯ ಶಾಸಕರಾಗಿದ್ದ ದಿ.ಎಚ್.ವೈ.ಮೇಟಿ ಅವರ ಮೂಲಕ ನನಗೆ ಪರಿಚಯವಾದ ಅವರು, ಅತ್ಯಂತ ವಿಶ್ವಾಸದಿಂದ ಕಂಡಿದ್ದಾರೆ. ಕಳೆದ 2018ರಲ್ಲಿ ಬಾದಾಮಿ ಕ್ಷೇತ್ರದಿಂದ ಗೆದ್ದಿದ್ದ ಅವರು, ಬಾದಾಮಿಯ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ಆದರೆ, ಬಾದಾಮಿಯಿಂದ ಗೆದ್ದಾಗಲೇ ಈ ನಾಡಿನ ಮುಖ್ಯಮಂತ್ರಿಯಾಗಬೇಕು ಎಂಬ ಹಂಬಲ ನಮ್ಮದೆಲ್ಲ ಇತ್ತು. ಆಗ ನಮ್ಮ ಪಕ್ಷಕ್ಕೆ ಬಹುಮತ ಇರಲಿಲ್ಲ. ಆದರೂ, ವಿರೋಧ ಪಕ್ಷದ ನಾಯಕರಾಗಿ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದವರ ಧ್ವನಿಯಾಗಿ ಸದಾ ಧ್ವನಿ ಎತ್ತುವ ನಾಯಕರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಇನ್ನೊಂದು ಹೆಸರೇ ನುಡಿದಂತೆ ನಡೆಯುವ ರಾಮಯ್ಯ ಎಂದಿದೆ. ಜನತೆಗೆ ನೀಡಿದ ಭರವಸೆಗಳು ಈಡೇರಿಸಿದ ಖ್ಯಾತಿ ಅವರಿಗಿದೆ. ನುಡಿದಂತೆ ನಡೆಯುವ ಧೀಮಂತ ನಾಯಕ ಎಂಬುದನ್ನು ಅವರು ತೋರಿಸಿದ್ದಾರೆ. ಅವರ ರಾಜಕೀಯ ಅನುಭವ, ಮಾರ್ಗದರ್ಶನ ಇಡೀ ರಾಜ್ಯಕ್ಕೆ ನಿರಂತರವಾಗಿ ಇರಬೇಕು ಎಂಬುದು ನಮ್ಮೆಲ್ಲರ ಆಶಯ ಎಂದು ಶೆಟ್ಟರ ಹೇಳಿದ್ದಾರೆ.

ಕಿರುಸುದ್ದಿ

ಸಿದ್ದರಾಮಯ್ಯ ರಾಜೀನಾಮೆ: ಅಹಿಂದ ವರ್ಗ ಆಕ್ರೋಶ



◆ **ವಿಜಯಪುರ:** ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುತ್ತಿರುವುದನ್ನು ಅಹಿಂದ ವರ್ಗ ಹಾಗೂ ಜಿಲ್ಲಾ ಕುರುಬ ಸಂಘವು ತೀವ್ರವಾಗಿ ಖಂಡಿಸುತ್ತದೆ ಎಂದು ಜಿಲ್ಲಾ ಕುರುಬ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜ ಕಾತ್ರಾಳ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಸಿದ್ದರಾಮಯ್ಯ ಬಡವರ ಮುಖ್ಯಮಂತ್ರಿ, ಅನ್ನಭಾಗ್ಯ, ಕ್ಷೀರ ಭಾಗ್ಯ, ಗೃಹಲಕ್ಷ್ಮೀ, ಗೃಹಜ್ಯೋತಿ, ಶಕ್ತಿ ಯೋಜನೆಯಂತಹ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿ, ಜನಪರ ಆಡಳಿತ ನೀಡಿದ ಧೀಮಂತ ನಾಯಕ. ಸಮಾಜದ ಎಲ್ಲ ವರ್ಗಗಳನ್ನು ಒಗ್ಗೂಡಿಸಿ ಹಸಿವು ಮುಕ್ತ ಕರ್ನಾಟಕ ನಿರ್ಮಾಣ ಮಾಡುವಲ್ಲಿ ಶ್ರಮಿಸಿದ್ದಾರೆ. ಸಾಮಾಜಿಕ ನ್ಯಾಯ ಎತ್ತಿ ಹಿಡಿದಿದ್ದ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸುತ್ತಿರುವುದು ನೋವಿನ ಸಂಗತಿ. ಹೈಕಮಾಂಡ್ ತನ್ನ ನಿಲುವು ಬದಲಾಯಿಸಿ ಸಿದ್ದರಾಮಯ್ಯ ಅವರನ್ನೆ ಮುಂದುವರೆಸಬೇಕು, ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ಅಹಿಂದ ವರ್ಗ ಕಾಂಗ್ರೆಸ್ ತಿರಸ್ಕಾರ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಸದಸ್ಯರಾಗಿ ಚೌಧರಿ ನೇಮಕ



◆ **ಸಿಂದಗಿ:** ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಸೂಚನೆ ಅನ್ವಯ, ವಿಜಯಪುರ ಜಿಲ್ಲೆಯ ಸಿಂದಗಿ ವಿಧಾನಸಭಾ ಕ್ಷೇತ್ರ ಮಟ್ಟದ ಶಿಕ್ಷಣ ಸುಧಾರಣಾ ಸಮಿತಿಗೆ ಸಿಂದಗಿ ಶಿಕ್ಷಕ ಸಿದ್ದಲಿಂಗ ಚೌಧರಿ ಅವರನ್ನು ಸದಸ್ಯರಾಗಿ ನಾಮ ನಿರ್ದೇಶನ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಪಿ 11 ಎಎಲ್‌ಬಿ 2025ರ ಅನ್ವಯ ಈ ಸಮಿತಿಯನ್ನು ರಚಿಸಲಾಗಿದ್ದು, ತಾಲೂಕು ಮಟ್ಟದಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆ, ಮಾನವ ಸಂಪನ್ಮೂಲದ ಸಮರ್ಪಕ ಬಳಕೆ ಸೇರಿದಂತೆ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಸಂಬಂಧಿಸಿದ ಪ್ರಮುಖ ಅಂಶಗಳ ಕುರಿತು ಕಾರ್ಯನಿರ್ವಹಿಸಲು ಒಟ್ಟು 18 ಜನರ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ಸಿಂದಗಿ ಮತಕ್ಷೇತ್ರದ ಶಾಸಕ ಅಶೋಕ ಮನಗೂಳಿ ಅಧ್ಯಕ್ಷರಾಗಿರುತ್ತಾರೆ. ಬಂಕಲಗಿಯ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಸಿದ್ಧಲಿಂಗ ಚೌಧರಿ ಅವರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ.

ಯಶವಂತರಾಯಗೌಡಗೆ ಸಚಿವ ಸ್ಥಾನ ನೀಡಲು ಆಗ್ರಹ

◆ **ಕೊಲ್ಹಾರ:** ಕಾಂಗ್ರೆಸ್ ಪಕ್ಷದ ಕಟ್ಟಾಳು ಶಾಸಕ ಯಶವಂತರಾಯಗೌಡ ಪಾಟೀಲ ಅವರಿಗೆ ನೂತನವಾಗಿ ರಚನೆಯಾಗುವ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನವನ್ನು ಕೊಡಬೇಕು ಎಂದು ವಿಜಯಪೂರ ಜಿಲ್ಲಾ ಆದಿಬಣಜಿಗ ಕ್ಷೇಮಾಭಿವೃದ್ಧಿ ಹಾಗೂ ವಧುವರರ ಮಾಹಿತಿ ಕೇಂದ್ರದ ಜಿಲ್ಲಾಧ್ಯಕ್ಷ ಸೋಮನಿಂಗ ಕಟಾವಿ ಒತ್ತಾಯಿಸಿದ್ದಾರೆ.

ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ವಿಧಾನಸಭೆ ರಚನೆಯಾದಗಿನಿಂದಲೂ ರಾಜ್ಯದಲ್ಲಿ ಯಾವದೆ ಪಕ್ಷ ಅಧಿಕಾರಕ್ಕೆ ಬಂದರೂ ಇಂಡಿ ಮತಕ್ಷೇತ್ರ ಸಚಿವ ಸ್ಥಾನದಿಂದ ವಂಚಿತವಾಗುತ್ತಾ ಬರುತ್ತಿದ್ದು ನೂತನ ಮುಖ್ಯಮಂತ್ರಿಯಾಗುವ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಸತತವಾಗಿ ಮೂರನೆ ಬಾರಿ ಇಂಡಿ ಕ್ಷೇತ್ರದ ಶಾಸಕರಾಗಿರುವ ಯಶವಂತರಾಯಗೌಡರಿಗೆ ಅವಕಾಶವನ್ನು ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು. ಸುರೇಶ ಪರಗೊಂಡ ಪರಶುರಾಮ ಚಿಂಚಲಿ ಬಸಲಿಂಗಪ್ಪ ಕಪಾಳಿ ಮಲ್ಲಿಕಾರ್ಜುನ ಬಿಜ್ಜರಗಿ ಪ್ರೇಮಾನಂದ ಹತ್ತಿ ಶಿವಾನಂದ ಇಂಚಗೇರಿ ರಮೇಶ ಹೆಗಡಿ ಪರಶುರಾಮ ಬಸಲಿಂಗಪ್ಪ ಗಣಿ ಆಗ್ರಹಿಸಿದ್ದಾರೆ.

ಸಿಎಂ ರಾಜೀನಾಮೆ: ಖಂಡನೀಯ



◆ **ವಿಜಯಪುರ:** ರಾಜ್ಯದ ಜನಪ್ರಿಯ ನಾಯಕ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಮೂಲಕ ಕಾಂಗ್ರೆಸ್ ಹೈಕಮಾಂಡ್ ಕುರುಬ ಸಮಾಜ ಹಾಗೂ ಹಿಂದುಳಿದ ವರ್ಗಗಳಿಗೆ ಘೋರ ಅನ್ಯಾಯ ಮಾಡಿದೆ ಎಂದು ಜಿಲ್ಲೆಯ ಬಬಲೇಶ್ವರ ಮತಕ್ಷೇತ್ರದ ಕುರುಬ ಸಮಾಜದ ಜಿಲ್ಲಾ ಉಪಾಧ್ಯಕ್ಷ ಸಂತೋಷ ಕುರದಡ್ಡಿ, ಭೀಮನಗೌಡ ಬಿರಾದಾರ ಅವರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಕನಿಷ್ಠ ಪಕ್ಷ ದಲಿತ ನಾಯಕರನ್ನಾದರೂ ಮುಖ್ಯಮಂತ್ರಿ ಮಾಡದೆ ಆ ಸಮುದಾಯಕ್ಕೂ ವಂಚನೆ ಮಾಡಲಾಗಿದೆ ಎಂದು ಕಾಂಗ್ರೆಸ್ ಪಕ್ಷದ ದ್ವಂದ್ವ ನೀತಿ, ದಲಿತ ಹಾಗೂ ಹಿಂದುಳಿದ ವರ್ಗಗಳ ವಿರೋಧಿ ಮನಸ್ಥಿತಿಯನ್ನು ತೀವ್ರ ಶಬ್ದಗಳಲ್ಲಿ ಖಂಡಿಸಿದ್ದಾರೆ. ಮುಂಬರುವ ದಿನಗಳಲ್ಲಿ ನಮ್ಮ ಒಗ್ಗಟ್ಟಿನ ಶಕ್ತಿ ಏನು ಎಂಬುದನ್ನು ತೋರಿಸಿ, ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸುತ್ತೇವೆ ಎಂದು ಎಚ್ಚರಿಸಿದ್ದಾರೆ.



ಜಮಖಂಡಿ: ತಾಲೂಕಿನ ಕಡಕೋಳ ಗ್ರಾಮದಲ್ಲಿ ಅಕ್ರಮವಾಗಿ ಮರಳು ಸಾಗಟವಾದ ನಿಖರ ಮಾಹಿತಿ ಆಧಾರದ ಮೇಲೆ ಮರಳು ಸಾಗಾಟವನ್ನು ತಡೆಗಟ್ಟಲು ಎಸಿ ಶ್ವೇತಾ ಬೀಡಿಕರ ಮತ್ತು ಸಿಬ್ಬಂದಿ ದಾಳಿ ನಡೆಸಿ ಸುಮಾರು ಎರಡು ಬ್ರಾಸ್ ಮರಳು ಮತ್ತು ವಾಹನ ವಶಪಡಿಸಿಕೊಂಡಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ತಹಶೀಲ್ದಾರ್ ಅನೀಲ ಬಡಿಗೇರ ತಿಳಿಸಿದ್ದಾರೆ.

ಪ್ರತಾಪ್ ಸಿಂಹ ಮೂರ್ತಿ ಅನಾವರಣ

◆ **ವಿಜಯಪುರ:** ನಗರದ ವಾರ್ಡ್ ನಂ.11ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ಹಾಗೂ ಉದ್ಘಾಟನೆಯನ್ನು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೆರವೇರಿಸಿದರು. ಇಲ್ಲಿನ ವಾರ್ಡ್ ನಂ.11ರಲ್ಲಿ ಬರುವ ಅಟಲ್ ಬಿಹಾರಿ ವಾಜಪೇಯಿ ಮಾರ್ಗದಲ್ಲಿ ಕೆಬಿಜೆಎನ್‌ಎಲ್ ವತಿಯಿಂದ ಎಸ್‌ಸಿಪಿ, ಟಿಎಸ್‌ಪಿ ವಿಶೇಷ ಘಟಕ ಯೋಜನೆಯಡಿ, ಗಿರಿಜನ ಉಪ ಯೋಜನೆಯಡಿ ಮಂಜೂರಿಸಲಾದ 9 ಲಕ್ಷ ರೂ. ಅನುದಾನದಲ್ಲಿ ನಿರ್ಮಾಣ ಮಾಡಿದ ಶುದ್ಧ ಕುಡಿಯುವ ನೀರಿನ ಘಟಕ, ರಾಷ್ಟ್ರ ವೀರ ಮಹಾರಾಣಾ ಪ್ರತಾಪ್ ಸಿಂಹ ವೃತ್ತದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿದ ಮಹಾರಾಣಾ ಪ್ರತಾಪ್ ಸಿಂಹ ಮೂರ್ತಿಯನ್ನು ಉದ್ಘಾಟಿಸಿದರು. ನಂತರ ಮಿನಿ ಮಾದರ ಓಣಿಯ ವಿಠೋಬಾ ಮಂದಿರ ಹತ್ತಿರ 2025-26ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಮಂಜೂರಿಸಲಾದ 10 ಲಕ್ಷ ರೂ. ಅನುದಾನದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ, ಸಾರ್ವಜನಿಕರ ಅಹವಾಲು ಆಲಿಸಿದರು. ಮಹಾನಗರ ಪಾಲಿಕೆ ಮೇಯರ್ ಎಂ.ಎಸ್.ಕರಡಿ, ಸದಸ್ಯರಾದ ವಿಠ್ಠಲ ಹೊಸಪೇಟೆ, ರಾಜಶೇಖರ ಕುರಿಯುವರ, ಮುಖಂಡರಾದ ಸಿದ್ದರಾಮಪ್ಪ ಉಪ್ಪಿನ, ಅಶೋಕ ಬೆಲ್ಲದ, ಬಾಬು ಶಿರಶ್ಯಾಡ, ಉಮೇಶ ವೀರಕರ, ಮಧು ಕಲಾದಗಿ, ವಿಜಯ ರಜಪೂತ, ಶಿವಲಿ ಸಾಳುಂಕೆ, ಬಲಭೀಮ ಸಾಳುಂಕೆ, ತಾನಾಜಿ ಸಾಳುಂಕೆ, ಸೋಮು ರಣದೇವಿ, ಗಣೇಶ ರಣದೇವಿ, ಪಾಂಡುರಂಗ, ಶಂಕರ ಚಲವಾದಿ, ಶ್ರೀಶೈಲ ದೇವರ ಇದ್ದರು.



ವಿಜಯಪುರ: ನಗರದ ವಾರ್ಡ್ ನಂ.11ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ಹಾಗೂ ಉದ್ಘಾಟನೆಯನ್ನು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೆರವೇರಿಸಿದರು.

ಅಂಡರ್ ಪಾಸ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಉದಾಸೀನ: ಜಿಗಜಿಣಗಿ



◆ **ವಿಜಯಪುರ:** ವಜ್ರ ಹನುಮಾನ ಬಳಿ ಅಂಡರ್ ಪಾಸ್ ನಿರ್ಮಾಣಕ್ಕೆ ಪೂರಕವಾಗಿ ಪೈಪಲೈನ್ ಸ್ಥಳಾಂತರ ಮಾಡಲು ರಾಜ್ಯ ಸರ್ಕಾರ ಉದಾಸೀನ ನೀತಿ ಅನುಸರಿಸುತ್ತಿದೆ, ಈಗಲೂ ವಿಳಂಬ ನೀತಿ ಅನುಸರಿಸಿದರೆ ಜಿಲ್ಲಾಧಿಕಾರಿಗಳ ಕಚೇರಿ ಕಚೇರಿ ಎದುರು ಧರಣಿ ನಡೆಸಲು ಸಿದ್ಧ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಜ್ರ ಹನುಮಾನ ದೇವಾಲಯ ಬಳಿ ಅಂಡರ್ ಪಾಸ್ ನಿರ್ಮಾಣ ಸಾರ್ವಜನಿಕರ ಒತ್ತಾಸೆಯಾಗಿದೆ, ಅದಕ್ಕೆ ಪೂರಕವಾಗಿ 19 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಕುಡಿಯುವ ನೀರು, ಚರಂಡಿ ನೀರು ಪೂರೈಕೆ ಮಾಡುವ ಪೈಪ್ ಸ್ಥಳಾಂತರಿಸುವ ಕೆಲಸ ರಾಜ್ಯ ಸರ್ಕಾರ ನಿರ್ವಹಿಸಬೇಕಿದೆ, ಆದರೆ ಈ ಕಾಮಗಾರಿ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳು ಉದಾಸೀನ ನೀತಿ ಅನಿಸರಿಸುತ್ತಿವೆ, ಈ ಬಗ್ಗೆ ಜಿಲ್ಲಾಧಿಕಾರಿ ಸೇರಿದಂತೆ ಅನೇಕ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಪ್ರಯೋಜನವಾಗಿಲ್ಲ ಎಂದರು.

ಅನುದಾನ ಬಂದು ಮೂರು ತಿಂಗಳು ಉರುಳಿವೆ, ಈ ಸಣ್ಣ ಕಾಮಗಾರಿ ಕೈಗೊಳ್ಳಲು ಸಹ ರಾಜ್ಯ ಸರ್ಕಾರಕ್ಕೆ ಆಗುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದರು, ಇದೇ ರೀತಿ ವಿಳಂಬ ನೀತಿ ಅನುಸರಿಸಿದರೆ ಅನುದಾನವೇ ವಾಪಸ್ಸು ಹೋಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಈ ಪೈಪಲೈನ್ ಮೊದಲಾದ ಕಾಮಗಾರಿ ರೈಲ್ವೆ ಇಲಾಖೆ ಸುಪರ್ದಿಗೆ ಬರುವುದಿಲ್ಲ, ಇದು ಆಯಾ ಸ್ಥಳೀಯ ಸಂಸ್ಥೆ ಕೆಲಸ, ನಗರ ವ್ಯಾಪ್ತಿಗೆ ಬರುವ ಕೆಲಸವನ್ನು ರೈಲ್ವೇ ಇಲಾಖೆ ಹೇಗೆ ಕೈಗೊಳ್ಳಲು ಸಾಧ್ಯ ಎಂದು ಪ್ರಶ್ನಿಸಿದರು.

ಅಂಡರ್ ಪಾಸ್ ಇಲ್ಲದೇ ಜನರು ತ್ರಾಸು ಪಡುವಂತಾಗಿದೆ, ಈಗಲೂ ವಿಳಂಬ ನೀತಿ ಅನುಸರಿಸಿದರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕಾರ್ಯಕರ್ತರ ಸಮ್ಮುಖದಲ್ಲಿ ಧರಣಿ ನಡೆಸಲಾಗುವುದು ಎಂದರು.

ಘಂಡರ ಪುರ ರೈಲ್ವೇಯನ್ನು ವಿಜಯಪುರ ಮಾರ್ಗವಾಗಿ ಓಡಿಸುವ ನಿಟ್ಟಿನಲ್ಲಿ ಕೇಂದ್ರ ರೈಲ್ವೇ ಸಚಿವಾಲಯಕ್ಕೆ ವಿನಂತಿಸಲಾಗಿದೆ, ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದನೆ ದೊರಕಲಿದೆ ಎಂದರು.

ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಆಗುತ್ತಾರೆ ಎಂಬ ವಿಶ್ವಾಸವಿತ್ತು, ಆದರೆ ಮಾಡಲಿಲ್ಲ, ಕಾಂಗ್ರೆಸ್ ಕೇವಲ ದಲಿತ, ಅಲ್ಪಸಂಖ್ಯಾತರನ್ನು ಕೇವಲ ವೋಟ್ ಬ್ಯಾಂಕ್ ಆಗಿ ಬಳಸುತ್ತಿದ್ದಾರೆ. ಪಾಪ ಅಲ್ಪಸಂಖ್ಯಾತ, ದಲಿತರಿಗೆ ಅರ್ಥವಾಗುತ್ತಿಲ್ಲ, ದಲಿತ ಮುಖ್ಯಮಂತ್ರಿ ಕೂಗು ನಾನು ಮೊದಲಿಗನಾಗಿ ಧ್ವನಿ ಎತ್ತಿರುವೆ, ಯಾವ ಪಕ್ಷ ಮಾಡಿದರೂ ಅದಕ್ಕೆ ಸ್ವಾಗತಿಸುವೆ ಎಂದರು.

ಮಾಡಿದ್ದೋಣ್ಣೋ ಮಾರಾಯಾ ಎಂಬಂತೆ ಕಾಂಗ್ರೆಸ್ ತನ್ನ ತಪ್ಪಿಗೆ ಶಿಕ್ಷೆಗೆ ಅನುಭವಿಸಲಿದೆ ಎಂದರು. ನಮ್ಮ ಪಕ್ಷ ಹೈಕಮಾಂಡ್ ರಾಜ್ಯ ರಾಜಕಾರಣಕ್ಕೆ ಹೋಗು ಎಂದು ಹೇಳಿದರೆ ಅದರಂತೆ ನಡೆದುಕೊಳ್ಳುವೆ, ಇಲ್ಲಿಯೇ ಇರುವೆ, ನಾನು ಬಂದರೆ ಬಾರಾಣೆ ಹೋದರೆ ಚಾರಾಣೆ ನಾನು ಯಾವುದಕ್ಕೂ ಆಸೆ ಪಡಲ್ಲ ಎಂದರು.

ವಿಚಾರ ಸಂಕಿರಣದ ಪ್ರಚಾರ ಕಾರ್ಯಕ್ಕೆ ಚಾಲನೆ

◆ **ಬಸವನಬಾಗೇವಾಡಿ:** ನ್ಯಾಯಾಧೀಕರಣದ ತೀರ್ಪಿನಂತೆ ಕ್ರಮಕೈಗೊಳ್ಳಲು ಹಾಗೂ ನೀರಿನ ಹಂಚಿಕೆಯಲ್ಲಿ ಜಿಲ್ಲೆಯ ರೈತರಿಗೆ ಆದ ಅನ್ಯಾಯವನ್ನು ರೈತರಿಗೆ ಮನವರಿಕೆ ಮಾಡುವ ವಿಚಾರ ಸಂಕಿರಣದ ನಿಮಿತ್ತ ಹುಲಬೆಂಚಿ ಗ್ರಾಮದ ಹನುಮಾನ ದೇವಸ್ಥಾನದಲ್ಲಿ ಪ್ರಚಾರ ಕಾರ್ಯಕ್ಕೆ ಜಿಲ್ಲೆ ವಿವಿಧ ರೈತಪರ ಸಂಘಟನೆ ಮುಖಂಡರು ಶುಕ್ರವಾರ ಚಾಲನೆ ನೀಡಿದರು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ ನ್ಯಾ.ಬ್ರಿಜೇಶ್‌ಕುಮಾರ ನೇತೃತ್ವದಲ್ಲಿ 2ನೇ ನ್ಯಾಯಾಧೀಕರಣದ ತೀರ್ಪಿನಂತೆ ಆಲಮಟ್ಟಿ ಲಾಲ್‌ಬಹದ್ದೂರ ಶಾಸ್ತ್ರಿ ಜಲಾಶಯದ ನೀರಿನ ಮಟ್ಟವನ್ನು 519.60ರಿಂದ 524.260ಕ್ಕೆ ನೀರು ನಿಲ್ಲಿಸಲು ಗೇಟ್ ಅಳವಡಿಸುವಂತೆ ನ್ಯಾಯಾಧೀಕರಣ ತೀರ್ಪು ನೀಡಿದ್ದರೂ ಸಹ ಇಲ್ಲಿಯವರೆಗೂ ಸರ್ಕಾರಗಳಿಗೆ ಗೇಟ್ ಅಳವಡಿಸಲು ಆಗುತ್ತಿಲ್ಲ, 13ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದರು ಕೇಂದ್ರ ಸರ್ಕಾರ ಇನ್ನು ಅಧಿಸೂಚನೆ ಹೊರಡಿಸಿಲ್ಲ, ನೀರಿನ ಹಂಚಿಕೆಯಲ್ಲಿ ಅವಳಿ ಜಿಲ್ಲೆಯ ರೈತರಿಗೆ ಯಾವ ರೀತಿ ವಂಚನೆ ಮಾಡಿದ್ದಾರೆ ಎಂಬುದರ ಕುರಿತು ವಿಚಾರ ಸಂಕಿರಣ ಜೂನ್ 8ರಂದು ವಿಜಯಪುರ ಕಂದಗಲ್ ಹಣಮಂತ್ರಾಯ ರಂಗಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ಇಂಗಳೇಶ್ವರ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಹುಣಶ್ಯಾಳ ಪಿ.ಬಿ ಗ್ರಾಮದ ಸಂಗನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ವಿಷಯ ಮಂಡನೆ ನೀರಾವರಿ ತಜ್ಞ ಸಂಶೋಧಕ ಕೃಷ್ಣ ಕೊಲ್ಹಾರ ಕುಲಕರ್ಣಿ ಮಂಡಿಸಲಿದ್ದು, ಧಾರವಾಡ ಕೃಷಿ ವಿವಿ ನಿವೃತ್ತ ಪ್ರಾಧ್ಯಾಪಕರು ಹಾಗೂ ನೀರಾವರಿ ತಜ್ಞರಾದ ರಾಜೇಂದ್ರ ಪೋದ್ದಾರ, ನೀರಾವರಿ ಹೋರಾಟಗಾರರಾದ ಪಂಚಪ್ಪ ಕಲಬುರ್ಗಿ ಉಪನ್ಯಾಸ ನೀಡಲಿದ್ದಾರೆ. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ವ್ಹಿ.ಸಿ.ಬಿರಾದಾರ, ಚಾಣಕ್ಯ ಕರಿಯರ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ನಿಂಗನಗೌಡ ಬಿರಾದಾರ ಭಾಗವಹಿಸಲಿದ್ದಾರೆ.

ರಾ.ಸಂ.ಕಾರ್ಯದರ್ಶಿ ವಿಠ್ಠಲ ಬಿರಾದಾರ, ಜಿಲ್ಲಾಧ್ಯಕ್ಷ ಉಮೇಶ ವಾಲಿಕಾರ, ಬಸವನಬಾಗೇವಾಡಿ ತಾಲೂಕು ಉಪಾಧ್ಯಕ್ಷ ಹೊನಕೆರೆಪ್ಪ ತೆಲಗಿ, ತಾಳಿಕೋಟಿ ತಾಲೂಕು ಅಧ್ಯಕ್ಷ ಬಾಲಪ್ಪಗೌಡ ಲಿಂಗದಳ್ಳಿ, ಉಪಾಧ್ಯಕ್ಷ ರಾಮನಗೌಡ ಹಾದಿಮನಿ, ಲಾಲಸಾಬ ಹಳ್ಳೂರ, ಸಿದ್ದಲಿಂಗಪ್ಪ ಬಿರಾದಾರ, ಭೀಮಪ್ಪ ಇಟಗಿ, ಶಂಕ್ರೆಪ್ಪ ಬಿರಾದಾರ, ನಾಗಪ್ಪ ಮನ್ನಾಳ, ಬುಡ್ಡೆಸಾಬ ಹಳ್ಳೂರ, ವಿರೂಪಾಕ್ಷಪ್ಪ ಮುತ್ತತ್ತಿ, ಪರಸಪ್ಪ ಸಾಸನೂರ, ಸಂತೋಷ ಬಿರಾದಾರ, ಶ್ರೀಶೈಲ ಮನ್ನಾಳ, ಶರಣಪ್ಪ ಕನ್ನಾಳ, ಶರಣಪ್ಪ ಬಿರಾದಾರ, ನಿಂಗಪ್ಪ ಕೋರವಾರ, ಮಲಿಗೆಪ್ಪ ವಡ್ಡರ ಇದ್ದರು.



ಶಿಕ್ಷಕರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

◆ **ವಿಜಯಪುರ:** ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬಬಲೇಶ್ವರ ತಾಲೂಕಿನ ನೂತನ ಅಧ್ಯಕ್ಷರಾಗಿ ಅಶೋಕ ಬೂದಿಹಾಳ ಆಯ್ಕೆಯಾಗಿದ್ದಾರೆ. ಅದರಂತೆ ಪ್ರಧಾನ ಕಾರ್ಯದರ್ಶಿಯಾಗಿ ಅನಿಲ್ ಗುಡ್ಡಾಪಗೋಳ, ಉಪಾಧ್ಯಕ್ಷರಾಗಿ ಪರಸಪ್ಪ ಕಾಳಗಿ ಹಾಗೂ ಮಹಿಳಾ ಉಪಾಧ್ಯಕ್ಷರಾಗಿ ಲಕ್ಷ್ಮೀ ತೊರವಿ, ಖಜಾಂಚಿಯಾಗಿ ಸಿದ್ದರಾಯ ಅಥಣಿ, ಸಹಕಾರ್ಯದರ್ಶಿಯಾಗಿ ಪರಸಪ್ಪ ಗಂಗೂರ್, ಮಹಿಳಾ ಸಹಕಾರ್ಯದರ್ಶಿಯಾಗಿ ದೀಪ್ತಿ ದೇವಕತೆ, ಸಂಘಟನಾ ಕಾರ್ಯದರ್ಶಿಯಾಗಿ ವೆಂಕಟರೆಡ್ಡಿ ನಿಂಗರೆಡ್ಡಿ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ದೀಪ ಹಿರೇಮಠ ಆಯ್ಕೆಯಾಗಿದ್ದು, ಗೌರವ ಅಧ್ಯಕ್ಷರಾಗಿ ಜಿ.ಎನ್. ಬಾಲಸಿಂಗ್ ನೇಮಕಗೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಎಸ್.ಬಿ. ಹಲಸಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರ ಚಳವಳಿ ಪ್ರಾರಂಭಿಸಿದ ಹೋರಾಟಗಾರರು

◆ **ಮುದ್ದೇಬಿಹಾಳ:** ಬ್ರಿಟಿಷರ ಕಾಲದಲ್ಲಿ ಸಮೀಕ್ಷೆ ನಡೆದು, ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದ ಆಲಮಟ್ಟಿ ಮುದ್ದೆಬಿಹಾಳ ಯಾದಗಿರಿ ರೈಲ್ವೆ ಮಾರ್ಗ ನಿರ್ಮಾಣ ಕುರಿತು ಕೇಂದ್ರ ಸರ್ಕಾರ 2025ರ ಮುಂಗಡ ಪತ್ರದಲ್ಲಿ ಸಮೀಕ್ಷೆ ಕಾರ್ಯವನ್ನು ಪ್ರಾರಂಭ ಮಾಡಿದ್ದು, ಯೋಜನೆಯನ್ನು ಕಾಗದದಲ್ಲಿ ಉಳಿಸದೆ 2030ರ ವೇಳೆಗೆ ರೈಲು ಮಾರ್ಗ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿ ರೈಲು ಮಾರ್ಗ ಹೋರಾಟ ಸಮಿತಿಯ ಸದಸ್ಯರು ಪ್ರಧಾನ ಮಂತ್ರಿ ಅವರಿಗೆ ಪತ್ರ ಬರೆಯುವ ಮೂಲಕ ಚಳವಳಿ ಆರಂಭಿಸಿದ್ದಾರೆ.

ಕೇಂದ್ರ ಸರ್ಕಾರ ನಾಲ್ಕು ಕೋಟಿ ವೆಚ್ಚದಲ್ಲಿ ಸರ್ವೆ ನಡೆಸಲು ಯೋಜಿಸಿತ್ತು. ಆದರೆ ಇಲ್ಲಿಯವರೆಗೂ ಸೂಕ್ತ ನಿರ್ಧಾರ ಕೈಗೊಂಡಿಲ್ಲ, ಹೀಗಾಗಿ ಮತ್ತೆ ಹೋರಾಟವನ್ನು ಕೈಗೆತ್ತಿಕೊಂಡಿರುವ ಹೋರಾಟ ಸಮಿತಿಯ ಸದಸ್ಯರು ಪ್ರಧಾನ ಮಂತ್ರಿ ಅವರಿಗೆ ಪತ್ರವನ್ನು ಬರೆಯುವ ಮೂಲಕ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎಂದು ಅರವಿಂದ ಲದ್ದಿಮಠ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ.

ಬಾಗಲಕೋಟೆ ಬೆಳಗಾವಿ ವಿಜಯಪುರ ಜಿಲ್ಲೆಯ ಈ ಭಾಗದ ಜನ ಪ್ರತಿ ವರ್ಷ ಆಲಮಟ್ಟಿಯಿಂದ ಯಾದಗಿರಿ ಸಂಪರ್ಕ ಕಲ್ಪಿಸುವ ರೈಲ್ವೆ ಮಾರ್ಗಕ್ಕಾಗಿ ಒಂದಿಲ್ಲ ಒಂದು ಹೋರಾಟವನ್ನು ಮಾಡುತ್ತಿದ್ದಾರೆ.

ಕೇಂದ್ರ ಸರ್ಕಾರ ಮೂರು ಬಾರಿ ಸಮೀಕ್ಷೆಯನ್ನು ಕೈಗೆತ್ತಿಕೊಂಡು ತಾಂತ್ರಿಕ ಕಾರಣದಿಂದ ಸಾಧ್ಯವಿಲ್ಲ ಎಂದು ಹೇಳುತ್ತಾ ಬಂದಿದೆ. ಇದರಲ್ಲಿ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳ ನಿರ್ಲಕ್ಷ ಮತ್ತು ರಾಜಕೀಯ ಇಚ್ಛಾಶಕ್ತಿ ಕೊರತೆ ಇದೆ. ಹಿಂದುಳಿದ ಉತ್ತರ ಕರ್ನಾಟಕದ ಈ ಭಾಗಕ್ಕೆ ಮತ್ತು ಹೈದರಾಬಾದ್ ಕರ್ನಾಟಕದ ಹುಣಸಗಿ ಸುರಪುರ ಸೇರಿದಂತೆ ಹೈದರಾಬಾದ್ ಸಂಪರ್ಕಿಸುವ ರೈಲು ಮಾರ್ಗಕ್ಕೆ ಜನ ಪ್ರತಿನಿಧಿಗಳು ನಿರ್ಲಕ್ಷ ಮಾಡಿದ್ದಾರೆ ಎಂದು ದೂರಿರುವ ಹೋರಾಟಗಾರ ಬಿ ಎಸ್ ಮೇಟಿ, ಜನರಿಗೆ, ಕೃಷಿ ಕೈಗಾರಿಕೆಗಳ ಕಚ್ಚಾ ವಸ್ತು ಸಾಗಣೆ, ಕಲ್ಲಿದ್ದಲು, ಪೆಟ್ರೋಲ್ ಮತ್ತು ಖನಿಜಗಳ ಸಾಗಣೆಗೆ ಮಧ್ಯವರ್ತಿ ಮಾರ್ಗ ಆಗಿರುವ ಈ ಯೋಜನೆಯನ್ನು ಜಾರಿಗೆ ತರದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದ್ದಾರೆ.



ಇಲ್ಲಿಯವರೆಗೆ ತಾಳಿಕೋಟಿ, ಹುಣಸಗಿ, ಸುರಪುರ ಮತ್ತು ಯಾದಗಿರಿ ಭಾಗದ ಜನರು, ಪ್ರತಿನಿಧಿಗಳನ್ನು ಭೇಟಿಯಾಗಿರುವ ಹೋರಾಟಗಾರರು. ಲೋಕಸಭಾ ಸದಸ್ಯ ಕುಮಾರನಾಯಕ ರಮೇಶ್ ಜಿಗ್ಜಣಿಗಿ ಸೇರಿದಂತೆ ರೈಲ್ವೆ ಸಚಿವ ಅಶ್ವಿನ ವೈಷ್ಣವ್ ಅವರನ್ನು ಭೇಟಿಯಾಗಿ ಯೋಜನೆಯ ಮಹತ್ವದ ಕುರಿತು ಪದೇ ಪದೇ ವಿವರಿಸುತ್ತಲೆ ಇದ್ದಾರೆ. ಯೋಜನೆ ರಾಷ್ಟ್ರೀಯ ಮತ್ತು ಅಂತರಾಜ್ಯ ಮಹತ್ವದ ಸಂಪರ್ಕದ ವಿಷಯವಾಗಿದ್ದು, ಹಿಂದುಳಿದ ಪ್ರದೇಶಕ್ಕೆ ಅನ್ಯಾಯ ಮಾಡಬಾರದು, ಇದಕ್ಕಾಗಿ 5000 ಪತ್ರಗಳನ್ನು ಬರೆಯಲು ಯೋಚಿಸಲಾಗಿದೆ. ಪ್ರಧಾನ ಮಂತ್ರಿಗಳು ಕೂಡಲೇ ಮಧ್ಯ ಪ್ರವೇಶಿಸಿ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಹೋರಾಟಗಾರರು ಆಗ್ರಹಿಸಿದ್ದಾರೆ.

ಹಿಂದೂಗಳ ದೌರ್ಜನ್ಯ ತಡೆಯಲು ಬಿಜೆಪಿ ಕಟ್ಟೋಣ: ಜಗದೀಶ

◆ **ನಾಲತವಾಡ:** ಬಿಜೆಪಿ ಪಕ್ಷವು ಎಂದಿಗೂ ನಿಂತ ನೀರಲ್ಲ, ಪಕ್ಷದ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬ ಭಾರತೀಯರಿಗೂ ಅಳವಡಿಸಿಕೊಳ್ಳುವಂತೆ ಹಮ್ಮಿಕೊಂಡ ಇದೊಂದು ಮಹತ್ವದ ಪ್ರಶಿಕ್ಷಣ ಅಭಿಯಾನವಾಗಿದೆ ಎಂದು ಬಿಜೆಪಿ ಮಂಡಲ ತಾಲೂಕಾಧ್ಯಕ್ಷ ಜಗದೀಶ ಪಂಪಣ್ಣನವರು ಹೇಳಿದರು.

ಇಲ್ಲಿಯ ಹಳ್ಳೂರ ಪ್ಯಾಲೇಸ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಮುದ್ದೇಬಿಹಾಳ ತಾಲೂಕು ಬಿಜೆಪಿ ಮಂಡಲಸಹಯೋಗದ ಪಂ.ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನದಲ್ಲಿ ಅವರು ಮಾತನಾಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಕೆ.ಆರ್.ಬಿರಾದಾರ ಮಾತನಾಡಿ, ದೇಶದಲ್ಲಿ ನಿರಂತರವಾಗಿ ಹಿಂದೂಗಳ ಮೇಲಿನ ದೌರ್ಜನ್ಯ ತಡೆಗಟ್ಟಲು ಬಿಜೆಪಿ ಪಕ್ಷವನ್ನು ತಳ ಮಟ್ಟದಲ್ಲೇ ಗಟ್ಟಿಗೊಳಿಸುವ ಉದ್ದೇಶ ಎಲ್ಲರೂ ಹೊಂದಬೇಕು ಎಂದು ಬಿಜೆಪಿ ಕೇವಲ ಅಧಿಕಾರ ಬಯಸುತ್ತಿಲ್ಲ, ದೀನದಯಾಳ್ ಅವರು ಹೊಂದಿರುವ ಈ ದೇಶದ ನಿವಾಸಿಗಳಿಗೆ ಸಮಾನ ಅವಕಾಶ ಸಿಗಬೇಕು, ಎಲ್ಲರಲ್ಲೂ ಭಾರತೀಯರು ಎನ್ನುವ ಮನೋಭಾವ ಬೆಳೆಯಬೇಕು ಎನ್ನುವ ಆಶಯ ಹೊಂದಿದ್ದರು ಇದನ್ನು ಎಲ್ಲರೂ ಅಳವಡಿಸಿಕೊಂಡು ಮುಂಬರುವ ಚುನಾವಣೆಯಲ್ಲಿ ಪಕ್ಷ ಗಟ್ಟಿಗೊಳಿಸುವ ನಿರ್ಣಯ ಹೊಂದೋಣ ಎಂದರು.



ಗಿರೀಶಗೌಡ ಪಾಟೀಲ (ಮುರಾಳ), ಮುತ್ತು ಅಂಗಡಿ, ಸಂಗಮೇಶ ಮೇಟಿ ಮಾತನಾಡಿ, ದೇಶದ ಜನತೆಯಲ್ಲಿ ರಾಷ್ಟ್ರಾಭಿಮಾನದ ಕೊರತೆಯಾಗಬಾರದು ಎನ್ನುವ ಉದ್ದೇಶದಿಂದ ದೀನದಯಾಳ್ ಅವರು ಮಹತ್ವದ ಉದ್ದೇಶ ಭಾರತೀಯರಲ್ಲಿ ಬೇರೂರಬೇಕಿದೆ ಎಂದರು.

ಸಿದ್ದರಾಮಯ್ಯನವರ ಸ್ಥಾನಪಲ್ಲಟದಿಂದ ಈಗಾಗಲೇ ಅಧಿಕಾರದ ದಾಹ ಕಾಂಗ್ರೆಸ್ಸಿಗರಲ್ಲಿ ಶುರುವಾಗಿದ್ದು, ಸರಕಾರ ಬಹಳ ಉರುಳುವ ಕಾಲ ಸನ್ನಿಹಿತವಾಗಿದೆ, ನಾವೂ ಸಹ ಪಕ್ಷ ಸಂಘಟನೆಯಲ್ಲಿ ತೊಡಗೋಣ ಎಂದು ಜಿಪಂ ಮಾಜಿ ಉಪಾಧ್ಯಕ್ಷ ಕೆ.ಆರ್.ಬಿರಾದಾರ ಎಂದರು. ಎಂ.ಎಸ್.ಪಾಟೀಲ, ಪ್ರಭು ಕಡಿ, ಜಗದೀಶ ಪಂಪಣ್ಣನವರು, ಮಂಜುನಾಥ ಮೀಸೆ ಗುರುನಾಥ ದೇಶಮುಖ, ಮುನ್ನಾಧಣಿ ನಾಡಗೌಡ, ಸಂಗಮ್ಮ ದೇವರಳ್ಳಿ ಸುವರ್ಣಾ ಬಿರಾದಾರ, ಬಸವರಾಜ ಬಿರಾದಾರ ಇದ್ದರು.

ಜೂ.8ರಂದು ರೈತ ಮುಖಂಡರಿಂದ ಪ್ರತಿಭಟನೆ: ಪಾಟೀಲ

◆ **ಆಲಮಟ್ಟಿ:** ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಚುನಪ್ಪಾ ಪೂಜೇರಿ, ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಸೇರಿದಂತೆ ಜಿಲ್ಲಾಯ 13 ತಾಲೂಕು ಹಾಗೂ ರಾಜ್ಯದ 31 ಜಿಲ್ಲೆಗಳಿಂದ ರೈತ ಮುಖಂಡರು ಸೇರಿಕೊಂಡು ಕೆಬಿಜೆಎನ್ನೆಲ್ ಎಂಡಿ ಹಾಗೂ ಮುಖ್ಯ ಅಭಿಯಂತರರ ಕಚೇರಿಗಳ ಮುಂದೆ ಜೂನ 8ರಂದು ಸೋಮವಾರ ಪ್ರತಿಭಟನೆ ಮಾಡಲು ನಿರ್ಧರಿಸಲಾಗಿದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಎಸ್.ಪಾಟೀಲ(ನಡಹಳ್ಳಿ) ಹೇಳಿದರು.

ಆಲಮಟ್ಟಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುದ್ದೇಬಿಹಾಳ ತಾಲೂಕಿನ ನಾಗರ ಬೆಟ್ಟ ಏತ ನೀರಾವರಿ ಕಾಮಗಾರಿ ಪ್ರಾರಂಭವಾಗಿ ಎಂಟು ವರ್ಷಗಳು ಗತಿಸಿದರೂ ಈ ಯೋನೆಯ ಜಾಕ್ ವೆಲ್ ಹಾಗೂ ಲೀಡ್‌ಆಫ್ ಕೆನಾಲ ಮಾತ್ರ ಪೂರ್ಣ ಗೊಂಡಿದ್ದು ಏತ ನೀರಾವರಿ ಯೋಜನೆಗೆ ಸಂಬಂದಿಸಿದಂತೆ ಇರುವ ತಾಂತ್ರಿಕ ಹಾಗೂ ಕಾಲುವೆಯ ಮುಖ್ಯ ಜಾಲಕ್ಕೆ ಹೊಂದಿಕೊಂಡು ವಿತರಣಾ ಕಾಲುವೆ, ಸೀಳು ಕಾಲುವೆ ಗಳ ಕಾಮಗಾರಿಗಳ ಟೆಂಡರ್ ಕರೆದು ಶೀಘ್ರವಾಗಿ ಈ ಯೋಜನೆಯಿಂದ ಸುಮಾರು 14 ಹಳ್ಳಿಗಳ ರೈತರ ಜಮೀನುಗಳಿಗೆ ನೀರು ಹರಿಸುವಂತೆ ಆಗ್ರಹಿಸಿದರು. ಅಂದು ಇಲ್ಲಿನ ರಾಮಲಿಂಗೇಶ್ವರ ದೇವಸ್ಥನದಿಂದ ಕೆಬಿಜೆಎನ್ನೆಲ್ ಕಚೇರಿವರೆಗೆ ರೈತರು ರ್‍ಯಾಲಿ ಮೆರವಣಿಗೆ ಮಾಡಲಾಗುವದು ಎಂದು ಜಿಲ್ಲಾಧ್ಯಕ್ಷ ಸಂಗಮೇಶ್ ಸಗರ ತಿಳಿಸಿದರು.



ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕಲ್ಲು ಸೊನ್ನದ, ಸೀತಪ್ಪ ಗಣಿ, ಸಾಬಣ್ಣ ಅಂಗಡಿ, ರವೀಂದ್ರ ಕೋತಿನ, ಅಲ್ಲಾಭಕ್ಷ ಲಷ್ಕರಿ, ತಿಮ್ಮಣ್ಣ ವಡ್ಡರ ಇದ್ದರು.

ಮೃತ ಯುವಕನ ಮನೆಗೆ ತಾಲೂಕಾಡಳಿತ ಭೇಟಿ

◆ **ನಾಲತವಾಡ:** ಬಸವನ ಬಾಗೇವಾಡಿ ತಾಲೂಕಿನ ಹಂಗರಗಿ ಗ್ರಾಮದಲ್ಲಿ ಎನ್.ಎಸ್.ಪೂಜಾರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ರವಿಚಂದ್ರ ಮಾದರ ಎಂಬುವರ ಯುವಕನ ಹತ್ಯೆಯಾಗಿದೆ ಎನ್ನುವ ಆರೋಪಕ್ಕೆ ಸಂಭಂದಿಸಿದಂತೆ ಯುವಕನ ಸ್ವಗ್ರಾಮ ನಾಗರಬೆಟ್ಟಕ್ಕೆ ತಾಲೂಕಾಧಿಕಾರಿಗಳ ತಂಡ ಆಗಮಿಸುತ್ತಿದ್ದಂತೆ ಜಿಲ್ಲಾಧಿಕಾರಿಗಳೆ ಬರಲಿ ಎಂದು ದಲಿತ ಮುಖಂಡರ ಹಾಗೂ ಅಧಿಕಾರಿಗಳ ಮದ್ಯೆ ಮಾತಿನ ಚಕಮಕಿ ನಡೆಯಿತು.

ಒಬ್ಬ ಬಡ ದಲಿತ ಯುವಕನ ಹತ್ಯೆಯಾದ 4 ದಿನಗಳ ನಂತರ ಬರುವ ಅವಶ್ಯಕತೆ ಏನಿದೆ ನಮಗೆ ಜಿಲಾಧಿಕಾರಿಗಳೇ ಬರಲಿ ಮಾತನಾಡುತ್ತೇವೆ, ದಲಿತರಿಗೆ ಬೆಲೆ ಇಲ್ಲವೇ, ನಮಗೂ ಕಾನೂನು ಇದೆ ಹೋರಾಟ ಮಾಡುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.




ಪರಿಸ್ಥಿತಿ ತಿಳಿಗೊಳಿಸಿದ ನಂತರ ಆಗಮಿಸಿದ್ದ ದಂಡಾಧಿಕಾರಿಗಳಾದ ಕೀರ್ತಿ ಚಾಲಕ, ತಾ.ಪಂ ಇಓ ಸಂಗನಗೌಡ, ಸಮಾಜ ಕಲ್ಯಾಣ ಇಲಾಖೆಯ ಸಹಾಯ ನಿರ್ದೇಶಕಿ ಬಸಂತಿ ಹಾಗೂ ಕಂದಾಯ ನಿರೀಕ್ಷ ವಿ.ವಿ.ಅಂಬಿಗೇರ, ತಾ.ಪಂ ವ್ಯವಸ್ಥಾಪಕ ವೀರೇಶ ಹೂಗಾರ ಅವರು ಕುಟುಂಬದ ಸಾಂತ್ವನ ಹೇಳಿ ಕುಟುಂಬದ ಓರ್ವ ಸದಸ್ಯರಿಗೆ ಸರಕಾರಿ ಕೆಲಸಕ್ಕೆ ಶಿಫಾರಸ್ಸು ಮಾಡುತ್ತೇವೆ ಸದ್ಯ ಪರಿಹಾರದ ರೂಪದಲ್ಲಿ ತಮಗೆ ಒಟ್ಟು 8 ಲಕ್ಷ ಮೊತ್ತದ ಹಣದ ಚೆಕ್‌ನ್ನು 2 ಹಂತದಲ್ಲಿ ಶನಿವಾರ ವಿತರಿಸುತ್ತೇವೆ, ನಡೆದ ಘಟನೆಗೆ ನಮ್ಮದೂ ನೋವು ತಂದಿದೆ, ಇಂತಹ ಘಟನೆಗಳಿಗೆ ಸರಕಾರ ನ್ಯಾಯ ಕೊಡಿಸಲು ತಮ್ಮ ಬೆನ್ನು ಹಿಂದೆ ಇದೆ, ಯಾವದೇ ಕಾರಣಕ್ಕೂ ರೋಷಿ ಹೋಗದೇ ಶಾಂತಿ ಕಾಪಾಡಿ ಎಂದು ಅಧಿಕಾರಿಗಳು ಮನವಿ ಮಾಡಿಕೊಂಡರು.

ಶೀಘ್ರವೇ ಆಹಾರ ಕಿಟ್ ನೀಡಬೇಕು ಎಂದು ಸ್ಥಳದಲ್ಲಿದ್ದ ಗ್ರಾ.ಪಂ ಕಾರ್ಯದರ್ಶಿ ಅಯ್ಯಪ್ಪ ಮಲಗಲದಿನ್ನಿ ಅವರಿಗೆ ದಂಡಾಧಿಕಾರಿಗಳು ಸೂಚಿಸಿದರು. ಹುಲಗಪ್ಪ ಮಾದರ, ದೇವಪ್ಪ ಮಾದರ, ಚಂದ್ರು ಮಾದರ, ಪ್ರಭು ಮಾದರ, ಬಸವರಾಜ ಮಾದರ, ಯಲ್ಲಪ್ಪ ಚಲವಾದಿ, ಯಲ್ಲಪ ಚಲವಾದಿ ಇದ್ದರು.

ಸಿಎಂ ತ್ಯಾಗದ ನಡೆ ಪ್ರಶಂಸನೀಯ

◆ **ವಿಜಯಪುರ:** ಅಹಿಂದ ನಾಯಕ ಸಿದ್ದರಾಮಯ್ಯ ಸಮಾಧಾನ ಚಿತ್ತವಾಗಿ ಮುಖ್ಯಮಂತ್ರಿ ಸ್ಥಾನವನ್ನು ತ್ಯಾಗ ಮಾಡಿದ ಗೌರವಾಯುತ ನಡೆ ದೇಶದ ರಾಜಕೀಯ ಕ್ಷೇತ್ರವೇ ನಿಬ್ಬೆರಗಾಗಿ ನೋಡುವಂತಾಗಿದ್ದು, ಅವರ ಈ ರಾಜಕೀಯ ನಡೆ ರಾಜಕೀಯ ಇತಿಹಾಸದಲ್ಲಿಯೇ ಪ್ರಶಂಸನೀಯ ಎಂದು ಅಹಿಂದ ಮುಖಂಡ ಎಸ್.ಎಂ.ಪಾಟೀಲ ಗಣಿಹಾರ ಹೇಳಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಕರ್ನಾಟಕದಲ್ಲಿ ಕಳೆದ ಮೂರು ದಿನಗಳಿಂದ ನಡೆದ ವಿದ್ಯಮಾನಗಳಿಂದ ಇಡೀ ರಾಜ್ಯದ ಜನ ಚಿಂತಿತರಾಗಿದ್ದಾರೆ. ಮೊನ್ನೆವರೆಗೂ ಸಿದ್ದರಾಮಯ್ಯನವರನ್ನು ಟೀಕಿಸುತ್ತಿದ್ದವರೂ ಸಹ ಸಿದ್ದರಾಮಯ್ಯನವರ ಬಗ್ಗೆ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿ, ಮಾತುಗಳನ್ನಾಡುತ್ತಿದ್ದಾರೆ. ಸಿದ್ದರಾಮಯ್ಯನವರ ವ್ಯಕ್ತಿತ್ವವೇ ಹಾಗೇ. ಅವರೆಂದೂ ಯಾರೊಂದಿಗೂ ವಯಕ್ತಿಕ ದ್ವೇಶ ಇಟ್ಟುಕೊಂಡವರಲ್ಲ. ಜ. 4, 2005ರಂದು ನಗರದ ರಂಗಮಂದಿರದಲ್ಲಿ ಹುಬ್ಬಳ್ಳಿಯ ಸಮಾವೇಶದ ಪೂರ್ವಭಾವಿ ಸಭೆ ಇತ್ತು. ಅಲ್ಲಿಂದಲೇ ರಾಜ್ಯದಲ್ಲಿ ಅಹಿಂದ ಸಂಘನೆಯ ಪ್ರಾರಂಭ ಆದದ್ದು. ಅಂದು ಪ್ರಾರಂಭ ಆದ ಸಂಘಟನೆಯೇ ಸಿದ್ದರಾಮಯ್ಯನವರನ್ನು ಇಲ್ಲಿಯವರೆಗೆ ತಂದಿತು. ಎಷ್ಟೇ ಒತ್ತಡದಲ್ಲಿದ್ದರೂ ನಮ್ಮನ್ನು ಕೈ ಹಿಡಿದು ಮಾತನಾಡುತ್ತಿದ್ದರು. ಸದ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಿರುವುದು ನೋವು ತಂದಿದೆ.

ಆಧ್ಯಾತ್ಮಿಕ ಪ್ರವಚನಕ್ಕೆ ಬಸವ ದೇವರಿಗೆ ಆಹ್ವಾನ

◆ **ಬಸವನಬಾಗೇವಾಡಿ:** ಶ್ರಾವಣ ಮಾಸದ ಅಂಗವಾಗಿ ಬಸವೇಶ್ವರರ ಜನ್ಮಸ್ಥಳ ಬಸವನಬಾಗೇವಾಡಿಯಲ್ಲಿ ಆಯೋಜಿಸಲಾಗುತ್ತಿರುವ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಕ್ಕೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಬಸವ ಬೆಳವಿಯ ಚರಂತೇಶ್ವರ ಮಠದ ಬಸವ ದೇವರು ಅವರನ್ನು ಭಕ್ತಿಪೂರ್ವಕವಾಗಿ ಆಹ್ವಾನಿಸಲಾಯಿತು.

ಪಟ್ಟಣದ ಬಸವೇಶ್ವರ ಸೇವಾ ಸಮಿತಿಯ ಪದಾಧಿಕಾರಿಗಳು ಪೂಜ್ಯರ ಸನ್ನಿಧಿಗೆ ತೆರಳಿ, ಸನ್ಮಾನಿಸಿ ಶ್ರಾವಣ ಮಾಸದ ಮಂಗಲ ಪ್ರವಚನ ನಡೆಸಿಕೊಡಬೇಕೆಂದು ವಿನಂತಿಸಿದರು.

ಸಮಿತಿಯ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿ ಬಸವನಬಾಗೇವಾಡಿಯಲ್ಲಿ ನಿರಂತರವಾಗಿ ಬಸವ ತತ್ವಾಧಾರಿತ ಪ್ರವಚನಗಳು ಯಶಸ್ವಿಯಾಗಿ ನಡೆಯುತ್ತಿವೆ. ನಾಡಿನ ಹೆಸರಾಂತ ಪ್ರವಚನಕಾರರು ಆಗಮಿಸಿ ಜ್ಞಾನದಾಸೋಹ ಉಣಬಡಿಸಿದ್ದಾರೆ. ಮುಂಬರುವ ಶ್ರವಣ ಮಾಸದಲ್ಲಿ ತಾವು ಸಹ ಆಗಮಿಸಿ ಸದ್ಭಕ್ತರನ್ನು ಹರಸಬೇಕೆಂದು ಮನವಿ ಮಾಡಿದರು.



ಆಹ್ವಾನ ಸ್ವೀಕರಿಸಿದ ಬಸವ ದೇವರು ಮಾತನಾಡಿ, ಜಗದ್ಗುರು ಬಸವೇಶ್ವರರ ಜನ್ಮಸ್ಥಳದಲ್ಲಿ ಪ್ರವಚನ ನೀಡುವುದು ನನ್ನ ಪೂರ್ವಜನ್ಮದ ಪುಣ್ಯ. ಲಿಂಗಾಯತರಿಗೆ ಬಸವನಬಾಗೇವಾಡಿ ಅತ್ಯಂತ ಪವಿತ್ರ ಭೂಮಿ'' ಎಂದು ಹರ್ಷ ವ್ಯಕ್ತಪಡಿಸಿ ಕಾರ್ಯಕ್ರಮಕ್ಕೆ ಖಂಡಿತವಾಗಿ ಆಗಮಿಸುವುದಾಗಿ ಭರವಸೆ ನೀಡಿದರು.

ಸಮಿತಿ ಉಪಾಧ್ಯಕ್ಷ ಬಸವರಾಜ ಹಾರಿವಾಳ ಸೇರಿದಂತೆ ಶಂಕರಗೌಡ ಬಿರಾದಾರ, ಎಂ.ಜಿ.ಆದಿಗೊಂಡ, ಶೇಖರ ಗೊಳಸಂಗಿ, ಉಮೇಶ ಹಾರಿವಾಳ, ಸುರೇಶಗೌಡ ಪಾಟೀಲ, ಬಸವರಾಜ ಕೋಟಿ, ಸಂಕನಗೌಡ ಪಾಟೀಲ, ಶೇಖರಗೌಡ ಪಾಟೀಲ, ರವಿ ರಾಠೋಡ, ರಮೇಶ ಯಳಮೇಲಿ, ರವಿ ಚಿಕ್ಕೊಂಡ, ಬಸನಗೌಡ ಪಾಟೀಲ ಇದ್ದರು.

ಕಿರುಸುದ್ದಿ

ಹಳ್ಳಿಗಳ ಅಭಿವೃದ್ಧಿಗೆ ಶ್ರಮಿಸುವೆ: ಶಾಸಕ

ಕುಷ್ಟಗಿ: ಗ್ರಾಮೀಣ ಭಾಗದ ಪ್ರತಿಯೊಂದು ಹಳ್ಳಿಗಳು ಪ್ರಗತಿ ಹೊಂದಬೇಕು ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲೂಕಿನ ನಿರಲೂಟಿ ಗ್ರಾಮದ ಬಸವೇಶ್ವರ ದೇವಸ್ಥಾನ ಹತ್ತಿರದಿಂದ ಬಸ್ ನಿಲ್ದಾಣದವರೆಗೆ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಶುಕ್ರವಾರ ಮಾತನಾಡಿದರು. ಗ್ರಾಮದಲ್ಲಿ ಅಂದಾಜು 30 ಲಕ್ಷ ರೂ. ವೆಚ್ಚದಲ್ಲಿ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ ಸಿಸಿ ರಸ್ತೆ ಕಾಮಗಾರಿ ನಿರ್ಮಾಣವಾಗುತ್ತಿದ್ದು,ಹಳ್ಳಿಗಳು ಸಂಪೂರ್ಣ ಬದಲಾವಣೆ ಆಗಬೇಕಿದೆ. ಮೂಲಭೂತ ಸೌಕರ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಲಾಗುವುದು. ಜನರ ಸಹಕಾರ ಮೂಲಕ ಹೆಚ್ಚಿನ ಕಾರ್ಯ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ.ಮಹೇಶ್, ಮುಖಂಡರಾದ ಯಂಕನಗೌಡ ಪೋಲಿಸ್ ಪಾಟೀಲ್, ಶರಣಪ್ಪ ಕೌದಿ, ಮಲ್ಲಿಕಾರ್ಜುನ್ ಅಗಸಿಮುಂದಿನ್, ಬಸವನಗೌಡ ಪೊಲೀಸ್ ಪಾಟೀಲ, ಶ್ಯಾಮೀದಸಾಬ್ ಬ್ಯಾಲಿಹಾಳ್, ಹೊಳಿಯಪ್ಪ ತುಪ್ಪದ್ ಇದ್ದರು.

ರಾಯರೆಡ್ಡಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಕುಕನೂರು: ಯಲಬುರ್ಗಾ ಶಾಸಕ ಬಸವರಾಜ್ ರಾಯರೆಡ್ಡಿ ಅವರಿಗೆ ಸಚಿವ ಖಾತೆ ನೀಡಬೇಕೆಂದು ಕಾಂಗ್ರೆಸ್ ಮುಖಂಡರು ಆಗ್ರಹಿಸಿದ್ದಾರೆ.

ಯಲಬುರ್ಗಾ ವಿಧಾನಸಭಾ ಕ್ಷೇತ್ರದಿಂದ 6 ಬಾರಿ ಶಾಸಕರಾಗಿ ಆಯ್ಕೆಯಾಗಿ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿ ಮಾಡಿದ್ದಾರೆ ಹಾಗು ಮಾಡುತ್ತಿದ್ದಾರೆ. 1994-1996ರಲ್ಲಿ ವಸತಿ ಸಚಿವರಾಗಿ, 2016-2018 ರಲ್ಲಿ ಉನ್ನತ ಶಿಕ್ಷಣ ಸಚಿವರಾಗಿ ಹಾಗೂ 1996-1998 ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಸಿಎಂ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾಗಿ 3 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಈ ಬಾರಿ ನಮ್ಮ ತಾಲೂಕಿನ ಹೆಮ್ಮೆಯ ಶಾಸಕರಿಗೆ ಸಚಿವ ಸ್ಥಾನ ಕೊಡಲೇಬೇಕೆಂದು ಮುಖಂಡರಾದ ಈಶಪ್ಪ ದೊಡ್ಡಮನಿ ಶಿರೂರು ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ಮೇ 31ಕ್ಕೆ ದಸಾಪ ನೂತನ ಪದಾಧಿಕಾರಿಗಳ ಆಯ್ಕೆ ಸಭೆ

ಸಿಂಧನೂರು: ದಲಿತ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಮೇ 31ರಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಕಚೇರಿಯಲ್ಲಿ ದಲಿತ ಸಾಹಿತ್ಯ ಪರಿಷತ್ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಸಭೆ ನಡೆಸಲು ತೀರ್ಮಾನಿಸಲಾಗಿದೆ



ಎಂದು ದಲಿತ ಸಾಹಿತ್ಯ ಪರಿಷತ್ ತಾಲೂಕು ಘಟಕದ ನೂತನ ಅಧ್ಯಕ್ಷ ಡಾ.ಅರುಣಕುಮಾರ ಬೇರಿಗಿ ಪತ್ರಿಕಾ ತಿಳಿಸಿದ್ದಾರೆ. ಈ ಸಭೆಗೆ ತಾಲೂಕಿನ ದಲಿತ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೀತಿಸುವ ಹಾಗೂ ಜೀವಪರ ಜನಪರ ಕಾಳಜಿಯುಳ್ಳ ಹಾಗೂ ತಾಲೂಕಿನ ಎಲ್ಲಾ ದಲಿತ ಸಂಘಟನೆಗಳು ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟಗಳು ಸಭೆಗೆ ಹಾಜರಾಗಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಅವರು ತಿಳಿಸಿದ್ದಾರೆ.

ಬಕ್ರೀದ್ ಆಚರಣೆ

ಹನುಮಸಾಗರ: ತ್ಯಾಗ ಮತ್ತು ಬಲಿದಾನದ ಮಹತ್ವವನ್ನು ಸಾರುವ ಬಕ್ರೀದ್ ಹಬ್ಬವನ್ನು ಹನುಮಸಾಗರ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಗುರುವಾರ ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದವರು ಈದ್ಗಾ ಮೈದಾನಗಳಲ್ಲಿ ಸೇರಿ ವಿಶೇಷ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಮನ್ನೇರಾಳ ರಸ್ತೆಯ ಈದ್ಗಾ ಮೈದಾನದಲ್ಲಿ ಮದೀನಾ ಮಸ್ಜಿದ್‌ನ ಮುಜಾಹಿದ್ ಅವರು ಪ್ರಾರ್ಥನೆ ನೆರವೇರಿಸಿದರೆ, ಬೀಳಗಿಯ ಅಗಸಿ ಬಾಗಿಲು ಸಮೀಪದ ಈದ್ಗಾ ಮೈದಾನದಲ್ಲಿ ಮೈನುದ್ದೀನ್‌ಸಾಬ ಖಾಜಿ ಅವರು ಪ್ರಾರ್ಥನೆಗೆ ನೇತೃತ್ವ ವಹಿಸಿದರು. ಪ್ರಾರ್ಥನೆ ವೇಳೆ ವಿಶ್ವಶಾಂತಿ, ಸೌಹಾರ್ದತೆ ಹಾಗೂ ಸಮಾಜದ ಒಳಿತಿಗಾಗಿ ದುಆ ಮಾಡಲಾಯಿತು.

ಹನುಮಸಾಗರ, ಹೂಲಗೇರಾ, ಹನುಮನಾಳ, ಮಾಲಗಿತ್ತಿ, ನಿಲೋಗಲ್, ಕುಂಬಳಾವತಿ, ಚಳಗೇರಾ, ಕಲಾಲಬಂಡಿ, ಮೂಗನೂರ ಸೇರಿದಂತೆ ವಿವಿಧ ಗ್ರಾಮಗಳ ಈದ್ಗಾ ಮೈದಾನಗಳಲ್ಲಿ ಮುಸ್ಲಿಂ ಬಾಂಧವರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ಹಬ್ಬದ ಸಂಭ್ರಮವನ್ನು ಹಂಚಿಕೊಂಡರು.



ಕುಷ್ಟಗಿ: ತಾಲೂಕಿನ ನಿರಲೂಟಿ ಗ್ರಾಮದ ಬಸವೇಶ್ವರ ದೇವಸ್ಥಾನ ಹತ್ತಿರದಿಂದ ಬಸ್ ನಿಲ್ದಾಣದವರೆಗೆ ಸಿಸಿ ರಸ್ತೆ ಕಾಮಗಾರಿಗೆ ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಚಾಲನೆ ನೀಡಿದರು.

ಮಲ್ಲಯ್ಯಗೆ ಗಾನ ಕಲಾ ರತ್ನ ರಾಜ್ಯ ಪ್ರಶಸ್ತಿ

ಹನುಮಸಾಗರ: ಪಟ್ಟಣದಲ್ಲಿನ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗ ಕಲಾವಿದರ ಸಂಘದ ಅಧ್ಯಕ್ಷಮಲ್ಲಯ್ಯ ಕೋಮಾರಿಯವರಿಗೆ ಗುರುವಾರ ಬಾಗಲಕೋಟೆ ಜಿಲ್ಲೆಯ ಚಿಕ್ಕ ಮ್ಯಾಗೇರಿಯ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕರುನಾಡ ಕಲ್ಪವೃಕ್ಷ ಫೌಂಡೇಶನ್ ಮತ್ತು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಕರ್ನಾಟಕ ಹಾಗೂ ಚಿಕ್ಕ ಮ್ಯಾಗೇರಿ ಮತ್ತು ಹಿರೇಮ್ಯಾಗೇರಿ ತರುಣ ಸಂಘದ ಸಹಯೋಗದೊಂದಿಗೆ ದ್ವಿತೀಯ ಸಾಹಿತ್ಯ ಕಲ್ಪವೃಕೋತ್ಸವ ಸಮ್ಮೇಳನದಲ್ಲಿ ವಿವಿಧ ಸಾಧಕರಿಗೆ ರಂಗಭೂಮಿ ಹಾಗೂ ಸಾಂಸ್ಕೃತಿಕ ಸಂಘಟನೆ ಗುರುತಿಸಿ ಮಲ್ಲಯ್ಯ ಕೋಮಾರಿ ಅವರಿಗೆ ಗಾನ ಕಲಾ ರತ್ನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಂಸ್ಥಾಪಕ ಕನಕ ಪ್ರೀತಿಶ, ರಾಜ್ಯಾಧ್ಯಕ್ಷೆ ರೇಖಾ ಶಿವರಾಂ ಭಟ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಗೌಡರ, ಚಿತ್ತರಗಿ ವಿಜಯ ಮಹಾಂತ ಶ್ರೀಗಳು ಇಲಕಲ್, ಡಾ.ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಕೊಟ್ಟೂರು, ಶ್ರೀದೊಡ್ಡ ಬಸವಾರ್ಯ ತಾತನವರು ಸಜ್ಜಲಗುಡ್ಡ, ಡಾ.ಬಸವಲಿಂಗ ಸ್ವಾಮಿಗಳು, ಮಹಾಂತ ತೀರ್ಥ ಶಿರೂರು, ಸಿದ್ದಲಿಂಗ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಬಿಲ್‌ಕೆರೂರು, ಡಾ.ಚನ್ನಬಸವ ಚನ್ನ ವೀರೇಶ್ವರ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ನಂದವಾಡಗಿ, ಸ್ವಾಮಿಗಳವರು, ವಿರಕ್ತಮಠ ಕೊಣ್ಣೂರು, ಡಾ ಅಭಿನವ ಕೊಟ್ಟೂರೇಶ್ವರ ಮಹಾಸ್ವಾಮಿಗಳು, ಕೊಟ್ಟೂರೇಶ್ವರ ಮಠ ಹರ್ಲಾಪೂರ ಇತರರು ಉಪಸ್ಥಿತರಿದ್ದರು.



ಹನುಮಸಾಗರ: ಪಟ್ಟಣದಲ್ಲಿನ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗ ಕಲಾವಿದರ ಸಂಘದ ಅಧ್ಯಕ್ಷ ಮಲ್ಲಯ್ಯ ಕೋಮಾರಿ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಗುರುವಾರ ಬಾಗಲಕೋಟೆ ಜಿಲ್ಲೆಯ ಚಿಕ್ಕ ಮ್ಯಾಗೇರಿಯ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ದ್ವಿತೀಯ ಸಾಹಿತ್ಯ ಕಲ್ಪವೃಕೋತ್ಸವ ಸಮ್ಮೇಳನದಲ್ಲಿ ಗಾನ ಕಲಾ ರತ್ನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಪ್ರಥಮ ತ್ರೈಮಾಸಿಕ ಕೆಡಿಪಿ ಸಭೆ | ಜನಾರ್ದನ ರೆಡ್ಡಿ ಸೂಚನೆ

ಪ್ರಾಣಹಾನಿ ತಡೆಗೆ ಮುನ್ನೆಚ್ಚರಿಕೆ ವಹಿಸಿ

ಕೊಪ್ಪಳ: ಮಳೆಗಾಲ ವೇಳೆಯಲ್ಲಿ ಜನ-ಜಾನುವಾರುಗಳ ಪ್ರಾಣ ಹಾನಿ ತಡೆಗೆ ಹಾಗೂ ಹಾನಿಗೆ ತಕ್ಕಂತೆ ಪರಿಹಾರ ಒದಗಿಸುವುದಕ್ಕೆ ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ವಹಿಸಬೇಕು ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾ ಪಂಚಾಯತ್ ಕಚೇರಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಶುಕ್ರವಾರ ಇರಕಲಗಡ ಹೋಬಳಿಗೆ ಸಂಬಂಧಿಸಿದಂತೆ ತ್ರೈಮಾಸಿಕ ಕೆಡಿಪಿ ಸಭೆ ನಡೆಸಿ ಅವರು ಮಾತನಾಡಿದರು.

ಮಳೆಗಾಲದ ಸಂದರ್ಭದಲ್ಲಿ ಅಧಿಕಾರಿಗಳು ಜಾಗ್ರತೆಯಿಂದ ಕಾರ್ಯ ನಿರ್ವಹಿಸಬೇಕು. ಯಾವುದೆ ಕಡೆಗಳಲ್ಲಿ ಹಾನಿ ಸಂಭವಿಸಿದಾಗ ಸ್ಥಳಕ್ಕೆ ಕೂಡಲೇ ಭೇಟಿ ನೀಡಿ ಪರಿಶೀಲಿಸಬೇಕು. ಜೀವ ಹಾನಿ ಹಾಗೂ ಆಸ್ತಿಪಾಸ್ತಿ ಹಾನಿಗೆ ಪರಿಹಾರ ಕಾರ್ಯವನ್ನು ತ್ವರಿತಗೊಳಿಸಬೇಕು. ಸಾರ್ವಜನಿಕರ ದೂರವಾಣಿ ಕರೆಗಳನ್ನು ಸ್ವೀಕರಿಸಿ ಸ್ಪಂದನೆ ನೀಡಬೇಕು ಎಂದು ಶಾಸಕರು ಕಂದಾಯ, ಜೆಸ್ಕಾಂ, ಪಶುಪಾಲನೆ, ಕೃಷಿ, ತೋಗಾರಿಕಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಿನ್ನಾಳ ಗ್ರಾಮ ಸೇರಿದಂತೆ ಆರು ಕಡೆಗಳಲ್ಲಿನ ಸಾರ್ವಜನಿಕ ಶೌಚಾಲಯಗಳಿಗೆ ವಿದ್ಯುತ್ ಸಂಪರ್ಕವಿಲ್ಲದ ವಿಷಯ ಸಭೆಯಲ್ಲಿ ಚರ್ಚೆಗೆ ಬಂದಿತು.

ಹಿಂದುಳಿದ ಕಿನ್ನಾಳ ಪ್ರದೇಶದಲ್ಲಿನ ಸಾರ್ವಜನಿಕ ಶೌಚಾಲಯಕ್ಕೆ ವಿದ್ಯುತ್ ಸೌಕರ್ಯ ಕೊಡಲು ವಿಳಂಬ ವಹಿಸಿದ ಕೊಪ್ಪಳ ಜೆಸ್ಕಾಂ ಅಧಿಕಾರಿಗೆ ಶಾಸಕರು ತರಾಟೆ ತೆಗೆದುಕೊಂಡರು. ನಾಲ್ಕಾರು



ಬಾರಿ ಗಂಗಾವತಿಗೆ ಅಲೆದು ಕಿನ್ನಾಳ ಗ್ರಾಮದ ಶೌಚಾಲಯಕ್ಕೆ ವಿದ್ಯುತ್ ಸೌಕರ್ಯ ಕಲ್ಪಿಸಿ ಎಂದು ಮನವಿ ಹಿಡಿದು ಬಂದ ಕಿನ್ನಾಳ ಗ್ರಾಮದ ಗ್ರಾಪಂ ಸದಸ್ಯೆ ಕಮಲಮ್ಮ ಅವರಲ್ಲಿನ ಮಾನವೀಯತೆ, ಕಾಳಜಿ ಭಾವನೆಯನ್ನು ಅಧಿಕಾರಿಗಳು ಸಹ ರೂಢಿಸಿಕೊಳ್ಳಬೇಕು ಎಂದು ಶಾಸಕರು ಎಲ್ಲ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಕಿನ್ನಾಳ ಸೇರಿದಂತೆ 6 ಗ್ರಾಪಂ ಪಿಡಿಒಗಳ ಸಭೆ ಕರೆದು ವಿದ್ಯುತ್ ಸಂಪರ್ಕ ಸೇರಿದಂತೆ ವಿವಿಧ ಕಾರ್ಯಗಳ ಬಗ್ಗೆ ಶಿಸ್ತುಬದ್ಧ ಕೆಲಸ ನಿರ್ವಹಿಸಲು ಸೂಚನೆ ನೀಡಿರಿ ಎಂದು ಶಾಸಕರು, ಕೊಪ್ಪಳ ತಾಲೂಕು ಪಂಚಾಯತ್ ಇಒ ಅವರಿಗೆ ಸೂಚನೆ ನೀಡಿದರು. ಕಳೆದ ಕೆಡಿಪಿ ಸಭೆಯಲ್ಲಿ ನೀಡದ ಸೂಚನೆಯನ್ವಯ ಗಂಗಾವತಿ ಬಿಇಒ ಕಚೇರಿ ಚುರುಕಾಗಿ ಕಾರ್ಯ ನಿರ್ವಹಿಸಿ, ಎಲ್ಲ ಶಾಲೆಗಳ ಮುಖ್ಯಾಧ್ಯಾಪಕರ ಸಭೆ ನಡೆಸಿ ಸೂಚನ ನೀಡಿದ ಪರಿಣಾಮ ಗಂಗಾವತಿ ತಾಲೂಕಿನಲ್ಲಿ ಕಳೆದ ವರ್ಷ ಶೇ.65ರಷ್ಟಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಈ ಬಾರಿ 93.28ರಷ್ಟು ಪ್ರಗತಿಯಾಗಿದೆ. ಕಳೆದ ಸಭೆಯಲ್ಲಿ ನೀಡಿದ ಸೂಚನೆಯಂತೆ ಗಂಗಾವತಿ ತಾಲೂಕು ವ್ಯಾಪ್ತಿಯಲ್ಲಿ ಶಾಲಾ ಕೊಠಡಿಗಳ ದುರಸ್ತಿ ಸೇರಿದಂತೆ ನಾನಾ ಕಾರ್ಯಗಳಿಗೆ ಅಂದಾಜು 22 ಕೋಟಿ ರೂ.ಗಳ ಅಂದಾಜು ಪತ್ರಿಕೆ ಸಿದ್ದಪಡಿಸಿ ಸಲ್ಲಿಸಲಾಗಿದೆ ಎಂದು ಗಂಗಾವತಿ ಬಿಇಒ ಅವರು ಸಭೆಗೆ ಮಾಹಿತಿ ನೀಡಿದರು. ಶಾಲಾ ಕೊಠಡಿಗಳ ನಿರ್ಮಾಣ ಸೇರಿದಂತೆ ನಾನಾ ಕಾರ್ಯಕ್ಕೆ ಗಂಗಾವತಿ ಕ್ಷೇತ್ರಕ್ಕೆ 80 ಕೋಟಿ ಅನುದಾನ ನಿಗದಿಯಾದ ಪೈಕಿ 40 ಕೋಟಿ ಅನುದಾನದಲ್ಲಿ ಈಗ ಕೆಲಸ ಆರಂಭಿಸಲಾಗುವುದು ಎಂದು ಶಾಸಕರು ತಿಳಿಸಿದರು. ಗಂಗಾವತಿ, ಕೊಪ್ಪಳ ತಾಲೂಕಿನ ತಹಶೀಲ್ದಾರರು ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳು ಇದ್ದರು.

ವಸತಿ ನಿಲಯಗಳಿಗೆ ಭೇಟಿ ನೀಡಿ

ಆನೆಗೊಂದಿ ಆಸ್ಪತ್ರೆಯಲ್ಲಿ ರಾತ್ರಿ ವೇಳೆ ವೈದ್ಯಾಧಿಕಾರಿಗಳು ಇಲ್ಲದ ವಿಷಯವು ಸಭೆಯಲ್ಲಿ ಪ್ರಸ್ತಾಪವಾಯಿತು. ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಗಳಿಗೆ ಸರಿಯಾಗಿ ಕಾರ್ಯ ಹೊಂದಾಣಿಕೆ ಮಾಡುವಂತೆ ಪ್ರಸ್ತಾವನೆಯನ್ನು ಡಿಎಚ್‌ಒ ಅವರಿಗೆ ಸಲ್ಲಿಸಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಎಲ್ಲ ವಸತಿ ನಿಲಯಗಳಿಗೆ ನಿಯಮಿತ ಭೇಟಿ ನೀಡಿ, ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಪ್ರತಿ 2 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಕಾರ್ಯ ನಡೆಸುವಂತೆ ಶಾಸಕರು, ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಲ್ಲಮ್ಮನ ತತ್ವಾದರ್ಶ ಅಳವಡಿಸಿಕೊಳ್ಳಿ

ಕುಷ್ಟಗಿ: ಈ ಜಗತ್ತಿಗೆ ಉತ್ತಮ ಸಂಸ್ಕಾರದ ಜೊತೆಗೆ ಪ್ರತಿಯೊಬ್ಬರಿಗೂ ಕೂಡ ಜೀವನದ ದಾರಿ ತೋರಿಸಿಕೊಟ್ಟ ಮಹಿಳೆ ಎಂದರೆ ಅದು ಈ ಜಗತ್ತಿನಲ್ಲಿ ಮಾಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಒಬ್ಬಳೇ ಅವರ ಒಂದು ಜೀವನ ತತ್ವ ಆದರ್ಶ ಈ ಸಮಾಜಕ್ಕೆ ಬಹಳ ಆವಶ್ಯಕ ಎಂದು ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲೂಕಿನ ಗುಮಗೇರಾ ಗ್ರಾಮದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮತ್ತು ಮಹಾಯೋಗಿ ವೇಮನ ಕ್ಷೇಮಾಭಿವೃದ್ಧಿ ಸಂಘ ಹಾಗೂ ಗುಮಗೇರಾ ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಕುಷ್ಟಗಿ ತಾಲೂಕು ಮಟ್ಟದ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಮಾಜಿ ಶಾಸಕ ತುಂಗಭದ್ರಾ ಕಾಡಾ ಯೋಜನೆ ಅಧ್ಯಕ್ಷ ಹಸನಸಾಬ ದೋಟಿಹಾಳ ಮಾತನಾಡಿ ಈ ಜಗತ್ತಿಗೆ ದೇವತೆಯಾದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಆಚರಣೆ ಮಾಡಿದರೆ ಸಾಲದು ಅವರ ತತ್ವಗಳನ್ನು ಅಳವಡಿಸಿಕೊಂಡಾಗ ಮಾತ್ರ ಜಯಂತಿಗೆ ಅರ್ಥ ಬರುತ್ತದೆ ಎಂದು ಹೇಳಿದರು. ಕೊಪ್ಪಳ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ವಿ.ಡಾಣಿ ವಿಶೇಷ ಉಪನ್ಯಾಸ ನೀಡಿದರು.

ದಿಶಾ ಸಮಿತಿ ಸದಸ್ಯ ಕಾಂಗ್ರೆಸ್ ಪಕ್ಷದ ಮುಖಂಡ ದೊಡ್ಡಬಸವನಗೌಡ ಪಾಟೀಲ ಬಯ್ಯಾಪೂರ, ರಾಜ್ಯ ರಡ್ಡಿ ಸಮಾಜದ ರಾಜ್ಯಾಧ್ಯಕ್ಷ ಶೇಖರಗೌಡ ಮಾಲಿ ಪಾಟೀಲ ಗುಮಗೇರಾ ಅವರು ಮಾತನಾಡಿದರು.

ತಾಲೂಕು ರಡ್ಡಿ ಸಮಾಜ ಅಧ್ಯಕ್ಷ ದೊಡ್ಡನಗೌಡ ವೆಂಕನಗೌಡ ಮಾಲಿ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಾಂತವೀರ ಮಲ್ಲಿಕಾರ್ಜುನ ಪಂಡಿತಾರಾಧ್ಯ ಮಾಹಾ ಸ್ವಾಮಿಗಳು ರಡ್ಡಿ ಸಮಾಜ ಹೆಡಗಿ ಮದ್ರಾಮಠ ಯಾದಗಿರಿ ಇವರು ಕಾರ್ಯಕ್ರಮ ಕುರಿತು ಆಶೀರ್ವಚನ ನೀಡಿದರು. ಅಭಿನವ ಕರಿಬಸವ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವದಿಸಿ ಮಾತನಾಡಿದರು.

ಕೊಪ್ಪಳ ಜಿಲ್ಲಾ ರಡ್ಡಿ ಸಮಾಜದ ಅಧ್ಯಕ್ಷ ಜಗದೀಶಪ್ಪ ಸಾಹುಕಾರ ಸಿಂಗನಾಳ, ನಿವೃತ್ತ ಪಿಎಸ್ಐ ಸೋಮನಗೌಡ ಪಾಟೀಲ್ ಪ್ರಭು ಹೆಬ್ಬಾಳ, ಆರ್.ಪಿ.ರಡ್ಡಿ, ಸಂಗಪ್ಪ ಹೊಕ್ಕಳದ್, ಪುರುಷೋತ್ತಮ ರಡ್ಡಿ, ರುದ್ರಗೌಡ ಪಾಟೀಲ, ಶೇಖರಗೌಡ ಮಲ್ಲೇಶಗೌಡ ಪಾಟೀಲ, ಶಶಿಧರ ಸೋಮನಗೌಡ ಗೌಡರ, ದೊಡ್ಡನಗೌಡ ವೆಂಕನಗೌಡ ಪಾಟೀಲ, ಸುರೇಶ ಕುಂಟನಗೌಡ, ರವಿ, ಶರಣಗೌಡ ರಾವಣಕಿ ಗುಮಗೇರಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಗ್ಯಾರಂಟಿ ತಾಂತ್ರಿಕ ಸಮಸ್ಯೆ ಇತ್ಯರ್ಥಕ್ಕೆ ಕ್ರಮ ವಹಿಸಿ

ಕೊಪ್ಪಳ: ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಕೆಲವೊಂದು ತಾಂತ್ರಿಕ ತೊಡಕುಗಳನ್ನು ಪೂರ್ಣ ಪ್ರಮಾಣದಲ್ಲಿ ಸರಿಪಡಿಸುವ ಪ್ರಯತ್ನದ ಭಾಗವಾಗಿ ಆಯಾ ಯೋಜನೆಗಳ ಅನುಷ್ಠಾನಾಧಿಕಾರಿಗಳು ಪಂಚಾಯತಿವಾರು ಪ್ರಗತಿ ಪರಿಶೀಲನಾ ಸಭೆ ನಡೆಸಿ, ಆಯಾ ಯೋಜನೆಗಳ ಫಲಾನುಭವಿಗಳ ಬಳಿ ಮುಕ್ತವಾಗಿ ಮಾತನಾಡಬೇಕು. ಫಲಾನುಭವಿಗಳು ಹೇಳುವ ತಾಂತ್ರಿಕ ತೊಂದರೆಗಳ ಇತ್ಯರ್ಥಕ್ಕೆ ಹೆಚ್ಚಿನ ಗಮನ ಕೊಡಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಹೇಳಿದರು.

ಜಿಲ್ಲಾ ಪಂಚಾಯತ್‌ನ ಸಮಿತಿ ಸಭಾಂಗಣದಲ್ಲಿ ಮೇ 29ರಂದು ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೇಷನ್ ಅಥವಾ ಆಧಾರ್ ಕಾರ್ಡನಲ್ಲಿಹೆಸರುಗಳಲ್ಲಿನವ್ಯಾತ್ಯಾಸದಂತಹ ತಾಂತ್ರಿಕ ಕಾರಣಗಳಿಂದಾಗಿ ಕೆಲ ಫಲಾನುಭವಿಗಳಿಗೆ ಸಕಾಲಕ್ಕೆ ಅವರ ಖಾತೆಗೆ ಹಣ ಜಮೆ ಆಗುವುದಿಲ್ಲ, ವಿದ್ಯುತ್ ಬಿಲ್ ಕಟ್ಟಿದ್ದರು ಸಹ ಬಿಲ್ ಬಾಕಿ ತೋರಿಸುವಂತಹ ವಿದ್ಯುತ್ ಮೀಟರ್ ಬಗೆಗಿನ ತಾಂತ್ರಿಕ ತೊಂದರೆ ಇತ್ಯರ್ಥವಾಗಬೇಕು. ನ್ಯಾಯಬೆಲೆ ಅಂಗಡಿಗಳಿಗೆ ಸರಿಯಾದ ಸಮಯಕ್ಕೆ ಅಕ್ಕಿ ತಲುಪುವಂತೆ ನೋಡಿಕೊಳ್ಳಬೇಕು. ಎಲ್ಲ ಕಾರ್ಡುದಾರರ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಕಾರ್ಡ್ ಲಿಂಕ್ ಆಗುವುದಕ್ಕೆ ಮೊದಲಾದ್ಯತೆ ನೀಡಬೇಕು ಎಂದು ಆಯಾ ಯೋಜನೆಗಳ ಅನುಷ್ಠಾನಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೊಪ್ಪಳ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಮಂಜುನಾಥ ಜಿ.ಗೊಂಡಬಾಳ ಮಾತನಾಡಿ, ಸಭೆಗೆ ಅನೇಕ ಸಲಹೆ ಸೂಚನೆಗಳನ್ನು ನೀಡಿದರು. ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಬಿ.ಖಾದ್ರಿ, ಅಮರೇಶಪ್ಪ, ನಾಗರಾಜ ಅರಳಿ, ಸದಸ್ಯರಾದ ಶಾರದಾ ಕಟ್ಟಿಮನಿ, ಹಜರತ್ ಹುಸೇನ್, ಆನಂದ ಹಾಸಲಕರ, ದೇವಪ್ಪ ಭಾವಿಕಟ್ಟಿ ಸೇರಿದಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರು ಹಾಗೂ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಅಕ್ರಮ ಮರಳು ಸಾಗಾಟ: ಟಿಪ್ಪರ್ ವಶ

ಸಿಂಧನೂರು: ತಾಲೂಕಿನ ಕಲ್ಮಂಗಿ ಗ್ರಾಮದ ಬಳಿ ಅಕ್ರಮ ಮರಳು ಸಾಗಣೆಕೆಯಲ್ಲಿ ತೊಡಗಿದ್ದ ಟಿಪ್ಪರ್ ಅನ್ನು ತುರುವಿಹಾಳ ಪಿಎಸ್ಐ ಸುಜಾತ ವಶಕ್ಕೆ ಪಡೆದು ದೂರು ದಾಖಲಿಸಿದ್ದಾರೆ.

ತಾಲೂಕಿನಲ್ಲಿ ಅಕ್ರಮ ಮರಳು ಸಾಗಾಣಿಕೆ ಇದೇನು ಹೊಸದೇನಲ್ಲ ಸುಮಾರು ಬಾರಿ ಟಿಪ್ಪರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಹಾಗೂ ಮರಳು ಮಾಫಿಯಾ ದಂಧೆಯನ್ನು ನಿಯಂತ್ರಿಸಲು ಏನೆಲ್ಲಾ ಕ್ರಮಗಳನ್ನು ಕೈಗೊಂಡರು ಸಹ ನಾಯಿಬಾಲ ಡೊಂಕು ಎನ್ನುವಂತೆ ಮತ್ತೆ ಮತ್ತೆ ಇಂತಹ ಘಟನೆಗಳು ಮರುಕಳಿಸುತ್ತಿವೆ ಇದಕ್ಕೆ ಮೂಲ ಕಾರಣ ಏನು ಎಂಬುದು ಕೂಡ ಸಂಶಯಾಸ್ಪದವಾಗಿದೆ. ಯಾಕೆಂದರೆ ಸೋಮವಾರ ಮಧ್ಯಾಹ್ನ ಸುಮಾರಿಗೆ ಕಲ್ಮಂಗಿ ಗ್ರಾಮದ ಬಳಿ ಯಾವುದೇ ರಾಜಧನ ಪಾವತಿಸದ ಟಿಪ್ಪರ್ ಮರಳು ಸಾಗಾಣಿಕೆಯಲ್ಲಿ ತೊಡಗಿದಾಗ ವಶಕ್ಕೆ ಪಡೆಯಲಾಗಿ ಟಿಪ್ಪರ್ ಮಾಲಿಕ ವಿಶ್ವನಾಥ ಗಂಗಾವತಿ ವಿರುದ್ಧ ದೂರು ದಾಖಲಾಗಿದೆ.

ಇಂತಹ ಅಕ್ರಮ ಮರಳು ಸಾಗಣಿಕೆ ನಿಯಂತ್ರಣವಾಗಬೇಕಾದರೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಕೈಗೊಂಡಾಗ ಮಾತ್ರ ಮರಳು ಮಾಫಿಯಾ ದಂಧೆಯನ್ನು ನಿಯಂತ್ರಿಸಲು ಸಾಧ್ಯ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಸೇತುವೆಯ ಡಿವೈಡರ್‌ಗೆ ಲಾರಿ ಡಿಕ್ಕಿ

ಸಿಂಧನೂರು: ಮಂಗಳವಾರ ನಸುಕಿನ ವೇಳೆಯಲ್ಲಿ ರಾಯಚೂರಿಂದ ಗಂಗಾವತಿ ಮಾರ್ಗದ ಕಡೆ ಹೊರಟಿದ್ದ ಹೊರ ರಾಜ್ಯದ ಲಾರಿ ಡಿವೈಡರ್‌ಗೆ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ.

ನಗರದ ರಾಯಚೂರು ಮಾರ್ಗದ ಯಲ್ಲಮ್ಮ ದೇವಸ್ಥಾನದ ಬಳಿಯಿರುವ ಹಳ್ಳದ ಬ್ರಿಡ್ಜ್‌ನ ಡಿವೈಡರ್‌ಗೆ ಲಾರಿಯೊಂದು ಡಿಕ್ಕಿ ಹೊಡೆದಿದ್ದು, ಲಾರಿಯ ಮುಂಭಾಗ ನಜ್ಜುಗುಜ್ಜಾದ ಘಟನೆ ನಡೆದಿದೆ ಎಂದು ತಿಳಿದು ಬಂದಿದೆ.

ಇನ್ನೂ ಈ ಅಪಘಾತಕ್ಕೀಡಾದ ಲಾರಿಯನ್ನು ಡಿವೈಡರ್‌ನಿಂದ ತೆರವುಗೊಳಿಸುವ ಕಾರ್ಯಾಚರಣೆ ಬೆಳಿಗ್ಗೆ 9 ಗಂಟೆ ಸುಮಾರು ನಡೆದಿದ್ದು



ಕಂಡು ಬಂದಿತು ಈ ರೀತಿಯ ಅಪಘಾತಕ್ಕೆ ಕಾರಣ ಚಾಲಕರು ಅತೀ ಜಾಗರೂಕತೆಯಿಂದ ವಾಹನಗಳನ್ನು ಚಾಲನೆ ಮಾಡಿದ್ದು, ಇಂತಹ ಅಪಘಾತಗಳು ಕಡಿಮೆ ಮಾಡಲು ಚಾಲಕರು ರಸ್ತೆಯ ಸುರಕ್ಷಿತ ಕ್ರಮಗಳನ್ನು ಚಾಲಕರು ಅನುಸರಿಸುವ ಅವಶ್ಯಕತೆ ಇದೆ ಅಂದಾಗ ಮಾತ್ರ ಅಪಘಾತಗಳನ್ನು ಕಡಿಮೆ ಮಾಡಲು ಸಾಧ್ಯ ಎಂದು ಹೇಳಬಹುದು.

ಡಿ.ಕೆ.ಶಿವಕುಮಾರ್‌ಗೆ ಬಳ್ಳಾರಿ ಶಾಸಕರಿಂದ ಅಭಿನಂದನೆ

ಬಳ್ಳಾರಿ: ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಬಳ್ಳಾರಿಯ ಶಾಸಕರು ಭೇಟಿ ಮಾಡಿ, ಹೂಗುಚ್ಛ ನೀಡಿ ಶುಭಾಶಯ ಕೋರಿದರು. ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ, ನಗರ ಶಾಸಕ ನಾರಾ ಭರತ್ ರೆಡ್ಡಿ, ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಅವರು ನೂತನ ಮುಖ್ಯಮಂತ್ರಿಯಾಗಲೀರುವ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಶುಭಾಶಯಗಳನ್ನು ತಿಳಿಸಿದರು.

ಡಿ.ಕೆ.ಶಿವಕುಮಾರ್ ಅವರು, ನಗು ನಗುತ್ತಲೇ



ಶಾಸಕರನ್ನು ಆತ್ಮೀಯವಾಗಿ ಬರಮಾಡಿಕೊಂಡು, ಫೋಟೋ ತೆಗೆಸಿಕೊಂಡರು. ಸಿರುಗುಪ್ಪ ಯುವ ನಾಯಕ ಸೇರಿದಂತೆ ವಿವಿಧ ಗಣ್ಯರು ಉಪಸ್ಥಿತರಿದ್ದರು.

ಇಂಧನ ಉಳಿತಾಯ ಸಾಧನೆ, ನೌಕರರಿಗೆ ನಗದು ಬಹುಮಾನ ವಿತರಣೆ

ಸಂಸ್ಥೆಯ ಚಾಲಕರು ಸೇವಾ ಯೋಧರು: ಪಾಟೀಲ

ಕಲಬುರಗಿ: ಸಾರಿಗೆ ಸಂಸ್ಥೆಯ ಚಾಲಕರು ಕೇವಲ ವಾಹನ ಚಾಲಕರು ಮಾತ್ರವಲ್ಲ, ಪ್ರತಿದಿನ ಸಾವಿರಾರು ಪ್ರಯಾಣಿಕರಜೀವವನ್ನುಸುರಕ್ಷಿತವಾಗಿ ತಲುಪಿಸುವ ಹೊಣೆಗಾರಿಕೆಯನ್ನು ಹೊತ್ತಿರುವ ಸೇವಾ ಯೋಧರಾಗಿದ್ದಾರೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ ಅರುಣಕುಮಾರ ಪಾಟೀಲ ಹೇಳಿದರು.

ಇತ್ತೀಚೆಗೆ ವಿಜಯನಗರ ಜಿಲ್ಲೆಯ ಕೂಡ್ಲಗಿ ಘಟಕದಲ್ಲಿ ಆಯೋಜಿಸಿದ 2025-26ನೇ ಸಾಲಿನ ಇಂಧನ ಉಳಿತಾಯ ದ್ವಿಮಾಸಿಕ ಕಾರ್ಯಕ್ರಮದಡಿ ಕೆ.ಎಂ.ಪಿ.ಎಲ್ ವೃದ್ಧಿಯ ಮೂಲಕ ಅತ್ಯುತ್ತಮ ಇಂಧನ ಉಳಿತಾಯ ಸಾಧಿಸಿ ನಿಗಮದ ಆರ್ಥಿಕ ಸದೃಢತೆಗೆ ಕೊಡುಗೆ ನೀಡಿದ ನಿಗಮದ ವಿಭಾಗೀಯ ನಿಯಂತ್ರಕರು, ವಿಭಾಗೀಯ ಯಾಂತ್ರಿಕ ಅಭಿಯಂತರರು, ಘಟಕ ವ್ಯವಸ್ಥಾಪಕರು, ಚಾಲಕರು



ಹಾಗೂ ಯಾಂತ್ರಿಕ ಸಿಬ್ಬಂದಿಗಳನ್ನು ಸನ್ಮಾನಿಸಿ ಪ್ರಶಂಸನಾ ಪತ್ರ ಹಾಗೂ ನಗದು ಬಹುಮಾನ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಖಾಸಗಿ ವಾಹನಗಳ ಚಾಲಕರಿಗಿಂತ ನಮ್ಮ ನಿಗಮದ ಚಾಲಕರು ಸೇವಾ ಮನೋಭಾವ, ಶಿಸ್ತು, ಪ್ರಾಮಾಣಿಕತೆ, ನಿಷ್ಠೆ ಹಾಗೂ ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ವಿಭಿನ್ನ ಸ್ಥಾನ ಹೊಂದಿದ್ದಾರೆ. ನಮ್ಮ ಚಾಲಕರ ಕಾರ್ಯಕ್ಷಮತೆ ನಿಜವಾಗಿಯೂ ಹೆಮ್ಮೆಯ ಸಂಗತಿಯಾಗಿದೆ. ಜೊತೆಗೆ ಯಾಂತ್ರಿಕ ನಿರ್ವಹಣೆ ಮಾಡುವ ಎಲ್ಲಾ ಯಾಂತ್ರಿಕ ಸಿಬ್ಬಂದಿಯ ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದಲೇ ನಿಗಮ ಪ್ರಯಾಣಿಕರಿಗೆ ಗುಣಮಟ್ಟದ ಸೇವೆ ನೀಡುತ್ತಿದೆ ಎಂದು ಸಿಬ್ಬಂದಿಯ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ಹಲವು ರಾಜ್ಯಗಳ ಸಾರಿಗೆ ಸೇವೆಗೆ ಹೋಲಿಸಿದರೆ ಕರ್ನಾಟಕದ ಸಾರಿಗೆ ಸೇವೆ ಪ್ರಯಾಣಿಕರ ವಿಶ್ವಾಸ ಗಳಿಸಿರುವುದು ಹೆಮ್ಮೆಯ ವಿಚಾರ. ಅತ್ಯುತ್ತಮ ಸೇವೆಗಳಿಗಾಗಿ ನಮ್ಮ ನಿಗಮ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳನ್ನು ಪಡೆದಿದೆ ಎಂದರು.

ಕೆಎಂಪಿಎಲ್ ಉತ್ತಮ ಸಾಧನೆಗೈದ 43 ಜನ ಚಾಲಕರು, 4 ಜನ ವಿಭಾಗೀಯ ನಿಯಂತ್ರಣಾಧಿಕಾರಿಗಳು, 4 ಜನ ವಿಭಾಗೀಯ ಯಾಂತ್ರಿಕ ಅಭಿಯಂತರರು ಹಾಗೂ 12 ಜನ ಘಟಕವ್ಯವಸ್ಥಾಪಕರು ಹಾಗೂ 10 ಜನ ಯಾಂತ್ರಿಕ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ ಒಟ್ಟು 73 ಜನ ಸಾಧಕರಿಗೆ ನಗದು ಬಹುಮಾನ, ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸುಶೀಲಾ ಬಿ., ಮುಖ್ಯ ಯಾಂತ್ರಿಕ ಅಭಿಯಂತರರು, ವಿಭಾಗೀಯನಿಯಂತ್ರಕರುಸೇರಿದಂತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಬಿತ್ತನೆ ಬೀಜ ವಿತರಣೆಗೆ ಕೃಷಿ ಇಲಾಖೆ ಸಿದ್ಧತೆ

ವಾಗೀಶ್ ವೀ.ಪಾಟೀಲ

ರಾಯಚೂರು: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ರೈತರು ಬಿತ್ತನೆ ಮಾಡುವ ಪ್ರಮುಖ ಮೂರು ಬೆಳೆಗಳಾದ ಭತ್ತ, ಹತ್ತಿ ಹಾಗೂ ತೊಗರಿ ಬೆಳೆಗಳೇ ಶೇ.90 ಕೃಷಿ ಪ್ರದೇಶವನ್ನು ಆವರಿಸಿಕೊಳ್ಳುವ ಮೂಲಕ ಇಲ್ಲಿನ ರೈತರಿಗೆ ಈ ಬೆಳೆಗಳೇ ವಾಣಿಜ್ಯಕ ಬೆಳೆಗಳು ಹೀಗಾಗಿ ಇಲ್ಲಿನ ರೈತರು ಈ ಬೆಳೆಗಳಿಗೆನೇ ಹೆಚ್ಚಿನ ಆದ್ಯತೆಯನ್ನು ನೀಡುತ್ತ ಬರುತ್ತಿದ್ದಾರೆ.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 587350 ಹೆಕ್ಟೇರ ಪ್ರದೇಶದಲ್ಲಿ ಬಿತ್ತನೆ ಗುರಿಹೊಂದಲಾಗಿದೆ. ಇದರಲ್ಲಿ ಭತ್ತ 190638 ಹೆಕ್ಟೇರ ಶೇ.32, ಹತ್ತಿ 186954ಹೆ ಶೇ.32, ತೊಗರಿ 150000ಹೆ ಶೇ.26, ಸೂರ್ಯಕಾಂತಿ 18000ಹೆ ಶೇ.3, ಎಳ್ಳು 5000ಹೆ. ಶೇ 0.1, ಶೇಂಗಾ 1000ಹೆ ಶೇ.0.2, ಜೋಳ 27200ಹೆ ಶೇ.5, ಸಿರಿಧಾನ್ಯಗಳು 1023ಹೆ ಶೇ. 0.2, ಕಬ್ಬು 500ಹೆ. ಶೇ.0.1 ಹಾಗೂ ಔಡಲ 400ಹೆ ಶೇ.0.1 ಬಿತ್ತನೆ ಗುರಿಹೊಂದಲಾಗಿದೆ.

ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಆರ್‌ಎಸ್‌ಕೆ ಮೂಲಕ ಸರ್ಕಾರದ ರಿಯಾತಿ ದರದಲ್ಲಿ ಕಳೆದ ಐದು ವರ್ಷಗಳ ಸರಾಸರಿಯ ಆಧಾರದಲ್ಲಿ ಭತ್ತ 2500 ಕ್ವಿಂಟಲ, ತೊಗರಿ 2400ಕ್ವಿ, ಹೆಸರು 30ಕ್ವಿ, ಸಜ್ಜೆ 100ಕ್ವಿ, ಸೂರ್ಯಕಾಂತಿ 83ಕ್ವಿ, ಮೆಕ್ಕೆಜೋಳ 22ಕ್ವಿ ಸೇರಿ ಒಟ್ಟು 5135 ಕ್ವಿಂಟಲ ಬಿತ್ತನೆ ಬೀಜಗಳನ್ನು ವಿತರಣೆಗೆ ಕೃಷಿ ಇಲಾಖೆ ಸಿದ್ಧತೆಯನ್ನು ಮಾಡಿಕೊಂಡಿದೆ.

ಈ ಭಾಗದ ರೈತರ ಪ್ರಮುಖ ವಾಣಿಜ್ಯಕ ಬೆಳೆಗಳಲ್ಲಿ ಒಂದಾದ ಬಿಟಿ ಹತ್ತಿ ಬಿತ್ತನೆ ಬೀಜವನ್ನು ಕರ್ನಾಟಕ ಸರ್ಕಾರದಿಂದ ಪ್ರಮಾಣೀಕೃತವಲ್ಲದ ಲಕ್ಷಾಂತರ ರೂಗಳ ಮೌಲ್ಯದ ಬೀಜಗಳನ್ನು ಆಂದ್ರ ಹಾಗೂ ತೆಲಂಗಾಣ ರಾಜ್ಯಗಳಿಂದ ತಂದು ಅನಧಿಕೃತವಾಗಿ ಜಿಲ್ಲೆಯಲ್ಲಿ ಅಗ್ಗದ ದೆದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬ ದೂರುಗಳಿವೆ. ಇದಲ್ಲದೆ ನಕಲಿ ಕೀಟನಾಶಕ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ.

ಜಿಲ್ಲೆಯಲ್ಲಿ ಒಟ್ಟು 662 ಅಧಿಕೃತ ಪರವಾನಿಗೆ ಪಡೆದ ರಸಗೊಬ್ಬರ ವಿತರಕರಿದ್ದಾರೆ. ಇವರಲ್ಲಿ 284 ಅಧಿಕೃತ ಯೂರಿಯಾ ವಿತರಕರಿದ್ದಾರೆ, ಇವರಲ್ಲಿ 246 ಅತಿ ಹೆಚ್ಚು ಯೂರಿಯಾ ಮಾರಾಟಗಾರೆಂದು ಗುರುತಿಸಲಾಗಿದೆ, ಬೆಳೆಗಳಿಗೆ ನೀಡುವ ಸಂದರ್ಭದಲ್ಲಿ ಯೂರಿಯಾ ಕೊರತೆ ಆಗಬಾರದೆಂಬ ಉದ್ದೇಶದಿಂದ ಯೂರಿಯಾ ಮಾರಾಟ ಮಾಡಬಾರದೆಂದು 216 ವಿತರಕರಿಗೆ ನೋಟೀಸ್ ನೀಡಲಾಗಿದೆ. ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿದ್ದ 20 ವಿತರಕರಿಗೆ ಶೋಕಾಸ್ ನೋಟೀಸ್ ನೀಡಲಾಗಿದ್ದರೆ 10 ವಿತರಕರ ಪರವಾನಿಗೆಯನ್ನು ಅಮಾನತ್ತಿನಲ್ಲಿ ಇಡಲಾಗಿದೆ.

ಶೋಕಾಸ್ ನೋಟಿಸ್

ರಸಗೊಬ್ಬರಗಳನ್ನು ನಿಗದಿನ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಯಚೂರಿನ ತಾಲೂಕಿನ 20 ವಿತರಕರಿಗೆ, ಮಾನ್ವಿಯ 64, ದೇವದುರ್ಗದ 27, ಲಿಂಗಸುಗೂರ 27, ಸಿಂಧನೂರಿನ 78 ಯೂರಿಯಾ ವಿತರಣೆ ಮಾಡಬಾರದೆಂದು ನೋಟೀಸ್ ನೀಡಲಾಗಿದೆ. ರಾಯಚೂರಿನ 10, ಮಾನ್ವಿಯ 5, ಲಿಂಗಸುಗೂರಿನ 3 ಹಾಗೂ ಸಿಂಧನೂರಿನ 2 ಸೇರಿ ಒಟ್ಟು 20 ವಿತರಕರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಈ ವರೆಗೆ ರಾಯಚೂರಿನ 2, ಮಾನ್ವಿಯ 5, ದೇವದುರ್ಗದ 3 ಸೇರಿ ಒಟ್ಟು 10 ವಿತರಕರ ಲೈಸೆನ್ಸನ್ನು ಅಮಾನತ್ತಿನಲ್ಲಿ ಇಡಲಾಗಿದೆ.

ಕಿರುಸುದ್ದಿ

ಶಾಸಕ ರಾಜಾ ವೇಣುಗೋಪಾಲಗೆ ಸಚಿವ ಸ್ಥಾನ ನೀಡಿ

ಹುಣಸಗಿ: ಯಾದಗಿರಿ ಜಿಲ್ಲೆಯಲ್ಲಿಯೆ ಸುರಪುರ ಅತೀ ದೊಡ್ಡ ಮತಕ್ಷೇತ್ರ. ಹುಣಸಗಿ ಹಾಗೂ ಸುರಪುರ ಎರಡು ತಾಲೂಕು ಕೇಂದ್ರಗಳನ್ನು ಒಳಗೊಂಡ ಮತಕ್ಷೇತ್ರ ಇದಾಗಿದ್ದು, ಎರಡು ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ಶಾಸಕ ರಾಜಾ ವೇಣುಗೋಪಾಲ ನಾಯಕ ಅವರಿಗೆ ಸಚಿವ ಸ್ಥಾನ ಕೊಡಿ ಎಂದು ಕಾಂಗ್ರೆಸ್ ಯುವ ಮುಖಂಡ ರಮೇಶ್ ವಾಲಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.



ಶಾಸಕರ ತಂದೆಯವರಾದ ದಿವಂಗತ ರಾಜಾ ವೆಂಕಟಪ್ಪ ನಾಯಕ ಅವರು ಹಾಗೂ ಅವರ ಕುಟುಂಬದವರು ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಶಾಸಕ ರಾಜಾ ವೇಣುಗೋಪಾಲ ನಾಯಕ ಅವರು ಕೂಡಾ ತಂದೆಯ ಆದರ್ಶಗಳನ್ನು ಅಳವಡಿಸಿಕೊಂಡು ಮತಕ್ಷೇತ್ರದ ಜನರೊಂದಿಗೆ ಉತ್ತಮ ಒಡನಾಟ ಹೊಂದಿದ್ದು, ನಮ್ಮ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷ ಮೀಸಲಾತಿ ಅಡಿಯಲ್ಲಿ ಅವರಿಗೆ ಸಚಿವ ಸ್ಥಾನ ಕೊಟ್ಟರೆ ಮತಕ್ಷೇತ್ರ ಸೇರಿದಂತೆ ನಮ್ಮ ಕಲ್ಯಾಣ ಕರ್ನಾಟಕ ಭಾಗದ ಪ್ರದೇಶಗಳು ಅಭಿವೃದ್ಧಿ ಆಗಲು ಸಹಕಾರಿ ಆಗುತ್ತದೆ ಎಂದು ಆಗ್ರಹಿಸಿದ್ದಾರೆ.

ಪುಟ್ಟರಂಗ ಶೆಟ್ಟಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಸಿರುಗುಪ್ಪ: ಉಪ್ಪಾರ ಸಮಾಜದ ಅಭಿವೃದ್ಧಿಯ ದೃಷ್ಟಿಯಿಂದ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸಿ.ಪುಟ್ಟರಂಗ ಶೆಟ್ಟಿ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ತಾಲೂಕು ಭಗೀರಥ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಯು.ವೆಂಕೋಬ ವಕೀಲರು ಒತ್ತಾಯಿಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ವಿಧಾನಸಭೆಯಲ್ಲಿ ಉಪ್ಪಾರ ಸಮಾಜದಿಂದ ಆಯ್ಕೆಯಾಗಿರುವ ಏಕೈಕ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಾಗಿದ್ದಾರೆ. ರಾಜ್ಯದಲ್ಲಿ ಸುಮಾರು 35 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಉಪ್ಪಾರ ಸಮುದಾಯಕ್ಕೆ ಸಚಿವ ಸಂಪುಟದಲ್ಲಿ ಯಾವುದೇ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ಮುಖಂಡರು ಬೇಸರ ವ್ಯಕ್ತಪಡಿಸಿದ್ದಾರೆ. ಸಮುದಾಯಕ್ಕೆ ನ್ಯಾಯ ಒದಗಿಸಲು ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಒತ್ತಾಯಿಸಿದ್ದಾರೆ. ಸತತ ನಾಲ್ಕುಬಾರಿ ಆಯ್ಕೆಯಾಗಿರುವ ಚಾಮರಾಜನಗರದ ಕ್ಷೇತ್ರದ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಈ ಭಾರಿ ಸಚಿವ ಸ್ಥಾನನೀಡಬೇಕೆಂದು ರಾಜ್ಯ ಸಾರ್ಕರಕ್ಕೆ ಆಗ್ರಹಿಸಿದರು. ತಾಲೂಕು ಅಧ್ಯಕ್ಷ ಯು. ಹನುಮಂತಪ್ಪ, ಮುಖಂಡರಾದ ಸಣ್ಣ ವೆಂಕೋಬ ವಕೀಲರು, ರಂಗಪ್ಪ, ಈರಣ್ಣ ಭಾಗವಹಿಸಿದ್ದರು.

ಶ್ರದ್ಧಾ, ಭಕ್ತಿಯಿಂದ ನಡೆದ ಬಕ್ರೀದ್



ಹೂವಿನಹಡಗಲಿ: ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಸಮುದಾಯದವರು ಶ್ರದ್ಧಾ ಭಕ್ತಿಯಿಂದ ಬಕ್ರೀದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಬೆಳಿಗ್ಗೆಯಿಂದಲೇ ಈದ್ಗಾ ಮೈದಾನದಲ್ಲಿ ಹೊಸ ವಸ್ತ್ರ ಧರಿಸಿದ ಜನರು ಸಾಮೂಹಿಕ ನಮಾಜ್‌ನಲ್ಲಿ ಭಾಗವಹಿಸಿದರು. ಧಾರ್ಮಿಕ ಮುಖಂಡರು ಬಕ್ರೀದ್ ಹಬ್ಬದ ಮಹತ್ವವನ್ನು ವಿವರಿಸಿ ತ್ಯಾಗ, ಪ್ರೀತಿ, ಸಹೋದರತ್ವ ಹಾಗೂ ಮಾನವೀಯ ಮೌಲ್ಯಗಳ ಸಂದೇಶವನ್ನು ಸಾರಿದರು. ಧರ್ಮಗುರುಗಳಾದ ಮುಫ್ತಿ ಅಜುರುದ್ದಿನ್ ಆಸ್ಮಿ, ಅಜುರುದ್ದಿನ್, ಖಾಜಿ ಮಖ್ಬುಲ್ ರಜ್ವಿ, ಜೈನುಲ್ಲಾ, ಮುಫ್ತಿ ಅಭಿದಿನ್, ಸಯ್ಯದ್ ಸಂಶುದ್ದಿನ್ ಖಾಜಿ ಸೇರಿದಂತೆ ಕಾಗದ ಗೌಸ್ ಮೊಹಿದ್ದೀನ್, ಆಳವುಂಡಿ ಬಡೆಸಾಬ್, ಕವಾಲಿ ಹುಸೇನ್ ಸಾಬ್, ಮೊಸಿನ್, ಹುಲಗಿ ದೌಲ್ ಮಲ್ಲಿಕ್, ಗೌಸ್ ಸಾಬ್, ಹಂಪಸಾಗರ ಖಾಜಾಹುಸೇನ, ಬಾಣದ ಇರ್ಫಾನ್, ಜೈರುದ್ದೀನ್, ಉಗ್ರಾಣದ ಹುಸೇನ್ ಸಾಬ್, ಅರಣಿ ಮಹ್ಮದ್ ರಫಿ, ರಸುಲ್ ಡಿ.ಎಂ. ಇತರರಿದ್ದರು.

ನಿಧನ ಸುದ್ದಿ

ಚಾವಡಿ ಹಿಂದ್ಲು ಚಂದ್ರಮ್ಮ

ಹಗರಿಬೊಮ್ಮನಹಳ್ಳಿ: ತಾಲೂಕಿನ ಮಾಲವಿ ಗ್ರಾಮದ ಚಾವಡಿ ಹಿಂದ್ಲು ಉತ್ತಂಗಿ ಚಂದ್ರಮ್ಮಬನ್ನೆಪ್ಪ (70) ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಮೂವರು ಪುತ್ರಿಯರು ಅಪಾರ ಬಂಧು ಬಾಂಧವರನ್ನು ಅಗಲಿದ ಮೃತರ ಅಂತ್ಯ ಸಂಸ್ಕಾರ ಶುಕ್ರವಾರ ಸಂಜೆ 5 ಗಂಟೆಗೆ ಮಾಲವಿ ಗ್ರಾಮದ ರುದ್ರಭೂಮಿಯಲ್ಲಿ ಜರುಗಿತು.





ಕುರುಗೋಡು: ಸಮೀಪದ ಹೊಸ ನೆಲ್ಲುಡಿ ಹಾಲ ಉತ್ಪಾದಕರು ಸಹಕಾರ ಸಂಘದ ಸದಸ್ಯ ಎಚ್.ಪಕೀರಪ್ಪ ಮೃತಪಟ್ಟ ಹಿನ್ನೆಲೆಯಲ್ಲಿ ಅವರ ಕುಟುಂಬಕ್ಕೆ 20 ಸಾವಿರ ನಗದು ಆರ್ಥಿಕ ನೆರವು ನೀಡಿಲಾಯಿತು. ಈ ವೇಳೆ ಸಂಘದ ಕಾರ್ಯನಿರ್ವಾಹಕ ಕಮ್ಮಗೀರಿಶ್ ಇತರರಿದ್ದರು.

ಛಲವಾದಿ ಸಮಾಜದ ಶಾಸಕರಿಗೆ ಡಿಸಿಎಂ ಸ್ಥಾನ ನೀಡಿ

ವಿಜಯನಗರ: ರಾಜ್ಯ ಸರ್ಕಾರದಲ್ಲಿ ಛಲವಾದಿ (ಪರಿಶಿಷ್ಟ ಜಾತಿ-ಬಲಗೈ) ಸಮುದಾಯದ ಶಾಸಕರಿಗೆ ಸಚಿವ ಸ್ಥಾನದೊಂದಿಗೆ ಒಬ್ಬರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಜಿಲ್ಲಾ ಛಲವಾದಿ ಮಹಾಸಭಾ ಒತ್ತಾಯಿಸಿದೆ.



ಈ ಕುರಿತು ಜಂಟಿ ಪತ್ರಿಕಾ ಪ್ರಕಟಣೆ ನೀಡಿರುವ ಮಹಾಸಭಾದ ಪದಾಧಿಕಾರಿಗಳು, ರಾಜ್ಯದಲ್ಲಿ ಛಲವಾದಿ ಸಮುದಾಯವು ನಿರಂತರವಾಗಿ ರಾಜಕೀಯ ನಿರ್ಲಕ್ಷ್ಯ ಎದುರಿಸುತ್ತಾ ಬಂದಿದೆ. ಆದರೆ, ಈ ಬಾರಿ ಸರ್ಕಾರದಲ್ಲಿರುವ ಮೂವರು ಹಾಲಿ ಸಚಿವರನ್ನು ಸಂಪುಟದಲ್ಲಿ ಮುಂದುವರಿಸಬೇಕು. ಜೊತೆಗೆ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಹುಬ್ಬಳ್ಳಿ ಪೂರ್ವ ಕ್ಷೇತ್ರದ ಶಾಸಕ ಪ್ರಸಾದ್ ಅಬ್ಬಯ್ಯ ಅವರಿಗೆ ನೂತನ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು. ಅಲ್ಲದೇ, ರಾಜಕೀಯವಾಗಿ ಹಿಂದುಳಿದ ಛಲವಾದಿ ಸಮುದಾಯದ ಸಚಿವರೊಬ್ಬರಿಗೆ ಡಿಸಿಎಂ ಹುದ್ದೆ ನೀಡಬೇಕು ಎಂದು ಆಗ್ರಹಿಸಿದರು.

ಮಹಾಸಭಾ ಜಿಲ್ಲಾ ಅಧ್ಯಕ್ಷ ಸೋಮಶೇಖರ್ ಬಣ್ಣದಮನೆ, ಕೂಡ್ಲಿಗಿ ತಾಲೂಕು ಅಧ್ಯಕ್ಷ ಮರಬನಹಳ್ಳಿ ಮಾರಪ್ಪ, ಹಗರಿಬೊಮ್ಮನಹಳ್ಳಿ ಅಧ್ಯಕ್ಷ ಕಾಳಿಬಸವರಾಜ್, ಹರಪನಹಳ್ಳಿ ಅಧ್ಯಕ್ಷ ಬಾಗಳಿ ಬಸವರಾಜ್, ಕೊಟ್ಟೂರು ಅಧ್ಯಕ್ಷ ಮಂಜುನಾಥ್ ಹಾಗೂ ಹೂವಿನ ಹಡಗಲಿ ಅಧ್ಯಕ್ಷ ದ್ಯಾಮಣ್ಣ ಸೇರಿದಂತೆ ಮತ್ತಿತರರು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.



ವಿಜಯನಗರ: ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಪ್ರಸ್ತುತ ವಿರೋಧ ಪಕ್ಷದ ನಾಯಕ ಕಾಮ್ರೇಡ್ ಪಿಣರಾಯಿ ವಿಜಯನ್ ಮನೆ ಮೇಲೆ ಇಡಿ ದಾಳಿ ನಡೆಸುವ ಮೂಲಕ ಕೇಂದ್ರದ ಮೋದಿ ಸರ್ಕಾರ ರಾಜಕೀಯ ಪ್ರತೀಕಾರ ತೀರಿಸಿಕೊಳ್ಳುತ್ತಿದೆ ಎಂದು ಆರೋಪಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐಎಂ) ನೇತೃತ್ವದಲ್ಲಿ ಇಲ್ಲಿನ ತಹಸೀಲ್ದಾರ್ ಕಚೇರಿ ಮುಂದೆ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ರೈತರ ಸಮಸ್ಯೆ ಬಗೆಹರಿಸಲು ಮನವಿ

ಬೀದರ: ಬೀದರ ಜಿಲ್ಲೆಯ ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ತಕ್ಷಣ ಬಗೆಹರಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರಿಗೆ ಬೀದರ ಜಿಲ್ಲಾ ಘಟಕದ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಮನವಿಯಲ್ಲಿ ಬೀದರ ಜಿಲ್ಲೆಯು ಫಲವತ್ತಾದ ಭೂಮಿ ಹಾಗೂ ಕೃಷಿಗೆ ಪೂರಕವಾದ ವಾತಾವರಣ ಹೊಂದಿದ್ದು, ಸುಮಾರು 51 ವಿಧದ ಬೆಳೆಗಳನ್ನು ಬೆಳೆಯುವ ಸಾಮರ್ಥ್ಯ ಹೊಂದಿದೆ ಎಂದು ವಿವರಿಸಲಾಗಿದೆ. ಜಿಲ್ಲೆಯ ಏಕೈಕ ಕಾರಂಜಾ ಜಲಾಶಯದಿಂದ ಪಟ್ಟಣಗಳಿಗೆ ಕುಡಿಯುವ ನೀರಿನ ಸೌಲಭ್ಯ ದೊರೆಯುತ್ತಿದೆಯಾದರೂ ರೈತರಿಗೆ ನೀರಾವರಿ ಸೌಲಭ್ಯ ಸಿಗುತ್ತಿಲ್ಲ. ಇದರಿಂದ ರೈತರು ಸ್ವಂತ ಖರ್ಚಿನಲ್ಲಿ ಕೊಳವೆ ಬಾವಿ ಹಾಗೂ ತೆರೆದ ಬಾವಿ ತೋಡಿಸಿ ಕೃಷಿ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಲಾಗಿದೆ.

ಕಳೆದನಾಲ್ಕೈದು ವರ್ಷಗಳಿಂದ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಸರಿಯಾದ ಬೆಳೆ ಬಂದಾಗಲೂ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೇ ನಷ್ಟ ಅನುಭವಿಸುತ್ತಿದ್ದಾರೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಜಿಲ್ಲೆಯಲ್ಲಿ ಕಬ್ಬು, ತೊಗರಿ, ಸೋಯಾಬಿನ್, ಉದ್ದು, ಹೆಸರು, ಕಡಲೆ, ಹತ್ತಿ ಸೇರಿದಂತೆ ವಿವಿಧ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ತೋಟಗಾರಿಕಾ ಕ್ಷೇತ್ರದಲ್ಲಿ ಮಾವು ಹಾಗೂ ಹಸಿ ಶುಂಠಿ ಪ್ರಮುಖ ಬೆಳೆಗಳಾಗಿವೆ ಎಂದು ತಿಳಿಸಲಾಗಿದೆ.

ರೈತ ಸಂಘವು ಸರ್ಕಾರದ ಮುಂದೆ ಹಲವು ಬೇಡಿಕೆಗಳನ್ನು ಇಟ್ಟಿದ್ದು, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಶಾಸನಬದ್ಧಗೊಳಿಸುವುದು, ವರ್ಷಪೂರ್ತಿ ಖರೀದಿ ಕೇಂದ್ರಗಳನ್ನು ತೆರೆಯುವುದು, ಕಬ್ಬು ಸರಬರಾಜು ಮಾಡಿದ ರೈತರಿಗೆ 15 ದಿನಗಳೊಳಗೆ ಬಿಲ್ ಪಾವತಿಸುವುದು ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದೆ.

ಬೀದರ ಜಿಲ್ಲೆಯ ಕಬ್ಬಿನ ಕಾರ್ಖಾನೆಗಳಲ್ಲಿ ಇಳುವರಿ ಕಡಿಮೆ ತೋರಿಸಲಾಗುತ್ತಿದ್ದು ರೈತರಿಗೆ ಅನ್ಯಾಯವಾಗುತ್ತಿದೆ. ಇದನ್ನು ತಡೆಯಲು ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಸುಮಾರು 30 ಲಕ್ಷ ಮೆಟ್ರಿಕ್ ಟನ್ ಕಬ್ಬು ಬೆಳೆಯುತ್ತಿದ್ದರೂ ನಿರೀಕ್ಷಿತ ಇಳುವರಿ ಸಿಗದ ಕಾರಣ ಕಬ್ಬು ಸಂಶೋಧನಾ ಕೇಂದ್ರ ಸ್ಥಾಪನೆಗೆ ಶಿಫಾರಸ್ಸು ಮಾಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ ಸಿರ್ಸಿ, ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀಮಂತ ಬಿರಾದಾರ, ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ಆಣದೂರೆ, ಜಿಲ್ಲಾ ಉಪಾಧ್ಯಕ್ಷ ಶಂಕರಪ್ಪ ಪಾರಾ, ರಾಜ್ಯ ಪ್ರತಿನಿಧಿ ಶೇಷರಾವ ಕಣಜಿ, ರಾಜ್ಯ ಉಪಾಧ್ಯಕ್ಷ ಚಂದ್ರಶೇಖರ ಜಮಖಂಡೆ, ಭಾಲ್ಕಿ ತಾಲೂಕು ಅಧ್ಯಕ್ಷ ಬಾಬುರಾವ ಜೋಳದಾಬಕಾ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶೋಭಾವತಿ ಕಾರಭಾರಿ, ಜಿಲ್ಲಾ ಉಪಾಧ್ಯಕ್ಷ ಸಿದ್ದಣ್ಣಾ ಭೂಶೆಟ್ಟಿ, ಬೀದರ ಅಧ್ಯಕ್ಷ ನಾಗಯ್ಯ ಸ್ವಾಮಿ, ಕಮಲನಗರ ಅಧ್ಯಕ್ಷ ಪ್ರವೀಣ ಕುಲಕರ್ಣಿ, ಬಸವಕಲ್ಯಾಣ ಅಧ್ಯಕ್ಷ ಸುಭಾಷ್ ರಗಟೆ, ಮಹಿಳಾ ಘಟಕ ಔರಾದ ಅಧ್ಯಕ್ಷೆ ಭಾಗ್ಯಶ್ರೀ ದೇಶಮುಖ, ಔರಾದ ಅಧ್ಯಕ್ಷ ಪ್ರಕಾಶ ಬಾವಗೆ, ಹುಮನಾಬಾದ್ ಅಧ್ಯಕ್ಷ ಸತೀಶ ನನ್ನೂರೆ ಹಾಗೂ ಮಹಿಳಾ ಘಟಕ ಭಾಲ್ಕಿ ಅಧ್ಯಕ್ಷೆ ಮಹಾನಂದ ದೇಶಮುಖ ಇತರರಿದ್ದರು.



ಸಾಲ ಮನ್ನಾಕ್ಕೆ ಆಗ್ರಹ

ಜಿಲ್ಲೆಯ ಜೀವನಾಡಿಯಾಗಿದ್ದ ಬೀದರ ಸಹಕಾರ ಸಕ್ಕರೆ ಕಾರ್ಖಾನೆ ಕಳೆದ ಮೂರು ವರ್ಷಗಳಿಂದ ಸ್ಥಗಿತಗೊಂಡಿರುವುದರಿಂದ ಅದನ್ನು ಪುನರ್ ಆರಂಭಿಸಲು ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಒತ್ತಾಯಿಸಲಾಗಿದೆ. ಜೊತೆಗೆ ಬೆಳೆ ವಿಮೆ ಹಣವನ್ನು ತಕ್ಷಣ ರೈತರ ಖಾತೆಗೆ ಜಮೆ ಮಾಡಿಸುವುದು, ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆ ರಕ್ಷಿಸಲು ಸೋಲಾರ್ ಬೇಲಿ ವ್ಯವಸ್ಥೆ ಕಲ್ಪಿಸುವುದು ಹಾಗೂ ರೈತರ ಸಂಪೂರ್ಣ ಸಾಲ ಮನ್ನಾ ಮಾಡುವಂತೆ ಮನವಿಯಲ್ಲಿ ಆಗ್ರಹಿಸಲಾಗಿದೆ.

ಪಡಿತರ ವಿತರಣಾ ಕೇಂದ್ರಕ್ಕೆ ಶಾಸಕ ಭೇಟಿ

ಬೀದರ್: ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಮಂಗಲಗಿ ಗ್ರಾಮದ ಪಡಿತರ ವಿತರಣಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಾರ್ವಜನಿಕರಿಗೆ ಪಡಿತರ ವಿತರಣೆ ವೇಳೆ ಉಂಟಾಗಿದ್ದ ತಾಂತ್ರಿಕ ಸಮಸ್ಯೆಗಳ ಕುರಿತು ದೂರುಗಳು ಬಂದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕರು, ಫಲಾನುಭವಿಗಳ ಅಹವಾಲುಗಳನ್ನು ಆಲಿಸಿ ಸಮಸ್ಯೆಗಳ ಕುರಿತು ಮಾಹಿತಿ ಪಡೆದುಕೊಂಡರು ಕ್ಷೇತ್ರಾದ್ಯಂತ ಇದೆ ಸಮಸ್ಯೆ ಇದೆ ಎನ್ನುವುದು ತಿಳಿದ ಬಳಿಕ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಚರ್ಚಿಸಿ, ತಾಂತ್ರಿಕ ದೋಷಗಳನ್ನು ಶೀಘ್ರವಾಗಿ ಸರಿಪಡಿಸಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಮಾತನಾಡಿದ ಅವರು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಪಡಿತರ ವ್ಯವಸ್ಥೆ ಅತ್ಯಂತ ಮಹತ್ವದ್ದಾಗಿದ್ದು, ಫಲಾನುಭವಿಗಳು ತಮ್ಮ ಹಕ್ಕಿನ ಆಹಾರ ಧಾನ್ಯಗಳನ್ನು ಪಡೆಯಲು ಅನಗತ್ಯ ತೊಂದರೆ ಅನುಭವಿಸಬಾರದು ಎಂದು ಹೇಳಿದರು.

ಪಡಿತರ ವಿತರಣೆಯಲ್ಲಿ ಪಾರದರ್ಶಕತೆ ಹಾಗೂಸಮಯೋಚಿತಸೇವೆಒದಗಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಈ ವಿಚಾರದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ತಿಳಿಸಿದರು.

ಪ್ರಸ್ತುತ ಈ ತಿಂಗಳು ಕೇಂದ್ರ ಸರ್ಕಾರದ ಎರಡು ತಿಂಗಳ ಅನ್ನಭಾಗ್ಯ ಯೋಜನೆಯ 10 ಕೆಜಿ ಅಕ್ಕಿ ಮಾತ್ರ ವಿತರಣೆ ಆಗುತ್ತಿದ್ದು, ರಾಜ್ಯ ಸರ್ಕಾರದ ಪಾಲಿನ ಅಕ್ಕಿ ಪೂರೈಕೆ ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಲ್ಲಿ ಅಸಮಾಧಾನ ವ್ಯಕ್ತವಾಗುತ್ತಿದೆ. ರಾಜ್ಯ ಸರ್ಕಾರವು ಯಾವುದೇ ವಿಳಂಬ ಮಾಡದೆ ತನ್ನ ಪಾಲಿನ ಅಕ್ಕಿ ವಿತರಣೆಯನ್ನು ತಕ್ಷಣ ಪುನರಾರಂಭಿಸಬೇಕು ಎಂದು ಅವರು ಒತ್ತಾಯಿಸಿದರು.

ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಅವುಗಳ ಪರಿಹಾರಕ್ಕಾಗಿ ನಿರಂತರವಾಗಿ ಶ್ರಮಿಸುವುದು ತಮ್ಮ ಆದ್ಯತೆಯಾಗಿದ್ದು, ಸಾರ್ವಜನಿಕರ ಹಿತಾಸಕ್ತಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕರು ತಿಳಿಸಿದರು.



ಉಚಿತ ಹೆಲ್ಮೆಟ್ ವಿತರಣಾ ಕಾರ್ಯಕ್ರಮ

ಬಳ್ಳಾರಿ: ಉಚಿತ ಆರೋಗ್ಯ ಶಿಬಿರ, ಕಣ್ಣು ತಪಾಸಣೆ ಶಿಬಿರ ಸೇರಿದಂತೆ ಬಡವರ ಕಣ್ಣೀರು ಒರೆಸುವ ಮೂಲಕ ಸಮಾಜ ಸೇವೆ ಮಾಡುವ ಬಡವರ ಬಂಧು, ಎಂ.ಗೋವಿಂದರಾಜಲು, ಹೆಲ್ಮೆಟ್ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಿದ್ದು, ಅತ್ಯಂತ ಸಂತಸ ಮೂಡಿಸಿದೆ. ಬರುವ ದಿನಗಳಲ್ಲಿ ಇಡೀ ರೀತಿ ಜನರ ಸೇವೆ ಮಾಡುವ ಮೂಲಕ ಇತರರಿಗೆ ಮಾದರಿಯಾಗಲಿ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ನಗರದ ಕೌಲ್ ಬಜಾರ್ ಪ್ರದೇಶದ ಸೋಮಸುಂದರೇಶ್ವರ ದೇವಾಲಯದ ಆವರಣದಲ್ಲಿ ಎಂಜಿಆರ್ ತಂಡ, ಪಾಲಿಕೆ ಸದಸ್ಯ ಎಂ.ಗೋವಿಂದರಾಜಲೂ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಉಚಿತ ಹೆಲ್ಮೆಟ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕೋವಿಡ್ ಸಂದರ್ಭದಲ್ಲಿ ಗೋವಿಂದರಾಜಲು ಮಾಡಿದ ಕಾರ್ಯ ಮೆಚ್ಚುವಂಥದ್ದು, ಬಡವರಿಗೆ ಇರುವ ಅವರ ಕಾಳಜಿ, ಕಳಕಳಿ ಇತರರಿಗೆ ಸ್ಪೂರ್ತಿಯಾಗಿದೆ. ಎಲ್ಲ ವರ್ಗದ ಜನರ ಪ್ರೀತಿ ವಿಶ್ವಾಸ ಗಳಿಸಿದ ಗೋವಿಂದರಾಜಲು ಮೂರು ಬಾರಿ ಪಾಲಿಕೆ ಸದಸ್ಯರಾಗಿ ಗೆಲುವು ಸಾಧಿಸಿ ದಾಖಲೆ ಸೃಷ್ಟಿಸಿದ್ದಾರೆ ಎಂದರು.

ಪಾಲಿಕೆ ಸದಸ್ಯ, ಸಮಾಜ ಸೇವಕ, ಎಂಜಿಆರ್ ತಂಡ ಮುಖ್ಯಸ್ಥ ಎಂ.ಗೋವಿಂದರಾಜಲೂ ಮಾತನಾಡಿ, 19 ವರ್ಷಗಳಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸುತ್ತಿರುವೆ, ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಿರುವೆ, ಜನರ ರಕ್ಷಣೆಗಾಗಿ ಹೆಲ್ಮೆಟ್ ಧರಿಸಬೇಕು ಎಂದು ಜಾಗೃತಿ ಮೂಡಿಸಲು ಉಚಿತ ಹೆಲ್ಮೆಟ್ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವೆ ಎಂದರು.

ಕಲ್ಯಾಣ ಶ್ರೀಮಠದ ಶ್ರೀಕಲ್ಯಾಣ ಸ್ವಾಮೀಜಿ ಮಾತನಾಡಿ, ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಇಲ್ಲದೆ ಸಂಚಾರ ಮಾಡಬೇಡಿ, ದಂಡ ಕಟ್ಟುವುದು ಬರುತ್ತೆ ಎಂದು ಹೆಲ್ಮೆಟ್ ಧರಿಸುವುದು ಬೇಡ, ಇದು ನಮ್ಮ ಜೀವಕ್ಕಾಗಿ, ನಮ್ಮ ಕುಟುಂಬಕ್ಕಾಗಿ ಎಂದು ಪ್ರತಿಜ್ಞೆ ಮಾಡಿ ಪ್ರತಿಯೊಬ್ಬರೂ ಹೆಲ್ಮೆಟ್ ಧರಿಸಲು ಮುಂದಾಗಬೇಕು ಎಂದರು.

ಕ್ರಿಶ್ಚಿಯನ್ ಸಮುದಾಯದ ಐವನ್ ಡಿಸೋಜ ಗುರುಗಳು ಮಾತನಾಡಿದರು. ಕಂಪ್ಲಿ ಮಾಜಿ ಶಾಸಕ ಟಿ.ಎಚ್.ಸುರೇಶ್ ಬಾಬು, ಡಾ.ರವಿ ಶಂಕರ್ ಮಾತನಾಡಿದರು. ವೀರೇಶ್ ಗುತ್ತಿ ಸೇರಿದಂತೆ ಅನೇಕ ಗಣ್ಯರು, ಎಂಜಿಆರ್ ತಂಡದ ನೂರಾರು ಕಾರ್ಯಕರ್ತರು, ಅಭಿಮಾನಿಗಳು ಇದ್ದರು.



ಅರ್ಪಣಾ ಮನೋಭಾವದಿಂದ ನೀಡುವ ಸಹಾಯವೇ ಸೇವೆ

ಸಿರುಗುಪ್ಪ: ನಮ್ಮಲ್ಲಿರುವ ಶ್ರಮ, ವಿದ್ಯೆ, ಬುದ್ಧಿ, ಜ್ಞಾನ, ಕೌಶಲ್ಯ, ಆರ್ಥಿಕ ಸೌಲಭ್ಯ ಇತ್ಯಾದಿಗಳನ್ನು ಸಮಾಜದ, ದೇಶದ ಒಳಿತಿಗಾಗಿ ಫಲಾಪೇಕ್ಷೆ ಇಲ್ಲದೆ ಅರ್ಪಣಾಮನೋಭಾವದಿಂದ ನೀಡುವ ಸಹಾಯವೇ ಸೇವೆ ಎಂದು ನಗರಸಭೆಯ ಪೌರಾಯುಕ್ತ ಕೆ.ಗಂಗಾಧರ ಹೇಳಿದರು.

ನಗರದ ಡ್ರೈವರ್ ಕಾಲೋನಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಎ ಮತ್ತು ಬಿ ಘಟಕಗಳಿಂದ ಶುಕ್ರವಾರ ಆಯೋಜಿಲಾದ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿದರು.

ವಿಕಸಿತ ಭಾರತದೆಡೆಗೆ ಯುವಜನತೆ ಸಾಗಬೇಕಾದರೆ ಸಮರ್ಪಣ ಭಾವದಿಂದ ಸಮಾಜಸೇವೆ ಮಾಡುವುದನ್ನು ಕುಟುಂಬದಿಂದಲೇ ಕಲಿತಾಗ ಮಾತ್ರ ವ್ಯವಸ್ಥೆ ಸುಧಾರಿಸಲು ಸಾಧ್ಯ ಸುತ್ತಮುತ್ತಲಿನ ಪರಿಸರವನ್ನು ನಮಗೂ ಮತ್ತು ಮುಂದಿನ ತಲೆಮಾರುಗಳಿಗೂ ಕಾಪಾಡುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ನಗರದ ರಸ್ತೆಗಳನ್ನು, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಸಿ ಮಾಲಿನ್ಯ ಮುಕ್ತವಾಗಿಸಿ ನಗರದ ಅಭಿವೃದ್ಧಿಗೆ ಶ್ರಮಿಸುವುವಲ್ಲಿ ಸಾರ್ವಜನಿಕರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ನಗರಸಭೆಯ ಸಮುದಾಯ ಸಂಘಟಕರು ಕಸ ವಿಂಗಡಣೆಯ ಬಗ್ಗೆ ಸ್ವಚ್ಛತೆಯ ಕುರಿತು ಶಿಬಿರಾರ್ಥಿಗಳಿಗೆ ಪ್ರಾತ್ಯಕ್ಷಿಕೆಯ ಜಾಗೃತಿ ಮೂಡಿಸಿದರು.



ಕಾಲೇಜ್ ಪ್ರಾಂಶುಪಾಲ ಕೃಷ್ಣಪ್ಪ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ಎನ್.ಸಿದ್ದಪ್ಪ, ನಗರಸಭೆಯ ಸಹಾಯಕ ಕಾರ್ಯಪಾಲ ಅಭಿಯಂತರ ದಿಲೀಪ್, ಶಿಬಿರ ಅಧಿಕಾರಿಗಳಾದ ಡಾ.ಕೆ.ಎಂ.ಚಂದ್ರಕಾಂತ್, ಬಕಾಡೆ ಪಂಪಾಪತಿ, ಸಹ ಶಿಬಿರಧಿಕಾರಿ ಟಿ.ಎಸ್.ಪ್ರಶಾಂತ್ ಬಾಬು, ಉಪನ್ಯಾಸಕರಾದ ರಾಮಣ್ಣ ಪೂಜಾರಿ, ಎನ್.ಸುರೇಶ್, ನರೇಶ್ ಹಾಗೂ ಸ್ವಸಹಾಯ ಗುಂಪುಗಳ ಸದಸ್ಯರು, ಸಮುದಾಯ ಸಂಘಟಕರು ಭಾಗವಹಿಸಿದ್ದರು.

ಗುತ್ತಿಗೆ ಕಾರ್ಮಿಕರ ಮರು ನೇಮಕಕ್ಕೆ ಒತ್ತಾಯ

ವಿಜಯನಗರ: ಹಂಪಿ ಪ್ರಾಧಿಕಾರದ ಹೊರಗುತ್ತಿಗೆ ಸ್ವಚ್ಛತಾ ಕಾರ್ಮಿಕರನ್ನು ಕೆಲಸದಿಂದ ಕೈಬಿಟ್ಟಿರುವ ಹಮಾಮಾ ಕ್ರಮವನ್ನು ಖಂಡಿಸಿ ಸಿಐಟಿಯು ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಸಿಐಟಿಯು ಮುಖಂಡ ಕೆ.ಎಂ.ಮಂಜುನಾಥ್ ಮಾತನಾಡಿ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಡಿ ಕಳೆದ 25 ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಚ್ಛತಾ ಕಾರ್ಮಿಕರನ್ನು ಹಂಪಿ ಜಾತ್ರೆ ಮುಗಿದ ನಂತರ ಹಣಕಾಸಿನ ಮುಗ್ಗಟ್ಟಿನ ನೆಪವೊಡ್ಡಿ ಕೆಲಸದಿಂದ ಕೈಬಿಡುವ ಮೂಲಕ ಕಾರ್ಮಿಕರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಕೆಲಸವನ್ನು ನಂಬಿರುವ ಕಾರ್ಮಿಕರನ್ನು ತಕ್ಷಣವೇ ಹೊರಗುತ್ತಿಗೆ ಕಾರ್ಮಿಕರನ್ನು ಮರು ನೇಮಕ ಮಾಡಿಕೊಳ್ಳಬೇಕು. ಇಲ್ಲವೇ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಕಚೇರಿ ಮುಂಭಾಗದಲ್ಲೇ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಸಿದರು.



ಈ ಹೋರಾಟದಲ್ಲಿ ಸಿಐಟಿಯು ಸಂಘಟನೆಯ ಪ್ರಮುಖರು, ಪದಾಧಿಕಾರಿಗಳು ಹಾಗೂ ನೂರಾರು ಸಂಖ್ಯೆಯಲ್ಲಿ ಹೊರಗುತ್ತಿಗೆ ಸ್ವಚ್ಛತಾ ಕಾರ್ಮಿಕರು ಭಾಗವಹಿಸಿದ್ದರು.

ನಾಳೆ ಪ್ರತಿಭಾ ಪುರಸ್ಕಾರ ಸಮಾರಂಭ: ಗೂಳೆಪ್ಪ

ಬಳ್ಳಾರಿ: ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಮೇ 31ರಂದು ಛಲವಾದಿ ನೌಕರರ ಸಂಘದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ, ಪ್ರತಿಯೊಬ್ಬರೂ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಬಳ್ಳಾರಿ ಜಿಲ್ಲಾ ಛಲವಾದಿ ನೌಕರರ ಕಲ್ಯಾಣ ಸಂಘದ ಅಧ್ಯಕ್ಷ ಗೂಳೆಪ್ಪ ಬೆಳ್ಳಿಕಟ್ಟೆ ಅವರು ಮನವಿ ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಅಂದು ನೂತನ ಸಂಘದ ಉದ್ಘಾಟನೆ ಹಾಗೂ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು. ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಚಿತ್ರದುರ್ಗದ ಛಲವಾದಿ ಮಹಾಮಠದ ಬಸವನಾಗಿ ದೇವ ಸ್ವಾಮೀಜಿ, ಬಳ್ಳಾರಿಯ ಭಾರತೀಯ ಭೌದ್ಧ ಮಹಾಸಭಾದ ಕಮಲರತ್ನ ಭಂತೇಜಿ ಅವರು ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಎಲ್ಲರಿಗೂ ಆಶೀರ್ವದಿಸಲಿದ್ದಾರೆ. ಸಚಿವರಾದ ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ.ಮಹಾದೇವಪ್ಪ, ಪ್ರಿಯಾಂಕಾ ಖರ್ಗೆ, ಜಮೀರ್ ಅಹ್ಮದ್ ಖಾನ್, ಶಾಸಕ ಅಬ್ಬಯ್ಯ ಪ್ರಸಾದ್, ಅಧ್ಯಕ್ಷರು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಪಿಎಂ.ನರೇಂದ್ರ ಸ್ವಾಮಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ನೌಕರರ ಸಂಘದ ಅಧ್ಯಕ್ಷ ಗೂಳೆಪ್ಪ ಬೆಳ್ಳಿಕಟ್ಟೆ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಛಲವಾದಿ ಮಹಾಸಭಾದ ರಾಜ್ಯಾಧ್ಯಕ್ಷ ಎಚ್.ಸಿದ್ದಯ್ಯ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್, ಛಲವಾದಿ ಮಹಾಸಭಾದ ರಾಜ್ಯಾಧ್ಯಕ್ಷ ವಾಣಿ ಕೆ.ಶಿವರಾಮು, ಡಾ.ಮೂರ್ತಿ ಎಲ್., ಕೆ.ಎಸ್.ಗಂಗಾಧರಯ್ಯ, ಸಿ.ಎನ್.ಜ್ಯೋತಿ ಲಕ್ಷ್ಮೀ, ಬಿಟಿಪಿಎಸ್ ಕುಡುತಿನಿಯ ಎಜಿಎಂ ರಮೇಶ್ ಅವರು ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಿದ್ದಾರೆ ಎಂದರು.



ಗೌರವ ಅಧ್ಯಕ್ಷ ಸೋಮನಾಥ್, ಮಹಾಸಭಾದ ಜಿಲ್ಲಾಧ್ಯಕ್ಷರಾದ ಜೆ.ಎಸ್.ಶ್ರೀನಿವಾಸಲು, ಶಿವಕುಮಾರ್, ಎಎಸ್‌ಐ ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ, ರಾಜ್ಯ ಉಪಾಧ್ಯಕ್ಷ ಸಿ.ನರಸಪ್ಪ, ಕೆ.ಶಂಕರ ನಂದಿಹಾಳ, ಸಿ.ಹನುಮಂತ ಕಟ್ಟೆಮನಿ ಸೇರಿದಂತೆ ಇತರರಿದ್ದರು.

ಶಾಲಾ ಆವರಣ ಸ್ವಚ್ಛಗೊಳಿಸಿದ ಸ್ವಯಂಸೇವಕರು

ಗಾದಿಗನೂರು: ಗ್ರಾಮದ ಕರ್ನಾಟಕಪಬ್ಲಿಕ್‌ಶಾಲೆಯಲ್ಲಿಜೂನ್ ಒಂದರಿಂದ ಶಾಲೆ ಪ್ರಾರಂಭವಾಗುವ ಹಿನ್ನೆಲೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಶಾಲಾ ಆವರಣ, ಕೊಠಡಿಗಳನ್ನು ಸ್ವಚ್ಛಗೊಳಿಸಿದರು.

ಬೇಸಿಗೆ ರಜೆ ಮುಗಿದ ನಂತರ ಮಕ್ಕಳು ಶಾಲೆಗೆ ಬರುವುದು ಬಹಳ ವಿರಳ ಹಳ್ಳಿಗಳಲ್ಲಿ ಶಾಲಾ ಮಕ್ಕಳು ಶಾಲೆ ಪ್ರಾರಂಭವಾದರೆ ನಮ್ಮನ್ನು ಸ್ವಚ್ಛತಾ ಕಡೆಗೆ ತೊಡಗಿಸಿಕೊಳ್ಳುತ್ತಾರೆ ಎಂದು ಮಕ್ಕಳು ಶಾಲೆಗೆ ಬರುವುದು ಬಹಳ ಕಡಿಮೆ. ಆದುದರಿಂದ ಆರ್‌ಎಸ್‌ಎಸ್ ಸ್ವಯಂಸೇವಕರು ಶುಕ್ರವಾರ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಲಾ ಸಿಬ್ಬಂದಿ ಉಪಸ್ಥಿತಿಯಲ್ಲಿ ಸ್ವಯಂಸೇವಕರು ಊರಿನ ಯುವಕರು ಹಾಗೂ ಗ್ರಾಪಂ ಕಸ ವಿಲೇವಾರಿ ವಾಹನ ಚಾಲಕಿ ಮತ್ತು ಮಕ್ಕಳು ಸೇರಿಕೊಂಡು ಸ್ವಚ್ಛತಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಆರೋಗ್ಯದಲ್ಲಿ ಮೂಢನಂಬಿಕೆ ಇರಬಾರದು

ಹೂವಿನಹಡಗಲಿ: ತಾಲೂಕಿನ ಉತ್ತಂಗಿ ಗ್ರಾಮ ಪಂಚಾಯಿತಿಯಲ್ಲಿ ಕೆಎಸ್‌ಪಿಟಿ ಕ್ಷೇತ್ರ ಸಂಸ್ಥೆ ಹಾಗೂ ಗ್ರಾಪಂ ವತಿಯಿಂದ ಆರೋಗ್ಯದಲ್ಲಿ ನಡೆಯುವ ಕೆಲವು ತಪ್ಪು ಕಲ್ಪನೆಗಳು ಹಾಗೂ ಮೂಢನಂಬಿಕೆಯ ಬಗ್ಗೆ ಜಾಗೃತಿ ಅರಿವು ಮೂಡಿಸುವ ಜಾತಾ ಕಾರ್ಯಕ್ರಮ ಜರುಗಿತು.



ಕೆಎಸ್‌ಪಿಟಿ ಕ್ಷೇತ್ರದ ಸಂಯೋಜಕ ಕೆ.ಗೋಣಿಬಸಪ್ಪ ಮಾತನಾಡಿ, ಹೆಣ್ಣು ಮಕ್ಕಳಿಗೆ ಋತುಚಕ್ರದ ಚಲನವಲನ ಇರುತ್ತದೆ. ಹೀಗಾಗಿ ಯಾವುದೇ ಮುಜುಗರವಿಲ್ಲದೆ. ತಮ್ಮ ನೈಸರ್ಗಿಕ ಪ್ರಕ್ರಿಯೆಯ ಬಗ್ಗೆ ಮಾಹಿತಿ ನೀಡಬಹುದು ಮುಟ್ಟಿನಿಂದಲೇ ಹುಟ್ಟು ಹೀಗಾಗಿ ಎಲ್ಲಾ ಮಹಿಳೆಯರು ಮುಟ್ಟು ಸಂದರ್ಭದಲ್ಲಿ ಬಹಳ ಸ್ವಚ್ಛತೆಯಿಂದ ಇರಬೇಕು. ಇದನ್ನು ಹಾಗೆ ಬಿಟ್ಟರೆ ಮುಂದೆ ಆರೋಗ್ಯದಲ್ಲಿ ಸಮಸ್ಯೆ ಕಾಣಿಸಿಕೊಳ್ಳಬಹುದು, ನಿಮ್ಮ ಆರೋಗ್ಯದ ಸುರಕ್ಷತೆಗಾಗಿ ಮನೆಯಲ್ಲಿ ಮಹಿಳೆಯರು ಸಮತೋಲನದ ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಹೀಗಾಗಿ ಮಹಿಳೆಯರನ್ನು ವಿಶ್ವಾಸದ ಬದುಕು ಸಾಗಿಸಲು ಸಾಗಿಸಬೇಕು ಎಂದು ಈ ಕುರಿತು ಮಾಹಿತಿ ನೀಡಿದರು.

ಗ್ರಾಪಂ ಪಿಡಿಓ ಸಂಗಪ್ಪ ಮಾತನಾಡಿ, ಉತ್ತಂಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಕರ್ನಾಟಕ ಆರೋಗ್ಯ ಸಂವರ್ಧನ ಸಂಸ್ಥೆ ಯೋಜನೆ ಸ್ಪೂರ್ತಿ ಯೋಜನೆ ಅಡಿಯಲ್ಲಿ ಆದಿ ಅರಿಯದ ಹೆಣ್ಣು ಮಕ್ಕಳಿಗೆ ನಡೆದ ನೇಗಿ ಗ್ರಾಮ ಜಾಗೃತಿ ಎಂಬ ಕಾರ್ಯಕ್ರಮದ ಉದ್ದೇಶಿಸಿ ಮಾಹಿತಿ ಒದಗಿಸಿದರು.

ಸಮುದಾಯ ಆರೋಗ್ಯ ಅಧಿಕಾರಿ ಕಲ್ಪನಾ ಪಿಎಚ್‌ಸಿಒ ಮಾತನಾಡಿ, ಮುಟ್ಟು ಕಾಣಿಸಿಕೊಂಡಾಗ ಮಹಿಳೆಯರು ಸ್ವಚ್ಛತೆಯಿಂದ ಕಾಪಾಡಿಕೊಳ್ಳಬೇಕು ಹಾಗೂ ನಿಮ್ಮ ಮುಟ್ಟಿನ ಬಗ್ಗೆ ಏನೇ ಸಮಸ್ಯೆ ಇದ್ದರೂ ಸಹ ಹತ್ತಿರದ ಆರೋಗ್ಯ ಇಲಾಖೆಗೆ ಭೇಟಿ ನೀಡಬೇಕು ಎಂದು ಹೇಳಿದರು.

ಅಂಗನವಾಡಿಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮದ ಹಿರಿಯರಾದ ಗುರುಬಸಮ್ಮ, ಒಕ್ಕೂಟದ ಅಧ್ಯಕ್ಷೆ ಗೌರಮ್ಮ ಹಾಗೂ ಗ್ರಾಪಂ ಕಾರ್ಯದರ್ಶಿ ಮಲ್ಲಣ್ಣ ಮಂಜುನಾಥ್, ವಿಆರ್‌ಡಬ್ಲ್ಯು ತಳಕಲ್ ಚಂದ್ರಪ್ಪ, ಗ್ರಾಪಂ ಸರ್ವ ಸಿಬ್ಬಂದಿ, ಆರೋಗ್ಯ ಇಲಾಖೆ ಅಧಿಕಾರಿಗಳು, ಮಹಿಳಾ ಸಂಜೀವಿನಿ ಒಕ್ಕೂಟದವರು ಹಾಗೂ ಮಹಿಳೆಯರು ಮತ್ತು ಮಕ್ಕಳು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.